

# ಮೀಸಲಾತಿ : ಒಂದು ಗಗನಕುಸುಮ

ಪ್ರೊ. ಸಿ. ಪಾರ್ವತಮ್ಮ ಎಂ.ಎ., ಪಿಎಚ್.ಡಿ.,

ಡೀಡ್
ಶಿಕ್ಷಣ ಮುಖೇನ ಪ್ರಗತಿ - ಹುಣಸೂರು

# ಮೀಸಲಾತಿ : ಒಂದು ಗಗನ ಕುಸುಮ

(ಕರ್ನಾಟಕದ ಕುರುಬ ಜಾತಿ ಮತ್ತು ಬುಡಕಟ್ಟು ಪಂಗಡದಲ್ಲಿ ಮೀಸಲಾತಿಯು
ಸೃಷ್ಟಿಸಿರುವ ಅಸ್ತವ್ಯಸ್ತತೆ ಕುರಿತ ಅಧ್ಯಯನ)

ಡಾ. ಸಿ. ಪಾರ್ವತಮ್ಮ

*[Translation of RESERVATION : A PIE IN THE SKY]*

*ಅನುವಾದ :* ಆರ್.ಎಲ್. ಅನಂತರಾಮಯ್ಯ

*ಪ್ರಕಾಶಕರು :*
ಶಿಕ್ಷಣ ಮುಖೇನ ಪ್ರಗತಿ (ಡೀಡ್)
ಹುಣಸೂರು - 571105

**MEESALAATHI : ONDU GAGANA KUSUMA :** (Translation of RESERVATION : A PIE IN THE SKY - Reservations Generating a criss - cross of kuruba caste and tribe in karnataka) Written by Prof. **C. PARVATHAMMA** & Translated by **R.L. ANANTHARAMAIAH,** Published by **DEVELOPMENT THROUGH EDUCATION (DEED),** H.D. Kote Road, Hunsur - 571105. Ph : 08222-52127

ಮೊದಲ ಮುದ್ರಣ : 2001

ಪ್ರತಿಗಳು : 1000

ಪುಟಗಳು : xviii + 202

ಬೆಲೆ : ರೂ. 200/-



*ಮುಖಪುಟ ಚಿತ್ರ* : ಕೆ. ಚಂದ್ರಶೇಖರ್

*ಮುಖಪುಟ ವಿನ್ಯಾಸ* : ಎಂ.ಎನ್. ಪ್ರಕಾಶ್

*ಅಕ್ಷರ ಸಂಯೋಜನೆ :*

ಎಕ್ಸ್‌ಲೆಂಟ್ ಗ್ರಾಫಿಕ್ಸ್, ಗೋವಿಂದರಾಜನಗರ

ಬೆಂಗಳೂರು - 40. ದೂರವಾಣಿ : 3408197

*ಮುದ್ರಣ :*

ಪ್ರಗತಿ ಗ್ರಾಫಿಕ್ಸ್

ಆರ್.ಪಿ.ಸಿ. ಲೇಔಟ್, ಬೆಂಗಳೂರು - 40.

ದೂರವಾಣಿ : 3409512

# ಲೇಖಕರ ಮಾತು

1994-95ರಲ್ಲಿ ಕೈಗೊಂಡ ಈ ಅಧ್ಯಯನವು ದೆಹಲಿಯ ಐ.ಸಿ.ಎಸ್.ಎಸ್.ಆರ್. (ಇಂಡಿಯನ್ ಕೌನ್ಸಿಲ್ ಆಫ್ ಸೋಸಿಯಲ್ ಸೈನ್ಸ್ ರೀಸರ್ಚ್) ಸಂಸ್ಥೆ ನೀಡಿದ ಆದೇಶ - ಅನುದಾನದಿಂದ ಸಾಧ್ಯವಾಯಿತು. ಅಲ್ಲಿನ ಅಧಿಕಾರ ವರ್ಗ ಹಾಗೂ ನಿರ್ದೇಶಕರಿಗೆ ಅಂತಿಮ ವರದಿ ಸಲ್ಲಿಸಲು ಹೆಚ್ಚು ಸಮಯಾವಕಾಶ ನೀಡಿದ್ದಕ್ಕಾಗಿ ನನ್ನ ವಂದನೆಗಳು.

ಪ್ರೊ. ರಾಯ್‌ಬರ್ಮನ್ ಅವರಿಗೆ ನನ್ನ ವಿಶೇಷ ವಂದನೆಗಳು ಸಲ್ಲಬೇಕು. ಅವರು ಅಧ್ಯಯನದ ಮೂಲ ವರದಿಯನ್ನು ಮೌಲ್ಯಮಾಪನ ಮಾಡಿ ಶೀರ್ಷಿಕೆಯಲ್ಲಿ ಸ್ವಲ್ಪ ಬದಲಾವಣೆ ಸೂಚಿಸಿ ಪ್ರಕಟಣೆಗೆ ದಾರಿ ಸುಗಮ ಮಾಡಿಕೊಟ್ಟಿದ್ದನ್ನು ಇಲ್ಲಿ ಸ್ಮರಿಸುವೆ.

ಅಧ್ಯಯನ ಯೋಜನೆಯನ್ನು ಕೈಗೊಳ್ಳುವ ಪೂರ್ವದಲ್ಲಿ ವಿಷಯ ಕುರಿತು ಮಾನಸ ಗಂಗೋತ್ರಿಯ ಸಮಾಜ ಶಾಸ್ತ್ರ ವಿಭಾಗದ ನನ್ನ ಹಿಂದಿನ ಸಹಪಾಠಿ ಡಾ. ಸತ್ಯನಾರಾಯಣ ಅವರೊಡನೆ ಚರ್ಚಿಸಲಾಗಿ ಅವರು ಆಸಕ್ತಿವಹಿಸಿ ಸಮಯ ಕೊಟ್ಟು ಬೆಂಬಲಿಸಿ ಆಗಿಂದಾಗ್ಗೆ ಸಲಹೆ ಸೂಚನೆ ಕೊಡುತ್ತಾ ಕಾರ್ಯಕ್ಷೇತ್ರದ ಸಂಶೋಧನಾ ಸಿಬ್ಬಂದಿಗಳೊಡನೆ ಸಹಕರಿಸಿದ್ದಕ್ಕಾಗಿ ನನ್ನ ವಂದನೆಗಳು.

ಪ್ರಾರಂಭದಲ್ಲಿ ಸಮಯಕ್ಕೆ ಸರಿಯಾಗಿ ಷೆಡ್ಯೂಲ್‌ಗಳನ್ನು ಮುದ್ರಿಸಿಕೊಡಲು, ಸಂಶೋಧನಾ ಸಿಬ್ಬಂದಿಗಳನ್ನು ದೊರಕಿಸಿಕೊಡಲು ಸಹಕರಿಸಿದ ಮಾನಸ ಗಂಗೋತ್ರಿಯ ಸಮಾಜ ಶಾಸ್ತ್ರ ವಿಭಾಗದ ಡಾ. ಪರೇಶಕುಮಾರ್ ಅವರಿಗೆ, ಸಂಶೋಧಕರೊಡನೆ ಸಹಕರಿಸಿ ಬೆಂಬಲಿಸಿದ ಸಮಾಜ ಕಾರ್ಯ ವಿಭಾಗದ ಡಾ. ವೈ.ಎಸ್. ಸಿದ್ದೇಗೌಡರಿಗೆ ನನ್ನ ವಂದನೆಗಳು. ಈ ಈರ್ವರೂ ನನ್ನ ಹಿಂದಿನ ಸಹಪಾಠಿಗಳೂ ಹೌದು. ಇವರ ಬೆಂಬಲವನ್ನು ಸ್ಮರಿಸುತ್ತೇನೆ.

ಕುರುಬ ಸಮುದಾಯದ ಹಾಗೂ ಕಾಡುಕುರುಬ ಬುಡಕಟ್ಟು ಸಮುದಾಯದ ಹಲವಾರು ಮಾಹಿತಿದಾರರಿಗೆ ನನ್ನ ವಂದನೆಗಳನ್ನು ಅರ್ಪಿಸುತ್ತೇನೆ. ಅವರ ಬೆಂಬಲವಿಲ್ಲದೆ ಈ ಅಧ್ಯಯನವು ಈ ಹಂತಕ್ಕೆ ತಲುಪುತ್ತಿರಲಿಲ್ಲ. ಈ ಎರಡೂ ಸಮುದಾಯಗಳ ಇಂದಿನ ಹಾಗೂ ಮುಂದಿನ ಪೀಳಿಗೆಗಳು ಇಲ್ಲಿ ವಿವರಿಸಿ ವಿಶ್ಲೇಷಿಸಲಾಗಿರುವ ಮೀಸಲಾತಿ ಸಮಸ್ಯೆಗಳ ಕ್ಲಿಷ್ಟತೆಗಳನ್ನು ಅರ್ಥೈಸಿಕೊಳ್ಳುವ ಅಗತ್ಯವಿದೆ. ನಮ್ಮ ಸಂಶೋಧಕರೊಡನೆ ಸಮಯ ನೀಡಿ ಸಹಕರಿಸಿದಕ್ಕಾಗಿ ಮಾಹಿತಿದಾರ ಸಮುದಾಯಕ್ಕೆ ನನ್ನ ವಿಶೇಷ ಕೃತಜ್ಞತೆಗಳು.

ಅಧ್ಯಯನವು ಮುಗಿಯುವುದರೊಳಗೆ ಹಲವು ಸಂಶೋಧಕರು ಬಂದು ಹೋದರು. ಸಮಸ್ಯೆಗಳ ನಡುವೆಯೂ ಚೆನ್ನಾಗಿ ಕೆಲಸ ಮಾಡಿದರು. ಅಧ್ಯಯನದ ಕೊನೆಯವರೆಗೆ ಪೂರ್ಣಾವಧಿ ಕಾರ್ಯ ಮಾಡಿದವರು ಒಬ್ಬರೂ ಇಲ್ಲ. ಕಾರಣ ನಾವು ಕೊಡುತ್ತಿದ್ದ ಸಂಬಳ ಕಡಿಮೆ, ಕೆಲಸದ ಒತ್ತಡ ಜಾಸ್ತಿ. ಹೆಚ್ಚಿನ ಸಂಬಳಕ್ಕೆ ಬೇರೆಡೆ ಅವಕಾಶಗಳು ದೊರಕಿದಾಗ ಬಿಟ್ಟು ಹೋದರು. ಇಷ್ಟಾದರೂ ಅಧ್ಯಯನ ಕಾರ್ಯ ಕುಂಟಿತವಾಗಲಿಲ್ಲ.

ಪ್ರಕಟಣೆಗೆ ಸಿದ್ಧಗೊಳಿಸಲು ಸ್ವಲ್ಪ ವಿಳಂಬವಾಯಿತು. ಈ ಅಧ್ಯಯನವು ಹೊರ ಚೆಲ್ಲುವ ಸತ್ಯಾಂಶಗಳು ಮೀಸಲಾತಿ ನೀತಿಯನ್ನು ನ್ಯಾಯ ಸಮ್ಮತವಾಗಿ ರೂಪಿಸಲು ಹೊಸ ಯುಕ್ತಿಗಳನ್ನು ಬಳಸಿ ಗೌರವಯುತಗೊಳಿಸಲು ನೆರವಾಗುತ್ತದೆಂಬ ವಿಶ್ವಾಸದಿಂದ ಬಂದ ಅಡತಡೆಗಳನ್ನು ಎದುರಿಸಿ ಸಮರ್ಥವಾಗಿ ಬಗೆಹರಿಸಿದೆ. ಬುದ್ದಿ ಜೀವಿಗಳು, ಶಿಕ್ಷಣ ತಜ್ಞರು, ನೀತಿ ರೂಪಕರು, ಆಡಳಿತಗಾರರು ದೇಶವನ್ನು ಒತ್ತಡಹೇರುವವರಿಂದ ರಕ್ಷಿಸಿ ನ್ಯಾಯಯುತವಾಗಿ ಕಾರ್ಯ ಮಾಡಬೇಕು. ಜಾತೀಯತೆ, ಮತೀಯತೆ, ಭ್ರಷ್ಟಚಾರದಿಂದ ಮುಕ್ತಿ ಹೊಂದಿದ ನ್ಯಾಯಯುತ ಸಮಾಜ ನಿರ್ಮಾಣ ಮಾಡುವುದು ಗುರಿಯಾಗಬೇಕು.

ಈ ಪುಸ್ತಕವನ್ನು ಇಂಗ್ಲೀಷಿನಿಂದ ಕನ್ನಡಕ್ಕೆ ಭಾಷಾಂತರ ಮಾಡಿದ ಶ್ರೀ ಆರ್. ಎಲ್. ಅನಂತರಾಮಯ್ಯನವರು, ಪುಸ್ತಕ ಹೊರ ಬರುವ ಮೊದಲೇ ಕಣ್ಮರೆಯಾದುದು ವಿಷಾದಕರ. ಭಾಷಾಂತರಕಾರರ ಹೆಸರನ್ನು ನಮೂದಿಸಲು ಅವರು ಕೇಳಿದ್ದನ್ನು ಒಪ್ಪಿಕೊಂಡಿದ್ದೆ. ಹಾಗಾಗಿ ಅವರ ಕೊನೆ ಆಸೆ ಪೂರೈಸಲು ನನ್ನ ಕರ್ತವ್ಯ ಪಾಲನೆ ಮಾಡುವುದರ ಜೊತೆಗೆ ಅವರ ಆತ್ಮಕ್ಕೆ ಚಿರಶಾಂತಿ ಹಾರೈಸುತ್ತೇನೆ.

ಅನುವಾದದ ಹಸ್ತಪ್ರತಿ ಹಾಗೂ ಕರಡು ಪ್ರತಿಗಳೆರಡನ್ನೂ, ತನ್ನ ಅನೇಕ ಕೆಲಸಗಳ ಮಧ್ಯೆ ಬಿಡುವು ಮಾಡಿಕೊಂಡು ಓದಿ ಅವಶ್ಯ ತಿದ್ದುಪಡಿ ಸೂಚಿಸಿ ಸಕಾಲದಲ್ಲಿ ಕೃತಿ ಹೊರಬರಲು ಸಹಾಯ ಮಾಡಿದ ಡಾ. ಯು.ಬಿ. ಅಶೋಕ್‌ಕುಮಾರ್ ಅವರಿಗೆ ನಾನು ಆಭಾರಿಯಾಗಿದ್ದೇನೆ.

ಈ ಅಧ್ಯಯನವನ್ನು ಕಾಳಜಿವಹಿಸಿ ಪ್ರಕಟಿಸಲು ಧೈರ್ಯ ತೋರಿದ ಡೀಡ್ ಸಂಸ್ಥೆಯ ನಿರ್ದೇಶಕರಾದ ಎಸ್. ಶ್ರೀಕಾಂತ್ ಮತ್ತು ಅವರ ಸಿಬ್ಬಂದಿವರ್ಗಕ್ಕೆ ಕೃತಜ್ಞತೆಗಳು. ಮುಖಪುಟ ಚಿತ್ರಕಾರ ಕೆ. ಚಂದ್ರಶೇಖರ್, ವಿನ್ಯಾಸಕಾರರಾದ ಎಂ.ಎನ್. ಪ್ರಕಾಶ್, ಆರ್. ನಾಗರಾಜ್, ಅಕ್ಷರ ಸಂಯೋಜನೆ ಮಾಡಿದ ಎಕ್ಸಲೆಂಟ್ ಗ್ರಾಫಿಕ್ಸ್‌ನ ಜಿ.ವಿ. ಧನಂಜಯ ಮತ್ತು ಅಂದವಾಗಿ ಮುದ್ರಿಸಿಕೊಟ್ಟ ಪ್ರಗತಿ ಗ್ರಾಫಿಕ್ಸ್‌ನ ಡಾ. ಎಂ. ಬೈರೇಗೌಡ ಇವರುಗಳನ್ನು ಸ್ಮರಿಸುತ್ತೇನೆ.

- ಪ್ರೊ. ಸಿ. ಪಾರ್ವತಮ್ಮ

ಅರ್ಪಿತ

ಡಾ. ಸಿ.ಬಿ. ಮೂರ್ತಿ

ಬಿ.ಎಂ. ಆಸ್ಪತ್ರೆ, ಮೈಸೂರು

# ಪ್ರಕಾಶಕರ ಟಿಪ್ಪಣಿ

ಜಾತಿಗಳು, ಸಮುದಾಯಗಳು ಮತ್ತು ಬುಡಕಟ್ಟುಗಳು ಹೇರಳ ಸಂಖ್ಯೆಯಲ್ಲಿರುವ ಭಾರತೀಯ ಸಮಾಜದಲ್ಲಿ, ಪ್ರತಿಯೊಬ್ಬರಿಗೂ ನ್ಯಾಯವನ್ನು ದೊರಕಿಸಿಕೊಡುವುದು ಬಹು ಮುಖ್ಯವಾದ ರಾಜಕೀಯ ನಿರ್ಧಾರವಾಗುತ್ತದೆ. ದುರ್ಬಲವರ್ಗಗಳಿಗೆ, ದಲಿತರಿಗೆ, ಆದಿವಾಸಿಗಳಿಗೆ ಮೀಸಲಾತಿಯು ತುಂಬಾ ಮುಖ್ಯವಾದುದೇನೋ ಹೌದು. ಆದರೆ, ಅಪೇಕ್ಷಿತ ಗುರಿಯನ್ನು ಮುಟ್ಟಲು ಅದನ್ನು ಸೂಕ್ತವಾಗಿ ನಿರ್ವಹಿಸಬೇಕು. ಇಲ್ಲದೆ ಹೋದರೆ ಇತರರನ್ನು ಬಲಿಗೊಟ್ಟು ಪಟ್ಟಭದ್ರ ಪಂಗಡಗಳು ಪ್ರಯೋಜನವನ್ನು ಪಡೆದುಕೊಳ್ಳುತ್ತವೆ. ಸರಿಯಾಗಿ ಗುರುತಿಸದೆ, ಕಾರ್ಯಗತಗೊಳಿಸದೆ ಮೀಸಲಾತಿಯನ್ನು ನೀಡುವುದರಿಂದ, ಅದು ಕೆಲವೇ ಚಾಣಾಕ್ಷ ಸಮುದಾಯಗಳು ಶೋಷಣೆ ಮಾಡಲು ಉಪಕರಣವಾಗಿ ಪರಿಣಮಿಸಿಬಿಡುತ್ತದೆ.

ಕರ್ನಾಟಕದಲ್ಲಿ, ಸಮುದಾಯಗಳು ಪರಿಶಿಷ್ಟ ಬುಡಕಟ್ಟು ಎಂದು ಹೆಸರು ಪಟ್ಟಿ ಪಡೆಯಲು ನುಗ್ಗಾಡುತ್ತಿರುವುದು ಒಂದು ವಿಶಿಷ್ಟ ವಿದ್ಯಮಾನವಾಗಿದೆ. ಜಾತಿಗಳು ಮತ್ತು ಸಮುದಾಯಗಳು ಈಗ ತಮ್ಮನ್ನು ಬುಡಕಟ್ಟುಗಳೆಂದು ಪರಿಗಣಿಸಿಕೊಂಡು, ಪರಿಶಿಷ್ಟ ಬುಡಕಟ್ಟುಗಳಿಗಾಗಿ ಇರುವ ಮೀಸಲಾತಿ ಪ್ರಯೋಜನಗಳನ್ನು ತಮಗೆ ಕೊಡಬೇಕೆಂದು ಒತ್ತಾಯಪಡಿಸುತ್ತಿವೆ. ರಾಜ್ಯದಲ್ಲಿ ಅಧಿಕಾರಕ್ಕೆ ಬರುವ ಪಕ್ಷಗಳು ಅಂತಹ ಪ್ರಬಲವಾದ ಪಂಗಡಗಳನ್ನು ಎಸ್.ಟಿ. ಮೀಸಲಾತಿಗಾಗಿ ಶಿಫಾರಸು ಮಾಡುತ್ತಿವೆ. ರಾಜಕಾರಣದಲ್ಲಿ ಇದೇ ಒಂದು ದೊಡ್ಡ ದಂಧೆಯಾಗಿಬಿಟ್ಟಿದೆ. ಕರ್ನಾಟಕದಲ್ಲಿ ಹಲವು ಹಿಂದುಳಿದ ಸಮುದಾಯಗಳು ಎಸ್.ಟಿ. ಮೀಸಲಾತಿಗಾಗಿ ಒತ್ತಾಯಪಡಿಸುತ್ತಿವೆ. ಕೆಲವರು ಹಿತ್ತಿಲ ಬಾಗಿಲಿನಿಂದ ಬಂದು ಆಗಲೆ ಆ ಸೌಲಭ್ಯಗಳನ್ನು ಅನುಭೋಗಿಸುತ್ತಿದ್ದಾರೆ. ಇದರಿಂದಾಗಿ, ನಿಜವಾದ ಬುಡಕಟ್ಟು ಸಮುದಾಯಗಳಿಗೆ ಅವರ ಸಂವಿಧಾನಿಕ ಹಕ್ಕುಗಳ ವಂಚನೆಯಾಗುತ್ತಿದೆ. ಪ್ರಬಲರಾದ ಆಸಕ್ತ ಪಂಗಡವಾರು ಸ್ಪರ್ಧೆಮಾಡಿ ಅಧಿಕಾರದಲ್ಲಿರುವ ಪಕ್ಷಗಳ ಮೇಲೆ ಪ್ರಭಾವ ಬೀರಲು ಸಮರ್ಥರಾಗಿದ್ದಾರೆ.

ಪ್ರೊ. ಸಿ. ಪಾರ್ವತಮ್ಮ ಸುಪ್ರಸಿದ್ಧ ಶಿಕ್ಷಣ ತಜ್ಞರು, ವಿಶೇಷವಾಗಿ ಸಮಾಜಶಾಸ್ತ್ರ, ಮಾನವಶಾಸ್ತ್ರ ಮತ್ತು ಸಮಾಜ ಕಾರ್ಯ ಕ್ಷೇತ್ರಗಳಲ್ಲಿ ಬರಹಗಾರ್ತಿಯಾಗಿದ್ದಾರೆ. ಸಾಮಾಜಿಕ

ಅಭಿವೃದ್ಧಿಯನ್ನು ಕುರಿತು ಅವರ ಸ್ಪಷ್ಟ ಆಲೋಚನೆ ದೂರದರ್ಶಿಯಾಗಿದೆ. ನಿಜವಾಗಿ ಅಗತ್ಯವಿರುವವರಿಗೆ ಮಾತ್ರ ಮೀಸಲಾತಿ ಸೌಲಭ್ಯಗಳಿರಬೇಕೆಂದೂ ಅದೂ ಒಂದು ಖಾಯಂ ಆದ ವಿದ್ಯಮಾನವಾಗಬಾರದೆಂದೂ ಅವರು ಪ್ರತಿಪಾದಿಸುತ್ತಾರೆ. ಖಾಯಂ ಆಗಿ ಮೀಸಲಾತಿಯನ್ನೇ ಅವಲಂಬಿಸುವ ವ್ಯಕ್ತಿಗಳ ರಚನಶೀಲತೆಯನ್ನೂ ಆತ್ಮ-ಗೌರವವನ್ನು ಅದು ಸಾಯಿಸಿಬಿಡುತ್ತದೆ. ಈಗ ಮೀಸಲಾತಿ ಪ್ರಯೋಜನಗಳಿಗಾಗಿ ಧಾವಂತ ಹೆಚ್ಚುತ್ತಿದೆ. ಹಲವು ಪ್ರಬಲ ಹಾಗೂ ದೊಡ್ಡ ಸಮುದಾಯಗಳು, ಪರಿಶಿಷ್ಟ ವರ್ಗಕ್ಕೆ ಸೇರಿಕೊಳ್ಳುವ ಸಲುವಾಗಿ ಸರಕಾರದ ಮೇಲೆ ಪ್ರಭಾವ ಬೀರಲು ಪ್ರಯತ್ನಿಸುತ್ತಿವೆ. ಲೇಖಕಿಯವರು "ಮೀಸಲಾತಿ: ಒಂದು ಗಗನ ಕುಸುಮ' ಎಂಬ ಈ ಕೃತಿಯಲ್ಲಿ, ಮೀಸಲಾತಿ ನೀತಿಯು ಪ್ರಾರಂಭವಾಗಿ ಹಲವು ದಶಕಗಳಾದ ಮೇಲೆಯೂ ಅನೇಕ ಜಾತಿಗಳು ಮತ್ತು ಸಮುದಾಯಗಳು ತಾವು ಬುಡಕಟ್ಟುಗಳೆಂದು ಹೇಳಿಕೊಳ್ಳುತ್ತಿರುವುದನ್ನು ನೋಡಿ ಆಶ್ಚರ್ಯವನ್ನೂ ಆಘಾತವನ್ನೂ ವ್ಯಕ್ತಪಡಿಸಿದ್ದಾರೆ. ಈ ವೇಳೆಗೆ ಮೀಸಲಾತಿ ಸೌಲಭ್ಯಗಳಿಂದ ಹಾಗೂ ವಿಶೇಷ ಪೋಷಣೆಯಿಂದ ಬುಡಕಟ್ಟುಗಳು ಶಿಷ್ಟ ಸಮುದಾಯವಾಗಿ ಪರಿವರ್ತನೆಗೊಳ್ಳಬೇಕಾಗಿತ್ತು. ಆದರೆ ಈಗಲೂ ಅವು ತಮಗೆ ದತ್ತವಾಗಿರುವ ಮೀಸಲಾತಿ ಸೌಲಭ್ಯಗಳನ್ನು ಬಳಸಿಕೊಳ್ಳಲು ಇತರ ಪಂಗಡಗಳೊಂದಿಗೆ ಸ್ಪರ್ಧೆ ಹೂಡುವ ಸ್ಥಿತಿಯಲ್ಲೂ ಇಲ್ಲ. ಸರ್ಕಾರಗಳು ಜಾಗರೂಕರಾಗಿದ್ದು, ಅಗತ್ಯವುಳ್ಳವರಿಗೆ ನ್ಯಾಯವನ್ನು ದೊರಕಿಸಿಕೊಡಲು ಬದ್ಧರಾಗಿರದೆ ಹೋದರೆ ಆ ಸೌಲಭ್ಯಗಳು ಪ್ರಭಾವಶಾಲಿಗಳೂ ಬಲಶಾಲಿಗಳೂ ಆದ ಸಮುದಾಯಗಳ ಬಗಲಿಗೆ ಹೋಗಿ ಬಿಡುತ್ತವೆ. ನಿಜವಾದ ಅಗತ್ಯವಿರುವವರನ್ನು ಬದಿಗೊತ್ತಿ ಕಡೆಗಣಿಸಲಾಗುತ್ತದೆ. ಅದರಿಂದಾಗಿ ಮೀಸಲಾತಿಯ ನಿಜವಾದ ಉದ್ದೇಶ ಈಡೇರದೆ ಹೋಗುತ್ತದೆ. ದೇಶದಲ್ಲಿ ಪರಿಶಿಷ್ಟ ಬುಡಕಟ್ಟು ಎಂದು ಹೆಸರು ಪಟ್ಟಿಗಾಗಿ ಮೇಲಾಟ ದಿನೇ ದಿನೇ ಅಧಿಕವಾಗುತ್ತಿದೆ. ಈಗ ಸುಮಾರು 1200 ಸಮುದಾಯಗಳು, ಹಲವು ಕೋಟಿ ಜನ ಸಂಖ್ಯೆಯುಳ್ಳ ಪಂಗಡಗಳು ಕೇಂದ್ರ ಸರಕಾರದ ಬಾಗಿಲಲ್ಲಿ, ಪರಿಶಿಷ್ಟ ಬುಡಕಟ್ಟು ಹೆಸರುಪಟ್ಟಿಗಾಗಿ ಒತ್ತಾಯಪಡಿಸುತ್ತಾ ಕಾದು ಕುಳಿತಿವೆ. ಮೀಸಲಾತಿ ಲಾಭಗಳನ್ನು ಬಾಚಿಕೊಳ್ಳಲು ಅಧಿಕಾರದಲ್ಲಿರುವ ಸರಕಾರದ ಮೇಲೆ ಎಲ್ಲಾ ರೀತಿಯಿಂದ ಪ್ರಭಾವ ಬೀರಲು ಪ್ರಯತ್ನಿಸುತ್ತಿವೆ. ಬುಡಕಟ್ಟುಗಳನ್ನೂ ಸಮುದಾಯಗಳನ್ನೂ ಪರಿಶಿಷ್ಟ ಬುಡಕಟ್ಟುಗಳೆಂದು ಗುರುತಿಸುವಲ್ಲಿ ಭಾರತೀಯ ಆಂಥ್ರೋಪೊಲಾಜಿಕಲ್ ಸರ್ವೆ ನೀಡಿರುವ ಮಾನಕದಂತೆ ಕ್ರಮ ಕೈಗೊಳ್ಳುತ್ತಿಲ್ಲ. ಈ 1200 ಸಮುದಾಯಗಳನ್ನು ಎಸ್.ಟಿ. ವರ್ಗವೆಂದು ಪರಿಗಣಿಸಿದ ಪಕ್ಷದಲ್ಲಿ, ಹೆಚ್ಚು ಕಡಿಮೆ ದೇಶದ ಜನಸಂಖ್ಯೆಯ 1/3 ರಷ್ಟು ಜನರು ಆ ವರ್ಗದಲ್ಲಿ ಬರುತ್ತಾರೆ. ಆದರಿಂದ, ನಿಜವಾದ ಆದಿವಾಸಿಗಳು ಅಲಕ್ಷಿತರಾಗುತ್ತಾರೆ. ಆದಿವಾಸಿಗಳು ಆಹಾರವನ್ನು ಹೆಕ್ಕಿ ಸಂಗ್ರಹಿಸುವ ಸಂಸ್ಕೃತಿಗೆ ಸೇರಿದ್ದು ನಿಸರ್ಗದೊಂದಿಗೆ ಸಮರಸದಿಂದ ಬದುಕುತ್ತಿದ್ದಾರೆ. ಆದರೆ ಎಸ್.ಟಿ. ಹೆಸರು ಪಟ್ಟಿಯನ್ನು ಕೇಳುತ್ತಿರುವ ಪ್ರಮುಖ ಸಮುದಾಯಗಳು, ಗ್ರಾಹಕ ಮೌಲ್ಯಗಳು, ಸ್ವರೂಪತಃ ಸ್ಪರ್ಧಾತ್ಮಕ ಹಾಗೂ ಶೋಷಕ

ಸಂಸ್ಕೃತಿಯಾಗಿ ಪರಿಣಮಿಸುತ್ತವೆ. ಈ ಪ್ರಮುಖ ಸಮುದಾಯಗಳನ್ನು, ಎಸ್.ಟಿ. ವರ್ಗಕ್ಕೆ ಸಲ್ಲಬೇಕಾದ ಸೌಲಭ್ಯ ಸವಲತ್ತುಗಳನ್ನು ಪಡೆದುಕೊಳ್ಳಲು ಬಿಡುವ ಪಕ್ಷದಲ್ಲಿ, ಬುಡಕಟ್ಟು ಜೀವನವು ಹೀನಾಯವಾಗುತ್ತದೆ, ಅಪಾರ ಕ್ಲೇಶಮಯವಾಗುತ್ತದೆ. ಅಗತ್ಯವಿರುವವರು ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಮತ್ತು ರಾಜಕೀಯವಾಗಿ ಮೇಲೆ ಬರಲು ಸಹಾಯವಾಗುವಂತೆ ನಿರ್ದಿಷ್ಟ ಸಮಯದವರೆಗೆ ಮಾತ್ರ ಪರಿಶಿಷ್ಟಜಾತಿ, ಪರಿಶಿಷ್ಟ ಬುಡಕಟ್ಟು, ಇತರ ಹಿಂದುಳಿದ ಸಮುದಾಯಗಳು ಹಾಗೂ ಅಲ್ಪ ಸಂಖ್ಯಾತರು ಎಲ್ಲರಿಗೂ ಮೀಸಲಾತಿ ಇರಲಿ. ಈ ವರ್ಗಗಳಲ್ಲಿ ಕಟ್ಟುನಿಟ್ಟಾದ ಮತ್ತೆ ಮತ್ತೆ ಆ ಸೌಲಭ್ಯಗಳನ್ನು ಮತ್ತೆ ಮತ್ತೆ ಪಡೆಯುತ್ತಲೇ ಇರದಂತೆ ನೋಡಿಕೊಳ್ಳುವುದು ಅಗತ್ಯ. ಈಗ ಸದ್ಯದಲ್ಲಿ ಈ ವರ್ಗಗಳಲ್ಲಿನ ಗಣ್ಯವ್ಯಕ್ತಿಗಳು ಮಾತ್ರ ಮೀಸಲಾತಿಯ ಗರಿಷ್ಠ ಲಾಭ ಪಡೆಯುತ್ತಿದ್ದಾರೆ, ನಿಜವಾಗಿ ಅರ್ಹರಾದವರು ಅಲಕ್ಷಿತವಾಗಿದ್ದಾರೆ.

ಮೀಸಲಾತಿಯ ಪರಿಕಲ್ಪನೆ, ಜಾರಿ ಮತ್ತು ಅದರ ಮಿತಿಗಳು ಇವುಗಳನ್ನು ಅರ್ಥಮಾಡಿಕೊಳ್ಳಲು ಸಾಮಾಜಿಕ ನ್ಯಾಯ ವಿತರಣೆಯಲ್ಲಿ ಆಸಕ್ತರಾಗಿರುವ ಸರಕಾರ, ಶೈಕ್ಷಣಿಕ ಸಂಸ್ಥೆಗಳು, ಸಂಶೋಧಕರು, ಸಮಾಜ ಕಾರ್ಯಕರ್ತರು ಮತ್ತು ಸಾರ್ವಜನಿಕರಿಗೆ ಈ ಪುಸ್ತಕವು ಒಂದು ಕೈಪಿಡಿಯಾಗಿದೆ.

ಅತ್ಯಂತ ಸೂಕ್ತವಾದ ಸಮಯದಲ್ಲಿ "ಮೀಸಲಾತಿ: ಒಂದು ಗಗನ ಕುಸುಮ" ಪುಸ್ತಕವನ್ನು ಬರೆಯಲು ಧೈರ್ಯ ಮಾಡಿದ ಲೇಖಕಿಯವರನ್ನು ನಾವು ಅಭಿನಂದಿಸುತ್ತೇವೆ. ಸುಂದರವಾಗಿ ಮುದ್ರಿಸಿರುವ ಬೆಂಗಳೂರಿನ ಪ್ರಗತಿ ಗ್ರಾಫಿಕ್ಸ್ ಅವರಿಗೂ, ರಕ್ಷಾಪುಟದ ಚಿತ್ರವನ್ನು ತಯಾರಿಸಿದ ಶ್ರೀಮಾನ್ ಎನ್. ಚಂದ್ರಶೇಖರ್ ಅವರಿಗೂ ನಮ್ಮ ವಂದನೆಗಳು.

ಸಂಸತ್ತು ಎಸ್.ಸಿ/ಎಸ್.ಟಿ ಗಳಿಗೆ ಮೀಸಲಾತಿಯನ್ನು ಇನ್ನೂ ಹತ್ತು ವರ್ಷ ಮುಂದುವರಿಸಿ ಸಂವಿಧಾನಕ್ಕೆ ತಿದ್ದುಪಡಿ ಮಾಡಿದೆ. ಕೊನೆಯ ಪಕ್ಷ ಈಗಲಾದರೂ ಸರಕಾರವು ನಿಜವಾದ ಅಗತ್ಯವುಳ್ಳವರಿಗೆ ಮಾತ್ರ ಕಟ್ಟುನಿಟ್ಟಾಗಿ ಮೀಸಲಾತಿ ಪ್ರಯೋಜನಗಳನ್ನು ಒದಗಿಸಬೇಕು.

**ಎಸ್. ಶ್ರೀಕಾಂತ್**
ನಿರ್ದೇಶಕರು

ಡೀಡ್ ಸಂಸ್ಥೆ
ಹುಣಸೂರು
11-6-2001

# ಪರಿವಿಡಿ

## ಅಧ್ಯಾಯ : ಒಂದು

# ಭಾಗ : ೧ ಪ್ರವೇಶ

1980ರ ಆದಿ ಭಾಗದಲ್ಲಿ, ಹಿಂದುಳಿದ ವರ್ಗಗಳಿಗೆ "ಮೀಸಲಾತಿ" ನೀಡುವ ವಿಚಾರವಾದ ಮಂಡಲ್ ಆಯೋಗದ ಶಿಫಾರಸುಗಳ ಮೇಲೆ ವಿಪುಲವಾಗಿ ಸಾಮಾಜಿಕ ಅಶಾಂತಿ ವ್ಯಕ್ತವಾಯಿತು. ಉತ್ತರ ಭಾರತದಲ್ಲಿ ಅದು ಅಧಿಕವಾಗಿತ್ತು. ದಕ್ಷಿಣ ಭಾರತದ ರಾಜ್ಯಗಳಲ್ಲಿ ಕಣ್ಣಿಗೆ ಕಾಣುವಂತೆ ಅಷ್ಟಾಗಿ ಘರ್ಷಣೆಗಳಿಗೆ ಅವಕಾಶವಾಗಲಿಲ್ಲ. ಏಕೆಂದರೆ ಇಲ್ಲಿ ಹಿಂದುಳಿದ ವರ್ಗಗಳು ಆಗಲೆ ಹಲವು ದಶಕಗಳಿಂದ ಅದರ ಪ್ರಯೋಜನವನ್ನು ಪಡೆದಿದ್ದವು. ಆದರೆ ಉತ್ತರ ಭಾರತದಲ್ಲಿ ವಿದ್ಯಾರ್ಥಿಗಳು ಮತ್ತು ತರುಣರು ಉಗ್ರವಾದ ಪ್ರತಿಕ್ರಿಯೆ ವ್ಯಕ್ತಪಡಿಸಿ ಕ್ಷೋಭೆಯ ಪರಿಸ್ಥಿತಿಯನ್ನು ಸೃಷ್ಟಿಸಿದರು. ಅನೇಕ ವಿಶ್ವವಿದ್ಯಾನಿಲಯಗಳು ಮತ್ತು ಸಂಶೋಧನ ಸಂಸ್ಥೆಗಳು ಮೀಸಲಾತಿ ನೀತಿಯನ್ನು ಕುರಿತು ಸೆಮಿನಾರುಗಳನ್ನು ವ್ಯವಸ್ಥೆ ಮಾಡಿದುವು. ಇಡೀ ಪ್ರಕ್ರಿಯೆಯನ್ನು ಹೊಸ ದೃಷ್ಟಿಯಿಂದ ನೋಡಲು ಅದರಿಂದ ಅವಕಾಶವಾಯಿತಾದರೂ, ನಿರ್ಣಾಯಕವಾಗಿ ಏನೊಂದೂ ಮೂಡಿಬರಲಿಲ್ಲ. ಮೀಸಲಾತಿ ಪ್ರಯೋಜನಗಳನ್ನು ಪಡೆದುಕೊಳ್ಳುವುದೇ ಒಂದು ಆಕರ್ಷಣೆಯಾಗಿಬಿಟ್ಟಿದೆ. ವಿವಿಧ ಜಾತಿಗಳಿಗೆ ಸೇರಿದ ಪ್ರತಿಯೊಬ್ಬರೂ ಮೀಸಲಾತಿಯ ಲಾಭಗಳಿಗಾಗಿ ಹಾತೊರೆಯುವುದಕ್ಕೆ ತೊಡಗಿದ್ದಾರೆ.

ಕೆಲವು ವರ್ಗಗಳವರು ಬಿ.ಸಿ., ಓ.ಬಿ.ಸಿ., ಎಸ್.ಇ.ಬಿ.ಸಿ. ಗಳಾಗಲು ಹವಣಿಸಿದರೆ ಇತರ ಕೆಲವರು ಎಸ್.ಸಿ., ಎಸ್.ಟಿ. (ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗ) ಎಂಬ ಹಣೆಪಟ್ಟಿಯನ್ನು ಬಯಸಿದರು. 1950ರಿಂದಲೂ ಎಸ್.ಸಿ. ಮತ್ತು ಎಸ್.ಟಿ.ಗಳ ಪರವಾಗಿ ವರ್ತಿಸುತ್ತಿರುವ ಮೀಸಲಾತಿ ಯೋಜನೆಯು ಇತರ ಅನೇಕರಿಗೆ ಹೊಟ್ಟೆಯುರಿಯನ್ನು ಉಂಟುಮಾಡಿದೆ. ಅನೇಕ ವೇಳೆ ಅದನ್ನು ದುರುಪಯೋಗಪಡಿಸಿಕೊಂಡು ಎಸ್.ಸಿ. ಹಾಗೂ ಎಸ್.ಟಿ.ಗಳೆಂದು ಅನೇಕರು ಲಾಭ ಪಡೆದಿದ್ದಾರೆ. ಈ ವರ್ಷಗಳಲ್ಲಿ ಪರಿಶಿಷ್ಟಕ್ಕೆ ತಮ್ಮನ್ನು ಸೇರಿಸುವಂತೆ ಮಾಡಲು ಹಲವು ವರ್ಗಗಳು ವ್ಯವಸ್ಥಿತವಾಗಿ ಒತ್ತಡ ಹಾಕಿವೆ. ಹಾಗಾಗಿ, "ಮೀಸಲಾತಿ ನೀತಿ"ಯ ಬೇರೆ ಬೇರೆ ಶಾಖೆಗಳು ಬಡವರ, ದಲಿತರ, ಹಿಂದುಳಿದ ಜನರ

ಉದ್ಧಾರಕ್ಕೆ ವಿರುದ್ಧವಾಗಿ ವಿಭಜಕ ಶಕ್ತಿಯ ಪಾತ್ರವನ್ನು ನಿರ್ವಹಿಸುತ್ತಿವೆ, ಜನರು ಹಿಂದುಳಿದ ವರ್ಗಗಳು, ಎಸ್.ಸಿ., ಎಸ್.ಟಿ.ಗಳು ಎನಿಸಿಕೊಳ್ಳಲು ಸ್ಪರ್ಧಿಸುತ್ತಿದ್ದಾರೆ.

ಸರಕಾರವೂ ವ್ಯವಸ್ಥಿತವಾದ ಒತ್ತಡಗಳಿಗೆ ಮಣಿದು ಅವರನ್ನು ಒಂದಿಲ್ಲೊಂದು ವರ್ಗದಲ್ಲಿ ಸೇರಿಸಿದೆ. ಇದರಿಂದ ಇನ್ನೂ ಹಲವು ಪಂಗಡಗಳು ಮೀಸಲಾತಿ ಪ್ರಯೋಜನಗಳನ್ನು ತಮಗೆ ಕೊಡಬೇಕೆಂದು ಒತ್ತಾಯಪಡಿಸಲು ಉತ್ಸಾಹಗೊಂಡಿವೆ. ಇದು ಈ ಉಪಖಂಡದಲ್ಲಿ ಒಂದೇ ಸಮನೆ ನಡೆಯುತ್ತಲೇ ಇರುವ ಒಂದು ಪ್ರಕ್ರಿಯೆ ಆಗಿದೆ. ಕರ್ನಾಟಕದಲ್ಲಿ ಶೂದ್ರವರ್ಣಕ್ಕೆ ಸೇರಿದ ಎರಡು ಜಾತಿ ಪಂಗಡಗಳು ವ್ಯವಸ್ಥಿತವಾಗಿ ತಮ್ಮನ್ನು ಎಸ್.ಟಿ. ವರ್ಗಕ್ಕೆ ಸೇರಿಸಬೇಕೆಂದು ಸರಕಾರವನ್ನು ಒತ್ತಾಯಪಡಿಸುತ್ತಿವೆ. ಹಾಗಾಗಿ ಪ್ರಸ್ತುತ ಅಧ್ಯಯನವು ಜಾತಿಗಳು ಬುಡಕಟ್ಟುಗಳಾಗಬಯಸುವ ವ್ಯವಸ್ಥಿತ ಪ್ರಯತ್ನಗಳ ಮೇಲೆ ಗಮನವನ್ನು ಕೇಂದ್ರೀಕರಿಸುತ್ತದೆ. ಇದು ಹಿಂದೆ ಬುಡಕಟ್ಟುಗಳು ಜಾತಿಗಳಾಗ ಬಯಸುತ್ತಿದ್ದ ಪರಿಸ್ಥಿತಿಗೆ ವ್ಯತಿರಿಕ್ತವಾಗಿದೆ. ಅಧ್ಯಯನವು ಕುರುಬ ಜಾತಿ ಪಂಗಡ ಹಾಗೂ ಕಾಡುಕುರುಬ ಆದಿವಾಸಿಗಳ ಮೇಲೆ ಕೇಂದ್ರೀಕೃತವಾಗಿದೆ. ಕೇವಲ ಲೌಕಿಕವಾದ ಪ್ರಯೋಜನಗಳಿಗಾಗಿ, ಅವರ ನಡುವೆ ವಾಸ್ತವವಾಗಿ ತುಂಬಾ ವ್ಯತ್ಯಾಸವಿದ್ದರೂ, ಅಡ್ಡಾಡ್ಡಲಾಗಿ ಹಾಯುತ್ತಿರುವುದು ಕಂಡು ಬರುತ್ತದೆ.

ಪ್ರಸ್ತುತ ಅಧ್ಯಯನವು ಜಾತಿವ್ಯವಸ್ಥೆ ಹಾಗೂ ಆದಿವಾಸಿ ವರ್ಗಗಳ ನಡುವೆ ಇರಬಹುದಾದ ಹೋಲಿಕೆಗಳನ್ನು ಅರ್ಥ ಮಾಡಿಕೊಳ್ಳುವ ಪ್ರಯತ್ನವಾಗಿದೆ. ಸ್ವತಂತ್ರಪೂರ್ವ ಹಾಗೂ ಸ್ವಾತಂತ್ರ್ಯೋತ್ತರ ಕಾಲದಲ್ಲಿ, ಇಂತಹ ಪ್ರಯತ್ನಗಳು ಹಲವಾರು ನಡೆದಿವೆ. ಐತಿಹಾಸಿಕವಾಗಿ, ಆದಿವಾಸಿ ಜನರು ಸಾಮಾನ್ಯವಾಗಿ ದುರ್ಗಮವಾದ - ಪರ್ವತ ಶ್ರೇಣಿ, ಬೆಟ್ಟದ ತಪ್ಪಲು, ಅರಣ್ಯಗಳ ಅಂಚು ಮುಂತಾದ ಸ್ಥಳಗಳಲ್ಲಿ ವಾಸ ಮಾಡುವುದನ್ನು ಬಯಸಿದ್ದಾರೆ, ಹಾಗೆ ವಾಸ ಮಾಡುತ್ತಿದ್ದಾರೆ. ಅವರು ಇರುವ ಸ್ಥಳದ ಪರಿಸರವೇ ಅವರಿಗೆ ಸ್ವಲ್ಪ ಮಟ್ಟಿನ ಸ್ವಾತಂತ್ರ್ಯವನ್ನು ನೀಡಿತ್ತು. ಅರಸರಾಗಲಿ ಇತರರಾಗಲಿ ಅವರ ಬದುಕಿನಲ್ಲಿ ತಲೆಗು ಹಾಕಲು ಅವಕಾಶವಿರಲಿಲ್ಲ. ಆದರೂ ಮುಘಲರ ಕಾಲದಷ್ಟು ಹಿಂದೆಯೇ ಬುಡಕಟ್ಟು ಜನರು ಹೊರಜಗತ್ತಿನೊಂದಿಗೆ ಸಂಬಂಧವಿಲ್ಲದಂತೆ ಸಂಪೂರ್ಣ ಪ್ರತ್ಯೇಕವಾಗಿ ಬದುಕಲು ಅಸಮರ್ಥರಾದುದನ್ನು ನೋಡುತ್ತೇವೆ. ತಮ್ಮ ಗಡಿಗಳನ್ನು ವಿಸ್ತರಿಸುವ ಅತ್ಯುತ್ಸಾಹದಿಂದ ಕೆಲವು ಮುಘಲ್ ಅರಸರು ಆದಿವಾಸಿ ಪ್ರದೇಶಗಳನ್ನು ವಶಪಡಿಸಿಕೊಂಡು ಮುಂದೆ ನುಗ್ಗಿದರು. ವಿಶೇಷವಾಗಿ ಇದು ಉತ್ತರಭಾರತದಲ್ಲಿ ಕಂಡುಬರುತ್ತದೆ.

ಮುಘಲರ ನಂತರ ಚಕ್ರವರ್ತಿಗಳಾಗಿ ಆಡಳಿತ ನಡೆಸಿದ ಬ್ರಿಟಿಷರು ತಮ್ಮ ಸಾಮ್ರಾಜ್ಯಕ್ಕೆ ಇನ್ನಷ್ಟು ಪ್ರದೇಶವನ್ನು ಸೇರಿಸುವುದರಲ್ಲಿ, ಅದನ್ನು ಕ್ರೋಡಿಕರಿಸುವುದರಲ್ಲಿ ಆಸಕ್ತರಾಗಿದ್ದುದು ಮಾತ್ರವಲ್ಲದೆ, ಬ್ರಿಟಿಷ್ ಬೊಕ್ಕಸಕ್ಕೆ ಹೆಚ್ಚು ಹೆಚ್ಚು ವರಮಾನವನ್ನು ಸಂಗ್ರಹಿಸುವುದರಲ್ಲೂ ತುಂಬಾ ಆಸಕ್ತರಾಗಿದ್ದರು. ಆದಿವಾಸಿ ಪ್ರದೇಶಗಳನ್ನು ಸೇರಿಸಿ ಅಲ್ಲೂ ತೆರಿಗೆ ವಸೂಲಿಗೆ ಕ್ರಮಗಳನ್ನು ಕೈಗೊಳ್ಳಲಾಯಿತು. ಅನೇಕ ಆದಿವಾಸಿ ಬಂಡಾಯಗಳನ್ನು

ಕುರಿತು ನಾವು ಕೇಳುವುದೂ ಬ್ರಿಟಿಷರ ಕಾಲದಲ್ಲಿಯೇ, ಬ್ರಿಟಿಷರು ಇಂತಹ ಅಶಾಂತಿಯನ್ನು ಅಡಗಿಸಿದರು. ಕೆಲವು ವೇಳೆ ದಮನ ಮಾಡಿದರು. ಬ್ರಿಟಿಷ್ ಆಳುವ ವರ್ಗದವರು ನೇರವಾಗಿ ಆದಿವಾಸಿಗಳೊಂದಿಗೆ ವ್ಯವಹರಿಸುತ್ತಿರಲಿಲ್ಲ. ಜಮೀನುದಾರರು ಅಥವಾ ಸ್ಥಳೀಯ ಮುಖ್ಯಸ್ಥರು ಈ ಜನರ ನಿರ್ವಹಣೆಯ ಹೊಣೆ ಹೊತ್ತುಕೊಂಡು ತಮಗೆ ತೆರಿಗೆಯನ್ನು ವಸೂಲು ಮಾಡಿಕೊಡುವಂತೆ ನೇಮಿಸುತ್ತಿದ್ದರು. ಈ ಮುಖ್ಯಸ್ಥರಿಗೆ ಅಥವಾ ಸ್ಥಳೀಯ ನಾಯಕರಿಗೆ ಅವರು ಸಲ್ಲಿಸಿದ ಸೇವೆಗಾಗಿ ಪುರಸ್ಕಾರಗಳು ದೊರಕುತ್ತಿದ್ದವು. ಅರಣ್ಯವನ್ನು ಕುರಿತು ಕಾನೂನು ಬಂದದ್ದು ಬ್ರಿಟಿಷರ ಕಾಲದಲ್ಲಿಯೇ. ಅರಣ್ಯ ಸಂಪತ್ತು ವರಮಾನದ ಒಂದು ಮೂಲವಾಗಿತ್ತು. ಸಾಮ್ರಾಜ್ಯವು ಉಪಖಂಡದಲ್ಲಿ ತನ್ನ ಹಿಡಿತವನ್ನು ವಿಸ್ತರಿಸಿದಂತೆ ನೆಲದ ಸರ್ವೆ ಮಾಡಿ ವರ್ಗೀಕರಿಸಲಾಯಿತು. ಕೃಷಿ ಭೂಮಿಯ ಮೇಲೆ ತೆರಿಗೆ ವಿಧಿಸಿ ಆ ಸಂಬಂಧವಾದ ನಿಯಮಗಳನ್ನು ಜಾರಿಗೊಳಿಸಲಾಯಿತು. ಜಮೀನ್ದಾರಿ, ರಯತ್ವಾರಿ ಹಿಡುವಳಿಗಳು, ಬ್ರಿಟಿಷ್ ಆಡಳಿತದ ಆಲೋಚನೆಯ ಶಿಶುಗಳು.

ಸ್ವಾತಂತ್ರ್ಯೋತ್ತರ ಭಾರತದಲ್ಲಿ ಜಮೀನ್ದಾರಿಯನ್ನು ಕಾನೂನು ಪ್ರಕಾರ ರದ್ದುಪಡಿಸಲಾಗಿದೆ. ಹಿಡುವಳಿಗಳ ಗಾತ್ರವನ್ನು ನಿಯಂತ್ರಿಸುವ ಸಲುವಾಗಿ ಭೂಮಿತಿಯನ್ನು ಶಾಸನಗೊಳಿಸಲಾಗಿದೆ. ಮಂದಗತಿಯಲ್ಲಿ ಜಾರಿಗೊಳಿಸುವುದು, ಭೂಮಿತಿ ಶಾಸನವನ್ನು ತಪ್ಪಿಸಿಕೊಳ್ಳಲು ಒಡೆಯರು ಕೈಗೊಂಡ ಬಗೆಬಗೆಯ ಕ್ರಮಗಳು ಇವು ದೇಶಾದ್ಯಂತ ಬೇಕಾದ ಹಾಗೆ ಕಂಡು ಬಂದಿವೆ. ಆಗಾಗ ರಾಜ್ಯ ಸರಕಾರಗಳು ಕೈಗೊಳ್ಳುವ, ಅಕ್ರಮವಾಗಿ ಕೃಷಿಯಾಗುತ್ತಿರುವ ಭೂಮಿಯನ್ನು ಸಕ್ರಮಗೊಳಿಸುವ ಕ್ರಮವು ಇದಕ್ಕೆ ಉತ್ತಮ ಉದಾಹರಣೆಯಾಗಿದೆ. ಭೂಮಿಯನ್ನು ಅಪಹರಿಸುವುದು ಒಂದು ನಿರಂತರ ಸಮಸ್ಯೆ. ಶ್ರೀಮಂತರೂ ಪ್ರಬಲರಾದವರೂ ಕೊಳ್ಳೆಯೊಂದಿಗೆ ತಪ್ಪಿಸಿಕೊಂಡು ಬಿಡುತ್ತಾರೆ, ಬಡವರೂ, ಅಸಹಾಯಕರೂ ಆದವರ ಮೇಲೆ ಆರೋಪ ಹೊರಿಸಿ ಅದನ್ನು ಕಿತ್ತುಕೊಳ್ಳಲಾಗುತ್ತದೆ. ದೇಶದ ಹೆಚ್ಚುಕಡಿಮೆ ಎಲ್ಲಾ ಬುಡಕಟ್ಟು ಪ್ರದೇಶಗಳಲ್ಲಿ ಆಗುತ್ತಿರುವುದೇ ಇದು. ಈಚಿನ ವರ್ಷಗಳಲ್ಲಿ ಅರಣ್ಯ ಸಂರಕ್ಷಣೆಗೆ ಸಂಬಂಧಿಸಿದ ಕಾನೂನುಗಳನ್ನು ಹೆಚ್ಚು ಕಟ್ಟುನಿಟ್ಟಾಗುವಂತೆ ನೋಡಲಾಗುತ್ತಿದೆ ಮಾತ್ರವಲ್ಲ, ಅದೇ ಸಮಯಕ್ಕೆ ಆದಿವಾಸಿಗಳಿಗೆ ಅವರ ಸಾಂಪ್ರದಾಯಿಕ ನೆಲೆಯನ್ನು ಜೀವನೋಪಾಯವನ್ನು ವಂಚಿಸಲಾಗುತ್ತಿದೆ. ಆವರ್ತಕ ಕೃಷಿಯನ್ನು (Shifting Cultivation) ನಿಷೇಧಿಸಲಾಗಿದೆ. ಆದರೆ ಪುನರ್ವಸತಿಯಾಗಲಿ, ಹೊಸ ನೆಲಗಳಲ್ಲಿ ಸೌಲಭ್ಯಗಳನ್ನು ಕಲ್ಪಿಸಿಕೊಡುವುದಾಗಲಿ ಕೇವಲ ಅಪ್ರಮಾಣಿಕ ಸಹಾನುಭೂತಿಯಾಗಿದೆ. ಇದರಲ್ಲಿ ಅಧಿಕಾರಶಾಹಿ, ಅರಣ್ಯಾಧಿಕಾರಿಗಳು, ಪಟ್ಟಭದ್ರಹಿತಾಸಕ್ತಿಗಳು, ಗುತ್ತಿಗೆದಾರರು ಹಾಗೂ ಸರಕಾರದ ನಿರಾಸಕ್ತಿ ಬಹುದೊಡ್ಡ, ಆಘಾತಕರ ಪಾತ್ರವನ್ನು ನಿರ್ವಹಿಸುತ್ತವೆ. ಈ ಎಲ್ಲದರಲ್ಲೂ ಮಾನವೀಯ ವರ್ತನೆ ಮಾತ್ರ ಕಣ್ಮರೆಯಾಗಿರುವುದು ವಿಷಾದಕರವಾಗಿದೆ.

ಬ್ರಿಟಿಷ್ ಆಡಳಿತದ ವಿರುದ್ಧವಾಗಿ ಸಂತಾಲ ದಂಗೆಯು ಗತ ಇತಿಹಾಸ. ಇಂದಾದರೋ ದೇಶದ ಬೇರೆ ಬೇರೆ ಭಾಗಗಳಲ್ಲಿ ಆದಿವಾಸಿಗಳು ಬೇಕಾದಷ್ಟು ಚಳುವಳಿಗಳನ್ನು, ಧರಣಿಗಳನ್ನು

ನಡೆಸುತ್ತಿದ್ದಾರೆ. ಇವರಲ್ಲಿ ಕರ್ನಾಟಕವೂ ಹಿಂದೆ ಬಿದ್ದಿಲ್ಲ. 1995 ರಲ್ಲಿ ಸಾರಾಯಿ ಗುತ್ತಿಗೆದಾರರು, ಅಬ್ಕಾರಿ ವಿಭಾಗದ ಸಹಾಯದಿಂದ ಹುಣಸೂರು ತಾಲ್ಲೂಕಿನಲ್ಲಿ ಆದಿವಾಸಿಗಳನ್ನು ಹೊಡೆದು ಬಡಿದು ಅವರಿಗೆ ಕಿರುಕುಳ ಕೊಟ್ಟರು. ಅದಕ್ಕೆ ಕಾರಣ ಅವರು, ವಿಶೇಷವಾಗಿ ಆದಿವಾಸಿ ಮಹಿಳೆಯರು ತಮ್ಮ ಹಾಡಿಗಳಲ್ಲಿ ಅಥವಾ ಹಾಡಿಗಳ ಬಳಿ ಹೆಂಡದಂಗಡಿಗಳನ್ನು ತೆರೆಯುವುದನ್ನು ವಿರೋಧಿಸಿದುದು. ಸರಕಾರವು ಪಾನನಿಷೇಧವನ್ನು ಹಂತಹಂತವಾಗಿ ಜಾರಿಗೊಳಿಸುವುದಾಗಿ ಪ್ರಕಟಿಸಿತು. ಆದರೆ ಅದನ್ನು ಮುಂದೂಡುತ್ತಲೇ ಹೋದದ್ದು ಸರಕಾರವು ಕೈಗೊಂಡ ಆದಿವಾಸಿಗಳ ಕಣ್ಣೊರೆಸುವ ತಂತ್ರವಾಗಿತ್ತು. ಸರಕಾರಕ್ಕೆ ತನ್ನದೇ ಬದ್ಧತೆಯನ್ನು ಗೌರವಿಸಲು ಸಾಮರ್ಥ್ಯವಿಲ್ಲ. ಇದಕ್ಕಿಂತ ಗಂಭೀರವಾದ ಘಟನೆಗಳು, ನಾಗರಹೊಳೆ ಅರಣ್ಯದ ರಾಷ್ಟ್ರೀಯ ಉದ್ಯಾನ ಪ್ರದೇಶದಲ್ಲೂ ಬಂಡೀಪುರ 'ಹುಲಿ ಮೀಸಲು' ಪ್ರದೇಶದಲ್ಲೂ ಸಂಭವಿಸಲಿವೆ. ಈ ಎರಡನೆಯ ಪ್ರದೇಶದಲ್ಲಿ ಆದಿವಾಸಿಗಳಿಗೂ ಹಳ್ಳಿಗರಿಗೂ ಸೇರಿದ ಬೆಳೆದು ನಿಂತಿದ್ದ ಬೆಳೆಯನ್ನು ಈಚೆಗೆ (ಜುಲೈ - ಆಗಸ್ಟ್ 1996) ಅರಣ್ಯ ಇಲಾಖೆಯ ಸಿಬ್ಬಂದಿಗಳು ನಾಶಮಾಡಿದರು. ಆದಿವಾಸಿ ಗಂಡಸರಿರಲಿ, ಹೆಂಗಸರು ಮಕ್ಕಳನ್ನೂ ಅರಣ್ಯ ಭೂಮಿಯಲ್ಲಿ ಅಕ್ರಮವಾಗಿ ಬೇಸಾಯ ಮಾಡಿದರೆಂದು ಆರೋಪಿಸಿ ಅವರ ಮೇಲೆ ಹಲ್ಲೆ ಮಾಡಲಾಯಿತು. ನಾಗರ ಹೊಳೆ ಪ್ರದೇಶದಲ್ಲಿ ತಾಜ್ ತಂಡವು ಒಂದು ಹೋಟೆಲನ್ನು ನಿರ್ಮಿಸುತ್ತಿದೆ. ಸರಕಾರದ ಇಚ್ಛೆಯಂತೆ ಅಲ್ಲಿ ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸುವ ಸಲುವಾಗಿ ಆ ಕೆಲಸ ನಡೆದಿದೆ. ಇದರರ್ಥ ಆ ಕಾಡಿನಿಂದ ಆದಿವಾಸಿಗಳನ್ನು ಇಡಿಯಾಗಿ ಹೊರದೂಡಿ, ಪರಿಸರವನ್ನು ಹಾಳು ಮಾಡಿ, ಇನ್ನೂ ಹಲವು ಸಮಸ್ಯೆಗಳಿಗೆ ಎಡೆಗೊಡುವುದು. ವನ್ಯಪ್ರಾಣಿ ಜೀವನವಂತೂ ಹೆಸರಿಲ್ಲದಂತೆ ಹಾಳಾಗುತ್ತದೆ.

ಆದಿವಾಸಿಗಳು ಈ ಪ್ರಕ್ರಿಯೆಯನ್ನು ಹತಾಶೆಯಿಂದ ಗಮನಿಸುತ್ತಿದ್ದಾರೆ. ಸರಕಾರದ ಕ್ರಮವನ್ನೂ ತಾಜ್ ತಂಡದ ಯೋಜನೆಗಳನ್ನೂ ವಿರೋಧಿಸಲು ಸಂಘಟಿತರಾಗುತ್ತಿದ್ದಾರೆ. ಸರಕಾರದ ಈ ಕ್ರಮದಿಂದ ಬಹುಮಟ್ಟಿಗೆ ನೆಲೆತಪ್ಪುವವರು ಕಾಡು ಕುರುಬರು. ಮೈಸೂರು ಜಿಲ್ಲೆಯಲ್ಲಿರುವ ಕಾಡು ಕುರುಬರು ಸರಕಾರಿಯೇತರ ಸಂಘಗಳ ಬೆಂಬಲವನ್ನು ಪಡೆದು ಕೇಂದ್ರ ಸರಕಾರಕ್ಕೆ ಮನವಿ ಮಾಡಿಕೊಡುತ್ತಿದ್ದಾರೆ. ಭೂರಿಯಾ ಸಮಿತಿ ಸಲಹೆಯ ಶಿಫಾರಸುಗಳನ್ನು ಜಾರಿಗೆ ತಂದು, ತಾವು ಆದಿವಾಸಿ ಸಂಪ್ರದಾಯಗಳನ್ನು ಉಳಿಸಿಕೊಂಡು ಅಸ್ತಿತ್ವದಲ್ಲಿರಲು ನೆರವಾಗಬೇಕೆಂದು ಕೋರುತ್ತಿದ್ದಾರೆ. ಸರಕಾರವು ಸೂಕ್ತವಾದ ಶಿಫಾರಸುಗಗಳನ್ನು ಕಾರ್ಯಗತಗೊಳಿಸಿ ಆದಿವಾಸಿಗಳು ಶಾಂತಿಯಿಂದಿರಲು ಅವಕಾಶ ಮಾಡಿಕೊಡುವುದು ಸ್ವಾಗತಾರ್ಹವಾದದ್ದೇ ಸರಿ. ಸರಕಾರವು ಈ ಪ್ರಶ್ನೆಯನ್ನು ಮಾನವೀಯತೆಯಿಂದ ನೋಡಿ ಅನರ್ಥದ ಸಾಧ್ಯತೆಯನ್ನು ನಿವಾರಿಸುತ್ತದೆಯೆ? ಸರಕಾರವು ಬೇಕಾದರೆ ಈ ಚಟುವಟಿಕೆಯನ್ನು ಹತ್ತಿಕ್ಕಿ, ಅದು ಕಾನೂನು ಮತ್ತು ಸುವ್ಯವಸ್ಥೆಯ ಪ್ರಶ್ನೆ ಎಂದು ಹೆಸರಿಟ್ಟು ಅದನ್ನು ಮಣ್ಣುಗೂಡಿಸಲೂಬಹುದು. ಆದಿವಾಸಿಗಳು ಚೌಕಶಿ ಮಾಡುವ ಸ್ಥಿತಿಯಲ್ಲಿಲ್ಲ. ಸರಕಾರದ ಶಕ್ತಿಗಳ ಮತ್ತು ಅಧಿಕಾರದ ಎದುರಿಗೆ ಅವರು ಎಲ್ಲಿ ನಿಂತಾರು!

ಆದರೆ ಮಾನವ ದುಃಖ ಸಂಕಟಗಳು ಉಳಿದೇ ಉಳಿಯುತ್ತವೆ, ದಂಗೆಯು ತನ್ನ ಕುರೂಪದ ಹೆಡೆಯನ್ನು ಎತ್ತುವುದಕ್ಕೆ ಸರಕಾರವೂ ಉದ್ದೇಶವಿಲ್ಲದೆಯೇ ಭಾಗಿದಾರಿಯಾಗಬಹುದು.

1952ರಿಂದ ಹಲವು ಅಭಿವೃದ್ಧಿ ಕಾರ್ಯಕ್ರಮಗಳನ್ನು ದೇಶದಲ್ಲಿ ಜಾರಿಗೊಳಿಸಲಾಗಿದೆ, ನಿಜ. ಅವುಗಳಲ್ಲಿ ಅನೇಕ ಕಾರ್ಯಕ್ರಮಗಳು ನೇತ್ಯಾತ್ಮಕ ಪರಿಣಾಮವನ್ನೇ ಕಂಡಿವೆ. ಉದಾಹರಣೆಗೆ ಹಲವಾರು ಕಾರ್ಯಕ್ರಮಗಳಿದ್ದ ಸಮುದಾಯ ಅಭಿವೃದ್ಧಿ ಯೋಜನೆ. ಕಾಲಕ್ರಮದಲ್ಲಿ ಉದ್ದೇಶಿತ ಫಲಿತಾಂಶಗಳನ್ನು ಮೀರಿ ಅನುದ್ದಿಷ್ಟ ಪರಿಣಾಮಗಳು ಕಾಣಿಸಿಕೊಂಡವು. ಯೋಜನೆಯನ್ನು ರದ್ದುಪಡಿಸಬೇಕಾಯಿತು. ಈಗ ಗ್ರಾಮಾಂತರ ಪ್ರದೇಶಗಳಲ್ಲಿ ಸಮಗ್ರ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮವು (ಐಆರ್‌ಡಿಪಿ) ಜಾರಿಯಲ್ಲಿದೆ. ಈ ಯೋಜನೆ ಎಷ್ಟು ಮಟ್ಟಿಗೆ ಯಶಸ್ವಿಯಾಗಿದೆ, ಇದರ ಫಲಾನುಭವಿಗಳು ಯಾರು ಎಂಬುದು ಸ್ಪಷ್ಟವಾಗಿಲ್ಲ.

ಹದಿನಾಲ್ಕು ವರ್ಷ ವಯಸ್ಸಿನವರೆಗೆ ಕಡ್ಡಾಯ ಶಿಕ್ಷಣವು ಸಂವಿಧಾನದಲ್ಲೇ ಉಕ್ತವಾಗಿದೆ. ಆದರೆ ಅದನ್ನು ಇತ್ತೀಚಿನವರೆಗೂ ಉಪೇಕ್ಷಿಸಲಾಗಿತ್ತು. ನಿರಕ್ಷರಸ್ಥರ ಸಂಖ್ಯೆ ಏರಿತು. ಶಿಕ್ಷಣವು ರಾಜ್ಯದ ವಿಷಯವಾದುದರಿಂದ ಕೇಂದ್ರ ಸರಕಾರವು ಅದನ್ನು ರಾಜ್ಯ ಸರಕಾರಗಳಿಗೆ ಬಿಟ್ಟು ಕೈ ತೊಳೆದುಕೊಂಡಿತು. ಹಣದ ಕೊರತೆ, ರಾಜಕೀಯ ನಾಯಕರು ಸರಕಾರವು ಕಡ್ಡಾಯ ಶಿಕ್ಷಣದ ವಿಷಯದಲ್ಲಿ ತೋರಿಸಿದ ನಿರಾಸಕ್ತಿ ಇವುಗಳಿಂದಾಗಿ, ಖಾಸಗಿ ಶಿಕ್ಷಣ ಸಂಸ್ಥೆಗಳು ಎಲ್ಲೆಲ್ಲೂ ತಲೆಯೆತ್ತಲು ಪ್ರೋತ್ಸಾಹ ದೊರಕಿತು. ಅದು ಬಹುತೇಕ ಹಣ ಮಾಡುವ ದಂಧೆಯಾಯಿತು. ಈ ವ್ಯವಹಾರವು ಕಿಂಡರ್‌ಗಾರ್ಟನ್ ಹಂತದಿಂದಲೇ ಮೊದಲಾಗುತ್ತದೆ, ಹಣಪಡೆದು ವೃತ್ತಿಪರ ಹಾಗೂ ತಾಂತ್ರಿಕ ಶಿಕ್ಷಣವನ್ನು ನೀಡುವವರೆಗೆ ಹರಡಿಕೊಂಡಿದೆ. ಸರಕಾರಿ ಶಿಕ್ಷಣ ಸಂಸ್ಥೆಗಳು ಹೀನಾಯವಾದ ಸ್ಥಿತಿಗೆ ಇಳಿದಿವೆ. ಬೇಕಾದಷ್ಟು ಹಣವನ್ನು ವೆಚ್ಚಮಾಡಿ ಖಾಸಗಿ ಸಂಸ್ಥೆಗಳಲ್ಲಿ ಶಿಕ್ಷಣ ಪಡೆಯಬಲ್ಲ ಶ್ರೀಮಂತರಿಗೂ ಎದೆಗುಂದಿಸುವ ಸ್ಥಿತಿಯಲ್ಲಿ ಜೀವಿಸುತ್ತಾ, ಸರಕಾರಿ ಶಿಕ್ಷಣ ಸಂಸ್ಥೆಗಳಿಂದ ಬಹುಬೇಗನೆಯೇ ಬಿಟ್ಟುಬಿಡುವ ಬಡವರಿಗೂ ನಡುವಣ ಕಂದರವು ಅಗಲವಾಗಿದ್ದು, ರಾಷ್ಟ್ರೀಯ ನಷ್ಟಕ್ಕೂ, ಬುದ್ಧಿ ಶಕ್ತಿಯು ಪೋಲಾಗುತ್ತಿರುವುದಕ್ಕೂ ದಾರಿ ಮಾಡಿದೆ.

ನಡುವಂತರದಲ್ಲಿ ಜಾರಿಗೆ ಬಂದ ವಯಸ್ಕರ ಶಿಕ್ಷಣ ಕಾರ್ಯಕ್ರಮ ಹಾಗೂ 'ಕಪ್ಪು ಹಲಗೆ ಯೋಜನೆ' ಅದರ ಸಹವರ್ತಿಯಾದ 'ಸಾಕ್ಷರತಾ ಆಯೋಗ' ಇವೆಲ್ಲ ಸಾಕ್ಷರರ ಸಂಖ್ಯೆಯನ್ನು ಹೆಚ್ಚಿಸಲು ಸರಕಾರವು ಕೈಗೊಂಡ ವಿಳಂಬಿತ ಕ್ರಮಗಳು. ಇಡೀ ಜಿಲ್ಲೆಗಳನ್ನೇ ಅಕ್ಷರಸ್ಥ ಎಂದು ಘೋಷಿಸಲಾಯಿತು. ಚುಕ್ಕೆ ಸಾಲುಗಳ ಮೇಲೆ ಮೌಲ್ಯಮಾಪನವನ್ನು ಮಾಡಲಾಗುತ್ತಿದೆ. ಆದರೆ ಅದು ಕೇವಲ ಸಂಖ್ಯೆಗಳ ಲೆಕ್ಕಾಚಾರ, ವಾಸ್ತವತೆಯಲ್ಲಿ ಅದು ಕಡ್ಡಾಯ ಶಿಕ್ಷಣಕ್ಕೆ ತುಂಬಾ ಕ್ಷೀಣವಾದ ಬದಲಿಕ್ರಮ. ಅಪಾರ ಪ್ರಮಾಣದ ಹಣವೇನೋ ವೆಚ್ಚವಾಗುತ್ತಿದೆ. ಆದರೆ ಬಹುಮಟ್ಟಿನ ಹಣವು ವ್ಯರ್ಥವಾಗಿ ಹರಿದುಹೋಗಿ ಬಿಡುತ್ತಿದೆ ಎಂದು ಸಾಮಾನ್ಯವಾದ ಭಾವನೆ ಬೆಳೆದಿದೆ. ಭ್ರಷ್ಟಾಚಾರವು ವಿಪರೀತವಾಗಿದೆ.

ಜನಸಂಖ್ಯೆಯಲ್ಲಿ ಉಂಟಾಗಿರುವ ಹೆಚ್ಚಳದಿಂದ ಅನೇಕ ಅಭಿವೃದ್ಧಿ ಕಾರ್ಯಕ್ರಮಗಳು ಕುಂಠಿತವಾಗಿರುವುದೇನೋ ನಿಜ. ಆದರೆ ಕುಟುಂಬ ಯೋಜನೆ, ಕುಟುಂಬ ಕಲ್ಯಾಣ ಕಾರ್ಯಕ್ರಮ ಹಾಗೂ ಆರೋಗ್ಯ ಸೇವೆಗಳು ಇವುಗಳಲ್ಲೂ ಸಮಸ್ಯೆಗಳು ಕಾಡುತ್ತಿವೆ. ಒಂದಾದ ಮೇಲೊಂದರಂತೆ ಬಂದ ಸರಕಾರಗಳು ಕೈಗೊಂಡ ಜನಪರ ಕಾರ್ಯಕ್ರಮಗಳು ಸಮಸ್ಯೆಗಳನ್ನು ಅಗಾಧ ಪ್ರಮಾಣಕ್ಕೆ ಏರಿಸಿರುವುದು ಮಾತ್ರವಲ್ಲ, ಬೊಕ್ಕಸವನ್ನೂ ಬರಿದು ಮಾಡುತ್ತಿವೆ. ಕಳೆದ ಕೆಲವು ವರ್ಷಗಳಲ್ಲಿ ಕಾಣಿಸಿಕೊಂಡ ಹಗರಣಗಳು, ಮೋಸ - ವಂಚನೆಗಳು, ಖಂಡಿತವಾಗಿಯೂ ಜನರಲ್ಲಿ ನೈತಿಕತೆಯನ್ನು ಹಾಳು ಮಾಡಿ, ರಾಷ್ಟ್ರೀಯತೆಯ ಲಕ್ಷಣವನ್ನೂ ಸಮಗ್ರತೆಯನ್ನೂ ದುರ್ಬಲಗೊಳಿಸಿವೆ.

ಕಾಂಗ್ರೆಸ್ ಸರಕಾರವು 1980ರ ವರ್ಷಗಳಲ್ಲಿ ಜಾರಿಗೆ ತಂದ "ಸಾಲ ಮೇಳ"ಗಳು ಜನಪ್ರಿಯ ಕ್ರಮಗಳ ಒಂದು ಅತಿರೇಕದ ಉದಾಹರಣೆ. ಇಲ್ಲಿ ನಿಜವಾಗಿ ಲಾಭ ಪಡೆದವರು ಮಧ್ಯವರ್ತಿ ಜನರು, ನಿಜವಾಗಿ ಅರ್ಜಿ ಹಾಕಿಕೊಂಡ ವ್ಯಕ್ತಿಗೆ ಅಪರೂಪಕ್ಕೆ ಅಲ್ಪಸ್ವಲ್ಪ ಹಣ ದೊರಕಿತು. ಅಷ್ಟೇಕೆ, ದಲ್ಲಾಳಿಗಳಾದ ಜನರು ಅರ್ಜಿಗಳನ್ನೇ ನಕಲು ಮಾಡಿ, ನಾಮಿನಿಗೆ ಸ್ವಲ್ಪವೂ ಕಷ್ಟವಿಲ್ಲದೆ ಧನ ಸಹಾಯ ಮಾಡುವುದಾಗಿ ಭರವಸೆ ನೀಡಿದರು. ಇವೆಲ್ಲದರ ಒಟ್ಟು ಫಲಿತಾಂಶ, ಸಾಲ ಕೊಡಲೇಬೇಕೆಂದು ಒತ್ತಾಯಿಸಲ್ಪಟ್ಟ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಹಲವು ಅನೇಕ ವೇಳೆ ಆ ಸಾಲಗಳನ್ನು ಮರು ಮಸೂಲಿ ಮಾಡಲು ಶಕ್ತವಾಗಲಿಲ್ಲ. ಸಾಲಗಾರರ ತಪ್ಪು ವಿಳಾಸಗಳು ಅಥವಾ ಸುಳ್ಳು ವಿಳಾಸಗಳು ಹಾಡು ಹಗಲಲ್ಲೇ ಬ್ಯಾಂಕುಗಳಿಗೆ ವಂಚನೆ ಮಾಡಿದುವು. ಆದರೂ ಯಾವ ಸರಕಾರವೂ ಅದನ್ನು ತಡೆಯಲು ಅಥವಾ ನಿಲ್ಲಿಸಲು ಆಸಕ್ತಿ ತೋರಿಸಲಿಲ್ಲ.

ಒಂದು ಶಿಸ್ತನ್ನು ಕಾರ್ಯಗತಗೊಳಿಸಲು ರಾಜಕೀಯ ದೃಢನಿರ್ಧಾರವಿಲ್ಲದುದು ದೇಶಕ್ಕೆ ಬಹಳ ದುಬಾರಿಯಾಯಿತು. ಆರ್ಥಿಕ ಉದಾರೀಕರಣ ಮತ್ತು ವಿಶ್ವ ವ್ಯಾಪಕತ್ವಗಳಿಂದಾಗಿ ಪರಿಸ್ಥಿತಿ ಹೆಚ್ಚು ಹೆಚ್ಚಾಗಿ ಹದಗೆಡುತ್ತಿದೆ. ಸರಕಾರವು ಏನೆಲ್ಲವನ್ನು ಆಶ್ವಾಸನೆ ಕೊಡುತ್ತದೆ. ಪ್ರಜೆಗಳು ತುಂಬಾ ನಿರೀಕ್ಷಿಸುತ್ತಾರೆ. ಆದರೆ ಅನೇಕ ಆಶ್ವಾಸನೆಗಳು ಕಾಗದದ ಮೇಲೆಯೇ ಉಳಿದುಬಿಡುತ್ತವೆ. ಭಾರತವು ಅಭಿವೃದ್ಧಿ ಕಾರ್ಯಕ್ರಮಗಳನ್ನು ಮುಂದುವರಿಸುತ್ತ ಹೋಗಲು ಸಹಾಯ ಮಾಡುವುದಕ್ಕಾಗಿ ವಿಶ್ವಬ್ಯಾಂಕು ಹಾಗೂ ಅಂತರರಾಷ್ಟ್ರೀಯ ಹಣಕಾಸು ನಿಧಿ (IMF)ಗಳಿಂದಾಗಿ ದೇಶದ ಋಣಭಾರವು ಅಪಾರವಾಗಿ ಹೆಚ್ಚುತ್ತಿದೆ. 21ನೆಯ ಶತಮಾನದ ಹೊಸ್ತಿಲಲ್ಲಿ ಇರುವಾಗಲೇ ಭಾರತವು ಸಂದಿಗ್ಧ ಪರಿಸ್ಥಿತಿಯಲ್ಲಿರುವಂತೆ ತೋರುತ್ತದೆ.

ದಮನಗೊಂಡ ಎಸ್.ಸಿ.ಗಳು ಮತ್ತು ಎಸ್.ಟಿ.ಗಳ ಪ್ರಗತಿಯನ್ನು ಗಮನಿಸುವ ವಿಹಿತವಾದ ಕ್ರಮವಾಗಿ 1950ರ ವರ್ಷಗಳಲ್ಲಿ 'ರಕ್ಷಕ ತಾರತಮ್ಯ' (Protective discrimination) ನೀತಿಯು ಜಾರಿಗೆ ಬಂದಿತು. ಆದರೆ ಕಲ್ಪನಾ ಶಕ್ತಿಯಿಲ್ಲದ ಮುಖಂಡರಿಂದಾಗಿ ಅದು ಅತ್ಯಂತ ಜನಪರ ಕಾರ್ಯಕ್ರಮವಾಗಿ ಪರಿವರ್ತಿತವಾಗಿಬಿಟ್ಟಿತು. ತನ್ನ ಜನಕೋಟಿಯ ಕೆಲ ಭಾಗಗಳಿಗೆ ಮೀಸಲಾತಿ ನೀತಿಯನ್ನು ಅನ್ವಯಿಸುವ ಬೇರೆ

ಯಾವುದೇ ದೇಶದಲ್ಲೂ ಇಂತಹ ಕ್ರಮವನ್ನು ಯಾರೂ ಯೋಚಿಸಿರಲಿಲ್ಲ. ಇವು ಸಾಮಾಜಿಕ ಅಥವಾ ಒಂದು ಕಲ್ಯಾಣ ರಾಜ್ಯದಲ್ಲಿ ಅಳವಡಿಸಿಕೊಂಡ ಕಲ್ಯಾಣ ಕಾರ್ಯಕ್ರಮಗಳಾಗಿರಲಿಲ್ಲ. ಗ್ರೇಟ್ ಬ್ರಿಟನ್ನಿನಲ್ಲಿ ಜಾರಿಯಲ್ಲಿದ್ದ ರಾಷ್ಟ್ರೀಯ ಆರೋಗ್ಯ ಯೋಜನೆಯು (National Health scheme) ಖಂಡಿತವಾಗಿಯೂ ಜನಹಿತ ಕಾರ್ಯಕ್ರಮವಾಗಿರಲಿಲ್ಲ. ಅದೇ ರೀತಿಯದು ಅಮೇರಿಕಾದ ರೆಡ್ ಇಂಡಿಯನ್ ಕಮ್ಯೂನಿಟಿ. ಕೆಲವು ಬಗೆಯ ನೆರವಿಗೆ ಅರ್ಹವಾಗಿದ್ದ ವರ್ಗ ಅದು. ಆದ್ದರಿಂದ ಆಗಾಗ ದುರುಪಯೋಗಗಳು ನಡೆದಿದ್ದರೂ ಮೀಸಲಾತಿ ಸೌಲಭ್ಯವನ್ನು ಜನಪ್ರಿಯ ಕಾರ್ಯಕ್ರಮ ಎಂದು ಭಾವಿಸಲು ಬರುವುದಿಲ್ಲ. ಆದರೆ ಭಾರತದಲ್ಲಿ ಆಗುತ್ತಿರುವುದೇ ಬೇರೆ. ಇಲ್ಲಿ ಒಂದೇ ಸಮನೆ ಜಾತಿಗಳನ್ನು ಬುಡಕಟ್ಟು ವರ್ಗಗಳನ್ನು ಎಸ್‌ಸಿ ಮತ್ತು ಎಸ್‌ಟಿ ವರ್ಗಗಳಿಗೆ ಸೇರಿಸಲಾಗುತ್ತಿದೆ; ಜಾತಿಗಳ ಸಾಲುಸಾಲನ್ನೇ ಬಿ.ಸಿ, ಓ.ಬಿ.ಸಿ ಮತ್ತು ಎಸ್.ಇ.ಬಿ.ಸಿ ವರ್ಗಗಳಿಗೆ ಸೇರಿಸಿ ಮೀಸಲಾತಿ ಪ್ರಯೋಜನಗಳು ಅವರಿಗೆ ದಕ್ಕುವಂತೆ ಮಾಡಲಾಗುತ್ತಿದೆ.

ಈ ಎಲ್ಲಾ ಸಂದರ್ಭಗಳಲ್ಲೂ ಉಪಯೋಗವಾಗುತ್ತಿದ್ದ ಅಳತೆಗೋಲು ಮುಖ್ಯವಾಗಿ ಜಾತಿ. ಇತರ ಕೆಲವು ಸಂದರ್ಭಗಳಲ್ಲಿ ವರಮಾನವನ್ನು ಹೆಚ್ಚಿನ ಅಂಶವನ್ನಾಗಿ ತೆಗೆದುಕೊಳ್ಳಲಾಗುತ್ತಿದೆ. ಪಿ. ರಾಧಾಕೃಷ್ಣನ್ ಬರೆದ "ಮಂಡಲ್ ಆಯೋಗದ ವರದಿ : ಒಂದು ಸಮಾಜ ಶಾಸ್ತ್ರೀಯ ವಿವೇಚನೆ" (Mandal Commission Report : A Sociological critique)* ಎಂಬ ಪ್ರಬಂಧವು ಕಾರ್ಯವಿಧಾನದಿಂದಲೇ ಮೊದಲುಗೊಂಡು ಅದರಲ್ಲಿ ಅಂತರ್ಗತವಾಗಿದ್ದ ದೋಷಗಳನ್ನು ತೋರಿಸಿಕೊಟ್ಟಿದೆ. ನಾಲ್ಕು ಹಿಂದುಳಿದ ವರ್ಗಗಳ ಆಯೋಗಗಳು ಕರ್ನಾಟಕದಲ್ಲಿ ಈ ಸಮಸ್ಯೆಯನ್ನು ಪರ್ಯಾಯಗೊಳಿಸಿ ಧೂಳು ಮತ್ತು ಕಾವು ಎಬ್ಬಿಸಿದುವೇ ಹೊರತು ಪರಿಹಾರವನ್ನೇನೂ ಒದಗಿಸಲಿಲ್ಲ. ಡಾ. ನಾಗನಗೌಡ ನೇತೃತ್ವದ 1950ರ ಸಮಿತಿಯು ಮುಂಬಯಿ ಕರ್ನಾಟಕ ಪ್ರದೇಶವನ್ನು ಹೊರತುಪಡಿಸಿತು, ಹಾಗೆಯೇ ಲಿಂಗಾಯತರನ್ನು ಬಿ.ಸಿ.ಗಳೆಂದು ಪರಿಗಣಿಸದೆ ಹೋದುದರಿಂದ ಕಟುವಾದ ಪ್ರತಿಭಟನೆಯನ್ನು ಎದುರಿಸಬೇಕಾಯಿತು. ದಿವಂಗತ ಮುಖ್ಯಮಂತ್ರಿ ಡಿ. ದೇವರಾಜ ಅರಸು ಅವರ ಕಾಲದ 1970ರ ಹಾವನೂರು ಆಯೋಗವು ಕೂಡ ಕೆಲವು ಲಿಂಗಾಯತ ಉಪ ಜಾತಿಗಳನ್ನು, ದಕ್ಷಿಣ ಕನ್ನಡದ ಬಂಟರನ್ನೂ, ಎಂದಿನಂತೆ ಬ್ರಾಹ್ಮಣರನ್ನು ಹೊರತುಪಡಿಸಿತು. ಹಾಗಾಗಿ ಚಳುವಳಿಗಳು ನಡೆದುವು. ಅಖಿಲ ಭಾರತ ವೀರಶೈವ ಮಹಾಸಭಾ, ಚಳುವಳಿಯ ನಾಯಕತ್ವ ವಹಿಸಿತು. ಆಮೇಲೆ 1980ರ ವೆಂಕಟಸ್ವಾಮಿ ಆಯೋಗದ ವರದಿಯು ಕೆಲವು ಒಕ್ಕಲಿಗ ಉಪಜಾತಿಗಳನ್ನು ಕೈಬಿಟ್ಟಿತು. ಇದರಿಂದಾಗಿ ಒಕ್ಕಲಿಗರಿಂದ ಉಗ್ರವಾದ ಪ್ರತಿಭಟನೆ ಕಾಣಿಸಿಕೊಂಡುದರಿಂದ ವರದಿಯನ್ನು ಸುಮ್ಮನೆ ಕಟ್ಟಿ ಇಡಲಾಯಿತು. ಆಮೇಲೆ ಬಂದಿತು ಜಸ್ಟಿಸ್ ಚಿನ್ನಪ್ಪರೆಡ್ಡಿ ಆಯೋಗದ ವರದಿ. ಅದರ ಶಿಫಾರಸುಗಳು ಏನೇ ಇರಲಿ ಅವನ್ನು ಶಾಸನ ಸಭೆಯಲ್ಲಿ ಚರ್ಚಿಸಲಿಲ್ಲ. ಪ್ರಕಟಿಸಲೂ ಇಲ್ಲ, ಅದನ್ನು ಶೀತಾಗಾರದಲ್ಲಿಡಲಾಗಿದೆ. ಅದರಲ್ಲಿ ಸ್ವಲ್ಪವೂ ಕುದಿತ

ಉಳಿದಿಲ್ಲ. ಹೆಚ್ಚಿನ ಸವಲತ್ತುಗಳನ್ನು ಪಡೆಯುವ ಸಲುವಾಗಿ ಹಿಂದುಳಿದ ಬಿ.ಸಿ.ಗಳನ್ನು ಗುರುತಿಸುವ ಕೆಲಸವನ್ನು ಕರ್ನಾಟಕವು ಸ್ವಲ್ಪಸ್ವಲ್ಪವಾಗಿ ವಿಕಾಸಗೊಳಿಸಿಕೊಂಡು ಬಂದಿದೆ. ಅದರ ಶಿಖರ ಪ್ರಾಯವಾಗಿ ಮಂಡಲೀಕರಣವನ್ನು ಜೋಡಿಸಿದೆ ಹಾಗೂ ಈಗ ಒಟ್ಟು ಮೀಸಲಾತಿಯು ಎಸ್.ಸಿ., ಎಸ್.ಟಿ., ಸ್ವಲ್ಪ ಸಮಯ ಬಿ.ಸಿ. ಎಲ್ಲ ಸೇರಿ ಸುಮಾರು 62% ಅಥವಾ ಸ್ವಲ್ಪ ಹೆಚ್ಚು ಆಗುತ್ತದೆ. ವೃತ್ತಿ ಶಿಕ್ಷಣದಲ್ಲೋ ಸರಕಾರಿ ಉದ್ಯೋಗದಲ್ಲೋ ಅವಕಾಶ ತಪ್ಪಿಹೋದ ಅಭ್ಯರ್ಥಿಗಳು ಆಗಾಗ ವರಿಷ್ಠ ನ್ಯಾಯಾಲಯದ (ಸುಪ್ರೀಂಕೋರ್ಟ್) ತೀರ್ಪನ್ನು ಎತ್ತಿ ತೋರಿಸುವುದುಂಟು.

ಪ್ರಶ್ನೆಯನ್ನು ಈ ವೇಗದಲ್ಲಿ ಎಂದೆಂದಿಗೂ ಪರಿಹರಿಸಲು ಸಾಧ್ಯವಿಲ್ಲ ಮತ್ತು ಅವಕಾಶಗಳನ್ನು ಕಳೆದುಕೊಳ್ಳುವ ಜನರಲ್ಲಿ ಕಹಿ ವಾತಾವರಣವನ್ನು ಸೃಷ್ಟಿಸುವುದರಲ್ಲಿ ಅದು ಯಶಸ್ವಿಯಾಗಿದೆ. ನೆರೆಯ ತಮಿಳುನಾಡಿನಲ್ಲಿ ಪರಿಸ್ಥಿತಿ ಇನ್ನು ಕೆಟ್ಟದಾಗಿದೆ. 20ನೆಯ ಶತಮಾನದ ತಿರುವಿನಲ್ಲಿ ಬ್ರಾಹ್ಮಣ - ವಿರೋಧಿ ಚಳುವಳಿ ನಡೆದಾಗ ಹಿಂದುಳಿದ ಜಾತಿಗಳು ತುಂಬಾ ಪ್ರಯೋಜನ ಪಡೆದ ವರ್ಗವಾದರು, ಕೊನೆಯ ಪಕ್ಷ 7-8 ದಶಕಗಳಿಂದ ಈ ಪರಿಸ್ಥಿತಿ ವರ್ತಿಸುತ್ತಿದ್ದರೂ ಪರಿಣಾಮಗಳು ಮಾತ್ರ ಸೊನ್ನೆಯಾಗಿವೆ. ಏಕೆಂದರೆ ಬ್ರಾಹ್ಮಣೇತರರು ಪ್ರಧಾನವಾಗಿರುವ ಅಲ್ಲಿನ ಸರಕಾರವೇ, ಅಪೆಕ್ಸ್ ನ್ಯಾಯಾಲಯವು ಹಾಕಿದ 50% ಮಿತಿಗೆ ಬದಲಾಗಿ 67% ಮೀಸಲಾತಿಬೇಕೆಂದು ಹಂಬಲಿಸುತ್ತಿದೆ.

ಈ ರೀತಿಯಲ್ಲಿ ಮೀಸಲಾತಿಯನ್ನು ಸ್ಫುಟವಾಗಿ ಹೇಳುತ್ತಿರುವವರೆಗೆ ಅದು ದೇಶದಲ್ಲಿ ಒಂದು ದೊಡ್ಡ ವಿಭಜಕ ಶಕ್ತಿಯಲ್ಲದೆ ಬೇರೇನೂ ಆಗಿರುವುದಿಲ್ಲ. ಜಾತಿಗಳು, ಉಪ-ಜಾತಿಗಳು, ಉಪ-ಉಪ- ಜಾತಿಗಳ ಇಡೀ ಶ್ರೇಣಿಯು ತಾವು ಹಿಂದುಳಿದವರೆಂಬ ಪಟ್ಟಿಕೆ ಹಾಕಿಸಿಕೊಳ್ಳಲು ಒತ್ತಾಯ ಹೇರುತ್ತಿವೆ. ಮತ್ತೆ, ದೇಶದ ಬೇರೆ ಬೇರೆ ಭಾಗಗಳಲ್ಲಿ ಬೇರೆ ಬೇರೆ ಬಗೆಯಾದ ಬೇಡಿಕೆಗಳನ್ನು ಮುಂದಿಡಲಾಗುತ್ತಿದೆ. ಇವೆಲ್ಲವುಗಳಿಗೂ ಸ್ಪಂದಿಸುತ್ತಾ ಹೋದರೆ ಅದು ಸರ್ವ ಸಂಕಷ್ಟಗಳ ಪೆಟ್ಟಿಗೆಯ ಮುಚ್ಚಳ ತೆರೆದಂತಾದೀತು. ಅವು ಸಾಮರಸ್ಯದತ್ತ ನಡೆಸದೆ, ಜನರನ್ನು ನಿಜವಾದ ಹಾಗೂ ಕಾಲ್ಪನಿಕವಾದ ಅಗತ್ಯಗಳ ಆಧಾರದಿಂದ ಒಡೆದು ವಿಭಾಗಿಸುವ ವಿಧ್ವಂಸಕ ಪಾತ್ರವನ್ನು ನಿರ್ವಹಿಸುತ್ತವೆ. ನಾಲ್ಕು ದಶಕಗಳಿಗಿಂತಲೂ ಹೆಚ್ಚು ಕಾಲದಿಂದ ವರ್ತಿಸುತ್ತಿರುವ ಎಸ್‌ಸಿ/ಎಸ್‌ಟಿ ಮೀಸಲಾತಿಯು ನಿಧಾನಗೊಂಡಿದೆ. ಏಕೆಂದರೆ, ಇತರ ಜನರ ಸಮಸ್ಯೆಗಳೂ ಹಾದು ಹೋಗುತ್ತಿವೆ. ಪರಿಶಿಷ್ಟಕ್ಕೆ ಹೆಚ್ಚು ಹೆಚ್ಚು ಸಂಖ್ಯೆಯ ಪಂಗಡಗಳನ್ನು ಸೇರಿಸುವಷ್ಟರಿಂದ ಸರಕಾರಗಳು ತೃಪ್ತವಾಗುತ್ತಿವೆ.

ಸಾಕಷ್ಟು ಮುಂದುವರಿದಿರುವ ಕುಟುಂಬಗಳನ್ನು ವ್ಯಕ್ತಿಗಳನ್ನು ಪರಿಶಿಷ್ಟರಿಂದ ತೆಗೆಯಲು ಒಂದು ದಾರಿ ಮಾಡಿಕೊಂಡ ಹೊರತು, ಈಗ ಕಾರ್ಯನಿರತವಾಗಿರುವ ರೀತಿಯಲ್ಲಿ ಮೀಸಲಾತಿ ವ್ಯವಸ್ಥೆಯು ತನ್ನೆಲ್ಲ ಕೆಡುಕುಗಳೊಂದಿಗೆ ಮುಂದುವರಿದೇ ಇರುತ್ತದೆ. ಸಾಕಷ್ಟು ಶ್ರೀಮಂತರಾಗಿರುವವರು ಈ ಯೋಜನೆಯನ್ನು ದುರುಪಯೋಗಪಡಿಸಿಕೊಳ್ಳುತ್ತಿರುವ ಧಾರ್ಷ್ಟ್ಯವು ನಿಜವಾಗಿಯೂ ಅಗತ್ಯವಿರುವವರಿಗೆ, ಅರ್ಹರಾಗಿರುವವರಿಗೆ, ಇಂಥದೊಂದು

ಯೋಜನೆ ಕಾರ್ಯನಿರತವಾಗಿದೆಯೆಂದು ತಿಳಿದುಕೊಂಡೂ ಇಲ್ಲದವರಿಗೆ ಆ ದಾರಿಯನ್ನು ಪರಿಣಾಮಕಾರಿಯಾಗಿ ಮುಚ್ಚುತ್ತಿದೆ. ಇದು ಒಂದು "ಪಿತೂರಿಯ ಅಪರಾಧ". ಎಲ್ಲಾ ಕ್ಷೇತ್ರಗಳಲ್ಲೂ ಜಾತಿಯನ್ನು ಬಲಪಡಿಸಲಾಗುತ್ತಿದೆ. ಇದು ವಾಸ್ತವವಾಗಿ ನಮ್ಮ ಸಂವಿಧಾನಕ್ಕೆ ಅಕ್ಷರಶಃ ಮತ್ತು ಭಾವತಃ ವಿರುದ್ಧವಾಗಿದೆ. ಇಂದು ಅಗತ್ಯವಾಗಿರುವುದು ಇದು: ಪರಿಶಿಷ್ಟಕ್ಕೆ ಸೇರಿಸುವ ಮತ್ತು ಪರಿಶಿಷ್ಟದಿಂದ ತೆಗೆಯುವ ಒಂದು ಹೊಸ ರೀತಿಯನ್ನು ಅನೇಕ ಇತರ ಅಂಶಗಳೊಂದಿಗೆ, ಕುಟುಂಬ ಮತ್ತು ವ್ಯಕ್ತಿಗತ ಆಧಾರದ ಮೇಲೆ ಅನ್ವಯಿಸಬೇಕು; ಇಡೀ ಜಾತಿ ಪಂಗಡಗಳಿಗೆ ಅನ್ವಯಿಸಬಾರದು. ಈ ಕಸರತ್ತಿನಲ್ಲಿ ತೊಡಗಲು ಅಗತ್ಯವಾದ ಆಧಾರ ವ್ಯವಸ್ಥೆ ನಮ್ಮ ಬಳಿ ಸಿದ್ಧವಾಗೇ ಇದೆ. ಬೇಕಾದರೆ ಅದನ್ನು ಇನ್ನಷ್ಟು ಬಲಪಡಿಸಿ ಕೊಳ್ಳಬಹುದು.

'ಸಂರಕ್ಷಕ ವಿವೇಚನಾ' ನೀತಿಯ ರಚನೆಯಲ್ಲಿ ಹಾಗೂ ಅದರ ಅನುಷ್ಠಾನದಲ್ಲಿ ಜಾತೀಯತೆ, ಮತೀಯತೆ ಮತ್ತು ಭ್ರಷ್ಟಾಚಾರಗಳ ಹೇರಳ ಸಮ್ಮಿಲನದಿಂದ ಅವು ನಮ್ಮ ಪರಂಪರೆಯ ಮೂಲಸತ್ವವನ್ನೇ, ಅಂಥದೊಂದು ನಮಗಿದ್ದರೆ - ತಿಂದು ಹಾಕುತ್ತಿವೆ. ಆಧ್ಯಾತ್ಮಿಕ ಪರಂಪರೆ ಎಂದು ನಾವು ಹೇಳಿಕೊಳ್ಳುವುದನ್ನು ಕುರಿತು ನಾವು ಹೆಮ್ಮೆ ಪಡುತ್ತಿರುವಾಗ, ದೇಶದಲ್ಲಿ ಆಗುತ್ತಿರುವುದು ತೀರಾ ವ್ಯತಿರಿಕ್ತವಾದ ಸಂಗತಿ. ಭಾರತೀಯರು ಪರಲೋಕದ ಕಡೆಗೆ ದೃಷ್ಟಿಯುಳ್ಳವರು. ನೈತಿಕವಾಗಿ ಋಜು ಮಾರ್ಗ ಹಿಡಿದವರು, ದೈವಭೀತರು ಎಂದು ಯಾರು ಯಾವ ಆಧಾರದಿಂದ ಹೇಳಬಹುದು? ನಾವು ಭೌತವಾದಿಗಳೆಂದು ವರ್ಣಿಸುವ ಪಾಶ್ಚಿಮಾತ್ಯರಿಗಿಂತ ಬಹಳ ಹೆಚ್ಚಾಗಿ ಭೌತವಾದಿಗಳಾಗಿರುವವರು ನಾವು. ಹಗರಣಗಳು, ವಿವಿಧ ವಂಚನೆಗಳು, ಸ್ವಜನ ಪಕ್ಷಪಾತ, ಬಡಜನರ ಶೋಷಣೆ ಇವೆಲ್ಲ ಅವ್ಯಾಹತವಾಗಿ ಮುಂದುವರಿದಿವೆ.

ಈ ಪರಿಸ್ಥಿತಿಗೆ ರಾಜಕಾರಣಿಗಳನ್ನು ಮಾತ್ರವೇ ನಿಂದಿಸುವುದು ನ್ಯಾಯವಲ್ಲ. ಅವರು ಪ್ರಧಾನ ಪಾತ್ರವನ್ನು ವಹಿಸಿದ್ದಾರೆ. ಹೆಚ್ಚಿನ ಪಾಲು ಅವರದೇ. ಆದರೆ ಭಾರತೀಯ ಬುದ್ಧಿಜೀವಿಗಳು ಕೂಡ ಇದಕ್ಕೆ ಜವಾಬ್ದಾರರು ಅವರಲ್ಲಿ ಬಹುಜನರು ಹಿಮ್ಮೇಳ ಹಿಡಿದು, ಅಧಿಕಾರದ ದಳ್ಳಾಳಿಗಳಾಗಿ ಕೆಲಸ ಮಾಡುತ್ತಿದ್ದಾರೆ. ನಮ್ಮ ಶಿಕ್ಷಣ ಸಂಸ್ಥೆಗಳಲ್ಲೂ ಶಿಕ್ಷಕ ಸಮುದಾಯದಲ್ಲೂ ಭ್ರಷ್ಟಾಚಾರ, ಸ್ವಜನ ಪಕ್ಷಪಾತ, ಜಾತೀಯತೆ, ಮತೀಯ ಪಕ್ಷಪಾತ ಮತ್ತಿತರ ಎಲ್ಲಾ ಪೀಡೆಗಳೂ ತಾಂಡವವಾಡುತ್ತಿವೆ. ಇಂದು ಶೈಕ್ಷಣಿಕ ವ್ಯವಸ್ಥೆಯನ್ನು ಕಾಡುತ್ತಿರುವ, ಕುಸಿದ ಮಟ್ಟವೇ ಮೊದಲಾದ ಕೆಡುಕುಗಳ ಹೊರೆಯನ್ನು ಶಿಕ್ಷಕ ವರ್ಗವೂ ಸಮಾನವಾಗಿಯೇ ಹಂಚಿಕೊಳ್ಳಬೇಕಾಗಿದೆ.

ದೃಢ ನಿರ್ಧಾರ ಮತ್ತು ಬಲವಾದ ರಾಜಕೀಯ ಸಂಕಲ್ಪವಿದ್ದರೆ ಪರಿಸ್ಥಿತಿಯನ್ನು ನೇರ್ಪುಗೊಳಿಸಬಹುದು. ಭಾರತ ಸ್ವಾತಂತ್ರ್ಯ ಹೋರಾಟವೇ ಅದಕ್ಕೆ ಜ್ವಲಂತ ನಿದರ್ಶನ. ಮನುಷ್ಯರು ಸ್ವಾರ್ಥಿಗಳಾಗಿರುವುದು ಮಾತ್ರವೇ ಅಲ್ಲ, ಅವರು ಉದಾರಿಗಳೂ ಆಗಬಹುದು. ಜಾತಿ ಆಧಾರದ ಮೇಲೆ ಮೀಸಲಾತಿಯನ್ನು ದುರುಪಯೋಗ ಪಡಿಸಿಕೊಂಡಿದ್ದರೆ, ಅದರ ಉದ್ದೇಶವು ನೆರವೇರದೆ ಹೋಗಿದ್ದರೆ, ಅದನ್ನು ಒಂದಿಲ್ಲೊಂದು ನೆಪದಲ್ಲಿ ಉಪಖಂಡದ

ಜನಸಂಖ್ಯೆಯ ಶೇ. 80%ರಷ್ಟನ್ನು ಒಳಗೊಳ್ಳುವಂತೆ ವಿಸ್ತರಿಸುವುದರಲ್ಲಿ ಏನರ್ಥವಿದೆ? ಇದು ವಿಚ್ಛಿದ್ರಕಾರಕ ಶಕ್ತಿಯಲ್ಲವೆ? ಬೇರೆ ಬೇರೆ ಜಾತಿಗಳು ಪರಸ್ಪರ ವೈರದಿಂದ ಮಸೆಯುತ್ತಿಲ್ಲವೆ? ಮೀಸಲಾತಿಬೇಕೆಂದು ಹೀಗೆ ಹಾತೊರೆಯುತ್ತಿರುವಾಗ, ಕಳೆದ 45 ವರ್ಷಗಳಷ್ಟು ಕಾಲದಿಂದ ಕಾರ್ಯ ನಿರತವಾಗಿರುವ ಈ ಯೋಜನೆಯ ಮೌಲ್ಯಮಾಪನ ಮಾಡುವ ಯಾವುದಾದರೂ ಪ್ರಯತ್ನ ನಡೆದಿದೆಯೆ? ರಾಜಕೀಯ ಮೀಸಲಾತಿಯಿಂದಾಗಿ, ಎಸ್‌ಸಿಗಳು ಮತ್ತು ಎಸ್‌ಟಿಗಳ ಸಮುದಾಯಗಳಿಂದ ನಾಯಕರು ಮೇಲೆ ಬರುವಂತಾಗಬೇಕೆಂಬ ಉದ್ದೇಶ ನೆರವೇರಿದೆಯೆ? ಈ ವರ್ಗಗಳಿಂದ ಬಂದ ಕೆಲವು ವ್ಯಕ್ತಿಗಳು ರಾಷ್ಟ್ರದ ರಾಜಕೀಯ ರಂಗದಲ್ಲಿ ಬಹುಕಾಲದಿಂದ ಪ್ರಧಾನವಾಗಿದ್ದುಕೊಂಡು, ರಾಜಕೀಯ ನಾಯಕತ್ವದ ಎರಡನೆಯ ಸಾಲು ಮೇಲೆ ಬರದ ಹಾಗೆ ಪರಿಣಾಮಕಾರಿಯಾಗಿ ತಡೆಯೊಡ್ಡಿವೆ.

ಪ್ರಸ್ತುತ ಇರುವ ಮೀಸಲು ವರ್ಗಗಳ ಪಂಕ್ತಿಗೆ ಇನ್ನೂ ಇನ್ನೂ ಸೇರ್ಪಡೆಯಾಗುತ್ತಾ, ಈ ಯೋಜನೆಯನ್ನೇ ನಿರುಪಯುಕ್ತವಾಗಿ ಮಾಡಿಬಿಟ್ಟಿವೆ. ಹೇಗೋ ದಾಟಿಕೊಂಡುಬಿಡುವ ಪ್ರವೃತ್ತಿಯನ್ನು ತಡೆಯಲು ಸಾಧ್ಯವಾಗಿಲ್ಲ. ಸರಕಾರಕ್ಕೆ ಮೋಸಮಾಡುತ್ತಿರುವ ಜನರು ಅಧಿಕಾರ ಸ್ಥಾನಕ್ಕೆ ಬಹಳ ನಿಕಟವಾಗಿದ್ದಾರೆ. ಈ ಯೋಜನೆಯಿಂದ ಸಾಕಷ್ಟು ಪ್ರಯೋಜನವನ್ನು ಪಡೆದು ಬೆಳವಣಿಗೆಯ ಒಂದು ಹಂತವನ್ನು ಮುಟ್ಟಿದವರಿಗೆ ಅನ್ವಯವಾಗುವಂತೆ ಪರಿಶಿಷ್ಟರಿಂದ ತೆಗೆಯುವ ಒಂದು ಮಾರ್ಗವನ್ನು ವಿಕಾಸಗೊಳಿಸಿಕೊಳ್ಳುವುದಕ್ಕೆ ಬದಲಾಗಿ, ಯೋಜನೆಯು ಎಂದೆಂದಿಗೂ ಬೆಳೆಯಬೇಕೆಂಬ ಅಪೇಕ್ಷೆಯೇ ಇಲ್ಲದ ಪರಾವಲಂಬಿಗಳ ಒಂದು ರಾಷ್ಟ್ರವನ್ನು ಸೃಷ್ಟಿಸಲು ಹೊರಟಿದೆ. ಈ ಪ್ರಕ್ರಿಯೆಯಲ್ಲಿ ನೈತಿಕತೆ, ಸಾಧನೆ ಮಾಡಬೇಕೆಂದು ಹೊರಟವರ, ಘನತೆ, ಆತ್ಮಗೌರವ ಇವು ಬಲಿಯಾಗಿವೆ.

ಪ್ರಸ್ತುತ ಅಧ್ಯಯನವು ಆಲೋಚನೆಗೆ ಒಂದಿಷ್ಟು ಸಾಮಗ್ರಿಯನ್ನು ಒದಗಿಸುತ್ತದೆ. ಜನತೆಯನ್ನು ನಿರ್ದೇಶಿಸಿರುವ ಕೆಲವು ಗುಣ ವಿಶೇಷಗಳ ಪ್ರಕಾರ ಏಳಿಗೆ ಹೊಂದಲು ಆದಿವಾಸಿಗಳಿಗೆ ಅವಕಾಶ ಕೊಡಬೇಕು. ಅದರ ಜೊತೆಯ ಎಲ್ಲಾ ಸಮಸ್ಯೆಗಳೊಂದಿಗೆ ಜಾತಿ ಸ್ತರೀಕರಣದ ಆಧಾರದ ಮೇಲೆ ಬಲಾತ್ಕಾರವಾಗಿ ಅವರನ್ನು ಮುಖ್ಯವಾಹಿನಿಗೆ ಎಳೆದು ತರಬಾರದು. ಹಾಗೆಯೇ ಬೇರೆ ಬೇರೆ ಜಾತಿಗಳನ್ನು ಬುಡಕಟ್ಟುಗಳೆಂದು ಹೇಳಿಕೊಂಡು ನಿಭಾಯಿಸಿಕೊಳ್ಳಲು ಅವಕಾಶ ಕೊಡಬಾರದು. ಅದು ಆದಿವಾಸಿಗಳನ್ನು ದರೋಡೆ ಮಾಡಿದಂತಾಗುತ್ತದೆ. ಇಡೀ ಮೀಸಲಾತಿ ನೀತಿಯನ್ನು ಮತ್ತೆ ರೂಪಿಸಿ, ಜನಪ್ರಿಯ ಕಾರ್ಯಕ್ರಮಗಳೆಲ್ಲವನ್ನು ರದ್ದುಪಡಿಸಿ ದೇಶವನ್ನು ಕಾಪಾಡಬೇಕು.

## ಭಾಗ : ೨

# ಅಧ್ಯಯನ ವಿಧಾನ

ಈ ಅಧ್ಯಯನದಲ್ಲಿ ಸರಳ ಯಾದೃಚ್ಛಿಕ ಮಾದರಿ ಹಾಗೂ ಸಂದರ್ಶನ ವಿಧಾನಗಳನ್ನು ಅನುಸರಿಸಲಾಗಿದೆ. ಮಾಹಿತಿಗಳನ್ನು ಸಂಗ್ರಹಿಸಲು ಪರಿಶಿಷ್ಟಗಳನ್ನು ಉಪಯೋಗಿಸಿದೆ. ಮಾಹಿತಿದಾರರೊಂದಿಗೆ ಔಪಚಾರಿಕ ಹಾಗೂ ಅನೌಪಚಾರಿಕ ಚರ್ಚೆಗಳನ್ನು ನಡೆಸಲಾಗಿದೆ. ಅಧ್ಯಯನಕ್ಕೆ ಅಗತ್ಯವಾದ ಮಾಹಿತಿಯನ್ನು ಪೂರೈಸಿಕೊಳ್ಳಲು ದ್ವಿತೀಯ ಮೂಲಗಳ ಪ್ರಯೋಜನವನ್ನು ಪಡೆಯಲಾಗಿದೆ. ಇದು ಕರ್ನಾಟಕದ ಕುರುಬ ಜಾತಿ ಹಾಗೂ ಕಾಡು ಕುರುಬ ಬುಡಕಟ್ಟು ಪಂಗಡಗಳ ಒಂದು ತೌಲನಿಕ ಅಧ್ಯಯನವಾಗಿದೆ. ಕುರುಬ ಜಾತಿಯು ರಾಜ್ಯದಾದ್ಯಂತ ಕಂಡು ಬಂದರೂ, ಕೆಲವು ಜಿಲ್ಲೆಗಳಲ್ಲಿ ಹೆಚ್ಚು ಸಾಂದ್ರವಾಗಿದೆ. ಎಸ್.ಟಿ. ವರ್ಗಕ್ಕೆ ಸೇರುವ ಕಾಡು ಕುರುಬರು ಈಚಿನವರೆಗೂ ಒಂದು ಅರಣ್ಯ ಆದಿವಾಸಿ ಪಂಗಡವಾಗಿದ್ದರು, ಬಹುವಾಗಿ ಇವರು ಮೈಸೂರು ಮತ್ತು ಕೊಡಗು ಜಿಲ್ಲೆಗಳಲ್ಲಿ ವಾಸವಾಗಿರುವುದು ಕಂಡು ಬಂದಿದೆ.

ಈಚಿನ ಜನಗಣತಿಯ ವರದಿಗಳಲ್ಲಿ ಕುರುಬರ ಜನಸಂಖ್ಯೆ ದೊರಕುವುದಿಲ್ಲ; ಆದರೆ ಎಸ್.ಟಿ. ಕಾಡು ಕುರುಬರ ಸಂಖ್ಯೆ ದೊರಕುತ್ತದೆ. ಹಿಂದುಳಿದ ವರ್ಗಗಳನ್ನು ಕುರಿತಾದ ಎರಡು ಆಯೋಗಗಳಲ್ಲಿ ಮೊದಲನೆಯದಾದ ಎಲ್.ಜಿ. ಹಾವನೂರು ಅವರ ನೇತೃತ್ವದ ಆಯೋಗವು 1970ರಲ್ಲಿ, ಬೇರೆ ಬೇರೆ ಆಧಾರ ವರ್ಷಗಳಿಗೆ ಸಂಬಂಧಿಸಿದಂತೆ ಕುರುಬ ಜನಸಂಖ್ಯೆಯನ್ನು ಕೊಟ್ಟಿದೆ (ಪು. 49 ನೋಡಿ), 1972ಕ್ಕೆ ಅಡಕಗೊಳಿಸಿದೆ. 1980ರಲ್ಲಿ ಎರಡನೆಯ ಆಯೋಗವು ಟಿ. ವೆಂಕಟಸ್ವಾಮಿಯವರ ನೇತೃತ್ವದ ಆಯೋಗವು ರಾಜ್ಯದ ಕುರುಬರ ಜನಸಂಖ್ಯೆಯನ್ನು ಕೊಟ್ಟಿದೆ. ಇವುಗಳ ಪ್ರಕಾರ, ಕುರುಬರು 20,32,032 ಇದ್ದು 1972ರಲ್ಲಿ ರಾಜ್ಯದ ಜನಸಂಖ್ಯೆಯ 6.77% ಆಗಿದ್ದರು; 1980ರಲ್ಲಿ 25,01,465 ಜನಸಂಖ್ಯೆಯಿಂದ 6.92% ಇದ್ದರು. ಪ್ರಸ್ತುತ ಅಧ್ಯಯನವು ರಾಜ್ಯದ ನಾಲ್ಕು ಜಿಲ್ಲೆಗಳಲ್ಲಿ ಹರಡಿದ 601 ಕುರುಬ ಕುಟುಂಬಗಳ ಮಾದರಿಯನ್ನು ಸಂಗ್ರಹಿಸಿದೆ. ಅದಕ್ಕೆ ಸಂವಾದಿಯಾಗಿ ಕಾಡು ಕುರುಬರ 601 ಕುಟುಂಬಗಳ ಮಾದರಿಯನ್ನು ತೆರೆದುಕೊಳ್ಳಲಾಗಿದೆ. ಜೇನು ಕುರುಬರ ಜನಸಂಖ್ಯೆಯು 1972ರಲ್ಲಿ 4670 ಇದ್ದು ರಾಜ್ಯದ ಒಟ್ಟು ಜನಸಂಖ್ಯೆಯ 0.01% ಆಗಿದ್ದಿತು; ಕಾಡುಕುರುಬರ ಜನಸಂಖ್ಯೆ ಅದೇ 1972ರಲ್ಲಿ 5135 ಆಗಿದ್ದು ರಾಜ್ಯದ ಒಟ್ಟು ಜನಸಂಖ್ಯೆಯ 0.02% ಆಗಿತ್ತು. ಕೊಡಗು ಜಿಲ್ಲೆಗೆ ಸಂಬಂಧಿಸಿದಂತೆ ಆಧಾರ ವರ್ಷ 1961ರಲ್ಲಿ ಕುರುಬ ಎಸ್.ಟಿ. ಜನಸಂಖ್ಯೆ 9246, 1972ನೆಯ ವರ್ಷಕ್ಕೆ ಪ್ರಕ್ಷೇಪಿತವಾದ ಸಂಖ್ಯೆ 11,020.

ಕೆ.ಎಸ್. ಸಿಂಗ್ ಅವರ ಪ್ರಕಾರ (The People of India) ಪರಿಶಿಷ್ಟ ವರ್ಗವಾದ ಜೇನು ಕುರುಬರ ಜನಸಂಖ್ಯೆ 1971ರಲ್ಲಿ 6,656 ಇದ್ದುದು 1981 ವೇಳೆಗೆ 34,747ಕ್ಕೆ

ಹಾರಿತ್ತು. ಹಾಗೆಯೇ ಕಾಡು ಕುರುಬ, ಬೆಟ್ಟ ಕುರುಬ ಜನಸಂಖ್ಯೆಯೂ 1971ರಲ್ಲಿ 8192 ಇದ್ದುದು 1981 ವೇಳೆಗೆ 2,09,677 ಆಗಿ ಏರಿತು. ದಿಢೀರನೆ ಉಂಟಾದ ಈ ಹೆಚ್ಚಳಕ್ಕೆ ಕಾರಣ, ಕರ್ನಾಟಕದಲ್ಲಿ ಪರಿಶಿಷ್ಟ ಬುಡಕಟ್ಟಲ್ಲದ ಕುರುಬ ಜನಾಂಗವನ್ನು ಸೇರಿಸಿದುದು ಎಂದು ಹೇಳಬಹುದು.

1988ರಲ್ಲಿ ನಂಜುಂಡರಾವ್ ಹೆಗ್ಗಡದೇವನ ಕೋಟೆ (ಎಚ್.ಡಿ. ಕೋಟೆ)ಯ ಬುಡಕಟ್ಟು ಜನರನ್ನು ಕುರಿತು ಇನ್ನೊಂದು ಅಧ್ಯಯನವನ್ನು ನಡೆಸಿದರು. ಅದು ಹೇಳುವಂತೆ 1971ರ ಜನಗಣತಿಯಲ್ಲಿ ತಾಲ್ಲೂಕಿನಲ್ಲಿದ್ದ ಬುಡಕಟ್ಟು ಜನರ ಸಂಖ್ಯೆ 6,686. ಆದರೆ 1981 ವೇಳೆಗೆ ಅದು 20,332ಕ್ಕೆ ಏರಿತು. ಅಪೂರ್ವವಾದ ವಾರ್ಷಿಕ 30.4% ಏರಿಕೆ ಕಂಡು ಬಂದಿತು. 1981 ವೇಳೆಗೆ ಎಸ್.ಟಿ. ಪಟ್ಟಿಗೆ "ನಾಯಕ", "ಪರಿವಾರ" ಮೊದಲಾದ ಇತರ ಹಲವು ಪಂಗಡಗಳನ್ನು ಸೇರಿಸಲಾಯಿತೆಂದು ಹೇಳಲಾಗಿದೆ.

ಮೇಲೆ ಹೇಳಿದ ಎಲ್ಲಾ ಮೂಲಗಳೂ ಬೇರೆ ಬೇರೆ ಅಂಕಿಗಳನ್ನು ಕೊಟ್ಟಿದ್ದರೆ, ಕೆ.ಎಸ್. ಸಿಂಗ್ ಮತ್ತು ನಂಜುಂಡರಾವ್ 1981ರಲ್ಲಿ ಆದ ಹೆಚ್ಚಳಕ್ಕೆ ಕಾರಣಗಳನ್ನು ಕೊಟ್ಟಿದ್ದಾರೆ. ನಮ್ಮ ಅಧ್ಯಯನದಲ್ಲಿ ಕಾಡು ಕುರುಬರು ಹಾಗೂ ಕುರುಬರ ಸಮಾನ ಸಂಖ್ಯೆಯ ಕುಟುಂಬಗಳ ಮಾದರಿಯನ್ನು ಇಟ್ಟುಕೊಳ್ಳಬೇಕೆಂದು ನಿರ್ಧರಿಸಿದೆವು.

ಕುರುಬರಿಗಾಗಿ ಮೈಸೂರು, ಧಾರವಾಡ, ಬಳ್ಳಾರಿ ಮತ್ತು ಚಿತ್ರದುರ್ಗ ಈ ನಾಲ್ಕು ಜಿಲ್ಲೆಗಳಿಂದ ಮಾದರಿಗಳನ್ನು ಸಂಗ್ರಹಿಸಲಾಯಿತು. ಮೈಸೂರು - ಚಿತ್ರದುರ್ಗಗಳು ಹಿಂದಿನ ಮೈಸೂರು ಸಂಸ್ಥಾನದ ಭಾಗವಾಗಿದ್ದರೆ, ಮುಂಬಯಿ ಅಧಿಪತ್ಯದಲ್ಲಿದ್ದ ಧಾರವಾಡವನ್ನೂ ಮದರಾಸು ಅಧಿಪತ್ಯದಲ್ಲಿದ್ದ ಬಳ್ಳಾರಿಯನ್ನು 1950ರಲ್ಲಿ, ಭಾಷಾವಾರು ರಾಜ್ಯ ಪುನರ್ವಿಂಗಡಣೆಯ ಸಮಯದಲ್ಲಿ ಮೈಸೂರು ರಾಜ್ಯಕ್ಕೆ ಸೇರಿಸಲಾಯಿತು. ಹೀಗೆ ಅಧ್ಯಯನದಲ್ಲಿ ಭೌಗೋಳಿಕ, ಆಡಳಿತೀಯ ಮತ್ತು ಸಾಂಸ್ಕೃತಿಕ ವ್ಯತ್ಯಾಸಗಳನ್ನು ಗಣನೆಗೆ ತೆಗೆದುಕೊಳ್ಳಲಾಗಿದೆ. ಒಳಮೂಲೆಯ ಸ್ಥಳಗಳನ್ನು ಹೆದ್ದಾರಿಗಳಿಂದ ದೂರವಿರುವ ಸ್ಥಳಗಳನ್ನು ಸೇರಿಸಲಾಗಿದೆ. ಕುಟುಂಬಗಳು ಮತ್ತು ಮಾಹಿತಿದಾರರ ಉಪಲಬ್ಧತೆಗಳ ಆಧಾರದಿಂದ ಮಾದರಿಯ ಗಾತ್ರವನ್ನು ಹೊಂದಿಸಲಾಗಿದೆ. ಪ್ರತಿಜಿಲ್ಲೆಯಿಂದ ತೆಗೆದುಕೊಂಡ ಒಟ್ಟು ಮಾದರಿಗಳ ಪ್ರಮಾಣದಲ್ಲಿ ಹೆಚ್ಚು ವ್ಯತ್ಯಾಸವಾಗದಂತೆ ನೋಡಲಾಗಿದೆ. ಮೈಸೂರಿಗೆ 145 ಕುಟುಂಬಗಳ ಮಾದರಿ, ಧಾರವಾಡದಲ್ಲಿ 151, ಬಳ್ಳಾರಿಯಲ್ಲಿ 150 ಮತ್ತು ಚಿತ್ರದುರ್ಗ ಜಿಲ್ಲೆಯಲ್ಲಿ 155 - ಒಟ್ಟಿನ ಮೇಲೆ 601 ಕುಟುಂಬಗಳು ಒಟ್ಟು ಜನಸಂಖ್ಯೆ 4,102 ಕುರುಬರು ಇಲ್ಲಿ ಪರಿಗಣನೆಗೆ ಸೇರಿದ್ದಾರೆ. ಜಾತಿಯನ್ನು ಕುರಿತು ತಿಳಿದ ಮಾಹಿತಿಯು ಯಾವುದೂ ದೊರಕದುದರಿಂದ, ವಸ್ತುನಿಷ್ಠ ಅಂದಾಜು ಮಾಡಲು ಅನುವಾಗುವಂತೆ ಸಾಧ್ಯವಾದಷ್ಟೂ ಹೆಚ್ಚು ಸಂಖ್ಯೆಯ ಸ್ಥಳಗಳನ್ನೂ ಕುಟುಂಬಗಳನ್ನೂ ಒಳಗೊಳ್ಳುವಂತೆ ಮಾಡಲು ಪ್ರಯತ್ನಿಸಿದೆ (50-51ನೇ ಪುಟದ ಪಟ್ಟಿಕೆಯನ್ನು ಮತ್ತು ನಕ್ಷೆಗಳನ್ನೂ ನೋಡಿ)

ಕಾಡುಕುರುಬರು ಮೈಸೂರು ಮತ್ತು ಕೊಡಗು ಜಿಲ್ಲೆಗಳಲ್ಲಿ ಕೇಂದ್ರೀಕರಿಸಿದ್ದಾರೆ. ಪ್ರಸ್ತುತ ಅಧ್ಯಯನವು ಮೈಸೂರು ಜಿಲ್ಲೆಯ ಎರಡು ತಾಲ್ಲೂಕುಗಳಿಂದ ಮಾದರಿಯನ್ನು

ಪಡೆದುಕೊಂಡಿದೆ. ಹುಣಸೂರು ತಾಲ್ಲೂಕಿನಿಂದ 301 ಕುಟುಂಬಗಳನ್ನು ಅಧ್ಯಯನ ಮಾಡಲಾಗಿದೆ. ಎಚ್.ಡಿ. ಕೋಟೆ ತಾಲ್ಲೂಕಿನ ಅಂತರಸಂತೆ ಮತ್ತು ಎನ್. ಬೇಗೂರು ಪ್ರದೇಶಗಳಿಂದ ತಲಾ 150 ಕುಟುಂಬಗಳನ್ನು ಆರಿಸಿಕೊಳ್ಳಲಾಗಿದೆ. ಎರಡೂ ತಾಲ್ಲೂಕುಗಳಲ್ಲಿ ಆದಿವಾಸಿಗಳ ನಡುವೆ ಎನ್.ಜಿ.ಓ. ಗಳು ಕೆಲಸ ಮಾಡುತ್ತಿದ್ದಾರೆ. ಮಾದರಿಯು 2,891 ಜನರನ್ನು ಒಳಗೊಂಡಿದೆ. (50-51ನೇ ಪುಟದ ಪಟ್ಟಿಕೆಗಳನ್ನು, ನಕ್ಷೆಗಳನ್ನೂ ನೋಡಿ. ಮಾದರಿಯು ಸಾಕಷ್ಟು ಪ್ರಮಾಣದ್ದಾಗಿದ್ದು ಕೆಲವು ಮುಖ್ಯವಾದ ತೀರ್ಮಾನಗಳನ್ನು ಕೈಗೊಳ್ಳಲು ಸಹಾಯಕವಾಗಿದೆ.

ಮೊದಲಲ್ಲಿ ಮಾದರಿಯ ಗಾತ್ರವನ್ನು 400ಕ್ಕೆ ಮಿತಿಗೊಳಿಸಿಕೊಳ್ಳಬೇಕೆಂದು ಯೋಚಿಸಲಾಗಿತ್ತು, ಆದರೆ ಆಮೇಲೆ ಅದನ್ನು ಇನ್ನೂ ಹೆಚ್ಚು ಪ್ರಾತಿನಿಧಿಕವಾಗುವಂತೆ ಮಾಡುವ ಸಲುವಾಗಿ 600ಕ್ಕೆ ಏರಿಸಬೇಕೆಂದು ನಿರ್ಧರಿಸಲಾಯಿತು. ಕುರುಬ ರಾಜಕೀಯ ನಾಯಕರನ್ನೂ, ಕುರುಬ ಸಂಘದ ಪದಾಧಿಕಾರಿಗಳನ್ನೂ ಸಂದರ್ಶಿಸಲಿಲ್ಲ. ಏಕೆಂದರೆ ಬಹು ಸೂಕ್ಷ್ಮವಾದ ವಿಚಾರಗಳು ಇದರಲ್ಲಿ ಸೇರಿದ್ದುವು. ಹೊರಗಿನಿಂದ ಬರುವ ಒತ್ತಡವು ಅಧ್ಯಯನವನ್ನು ಕುಂಠಿತಗೊಳಿಸುವ ಸಾಧ್ಯತೆಯಿದ್ದಿತು. ಈಗ ರಾಜ್ಯಮಟ್ಟದ ಕಾಂಗ್ರೆಸ್ ಅಧ್ಯಕ್ಷರಾಗಿರುವ ಒಬ್ಬ ಸಂಸತ್ ಸದಸ್ಯರನ್ನು ಸಂದರ್ಶನ ಮಾಡಲು ಪ್ರಯತ್ನವನ್ನೇನೋ ಮಾಡಿದೆವು. ಧಾರವಾಡದಲ್ಲಿ ಅದು ನೆರವೇರಲಿಲ್ಲ. ಏಕೆಂದರೆ ಸದಾಕಾಲವೂ ಅವರ ಸುತ್ತ ಜನರು ಸುತ್ತಿಕೊಂಡಿರುತ್ತಿದ್ದರು. ನಮ್ಮ ಸಂಶೋಧನ ಸಿಬ್ಬಂದಿಯು ಸಂದರ್ಶನ ಮಾಡಲು ಅವಕಾಶ ಕೊಡಲಿಲ್ಲ. ಸಮಯಾಭಾವವಾಗಲಿ, ರಾಜಕೀಯ ಮುಖಂಡರನ್ನು ಭೇಟಿ ಮಾಡುವುದು ಅಥವಾ ಬಿಡುವುದಾಗಲಿ ಸಂಶೋಧನೆಯ ಫಲಿತವನ್ನೇನೂ ಬದಲಿಸುವಂತಿರಲಿಲ್ಲ. ಅಧ್ಯಯನದ ಧ್ಯೇಯೋದ್ದೇಶಗಳನ್ನು ಪ್ರವೇಶದಲ್ಲೂ ಸಮಾರೋಪದಲ್ಲೂ ಸೂಚಿಸಿದೆ. ಅಪೇಕ್ಷಿತ ಫಲಗಳು ದೊರಕಬೇಕಾದ ಪಕ್ಷದಲ್ಲಿ, 'ಮೀಸಲಾತಿ' ನೀತಿಯು ಕಾಲಬದ್ಧವಾಗಬೇಕು, ಹಾಗೂ ಪರಿಶಿಷ್ಟರಿಂದ ಕೈಬಿಡುವ ಅವಕಾಶವನ್ನು ಅದರ ರಚನೆಯಲ್ಲೇ ಅಂತರ್ಗತವಾಗುವಂತೆ ಮಾಡಬೇಕು.

*ಭಾಗ - ೨*

## ಅಧ್ಯಯನದ ವಿವರ

ಶೀರ್ಷಿಕೆಯಲ್ಲೇ ಸೂಚಿತವಾಗಿರುವಂತೆ ಪ್ರಸ್ತುತ ಅಧ್ಯಯನವು ಒಂದೇ ಹೆಸರಿರುವ ಜಾತಿ ಮತ್ತು ಬುಡಕಟ್ಟುಗಳ ನಡುವೆ ಒಂದು ತೌಲನಿಕ ಅಧ್ಯಯನವಾಗಿದೆ. ಕರ್ನಾಟಕದಲ್ಲಿ ಕುರುಬರು ಒಂದು ಜಾತಿ ಪಂಗಡವಾಗಿದ್ದಾರೆ, ಒಂದು ಬುಡಕಟ್ಟು ಸಮುದಾಯವೂ ಆಗಿದ್ದಾರೆ. ಇದನ್ನು ಪರಸ್ಪರ ವೈರುಧ್ಯದ ಅಧ್ಯಯನವೆಂದೂ ಹೇಳಬಹುದು. ಆದ್ದರಿಂದಲೇ, ಸಾಧ್ಯವಿರುವಲ್ಲೆಲ್ಲಾ ದತ್ತಾಂಶವು ಹೋಲಿಕೆಗಳಿಗಿಂತ ಮಿಗಿಲಾಗಿ ವ್ಯತ್ಯಾಸಗಳನ್ನೇ ಎತ್ತಿ ತೋರಿಸುತ್ತದೆ. ಈ ಚರ್ಚೆಗಳಿಗೆ ಹೊಂದಿಕೆಯಾಗುವಂತೆ, ಡಾ. ಅಂಬೇಡ್ಕರ್ ಅವರು ರೂಪಿಸಿ ಸಂವಿಧಾನದಲ್ಲಿ ಅಳವಡಿಸಿದ ಮೀಸಲಾತಿಗಳನ್ನು ಕುರಿತ ನೀತಿಯಿದೆ. ಕಾಡುಕುರುಬರು ಎಸ್.ಟಿ. ವರ್ಗಕ್ಕೆ ಬರುವುದರಿಂದ ಮೀಸಲಾತಿ ಪ್ರಯೋಜನಗಳನ್ನು ಪಡೆಯಲು ಅರ್ಹರಾಗಿದ್ದಾರೆ, ಆದರೆ ಕುರುಬ ಜಾತಿಯು, ಈಗಿರುವಂತೆ ಮೀಸಲಾತಿ ಸೌಲಭ್ಯಗಳನ್ನು ಪಡೆಯಲು ಅರ್ಹವಾಗುವುದಿಲ್ಲ. ಆದರೂ ಜಾತಿಪಂಗಡವಾಗಿ ಕುರುಬರು ತಮ್ಮನ್ನು ಬುಡಕಟ್ಟೆಂದು ವರ್ಗೀಕರಿಸಬೇಕೆಂದೂ ಊರು ಮತ್ತು ಕಾಡು ಕುರುಬರು ಒಂದೇ ಪಂಗಡವೆಂದೂ ಒತ್ತಾಯ ಮಾಡುತ್ತಿದ್ದಾರೆ. ಇದು ರಾಜಕೀಯವಾಗಿ ದನಿಯುಳ್ಳ ಮತ್ತು ಪ್ರಬಲರಾದ ಕುರುಬರು ಹೂಡಿರುವ ಹುನ್ನಾರು, ಸತ್ಯಸಂಗತಿಗಳಿಂದ ಕಾಡುಕುರುಬರಿಗೂ ಇವರಿಗೂ ಸಮಾನವಾದುದು ಹೆಚ್ಚೇನೂ ಇಲ್ಲ ಎಂಬುದು ವ್ಯಕ್ತವಾಗುತ್ತದೆ.

ಪೀಠಿಕಾ ಅಧ್ಯಾಯವು ಪ್ರಸ್ತುತ ಅಧ್ಯಯನವನ್ನು ಕೈಗೊಳ್ಳಲು ಪ್ರೇರಣೆ ನೀಡಿದ ಕೆಲವು ಸ್ಥೂಲವೂ ನಿರ್ದಿಷ್ಟವೂ ಆದ ಕಾರಣಗಳನ್ನು ಕೊಡುತ್ತದೆ. ಮಂಡಲ್ ಆಯೋಗದ ವರದಿ ಮತ್ತು ಅದರ ಜಾರಿಗೆ ಸಂಬಂಧಿಸಿದಂತೆ ವ್ಯಕ್ತವಾದ ಸಾಮಾಜಿಕ ಅಶಾಂತಿಯಿಂದಾಗಿ 'ಇತ್ಯಾತ್ಮಕ' ವಿವೇಚನೆಯೂ ಮತ್ತು ನೀತಿಯೂ ನೂತನವಾದೊಂದು ಆಯಾಮವನ್ನು ಪಡೆದುಕೊಳ್ಳುವಂತೆ ಮಾಡಿತು. ಏಕೆಂದರೆ ಇದುವರೆಗೂ, ಸಂವಿಧಾನದಲ್ಲಿ ನಿರೂಪಿಸಿರುವಂತೆ, ಮೀಸಲಾತಿ ಪ್ರಯೋಜನಗಳು ಎಸ್.ಸಿ.ಗಳು ಮತ್ತು ಎಸ್.ಟಿ.ಗಳಿಗೆ ಮಾತ್ರ ದೊರಕುತ್ತಿದ್ದುವು. ಇಲ್ಲಿಂದ ಮಂಡಲ್ ಆಯೋಗವು ತನ್ನ ರೆಕ್ಕೆಗಳನ್ನು ವಿಸ್ತಾರವಾಗಿ ಹರಡಿ ಶೂದ್ರವರ್ಣವನ್ನು ಒಳಗೊಂಡ ಭಾರತೀಯ ಜನಕೋಟಿಯ ಪ್ರಧಾನ ಭಾಗವನ್ನು ವ್ಯಾಪಿಸುವಂತೆ ಮಾಡಿತು. 1980ರಲ್ಲಿ ನಡೆದ ಚರ್ಚೆಗಳು, ವಾದ-ವಿವಾದಗಳು, ಕಾರ್ಯಾಗಾರಗಳು ಮತ್ತು ಸಮ್ಮೇಳನಗಳು ಮೇಲ್ಕಂಡ ವಸ್ತುವಿನ ಮೇಲೆ ತಮ್ಮ ಗಮನವನ್ನು ಕೇಂದ್ರೀಕರಿಸಿದರೂ ಒಂದು ವಿಹಿತವಾದ'ಪರಿಹಾರವನ್ನು ಕಂಡು ಹಿಡಿಯಲು ಸಾಧ್ಯವಾಗಲಿಲ್ಲ. ಕೇವಲ ಬೌದ್ಧಿಕವಾದ ಕಸರತ್ತಿಗಿಂತಲೂ ರಾಜಕೀಯ ಇಚ್ಛೆಯು ಸಾಂಪ್ರದಾಯಿಕವಾಗಿ ಹೆಚ್ಚು ತೂಕವಾಗಿದ್ದಿತು!

ಅಧ್ಯಯನ ಕ್ರಮವನ್ನು ಕುರಿತ ಟಿಪ್ಪಣಿಯು, ಅಧ್ಯಯನ ವಸ್ತುವಾದ ಎರಡೂ ಪಂಗಡಗಳ ಮಾದರಿಯನ್ನು ತೆಗೆದುಕೊಂಡಿರುವ ಕ್ರಮವನ್ನು ತಿಳಿಸುತ್ತದೆ. ಸರಳ ಯಾದೃಚ್ಛಿಕ

ಮಾದರಿಗೆ ಪೂರಕವಾಗುವಂತೆ ಸಂದರ್ಶನಗಳನ್ನೂ ಚರ್ಚೆಗಳನ್ನೂ ನಡೆಸಲಾಗಿದೆ, ದ್ವಿತೀಯ ಮೂಲಗಳಿಂದಲೂ ಮಾಹಿತಿ ಪಡೆಯಲಾಗಿದೆ. ಬುಡಕಟ್ಟು ಪಂಗಡವು ಮೈಸೂರು ಮತ್ತು ಕೊಡಗು ಜಿಲ್ಲೆಗಳಲ್ಲಿ ಸಾಂದ್ರೀಕೃತವಾಗಿದ್ದರೆ, ಕುರುಬ ಜಾತಿಯು ರಾಜ್ಯದಲ್ಲಿ ವ್ಯಾಪಕವಾಗಿ ಹರಡಿಕೊಂಡಿದೆ. ಆದ್ದರಿಂದ ಬುಡಕಟ್ಟಿಗೆ ಸಂಬಂಧಿಸಿದಂತೆ ಮಾದರಿಯನ್ನು ಮೈಸೂರು ಜಿಲ್ಲೆಯಿಂದ ಪಡೆದುಕೊಂಡಿದ್ದರೆ, ಜಾತಿಗೆ ಸೇರಿದುದನ್ನು ರಾಜ್ಯದ ನಾಲ್ಕು ಜಿಲ್ಲೆಗಳಿಂದ ಪಡೆಯಲಾಗಿದೆ.

ಎರಡನೆಯ ಅಧ್ಯಾಯ ಜಾತಿ-ಬುಡಕಟ್ಟು ಲಕ್ಷಣಗಳು ಹಾಗೂ ಭಾರತದ ಸಾಮಾಜಿಕ ರಚನೆಗಳನ್ನು ಕುರಿತದ್ದು. ಭಾರತೀಯ ಜಾತಿ ಸಮಾಜದ ವಿಕಾಸಕ್ಕೆ ಕಾರಣವಾದ ಐತಿಹಾಸಿಕ ಅಂಶಗಳ ಒಂದು ಸಂಕ್ಷಿಪ್ತ ಉಲ್ಲೇಖ ಸಮುಚಿತವಾಗಿ ಸೇರಿದೆ. ಇದಕ್ಕೆದುರಾಗಿ, ಅರಣ್ಯದಲ್ಲೂ ಬೆಟ್ಟಪ್ರದೇಶಗಳಲ್ಲೂ ಇದ್ದು ವಿವಿಧ ಆಳರಸರ ಹಿಡಿತಕ್ಕೆ ಸಿಕ್ಕದೆ ಪ್ರತ್ಯೇಕವಾಗಿ ಉಳಿದುಕೊಂಡಿದ್ದ ಬುಡಕಟ್ಟು ಪಂಗಡಗಳನ್ನು ಬ್ರಿಟಿಷರು ಕಾಲಕ್ರಮದಲ್ಲಿ ಸೋಲಿಸಿ, ತಮ್ಮ ಅಧೀನಕ್ಕೆ ತಂದುಕೊಂಡರು. ದೇಶಕ್ಕೆ ಸ್ವಾತಂತ್ರ್ಯ ಬಂದಾಗಿನಿಂದ, ಅನೇಕ ಬುಡಕಟ್ಟು ಪಂಗಡಗಳನ್ನು ಮೀಸಲಾತಿಯ ಕೊಡೆಯಡಿಗೆ ತಂದು ರಕ್ಷಿಸುವ, ಸುಧಾರಿಸುವ ಪ್ರಯತ್ನ ಮಾಡಲಾಗುತ್ತಿದೆ. ಅದರ ಪ್ರಕಾರ ಇಂದು ಕಾಡು ಕುರುಬರು ಕೊನೆಯಪಕ್ಷ ಮೂರು ಉಪ-ಪಂಗಡಗಳೊಂದಿಗೆ ಪರಿಶಿಷ್ಟವರ್ಗಕ್ಕೆ ಸೇರಿದ್ದಾರೆ. ಕುರುಬ ಜಾತಿಯನ್ನು ಪರಿಶಿಷ್ಟವರ್ಗಕ್ಕೆ ಸೇರಿಸಿಲ್ಲ, ಎಂದೇ, ಮುಖಂಡರು ಮತ್ತು ಪಟ್ಟಭದ್ರ ಹಿತಾಸಕ್ತಿಗಳು ಜಾತಿ ಪಂಗಡಕ್ಕೆ ಬುಡಕಟ್ಟಿನ ಹಣೆಪಟ್ಟಿ ಹಾಕಿಸಿಕೊಳ್ಳಲು ಅವಿರತ ಪ್ರಯತ್ನ ನಡೆಸಿವೆ.

ಬುಡಕಟ್ಟು ಮತ್ತು ಜಾತಿಗಳನ್ನು ಕುರಿತ ಮೂರನೆಯ ಅಧ್ಯಾಯವು ಎರಡನ್ನೂ ಪ್ರತ್ಯೇಕವಾಗಿ ಗುರುತಿಸುವ ಹಾಗೂ ವ್ಯತ್ಯಾಸಗಳನ್ನು ಮನಗಾಣುವ ಒಂದು ಪ್ರಯತ್ನವಾಗಿದೆ. ಎಫ್.ಜಿ. ಬೇಲಿ ಅವರು ಮತ್ತು ಕೊಂಡ ಬುಡಕಟ್ಟು ಮತ್ತು ಒರಿಯಾ ಜನ ಇವರ ಮೇಲೆ ಕೇಂದ್ರೀಕರಿಸಿ ನಡೆಸಿರುವ ಅಧ್ಯಯನವೂ, ಅದರಲ್ಲಿ ಎತ್ತಿರುವ ಕೆಲವು ಸೂಕ್ಷ್ಮವಾದ ತಾತ್ವಿಕ ಅಂಶಗಳೂ ನಮ್ಮ ಆಲೋಚನೆಗೆ ಗ್ರಾಸವನ್ನು ಒದಗಿಸಿವೆ. ಹಾಗೆಯೇ ಇತರ ಕೆಲವರು ಜಾತಿಯನ್ನೂ ಬುಡಕಟ್ಟು ಸಮುದಾಯವನ್ನೂ ಪ್ರತ್ಯೇಕಗೊಳಿಸಿ ನೋಡುವಾಗ ಅನೇಕ ಸಾಮಾನ್ಯ ಅಂಶಗಳನ್ನು ಎತ್ತಿದ್ದಾರೆ, ಪರಿಶೀಲಿಸಿದ್ದಾರೆ. ಜಾತಿ ಮತ್ತು ಬುಡಕಟ್ಟು ಒಂದು ಅಖಂಡಸರಳಿಗೆ ಎಂದಿಟ್ಟುಕೊಂಡು ನೋಡಿದಾಗ, ಎರಡನ್ನೂ ರಾಜಕೀಯ ಪ್ರಜಾಪ್ರಭುತ್ವ ಹಾಗೂ ವಿಶಾಲತರ ಆರ್ಥಿಕ ವ್ಯವಸ್ಥೆಗಳಿಗೆ ಒಳಪಡಿಸಿದುದರಿಂದ ಅನೇಕ ತಿರುವುಗಳು ಸಂಭವಿಸಿ ಜಾತಿ ಪದ್ಧತಿಯೇ ಹೆಚ್ಚು ಪ್ರಬಲವಾದುದು ಕಂಡುಬರುತ್ತದೆ. ಮುಂದಿನ ಅಧ್ಯಾಯಗಳಲ್ಲಿ ಲಬ್ಧಮಾಹಿತಿಯ ವಿಶ್ಲೇಷಣೆ ಮಾಡುತ್ತಾ ಹೋದಂತೆ ಜಾತಿ-ಬುಡಕಟ್ಟು ವ್ಯತ್ಯಾಸಗಳು ಅಧಿಕವಾಗುತ್ತಾ ಹೋಗುತ್ತವೆ. ವ್ಯತ್ಯಾಸಗಳನ್ನು ಎತ್ತಿತೋರಿಸುವ ಸಲುವಾಗಿ ಹಿಂದಕ್ಕೂ ಮುಂದಕ್ಕೂ ಮತ್ತೆ ಮತ್ತೆ ಉಲ್ಲೇಖಿಸುವುದರಿಂದ ಪುನರುಕ್ತಿ ಅನಿವಾರ್ಯವಾಗುತ್ತದೆ.

ನಾಲ್ಕನೆಯ ಅಧ್ಯಾಯದಲ್ಲಿ ಕರ್ನಾಟಕದಲ್ಲಿನ ಕುರುಬ ಜಾತಿ ಮತ್ತು ಕಾಡು ಕುರುಬ ಬುಡಕಟ್ಟುಗಳ ಜನಸಂಖ್ಯೆಯನ್ನು ಒದಗಿಸುವ ಹಿಂದುಳಿದ ವರ್ಗಗಳ ಆಯೋಗಗಳ, ಉಲ್ಲೇಖವಿದೆ. ಜನಗಣತಿಯಲ್ಲಿ ಜಾತಿ-ವಾರು ಮಾಹಿತಿ ಇಲ್ಲವಾದ್ದರಿಂದ, ಉಪಲಬ್ಧವಾದ ಇತರ ಮಾಹಿತಿ ಮೂಲಗಳನ್ನು ನೋಡಬೇಕಾಗಿದೆ. ವೆಂಕಟಸ್ವಾಮಿ ಆಯೋಗದ ವರದಿಯು ಸುಮಾರು 7% ಎಂದು ಕೊಡುವಾಗ ಕುರುಬ ಸಂಘವು ಸುಮಾರು 10% ಎಂದು ಏರಿಸಿದ ಸಂಖ್ಯೆಯನ್ನು ಕೊಡುತ್ತದೆ.

ಸ್ಥಳಗಳನ್ನೂ ಮಾದರಿಯ ಗಾತ್ರವನ್ನೂ ಕುರಿತ ವಿವರಗಳನ್ನೂ ನೀಡಲಾಗಿದೆ. ಭೂಹಿಡುವಳಿ, ವೃತ್ತಿ, ವೈವಿಧ್ಯಪೂರ್ಣ ಆರ್ಥಿಕ ಚಟುವಟಿಕೆಗಳು, ಶಿಕ್ಷಣ ಮತ್ತು ವಿದ್ಯಾರ್ಥಿನಿಲಯಗಳೇ ಮೊದಲಾದ ಇತರ ಸೌಲಭ್ಯಗಳನ್ನು ಕುರಿತು ಮಾಹಿತಿದಾರರಿಂದ ಸಂಗ್ರಹಿಸಿದ ಸಾಮಗ್ರಿಯನ್ನು ವಿಶ್ಲೇಷಿಸಲಾಗಿದೆ. ವರ್ಗಶ್ರೇಣಿಯಲ್ಲಿ ಕುರುಬ ಜಾತಿಯ ಸ್ಥಾನಮಾನ, ತಮಗಿಂತ ಮೇಲಿನ ಮತ್ತು ಕೆಳಗಿನ ಜಾತಿಗಳೊಂದಿಗೆ ಅವರ ಅನ್ಯೋನ್ಯ ಪರಿಣಾಮಗಳನ್ನೂ ವಿವೇಚಿಸಿದೆ. ಇದು, ಹೇಗೆ ಜಾತಿ ಭಾವನೆಗಳು ಬದುಕಿನ ಉಳಿದ ಕ್ಷೇತ್ರಗಳ ಮೇಲೆ ಪ್ರಭಾವಬೀರಿ ಅವುಗಳನ್ನು ಆಳುತ್ತವೆ ಎಂಬುದರ ಮೇಲೆ ಬೆಳಕು ಹಾಯಿಸುತ್ತದೆ. ಬಹುತೇಕ ಜನರು ಜಾತಿ ಪದ್ಧತಿಯೇ ಮುಂದುವರಿಯಬೇಕೆಂದು ಬಯಸುವುದರಿಂದ ಅದನ್ನು ಸಾಧಿಸಲು ಸ್ವಜಾತಿ ವಿವಾಹವನ್ನು ಅನುಮೋದಿಸುತ್ತಾರೆ. ಆಧುನೀಕರಣದ ಶಕ್ತಿಗಳು ಇನ್ನೂ ಯಾವುದೇ ಗಮನಾರ್ಹ ಬದಲಾವಣೆಗಳನ್ನು ಮಾಡಬೇಕಾಗಿದೆ.

ಇದೇ ಬಗೆಯ ಅಧ್ಯಯನವನ್ನು ಹಾಡಿಗಳಲ್ಲಿರುವ ಕಾಡುಕುರುಬರನ್ನು ಕುರಿತ ಮಾಡಲಾಗಿದೆ. ಬುಡಕಟ್ಟು ಸಾಮಾಜಿಕ ರಚನೆಯಲ್ಲಿ ಹಲವು ಕುಲಗಳು ಅಥವಾ ಬಣಗಳು ಇರುವುದನ್ನು ನೋಡಬಹುದು. ಕುಲಗಳು ಪವಿತ್ರವೆಂದು ಪರಿಗಣಿಸಿರುವ ಕುಲದೇವತಾ ಸಂಕೇತವಾದ ವಸ್ತುಗಳನ್ನೂ/ಪ್ರಾಣಿಗಳನ್ನೂ ಹೊಂದಿವೆ. ಅವುಗಳನ್ನು ಕೊಲ್ಲುವುದಾಗಲಿ ತಿನ್ನುವುದಾಗಲಿ ನಿಷಿದ್ಧವೆನಿಸಿದೆ. ಬುಡಕಟ್ಟು ಜನರ ಬಳಿ ಇರುವ ಜಮೀನಿನ ಬಹುಭಾಗ ಸರಕಾರವು ಕೊಟ್ಟಿರುವುದು. ಅವರು ಈಗ ಕೃಷಿ ಮಾಡಲು ತೊಡಗಿದ್ದಾರಾದರೂ, ಅವರಲ್ಲಿ ಬಹು ಜನರು ಕೃಷಿ ಕೂಲಿಗಳಾಗಿ ಜೀವನೋಪಾಯವನ್ನು ಕಂಡುಕೊಂಡಿದ್ದಾರೆ. ಆಹಾರವನ್ನು ಸಂಗ್ರಹಿಸುವುದು ಈಗಲೂ ರೂಢಿಯಲ್ಲಿದೆ. ಈ ಆದಿವಾಸಿಗಳು ಅರಣ್ಯ ಉತ್ಪಾದನೆಯ ಭಾಗವಾದ ಬೇರುಗಳನ್ನೂ, ಹಣ್ಣು ಕಾಯಿಗಳನ್ನೂ, ಹಲ ಬಗೆಯ ಸೊಪ್ಪುಗಳನ್ನೂ ಸಂಗ್ರಹಿಸುತ್ತಾರೆ, ಅವುಗಳನ್ನು ಸೇವಿಸಿ ಜೀವಿಸುತ್ತಿದ್ದಾರೆ. ಅವರ ಆರ್ಥಿಕ ಚಟುವಟಿಕೆಗಳಲ್ಲಿ ಯಾವುದೇ ವೈವಿಧ್ಯ ಕಂಡು ಬರುವುದಿಲ್ಲ.

ಯಾರನ್ನೂ ಎದೆಗುಂದಿಸುವಂತಹ ಆರ್ಥಿಕ ಪರಿಸ್ಥಿತಿಯ ಬೆಳಕಿನಲ್ಲಿ ಔಪಚಾರಿಕ ವಿದ್ಯಾಭ್ಯಾಸವು ಅತಿ ಕನಿಷ್ಠವಾಗಿದೆ. ಸರಕಾರವು ಕೆಲವು ಆಶ್ರಮಶಾಲೆಗಳನ್ನೂ ನರ್ಸರಿ ಶಾಲೆಗಳನ್ನೂ ಒದಗಿಸಿದೆ. ಪ್ರಾಥಮಿಕ, ಮಾಧ್ಯಮಿಕ ಹಾಗೂ ಪ್ರೌಢಶಾಲೆಗಳು ಶಿಕ್ಷಣವನ್ನು ಒದಗಿಸುತ್ತಿದ್ದರೂ, ವಿದ್ಯಾರ್ಥಿಗಳು ಆ ಶಾಲೆಗಳಿಗೆ ಹೋಗಿ ಸೇರಲು ಬಹಳ ದೂರ

ಹೋಗಬೇಕು. ಗಣನೆಗೇ ಬರದಷ್ಟು ವಿರಳ ಸಂಖ್ಯೆಯವರು ಕಾಲೇಜನ್ನು ಪ್ರವೇಶಿಸುತ್ತಾರೆ. ವೃತ್ತಿಪರ ಹಾಗೂ ತಾಂತ್ರಿಕ ಶಿಕ್ಷಣದಲ್ಲಿ ಅವರು ಇನ್ನೂ ಖಾತೆಯನ್ನು ತೆರೆಯಬೇಕಾಗಿದೆ. ಇತರರಾದರೋ ತಾವು ಬುಡಕಟ್ಟಿಗೆ ಸೇರಿದವರೆಂದು ಹೇಳಿಕೊಂಡು ವೃತ್ತಿಪರ ಸಂಸ್ಥೆಗಳಲ್ಲೂ ತಾಂತ್ರಿಕ ಕಾಲೇಜುಗಳಲ್ಲೂ ಪ್ರವೇಶ ಪಡೆದುಕೊಂಡಿದ್ದಾರೆ.

ಒಟ್ಟಿನ ಮೇಲೆ ಕುರುಬರಿಗೂ ಕಾಡು ಕುರುಬರಿಗೂ ನಡುವೆ ಹೋಲಿಕೆ ಇಲ್ಲ. ಕುರುಬರು ತಕ್ಕಮಟ್ಟಿಗೆ ಸುಖವಾದ ಸ್ಥಿತಿಯಲ್ಲಿರುತ್ತಾ, ಆದಿವಾಸಿಗಳು ಆ ಸ್ಥಿತಿಯನ್ನು ತಲುಪಲು ಇನ್ನೂ ಎಷ್ಟೋ ಯುಗಗಳೇ ಬೇಕು. ಅದೂ ಎಸ್‌ಟಿ ವರ್ಗಕ್ಕೆ ನೀಡಿರುವ ಸೌಲಭ್ಯಗಳು ತಡೆಯಿಲ್ಲದೆ ಹಾಗೆಯೇ ಮುಂದುವರಿದರೆ, ಅವು ಬತ್ತದೆ ಉಳಿದರೆ, ಅಸಲಿ ಬುಡಕಟ್ಟು ಜನರ ಬೆಲೆಕೊಟ್ಟು ಜಾತಿ ಪಂಗಡಗಳು ತಮಗೆ ಎಸ್.ಟಿ. ಹಣೆಪಟ್ಟಿಯನ್ನು ಕಿತ್ತುಕೊಂಡು ಅವರಿಗಿಲ್ಲದಂತೆ ಮಾಡದೆ ಹೋದರೆ ಮಾತ್ರ.

ಕುರುಬರು ಮತ್ತು ಕಾಡುಕುರುಬರಲ್ಲಿ ವಿವಾಹ ಮತ್ತು ಕುಟುಂಬಗಳು ಜಾತಿಯನ್ನು ಬುಡಕಟ್ಟಿನಿಂದ ಪ್ರತ್ಯೇಕಿಸಿ ನೋಡಲು ಅಗತ್ಯವಾದ ಹಾಗೂ ಕೆಲವು ಮುಖ್ಯವಾದ ಅಂಶಗಳನ್ನು ಒದಗಿಸುತ್ತವೆ. ಅವುಗಳ ನಡುವೆ ಕೆಲವು ಹೋಲಿಕೆಗಳೂ ಇವೆ. ಸ್ವಜಾತಿಯ ವಿವಾಹ ಮತ್ತು ಬೆಡಗು ಭಿನ್ನಗೋತ್ರ ವಿವಾಹಗಳಿಗೆ ಸಂವಾದಿಯಾಗಿ ಬುಡಕಟ್ಟು ಸೀಮಿತ ವಿವಾಹ ಹಾಗೂ ಬಣದ ಭಿನ್ನಗೋತ್ರ ವಿವಾಹಗಳಿವೆ. ಇದನ್ನು ಬಿಟ್ಟರೆ, ಕಣ್ಣಿಗೆ ಹೊಡೆಯುವಂತಹ ವ್ಯತ್ಯಾಸಗಳಿವೆ. ಕುರುಬ ಜಾತಿಯಲ್ಲಿ ಹಿರಿಯರು ನೋಡಿ ವ್ಯವಸ್ಥೆ ಮಾಡುವ ಮದುವೆಯೇ ಪ್ರಧಾನ, ವಧು-ವರರಿಗೆ ಆಯ್ಕೆಯ ಸ್ವಾತಂತ್ರ್ಯವಿಲ್ಲ. ಎರಡೂ ಕಡೆಯ ಬಂಧುಗಳು, ವರನ ಕುಟುಂಬದವರು ಇದರಲ್ಲಿ ಮುಖ್ಯ ಪಾತ್ರ ವಹಿಸುತ್ತಾರೆ. ಮದುವೆಯಲ್ಲಿ ಅನೇಕ ಧಾರ್ಮಿಕ ಆಚರಣೆಗಳಿರುತ್ತವೆ, ಬೇರೆ ಜಾತಿಗಳಿಗೆ ಸೇರಿದ ಸದಸ್ಯರು ಈ ಧಾರ್ಮಿಕಾಚರಣೆಗಳಲ್ಲಿ ತೊಡಗುವುದನ್ನು ನೋಡಬಹುದು.

ಕಾಡು ಕುರುಬರಲ್ಲಿ 'ಮನೆಯಿಂದ ಓಡಿ ಹೋಗಿ ಮದುವೆ ಮಾಡಿಕೊಳ್ಳುವುದು' ಈಗಲೂ ರೂಢಿಯಲ್ಲಿದೆ, ಬಹಳ ಜನಪ್ರಿಯವಾಗಿದೆ. ವಿವಾಹ ವಯಸ್ಕರಾದ ಹುಡುಗಿ ಮತ್ತು ಹುಡುಗ ಜೊತೆಯಾಗಿ ಓಡಿ ಹೋಗಿ ಕಾಡಿನಲ್ಲಿ ಕಣ್ಮರೆಯಾಗುತ್ತಾರೆ. ಕೆಲವು ದಿನ ಹಾಗೆ ಮನೆಯಿಂದ ದೂರವಾಗಿದ್ದು ಆಮೇಲೆ ಹಾಡಿಗೆ ಹಿಂದಿರುಗುತ್ತಾರೆ. ಹುಡುಗನ ಮತ್ತು ಹುಡುಗಿಯ ತಂದೆ-ತಾಯಂದಿರು ಬುಡಕಟ್ಟಿನ ಹಿರಿಯರೊಂದಿಗೆ ಸೇರಿ ಮದುವೆಗೆ ತಮ್ಮ ಆಶೀರ್ವಾದ ಮಾಡುತ್ತಾರೆ. ವಿಸ್ತಾರವಾದ ಧಾರ್ಮಿಕ ಆಚರಣೆಗಳಾಗಲಿ, ಬಂಧು ಬಾಂಧವರಾಗಲಿ ಇದರಲ್ಲಿ ತೊಡಗುವುದಿಲ್ಲ. ವಿವಾಹಿತರು ಸಂತೋಷಪಡುತ್ತಾರೆ. ತಮ್ಮ ಪತಿ/ಪತ್ನಿಯನ್ನು ಆರಿಸುವುದರಲ್ಲಿ ವೈಯಕ್ತಿಕ ಸ್ವಾತಂತ್ರ್ಯವನ್ನು ಅವರು ಚಲಾಯಿಸುತ್ತಾರೆ.

ಕಾಡುಕುರುಬರಲ್ಲಿ ಮದುವೆಯಾದೊಡನೆಯೇ ನೂತನ ದಂಪತಿಗಳು ತಮ್ಮದೇ ಮನೆಯನ್ನು ಮಾಡಿಕೊಂಡು ಸ್ವತಂತ್ರವಾಗಿ ಬಾಳತೊಡಗುತ್ತಾರೆ. ಬಿಡಿ ಸಂಸಾರವೇ ಇಲ್ಲಿ ಸಾಮಾನ್ಯ. ಇದಕ್ಕೆ ವ್ಯತಿರಿಕ್ತವಾಗಿ ಕುರುಬರಲ್ಲಿ ವಧುವು ತನ್ನ ಪತಿ ಮತ್ತು ಅವನ ತಂದೆ-ತಾಯಿ ಹಾಗೂ ಬಂಧುಗಳಿರುವ ಮನೆಗೆ ಸೇರುತ್ತಾಳೆ. ಇಲ್ಲಿ ಕೂಡು ಕುಟುಂಬ, ಬೇರೆ

ಬೇರೆ ಪ್ರಮುಖವಾದ ಕೂಡಿಕೆಯಿಂದ, ಸಾಮಾನ್ಯವಾಗಿದೆ. ತುಂಬಾ ಸಮಯವಾದ ಮೇಲೆ ಆಧುನಿಕ ಶಿಕ್ಷಣ ಮತ್ತು ಉದ್ಯೋಗಗಳ ಪ್ರಭಾವದಿಂದಾಗಿ ಬಿಡಿ ಸಂಸಾರವು ಕಾಣಿಸಿಕೊಳ್ಳತೊಡಗುತ್ತದೆ.

ಕಾಡು ಕುರುಬ ಮಹಿಳೆಯ ಸ್ಥಿತಿ ಮತ್ತು ಸ್ಥಾನಮಾನ ಎಷ್ಟೋ ಉತ್ತಮವಾಗಿದೆ. ಆಕೆ ಹೆಚ್ಚಿನ ಸ್ವಾತಂತ್ರ್ಯವನ್ನು ಪಡೆದಿದ್ದಾಳೆ; ಪುರುಷರಿಗೆ ಅತಿಯಾಗಿ ಅಧೀನವಾಗಿರುವುದಿಲ್ಲ. ಆದರೆ ಕುರುಬ ಮಹಿಳೆಯ ಸ್ಥಿತಿ ಹೀಗಿಲ್ಲ. ಕುರುಬ ಮತ್ತು ಕಾಡುಕುರುಬರಿಬ್ಬರೂ ಪಿತೃವಂಶ ಕ್ರಮವುಳ್ಳವರು. ವಿಚ್ಛೇದನ, ಅಗಲಿಕೆ, ಮರುವಿವಾಹ ಇವುಗಳಿಗೆ ಕಾಡು ಕುರುಬರಲ್ಲಿ ಯಾವ ಕಳಂಕವೂ ಇಲ್ಲ; ಆದರೆ ಕುರುಬರಲ್ಲಿ ಅವು ಬಹುಕಷ್ಟ ಸಾಧ್ಯವಾದವು. ಅವರಲ್ಲಿ ಮಹಿಳೆಗೆ ಅನಾನುಕೂಲ ಹೆಚ್ಚು.

ಏಳನೆಯ ಅಧ್ಯಾಯದಲ್ಲಿ ಕುರುಬರು ಮತ್ತು ಕಾಡುಕುರುಬರಲ್ಲಿರುವ ರಾಜಕೀಯ-ಧಾರ್ಮಿಕ ವ್ಯವಸ್ಥೆಯ ವಿವೇಚನೆಯಿದೆ. ವಾಸ್ತವವಾಗಿ ಇಲ್ಲಿ ರಾಜಕೀಯ ಮತ್ತು ಧರ್ಮಗಳನ್ನು ಎಷ್ಟುಮಟ್ಟಿಗೆ ಏರಿಸಲಾಗಿದೆಯೆಂದರೆ, ರಾಜಕೀಯವು ಎಲ್ಲಿ ಮುಗಿದು ಧರ್ಮವು ಪ್ರಾರಂಭವಾಗುತ್ತದೆ ಅಥವಾ ಧರ್ಮ ಮುಗಿದು ರಾಜಕೀಯ ಪ್ರಾರಂಭವಾಗುತ್ತದೆ ಎಂದು ಖಚಿತವಾಗಿ ಚೊಟ್ಟುಮಾಡಿ ತೋರಿಸುವುದು ಕಷ್ಟವಾಗುತ್ತದೆ.

ಕಾರ್ಲ್‌ಮಾರ್ಕ್ಸ್, ಮ್ಯಾಕ್ಸ್‌ವೆಬರ್, ಗಾಂಧಿ ಮತ್ತು ಅಂಬೇಡ್ಕರ್ ಇವರ ಸಂಕ್ಷೇಪ ಉಲ್ಲೇಖ ಹಾಗೂ ಭಾವನಾತ್ಮಕ ಪರಿಣಾಮಗಳನ್ನು ನಿರೂಪಿಸಲಾಗಿದೆ. ಧರ್ಮವು ಜನಸಾಮಾನ್ಯರಿಗೆ 'ಮತ್ತುಬರಿಸುವಂಥದು' ಎಂದು ಮಾರ್ಕ್ಸ್ ತಿರಸ್ಕರಿಸುತ್ತಾನೆ; ಮ್ಯಾಕ್ಸ್‌ವೆಬರ್ ಪ್ರಕಾರ, ಧರ್ಮವು, ಅದರಲ್ಲೂ ಪಶ್ಚಿಮದಲ್ಲಿನ ಪ್ರಾಟಿಸ್ಟೆಂಟ್ ಪಂಗಡಗಳು ಆಧುನಿಕ ಬಂಡವಾಳಶಾಹಿಯ ಉದಯದಲ್ಲಿ ಇತ್ಯಾತ್ಮಕ ಪಾತ್ರವನ್ನು ನಿರ್ವಹಿಸುವುದರಲ್ಲಿ ಬಹು ಮಹತ್ವದ್ದಾಗಿದ್ದುವು.

ಗಾಂಧೀಜಿಯವರ ಚಿಂತನೆ ಮತ್ತು ಬರವಣಿಗೆಗಳಲ್ಲಿ ಧರ್ಮವನ್ನೂ ರಾಜಕೀಯವನ್ನೂ ಹದವರಿತು ಮಿಶ್ರ ಮಾಡಿರುವುದನ್ನು ನಾವು ನೋಡುತ್ತೇವೆ. ತಾವು ಒಬ್ಬ ಸನಾತನ ಹಿಂದೂ, ಭಾರತದ ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಸುವುದು ತಮ್ಮ ಧಾರ್ಮಿಕ ನಂಬಿಕೆಗಳಿಂದಲೂ ಆಚರಣೆಗಳಿಂದಲೂ ಕುಂಠಿತವಾಗಬೇಕಾಗಿಲ್ಲ ಎಂದು ಅವರು ದೃಢವಾಗಿ ಹೇಳಿದ್ದಾರೆ. ಹಿಂದೂಧರ್ಮ ಮತ್ತು ಅಸ್ಪೃಶ್ಯತೆಯ ಆಚರಣೆಗಳನ್ನು ಕುರಿತು ಅಂಬೇಡ್ಕರ್ ಅವರ ಅಭಿಪ್ರಾಯಗಳು ಇದಕ್ಕೆ ಸಂಪೂರ್ಣವಾಗಿ ವಿರುದ್ಧವಾದವು. ಹಿಂದೂ ಧರ್ಮವನ್ನು ವಿರೋಧಿಸಿದ ಮಾತ್ರಕ್ಕೆ ಅಂಬೇಡ್ಕರ್ ಅವರು ಅಧಾರ್ಮಿಕರಾಗಲಿಲ್ಲ. ಅದಕ್ಕೆ ಬದಲು "ವೈಚಾರಿಕತೆ ಹಾಗೂ ಸಹಾನುಭೂತಿ" ಗಳ ಮೇಲೆ ಆಧಾರಗೊಂಡ ಬದಲಿ ರೂಪಗಳನ್ನು ಅವರು ಹುಡುಕತೊಡಗಿದರು. ಕೊನೆಗೆ ಬೌದ್ಧಧರ್ಮವನ್ನು ಮರಳಿ ತಂದು, ಅಸ್ಪೃಶ್ಯರು ಹಿಂದೆ ಒಂದಾನೊಂದು ಕಾಲದಲ್ಲಿ ಪೂರ್ವಜರ ಧರ್ಮವಾಗಿದ್ದ ಅದನ್ನು ಅವಲಂಬಿಸಬೇಕೆಂದು ಹೇಳಿದರು. ಸಂವಿಧಾನ ಕರಡು ರಚನಾ ಸಮಿತಿಯ ಅಧ್ಯಕ್ಷರಾಗಿ, ಅಸ್ಪೃಶ್ಯ ವರ್ಗಗಳಿಗೂ ಬುಡಕಟ್ಟುಗಳಿಗೂ ಉದ್ಧಾರ ಮತ್ತು ಸುಭದ್ರತೆಯಿಂದ ಕೂಡಿದ ಸಾಮಾಜಿಕ ನ್ಯಾಯಗಳ ಸಾಧನವಾಗಿ 'ಮೀಸಲಾತಿ'ನೀತಿಯನ್ನು ರೂಪಿಸಿದರು.

ಪರಿಶಿಷ್ಟದಲ್ಲಿ ಸೇರಿಸಲ್ಪಟ್ಟವರು ಈ ವರ್ಗಗಳು. ಹಾಗಾಗಿ ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಬುಡಕಟ್ಟುಗಳು (ಎಸ್.ಸಿ.ಗಳು ಮತ್ತು ಎಸ್.ಟಿ.ಗಳು) 'ಸಂರಕ್ಷಕ ವಿವೇಚನೆ'ಗೆ ಒಳಪಡುವ ಜನರನ್ನು ಸೂಚಿಸಿದುವು. ಅನೇಕ ಪರಿಶಿಷ್ಟಗೊಂಡಿಲ್ಲದ ಪಂಗಡಗಳಿಗೆ ಈ ಪ್ರಯೋಜನಗಳು ಹೊಟ್ಟೆಯುರಿಯನ್ನು ಉಂಟುಮಾಡಿ, ಸಾಮಾನ್ಯ ಅಭಿವೃದ್ಧಿಗೆ ತಡೆಯಾಗಿ ಪರಿಣಮಿಸಿವೆ.

ಎಸ್.ಟಿ. ಸ್ಥಾನ ಬೇಕೆಂದು ಕೇಳುತ್ತಿರುವ ಕುರುಬರು ಭದ್ರವಾದ ಆರ್ಥಿಕ ಹಿನ್ನೆಲೆಯನ್ನು ಹೊಂದಿದ್ದಾರೆ, ಶೈಕ್ಷಣಿಕವಾಗಿಯೂ ಉತ್ತಮ ಸ್ಥಿತಿಯಲ್ಲಿದ್ದಾರೆ. ಬೇರೆ ಬೇರೆ ರಾಜಕೀಯ ಪಕ್ಷಗಳಲ್ಲಿ ಈ ಪಂಗಡಕ್ಕೆ ಸೇರಿದ ರಾಜಕೀಯ ಮುಖಂಡರ ದೊಡ್ಡ ಪಟ್ಟಿಯೇ ಇದೆ. 1952ರಲ್ಲಿ ನಡೆದ ಮೊದಲನೆಯ ಮಹಾಚುನಾವಣೆಗಳಿಂದ ತೊಡಗಿ ಇಂದಿನವರೆಗೂ ಅನೇಕರು ಎಂ.ಎಲ್.ಎ., ಎಂ.ಎಲ್.ಸಿ., ಸಚಿವರು ಮತ್ತು ಸಂಸತ್ ಸದಸ್ಯರು ಆಗಿದ್ದಾರೆ. ಬಹಳ ಹಿಂದೆಯೇ ಬೆಂಗಳೂರಿನಲ್ಲಿ ಕುರುಬ ಸಂಘವನ್ನು ಸ್ಥಾಪಿಸಲಾಯಿತು. ಅದು ಕುರುಬರ ಪ್ರಗತಿಯನ್ನು ವ್ಯವಸ್ಥಿತವಾಗಿ ನೋಡಿಕೊಂಡಿದೆ.

ಈಚೆಗೆ 1992 ರ ಸುಮಾರಿನಲ್ಲಿ ಧಾರವಾಡ ಜಿಲ್ಲೆಯ ಹಾವೇರಿಯ ಬಳಿ (ಈಗ ಹಾವೇರಿಯೇ ಒಂದು ಜಿಲ್ಲೆಯಾಗಿದೆ) ಕಾಗಿನೆಲೆಯಲ್ಲಿ ಒಂದು ಮಠವನ್ನು ಸ್ಥಾಪಿಸಿದರು. ಮೈಸೂರು ಜಿಲ್ಲೆಗೆ ಸೇರಿರುವ ಒಬ್ಬ ಜಗದ್ಗುರುಗಳು ಈಗ ಮಠಾಧಿಪತಿಯಾಗಿದ್ದಾರೆ. ಬೇರೆ ಬೇರೆ ಜಿಲ್ಲೆಗಳಲ್ಲಿ ಅನೇಕ ಶೈಕ್ಷಣಿಕ ಸಂಸ್ಥೆಗಳನ್ನು ನಡೆಸಲಾಗುತ್ತಿದೆ. ಹಾಗಾಗಿ, ವಿಭಜಕವಾದ ರಾಜಕೀಯ ಆಶೋತ್ತರಗಳನ್ನು ಅಡಗಿಸಿ ಒಂದು ಧಾರ್ಮಿಕ ಪ್ರಾಧಿಕಾರದ ಅಂಕೆಗೆ ತರಬಹುದಾಗಿದೆ. ಕರ್ನಾಟಕದಾದ್ಯಂತ ಇರುವ ಕುರುಬರನ್ನು ಒಂದುಗೂಡಿಸಿ, ಶಿಕ್ಷಣ ಕೊಟ್ಟು, ಜಾತಿ ಪಂಗಡವು ಎಸ್.ಟಿ. ಪ್ರಯೋಜನಗಳನ್ನು ಪಡೆಯಲು ಅನುಕೂಲವಾಗುವಂತೆ ಒತ್ತಡ ಹೇರಲು ಅವರನ್ನು ಸಿದ್ಧಪಡಿಸುವ ಪ್ರಯತ್ನ ಸ್ಥಿರಗತಿಯಲ್ಲಿ ಈಗ ನಡೆದಿದೆ.

ಕಾಡಿನ ಸೆರಗುಗಳಲ್ಲಿ ವಾಸಮಾಡುತ್ತಿದ್ದ ಕಾಡುಕುರುಬರು ಈಚಿನವರೆಗೂ ಪ್ರತ್ಯೇಕವಾಗಿಯೇ ಉಳಿದಿದ್ದರು. ಅವರು ರಾಜಕೀಯ ಶಕ್ತಿಯೂ ಆಗಿರಲಿಲ್ಲ. ಧಾರ್ಮಿಕವಾಗಿಯೂ ಒಂದು ಶಕ್ತಿಯಾಗಿರಲಿಲ್ಲ. ವಾಸ್ತವವಾಗಿ ನೆರೆಯಲ್ಲಿರುವ ಹಳ್ಳಿಗರು ಮತ್ತು ಇತರರೊಂದಿಗೆ ನಿಕಟ ಸಂಪರ್ಕಕ್ಕೆ ಬರುತ್ತಿರುವುದರಿಂದ ಅವರ ಧಾರ್ಮಿಕ ನಂಬಿಕೆಗಳು ಮತ್ತು ಆಚರಣೆಗಳು ಹಿಂದೂ ದೇವತಾ ಪಂಕ್ತಿಯು ಬೆರೆತ ಬುಡಕಟ್ಟು ಧರ್ಮವಾಗಿವೆ. ಜಗದ್ಗುರು ಪ್ರಜ್ಞೆ ಎನ್ನುವುದೇನೂ ಅವರಲ್ಲಿ ಸಮೀಪ ಭವಿಷ್ಯತ್ತಿನಲ್ಲಿ ಮೂಡುವಂತೆ ತೋರುವುದಿಲ್ಲ.

ರಾಜಕೀಯವಾಗಿ, ಈಚಿನವರೆಗೂ, ಸಾರ್ವತ್ರಿಕ ಚುನಾವಣೆಗಳಲ್ಲಿ ಮತ ನೀಡುವಷ್ಟಕ್ಕೆ ಮಾತ್ರ ಅವರನ್ನು ತೊಡಗಿಸಿಕೊಳ್ಳಲಾಗಿತ್ತು. ಈಗ ಪಂಚಾಯತ್ ಸಂಸ್ಥೆಗಳು ಅಸ್ತಿತ್ವಕ್ಕೆ ಬಂದು, ಮೀಸಲು ಆಧಾರದ ಪ್ರಾತಿನಿಧ್ಯದಿಂದಾಗಿ ಅವರಲ್ಲಿ ಕೆಲವರು ಸದಸ್ಯರಾಗಿದ್ದಾರೆ. ಈ ಪರಿಸ್ಥಿತಿಯಲ್ಲಿ ಕಾಡು ಕುರುಬರು ಯಾವುದೇ ಕ್ಷೇತ್ರದಲ್ಲೂ ಕುರುಬರೊಂದಿಗೆ ಸ್ಪರ್ಧಿಸಲಾರರು. ಕುರುಬ ಮಾಹಿತಿದಾರರು ಅಪೇಕ್ಷಿಸುವಂತೆ, ರಾಷ್ಟ್ರಮಟ್ಟದಲ್ಲಿ ಕಾಡು

ಕುರುಬರನ್ನು ಒಳಗೊಂಡ ಕುರುಬ ಮಹಾ ಸಂಘವೊಂದು ರೂಪುಗೊಳ್ಳುವುದು ಕೇವಲ ಸಂಖ್ಯೆಯ ಆಟವಾಗುತ್ತದೆ ಅಷ್ಟೆ. ಈ ತಾತ್ವಿಕ ವಿಲೀನದಿಂದಾಗಿ ಕುರುಬರಿಗೆ ಹೆಚ್ಚಿನ ಪ್ರಯೋಜನಗಳು ದೊರಕಬಹುದು, ಆದರೆ ಕಾಡು ಕುರುಬರು ಹಾಗೆಯೇ ಹಿಂದೆ ಉಳಿಯುತ್ತಾರೆ.

ಮೀಸಲಾತಿ ನೀತಿಯು ಒಂದು ಇತ್ಯಾತ್ಮಕ ಸಾಧನ. ಭಾರತದ ಜನಸ್ತೋಮದಲ್ಲಿ ಕೆಲವು ನಿರ್ದಿಷ್ಟ ವರ್ಗಗಳು/ಪಂಗಡಗಳು ಶತಮಾನಗಳ ಕಾಲದಿಂದ ಅತ್ಯಂತ ಹೀನಾಯವಾದ ಪರಿಸ್ಥಿತಿಯಲ್ಲಿ ಜೀವಿಸುತ್ತಿದ್ದು ಅವರಿಗೆ ತಕ್ಕ ಪರಿಹಾರ ನೀಡಲು, ಅವರನ್ನು ಮುಂದೆ ತರಲು ಸಂವಿಧಾನವು ಈ ಸಾಧನವನ್ನು ಒದಗಿಸಿದೆ. ಪರಿಶಿಷ್ಟ ಜಾತಿಗಳು ಹಿಂದೆ ಅಸ್ಪೃಶ್ಯರೆನಿಸಿಕೊಂಡಿದ್ದರು ಮತ್ತು ಪರಿಶಿಷ್ಟ ಬುಡಕಟ್ಟುಗಳಿಗೆ ಆರ್ಥಿಕ, ರಾಜಕೀಯ, ಶೈಕ್ಷಣಿಕ ಮತ್ತು ಸಾಮಾಜಿಕ ವಲಯಗಳಲ್ಲಿ ಸಾಂವಿಧಾನಿಕವಾಗಿ ವಿಶೇಷ ಸೌಲಭ್ಯಗಳನ್ನು ಒದಗಿಸಲಾಗಿದೆ. ರಾಜ್ಯ ವಿಧಾನಸಭೆಯಲ್ಲೂ ಸಂಸತ್ತಿನಲ್ಲೂ ರಾಜಕೀಯ ಪ್ರಾತಿನಿಧ್ಯವನ್ನು ನೀಡುವ ಸಲುವಾಗಿ ನಿರ್ದಿಷ್ಟ ಶೇಕಡಾ ಸ್ಥಾನಗಳನ್ನು ಕಾದಿರಿಸಲಾಗಿದೆ. ಸರಕಾರದ ವಿಭಾಗಗಳಲ್ಲಿ ಉದ್ಯೋಗವನ್ನೂ ಶಿಕ್ಷಣವನ್ನೂ ಕೊಡುವುದಕ್ಕಾಗಿ ಆರ್ಥಿಕ ಪ್ರೋತ್ಸಾಹಗಳನ್ನು ನೀಡಲಾಗಿದೆ. ವಸತಿ ಸೌಲಭ್ಯ, ಕುಶಲ ಕಸಬುದಾರಿಕೆಗಳನ್ನು ಪ್ರೋತ್ಸಾಹಿಸಲು ಹಲವು ಯೋಜನೆಗಳು ಕಾರ್ಯಗತವಾಗುತ್ತಿವೆಯೆಂದು ಹೇಳಲಾಗಿದೆ. ಇದು 1950ರಲ್ಲಿ ಸಂವಿಧಾನವನ್ನು ಜಾರಿಗೆ ತಂದುಕೊಂಡಾಗ ಕಾರ್ಯಗತವಾದಂತಹ ಯೋಜನೆ.

ಆದರೆ ಅದಕ್ಕಿಂತಲೂ ಬಹಳ ಮುಂಚೆಯೇ, ಹಿಂದಿನ ಮದರಾಸು ಪ್ರೆಸಿಡೆನ್ಸಿಯ ಬ್ರಾಹ್ಮಣೇತರರ ಚಳುವಳಿ, ಮೈಸೂರು ಸಂಸ್ಥಾನ ಮತ್ತು ಮುಂಬಯಿ ಪ್ರೆಸಿಡೆನ್ಸಿಗಳಲ್ಲಿ ನಡೆದ ಚಳುವಳಿಗಳಿಂದಾಗಿ ಪರಿಶಿಷ್ಟೇತರ ಜಾತಿಗಳಿಗೆ ಅಥವಾ ಹಿಂದುಳಿದ ಜಾತಿಗಳಿಗೆ ಒಂದು ಬಗೆಯಲ್ಲಿ ಆದ್ಯತೆಯ ಪರಿಗಣನೆಯ ಮೀಸಲಾತಿಯನ್ನು ನೀಡಲಾಗಿತ್ತು. ಈ ಯೋಜನೆಯು ದಕ್ಷಿಣಭಾರತದಲ್ಲಿ ಕೊನೆಯ ಪಕ್ಷ ಕಳೆದ 60-70 ವರ್ಷಗಳಿಂದ ಶೂದ್ರ ಜಾತಿ ಪಂಗಡಗಳಿಗೆ ಅನ್ವಯಿಸುವಂತೆ ನಡೆದು ಬರುತ್ತಿದೆ. ಆದರೆ ಅದರ ಫಲವೇನಾಗಿದೆಯೆಂಬುದು ಯಾರಿಗೂ ತಿಳಿದಿಲ್ಲ.

1970-80ರಲ್ಲಿ ಬಂದ ಮಂಡಲ್ ಆಯೋಗದ ವರದಿಯು ಒಂದು ರೀತಿಯಾಗಿ, ದೇಶದಲ್ಲಿರುವ ಹಿಂದುಳಿದ ಸಮುದಾಯಗಳಿಗೆ ಮೀಸಲಾತಿಯನ್ನು ವಿಸ್ತರಿಸುವುದನ್ನು ಶಿಫಾರಸು ಮಾಡಿತು. ಇದು ವಿಶೇಷವಾಗಿ ಉತ್ತರಭಾರತದಲ್ಲಿ ಕೋಲಾಹಲವನ್ನುಂಟು ಮಾಡಿತು. ಆದರೆ ದೇಶದಲ್ಲಿ ಎಸ್.ಸಿ.ಗಳು, ಎಸ್.ಟಿ.ಗಳು, ಬಿ.ಸಿ., ಓಬಿಸಿ., ಮತ್ತು ಎಸ್.ಇ.ಬಿ.ಸಿ. ಇವರೆಲ್ಲರನ್ನೂ ಒಳಗೊಂಡ ಒಟ್ಟು ಮೀಸಲಾತಿಯು 50% ಗೆರೆಯನ್ನು ದಾಟಕೂಡದು ಎಂದು ಅಪೆಕ್ಸ್ ನ್ಯಾಯಾಲಯವು ನೀಡಿದ ಆದೇಶವು ಒಂದು ಬಗೆಯಾಗಿ, ಮೀಸಲಾತಿಯ ಆಸೆ ಪಡುತ್ತಿದ್ದ ಶೂದ್ರ ಜಾತಿ ಪಂಗಡಗಳಿಗೆ ತಡೆಯಾಗಿಬಿಟ್ಟಿದೆ. ಈ ಪಂಗಡಗಳಿಗೆ ನೀಡುವ 27% ಮೀಸಲಾತಿಯು ಲಾಭಗಳನ್ನು ಸುಮ್ಮನೆ

ಚುಮುಕಿಸಿದಂತಾಗಿದೆ, ಅದನ್ನೂ ಶ್ರೀಮಂತರಾದ ಪ್ರಬಲರಾದ ಪಂಗಡಗಳು ಕಬಳಿಸಿಬಿಟ್ಟಿವೆ. ಹಾಗಾಗಿ, ಬಲವಾದ ಆಸೆಯಿಂದ ಕೂಡಿದ ಅನೇಕ ಪಂಗಡಗಳು ಬೇಲಿಯನ್ನು ಹಾರಿ ಎಸ್.ಸಿ./ ಎಸ್.ಟಿ. ವರ್ಗಕ್ಕೆ ಸೇರಿಕೊಂಡು ಹೆಚ್ಚು ಪ್ರಯೋಜನಗಳನ್ನು ತಮಗೇ ಪಡೆದು ಕೊಳ್ಳಬಹುದೆಂದು ಅದಕ್ಕಾಗಿ ಪ್ರಯತ್ನಿಸಿವೆ.

ಕುರುಬರಿಗೆ ಹಿಂದುಳಿದ ವರ್ಗದ ಸ್ಥಾನಮಾನ ಬೇಕಿಲ್ಲ. ಅವರು ತಮ್ಮನ್ನು ಎಸ್.ಟಿ. ವರ್ಗಕ್ಕೆ ಸೇರಿಸಬೇಕೆಂದು ಬಯಸುತ್ತಾರೆ. ಅದು ಅವರಿಗೆ ಹೆಚ್ಚು ಲಾಭಕರ. ಕಾಡು ಕುರುಬರಿಗೆ ಕುರುಬರ ಈ ನಡೆಗಳು ಅರ್ಥವಾಗುವುದಿಲ್ಲ (ಈ ಆದಿವಾಸಿಗಳಲ್ಲೂ ಸ್ವಲ್ಪ ಮಟ್ಟಿಗೆ ತಿಳಿವಳಿಕೆಯನ್ನು ಮೂಡಿಸುವ ಪಾತ್ರ ನಿರ್ವಹಿಸಿರುವ ಎನ್‌ಜಿಓ ಗಳಿಗೆ ವಂದನೆಗಳು ಸಲ್ಲಬೇಕು). ಹಾಗಾಗಿ ತಾವು ವ್ಯವಸ್ಥಿತವಾಗಿ, ಸಂಘಟಿತರಾಗಿ, ಒತ್ತಡ ಹೇರಿ ಸರಕಾರವನ್ನು ಬಗ್ಗಿಸಿ, ನೀತಿಯನ್ನು ತಲೆಕೆಳಗು ಮಾಡಬಹುದು ಎಂದು ಕುರುಬರು ಆಶಿಸುತ್ತಿದ್ದಾರೆ.

ಉಪಸಂಹಾರ ಮತ್ತು ಶಿಫಾರಸುಗಳಲ್ಲಿರುವುದು, ದೇಶದಲ್ಲಿ ಸಂರಕ್ಷಕ ವಿವೇಚನೆಯು ಚಾಲ್ತಿಯಲ್ಲಿರುವ ರೀತಿಯ ಲಕ್ಷಣವಾದ ವಿಷಾದಕರ ಪರಿಸ್ಥಿತಿಯನ್ನು ಕುರಿತ ಚಿಂತನೆ. ಅದು ಸಾಂತ್ವನಗೊಳಿಸುವುದಕ್ಕಿಂತ ಮುಖ್ಯವಾಗಿ ಒಂದು ವಿಭೇದಕ ಶಕ್ತಿಯಾಗಿ ಪರಿಣಮಿಸಿದೆ. ಅತ್ಯಂತ ಸಣ್ಣದಾದ ವ್ಯತ್ಯಾಸಗಳ ಮೇಲೆಯೂ, ಜಾತಿ, ಉಪ-ಜಾತಿ, ಸಮುದಾಯ, ಧರ್ಮ, ಭಾಷೆ, ಪ್ರದೇಶ ಮತ್ತು ಇಂತಹ ಹಲವು ಅಂಶಗಳಲ್ಲಿ ಜನರು ಬೇರೆ ಬೇರೆಯಾಗಿ ಸಿಡಿದು ಹೋಗುತ್ತಿದ್ದಾರೆ.

ಜನಗಣತಿಯು ಜಾತಿಗಳನ್ನು ದಾಖಲು ಮಾಡುವುದನ್ನು ನಿಲ್ಲಿಸಿದೆ. ಆದರೂ ಹಿಂದೆಂದೂ ಇದ್ದಿರದಷ್ಟು ಸಂಖ್ಯೆಯ ಜಾತಿಗಳನ್ನು ಕುರಿತು ಹೆಮ್ಮೆಪಟ್ಟುಕೊಳ್ಳಬೇಕು. ಮೀಸಲಾತಿಯು ಇಂದು ದೇಶಕ್ಕೆ ಅನರ್ಥಕಾರಕವಾಗಿ ಪರಿಣಮಿಸಿದೆ. ಅದು ಕೆಲಸ ಮಾಡುತ್ತಿರುವ ರೀತಿ, ಜಾತಿಯ ಮೇಲೆ ಆಧಾರಗೊಂಡಿರುವ ರೀತಿಗಳಿಂದ ಈ ತೀರ್ಮಾನಕ್ಕೆ ಬರಬೇಕಾಗಿದೆ.

ಪರಿಸ್ಥಿತಿಯನ್ನು ಸರಿಪಡಿಸುವ ಕ್ರಮಗಳಾಗಲಿ, ಆಡಳಿತವನ್ನು ಸುವ್ಯವಸ್ಥೆಗೊಳಿಸುವುದಾಗಲಿ ಸ್ಥಿರವಾದ ರಾಜಕೀಯ ಸಂಕಲ್ಪದೊಂದಿಗೆ ಬಂಧಿತವಾಗಿದೆ. ಪರಿಶಿಷ್ಟದಿಂದ ತೆಗೆಯುವ ಕಾಲಬದ್ಧ ಕಾರ್ಯಕ್ರಮವು ಅತ್ಯಗತ್ಯವಾದ ಒಂದು ಹೆಜ್ಜೆಯಾಗಿದೆ. ಪರಿಶಿಷ್ಟಕ್ಕೆ ಸೇರಿಸುವಾಗ ಜಾತಿಯ ಜೊತೆಗೆ ಇನ್ನೂ ಯಾವ ಅಂಶಗಳನ್ನು ಬೇಕಾದರೂ ಪರಿಗಣಿಸಲಿ. ಆದರೆ ಅರ್ಹತೆಯಿರುವ, ಅರ್ಹರಾಗಿರುವ, ಅರ್ಹತಮರಾಗಿರುವ, ಅರ್ಹತೆಯೇ ಇಲ್ಲದ ಪಂಗಡಗಳನ್ನು ಪ್ರತ್ಯೇಕಗೊಳಿಸಲು ತಕ್ಕುದಾದ ಒಂದು ವಿಧಾನವನ್ನು ರೂಪಿಸಬೇಕು. ಆಮೇಲೆ ಯೋಜನೆಯು ಕಾರ್ಯಗತಗೊಳ್ಳಬೇಕು. ಜನಪ್ರಿಯ ಕಾರ್ಯನೀತಿಗಳು ಪರಿಹರಿಸುವುದಕ್ಕಿಂತ ಮಿಗಿಲಾಗಿ ಅಧಿಕ ಸಮಸ್ಯೆಗಳನ್ನು ಸೃಷ್ಟಿಸುತ್ತವೆ. ಈ ಸಂಧಿಕಾಲದಲ್ಲಿ ಮೀಸಲಾತಿ ನೀತಿಯನ್ನು ಕುರಿತು ಮತ್ತೆ ಯೋಚಿಸುವುದು, ಮತ್ತೆ ರೂಪಿಸುವುದು ಅತ್ಯಂತ ವಿಹಿತವಾಗಿದೆ.

ಮೀಸಲಾತಿಯೆಂಬ ಗಗನ ಕುಸುಮ, ಕರ್ನಾಟಕದ ಕುರುಬ ಜಾತಿ ಮತ್ತು ಬುಡಕಟ್ಟುಗಳಲ್ಲಿ ಅಸ್ತವ್ಯಸ್ತತೆಯನ್ನು ಉಂಟುಮಾಡಿದೆ.

ಕನ್ನಡ ರತ್ನಕೋಶದ ಪ್ರಕಾರ ಗಗನ ಕುಸುಮವೆಂದರೆ ಕೈಗೆ ಎಟುಕದ್ದು, ವಾಸ್ತವವಲ್ಲದ್ದು.

ಪ್ರಸ್ತುತ ಅಧ್ಯಯನಕ್ಕೆ ಮೊದಲು "ಜಾತಿ ಮತ್ತು ಬುಡಕಟ್ಟುಗಳ ಅಸ್ತವ್ಯಸ್ತತೆ - ಕರ್ನಾಟಕದ ಕುರುಬರು" ಎಂದು ಹೆಸರಿಡಲಾಗಿತ್ತು. ಐ.ಸಿ.ಎಸ್.ಎಸ್.ಆರ್.ಗೆ ಒಪ್ಪಿಸಿದ ನನ್ನ ಈ ವರದಿಯ ಮೌಲ್ಯ ಮಾಪನ ಮಾಡಿದ ಪ್ರೊಫೆಸರ್ ರಾಯ್‌ಬರ್ಮನ್, ಇಲ್ಲಿ ಮೀಸಲಾತಿ ಮತ್ತು ಜಾತಿ-ಬುಡಕಟ್ಟುಗಳ ಅಸ್ತವ್ಯಸ್ತತೆ ಎರಡೂ ಮುಖ್ಯವಾಗಿರುವುದರಿಂದ ನಾನು ಅಧ್ಯಯನದ ಹೆಸರನ್ನು ಬದಲಾಯಿಸುವುದು ಉತ್ತಮ ಎಂದು ಅಭಿಪ್ರಾಯಪಟ್ಟರು. ನಿಘಂಟಿನಲ್ಲಿ ಬೇರೆ ಏನನ್ನೋ ನೋಡಲು ಹೊರಟಿದ್ದಾಗ ಈ ನುಡಿಗಟ್ಟು ದೊರಕಿತು.

ಎರಡೂ ಅರ್ಥಗಳಿಂದ ಗ್ರಂಥದ ಶೀರ್ಷಿಕೆಯು ಸೂಕ್ತವಾಗಿರುವಂತೆ ತೋರುತ್ತದೆ. ಮೊದಲನೆಯ ಅರ್ಥವು ಎಸ್.ಟಿ. ವರ್ಗಕ್ಕೆ ಸೇರಿ ಮೀಸಲಾತಿ ಪ್ರಯೋಜನಗಳನ್ನು ಪಡೆಯಬೇಕೆಂಬ ಹಂಬಲ ಇರುವ ಕುರುಬ ಜಾತಿಗೆ ಅನ್ವಯಿಸುತ್ತದೆ. ಆದರೆ ಅವರ ಕಷ್ಟಗಳು ಹೆಚ್ಚೆಂದರೆ ಕಾಲ್ಪನಿಕವಾದವು. ಇಲ್ಲಿ ಹೆಚ್ಚು ವಿಷಾದವನ್ನುಂಟುಮಾಡುತ್ತಿರುವ ವಿಚಾರವೆಂದರೆ, ವಿದ್ಯಾವಂತ ವರ್ಗವೇ ಎಸ್.ಟಿ. ಹಣೆಪಟ್ಟಿಗಾಗಿ ಹಾತೊರೆಯುತ್ತಿರುವುದು. ಅನಕ್ಷರಸ್ಥರು ಮತ್ತು ಕೇವಲ ಅಕ್ಷರಸ್ಥರು, ಸರಕಾರವು ತಮಗೆ ವಿವಿಧ ಆರ್ಥಿಕ ಲಾಭಗಳನ್ನು ಮಾಡಿಕೊಟ್ಟು ನೆರವಾಗಬೇಕೆಂದು ಬಯಸುತ್ತಾರೆ.

ಎರಡನೆಯ ಅರ್ಥವಾದ ತಪ್ಪುದಾರಿಗೆಳೆಯುವ ಆಶ್ವಾಸನೆ ಎನ್ನುವುದು ಕುರುಬ-ಬುಡಕಟ್ಟು ವರ್ಗಕ್ಕೆ ಹೆಚ್ಚು ಸಂಗತವಾಗುತ್ತದೆ. ಸರಕಾರಿ ಅಧಿಕಾರಿಗಳು ಬುಡಕಟ್ಟು ಜನರನ್ನು ತಪ್ಪುದಾರಿಗೆಳೆದಿರುವ ಬೇಕಾದಷ್ಟು ನಿದರ್ಶನಗಳನ್ನು ಕೊಡಬಹುದು. ಹೊರೆ ಹೊರೆ ಆಶ್ವಾಸನೆಗಳು ಈಡೇರದೆಯೇ ಉಳಿಯುತ್ತವೆ. ಅದು ನೆಲದ ಹಂಚಿಕೆಯಾಗಬಹುದು, ನೆಲೆ ತಪ್ಪಿದ ಆದಿವಾಸಿಗಳಿಗೆ ಪುನರ್ವಸತಿ ಕಲ್ಪಿಸುವ ವಿಚಾರವಿರಬಹುದು, ಬುಡಕಟ್ಟು ಪ್ರದೇಶಗಳಲ್ಲಿ ಪಾನನಿಷೇಧವಿರಬಹುದು. ಈ ಯಾವ ಭರವಸೆಯೂ ಈಡೇರದೆಯೇ ಉಳಿಯುತ್ತದೆ. ಅವರಿಗೆ ಅಲ್ಪಸ್ವಲ್ಪ ಪ್ರಯೋಜನಗಳೇನಾದರೂ ತಲುಪಿದರೆ, ಅದಕ್ಕೆ ಅವರ ನಡುವೆ ಕೆಲಸ ಮಾಡುತ್ತಿರುವ ಕೆಲವು ಎನ್.ಜಿ.ಓ.ಗಳ ಆಸಕ್ತಿ ಮತ್ತು ಪರಿಶ್ರಮ ಕಾರಣ. ಎರಡೂ ಸಂದರ್ಭಗಳಲ್ಲಿ ಅದು ಅತ್ಯಂತ ಅರ್ಹರಾಗಿರುವ ಜನರೆಂಬ ಗೂಳಿಗಳ ಎದುರು ನಿಲ್ಲಿಸಿದ ಗುಮ್ಮವಾಗಿ ಪರಿಣಮಿಸಿವೆ.

---

* Caste : its Twentieth century Avatar, 1996, Srinivas (Ed) see P. 203-220

* * *

ಅಧ್ಯಾಯ : ಎರಡು

# ಜಾತಿ - ಬುಡಕಟ್ಟು ಲಕ್ಷಣಗಳು ಹಾಗೂ ಭಾರತೀಯ ಸಾಮಾಜಿಕ ರಚನೆ

ಜಾತಿ-ಮತ್ತು ಬುಡಕಟ್ಟುಗಳ ನಡುವೆ ಅಂತರ್-ಕ್ರಿಯೆ ಹಾಗೂ ಅಂತರ್-ಸಂಬಂಧ ಇವುಗಳ ಅಧ್ಯಯನವು ಈ ಅಧ್ಯಾಯದ ಕಾಳಜಿಯಾಗಿದೆ. ಆದ್ದರಿಂದ ಈ ವಿಷಯವನ್ನು ದೇಶ-ಕಾಲ ಮಾನಕಗಳಿಂದ ವಿವರವಾಗಿ ಪರಿಶೀಲಿಸುವುದು ಅಗತ್ಯವಾಗಿದೆ. ಚರಿತ್ರಪೂರ್ವ ಕಾಲದಲ್ಲಿ ಬಹುಶಃ ಇಡೀ ಉಪಖಂಡವು ದೇಶದ ಬೇರೆ ಬೇರೆ ಭಾಗಗಳಲ್ಲಿ ನೆಲೆಸಿದ ಆದಿವಾಸಿ ಸಮುದಾಯಗಳಿಂದ ತುಂಬಿದ್ದಿತು. ಆದರೆ ಇತಿಹಾಸಕಾಲದ ಉದಯದಿಂದ, ಪರಕೀಯರು ಅನೇಕ ಧಾಳಿಗಳನ್ನು ಮಾಡಿದರು, ಕ್ರಮೇಣ ಅವರು ಇಲ್ಲಿ ವಸಾಹತು ಮಾಡಿಕೊಂಡು ನೆಲೆಸಿ, ನೆಲೆಗೊಂಡ ಬದುಕನ್ನು ನಡೆಸತೊಡಗಿದರು; ಅನೇಕ ಮೂಲ ಬುಡಕಟ್ಟು ಪಂಗಡಗಳು ಅಕ್ಕಪಕ್ಕದ ಪ್ರದೇಶಗಳಲ್ಲಿ ವಸಾಹತುಗಾರರಿಗೆ ಸಿಕ್ಕಿಕೊಳ್ಳದ ಹಾಗೆ ಹರಡಿಕೊಂಡರು ಇಲ್ಲವೇ, ನಿಧಾನವಾಗಿ ಅವರಲ್ಲಿ ವಿಲೀನಗೊಂಡರು. ಮೊದಮೊದಲು ಅವರನ್ನು ದಾಸರನ್ನಾಗಿ-ಗುಲಾಮರನ್ನಾಗಿ ಪರಿಗಣಿಸಲಾಗುತ್ತಿತ್ತು.

ಮೌಖಿಕ ಸಂಪ್ರದಾಯಗಳು ಉಳಿದುಕೊಂಡಿದ್ದರೂ, ಭಾರತವು ಒಂದು ಅಕ್ಷರಸ್ಥ ಸಮಾಜವಾಗಿಯೇ ಬಂದಿದೆ. ಆದರಲ್ಲಿಯೇ ಗಣನೀಯ ಪ್ರಮಾಣದಲ್ಲಿ ಅಕ್ಷರ-ಪೂರ್ವ ಸ್ಥಿತಿಯ ಕೆಲವು ಪಂಗಡಗಳೂ ಇದ್ದುವು. ಈ ಅಕ್ಷರ-ಪೂರ್ವ ಪಂಗಡಗಳೇ ಹಲವು ಶತಮಾನಗಳಲ್ಲಿ ಬುಡಕಟ್ಟುಗಳಾಗಿ ರೂಪುಗೊಂಡುವು. ಸಾಮಾನ್ಯವಾಗಿ ಬುಡಕಟ್ಟು ಜನರು ನಾಗರಿಕ ಜಗತ್ತು ಎನಿಸಿಕೊಳ್ಳುವುದರಿಂದ ದೂರವಾಗಿ ಪ್ರತ್ಯೇಕವಾಗಿ ಇರಲು ಬಯಸಿದರು. ಸಮೀಪದ ಅರಣ್ಯ ಪ್ರದೇಶಗಳಲ್ಲಿ, ಅಥವಾ ಅವುಗಳ ಬಳಿ, ಬೆಟ್ಟ ಪ್ರದೇಶಗಳಲ್ಲಿ ವಾಸವಾಗಿದ್ದಾರೆ, ಅಲ್ಲಿಯೇ ಮುಂದುವರಿಯ ಬಯಸುತ್ತಾರೆ. ತಮ್ಮದೇ ವಿಶಿಷ್ಟವಾದ ಸಾಮಾಜಿಕ ವಿನ್ಯಾಸ, ಆರ್ಥಿಕ ಚಟುವಟಿಕೆಗಳು, ರಾಜಕೀಯ ಸಂಘಟನೆ, ಧಾರ್ಮಿಕ ನಂಬಿಕೆಗಳು, ಆಚರಣೆಗಳು, ರೂಢಿ-ಸಂಪ್ರದಾಯಗಳು, ಅವರದೇ ಒಂದು ನ್ಯಾಯಾಂಗ ಪ್ರಕ್ರಿಯೆ ಇವುಗಳನ್ನು ಅವರು ಹೊಂದಿದ್ದಾರೆ.

ಹಲವು ಶತಮಾನಗಳಿಂದ ಕೆಲವು ಬುಡಕಟ್ಟು ಪಂಗಡಗಳು ಜಾತಿಯ ಮುಸುಕುಧರಿಸಿದ್ದರೂ, ಸಾಮಾನ್ಯವಾಗಿ ಜಾತಿಯಿಂದ ಬುಡಕಟ್ಟನ್ನು ಬೇರೆಯಾಗಿ ಗುರುತಿಸಲು ಈ ಲಕ್ಷಣಗಳು ಸಹಾಯ ಮಾಡುತ್ತವೆ. ಪ್ರಾಚೀನ ಭಾರತೀಯ (ಹಿಂದೂ) ಪರಂಪರೆಯಲ್ಲಿ ಸಾಕ್ಷರತಾ ಸಂಪ್ರದಾಯಗಳು ಒಂದು ಸಣ್ಣ ಜನವರ್ಗದ ಏಕಸ್ವಾಮ್ಯವಾಗಿದ್ದುವು ಎಂಬುದು ನಿಜ. ಯಾರು ಯಾವ ಬಗೆಯ ಶಿಕ್ಷಣವನ್ನು ಎಷ್ಟು ಪಡೆಯಬೇಕು ಎನ್ನುವುದನ್ನು ಈ ಪಂಗಡವು ನಿರ್ಧರಿಸುತ್ತಿದ್ದಿತು; ಇನ್ನು ಮೌಖಿಕ ಸಂಪ್ರದಾಯಗಳಲ್ಲಿ ಗೋಪ್ಯತೆ ಪ್ರಧಾನವಾಗಿದ್ದಿತು. ಭಾರತೀಯ ಹಿಂದುಗಳಲ್ಲಿ ಬಹುಜನರಿಗೆ ವಿದ್ಯಾಭ್ಯಾಸವು ಎಟಕುತ್ತಿರಲಿಲ್ಲ, ಆದ್ದರಿಂದ ಜ್ಞಾನ ಸಂಪಾದನೆ ಅವರ ಅಳವಿಗೆ ಮೀರಿದ್ದಿತು. ಹೀಗೆ ಜ್ಞಾನವನ್ನು ಸಂಗ್ರಹಿಸಿಟ್ಟುಕೊಳ್ಳುವುದು ಒಂದು ರೂಢಿಯೇ ಆಗಿತ್ತು. ಜಾಗರೂಕತೆಯಿಂದ ಕಾಯುತ್ತಿದ್ದ ರಹಸ್ಯವಾಗಿದ್ದಿತು. ಆದರೂ ದೈಹಿಕ ಮತ್ತು ನೈತಿಕ ಬೆದರಿಕೆಗಳಿಗೆ ಸಿಕ್ಕಿ ಜ್ಞಾನದಿಂದ ವಂಚಿತರಾದ ಬಹುತೇಕ ಜನರು ಮೇಲೆ ಹೇಳಿದ, ಸಾಕ್ಷರತಾ-ಪೂರ್ವ ಸಮಾಜಕ್ಕೆ ಸೇರುವುದಿಲ್ಲ. ಏಕೆಂದರೆ ಅವರು ವಿದ್ಯಾವಂತ ಸಮಾಜದ ಭಾಗವೇ ಆಗಿದ್ದರು, ಸಕಲ ನಿಯಮ ನಿಬಂಧನೆಗಳು, ನಡವಳಿಕೆಯ ಸಂಹಿತೆ, ನ್ಯಾಯಾಂಗ ಪ್ರಕ್ರಿಯೆ ಇವೆಲ್ಲ ಅವರಿಗೂ ಅನ್ವಯವಾಗುತ್ತಿದ್ದುವು. ಬುಡಕಟ್ಟು ಜನರಂತಲ್ಲದೆ, ಜಾತಿ ಪಂಗಡಗಳು ಸಮಾಜದ ಮೇಲುವರ್ಗವು ವಿವರಿಸಿದ ಮತ್ತು ಅನ್ವಯಿಸಿದ ಲಿಖಿತ ಮತ್ತು ಅಲಿಖಿತ ಆಚಾರ ಸಂಹಿತೆಗೆ ಬದ್ಧರಾಗಿದ್ದರು. ಕ್ರಮೇಣ ಗಡಸುತನ ಕಾಣಿಸಿಕೊಂಡಿತು, ಮತ್ತು ಅದು ಶ್ರೇಣೀಕೃತ ಅತೀತತೆ-ಅಧೀನತೆಗಳ ಸಂಬಂಧಗಳಾಗಿ ಪರಾಕಾಷ್ಠೆ ಮುಟ್ಟಿತು. ಇದಕ್ಕೆ ವ್ಯತಿರಿಕ್ತವಾಗಿ ಬುಡಕಟ್ಟು ಸಮಾಜವು ಕಟ್ಟುನಿಟ್ಟಾದ ನಿಯಮ ನಿಬಂಧನೆಗಳ ಹಿಡಿತದಿಂದ ಹೊರಗೆ ಉಳಿದುಕೊಂಡುದು ಮಾತ್ರವಲ್ಲ, ಅನೇಕ ಸಂದರ್ಭಗಳಲ್ಲಿ ಸಮಾನತಾ ಮೌಲ್ಯಗಳಿಂದ ಕೂಡಿದ್ದು, ಜಾತಿಪದ್ಧತಿಯ ಸಂಸ್ಥೆಗಳು ಮತ್ತು ಆಚರಣೆಗಳಿಗಿಂತ ಪ್ರತ್ಯೇಕವಾದ ಸ್ಪಷ್ಟವಾದ ಲಕ್ಷಣವನ್ನು ಪಡೆದಿದ್ದಿತು. ಹಲವು ಶತಮಾನಗಳುದ್ದಕ್ಕೂ ಜಾತಿ ಮತ್ತು ಬುಡಕಟ್ಟು ಇವುಗಳ ಒಂದು ಬಗೆಯ ಮಿಶ್ರಣವು ಜೊತೆಜೊತೆಗೇ ಇದ್ದುದು ಕಂಡು ಬಂದಿದೆ. ಇಲ್ಲಿ ಸಾಮಾನ್ಯವಾಗಿ ಬುಡಕಟ್ಟುಗಳು ಸ್ವೀಕರಿಸುವ ಪಕ್ಷದಲ್ಲಿವೆ. ಆದರೆ ಕೆಲವು ಸಂದರ್ಭಗಳಲ್ಲಿ ಅವು ಜಾತಿಯ ಲಕ್ಷಣಗಳನ್ನು ಪಡೆದು ಅರಗಿಸಿಕೊಂಡಿವೆ. ಈ ಪ್ರಕ್ರಿಯೆಯ ಹೆಚ್ಚಿನ ವಿವರಗಳು ಮುಂದೆ ಬರುತ್ತವೆ.

ಭಾರತೀಯ ಇತಿಹಾಸದ ಈ ಹಂತದಲ್ಲಿ ಹಿಂದೂ ಸಮಾಜವು ಸಂದಿಗ್ಧ ಸ್ಥಿತಿಯಲ್ಲಿದ್ದು ವಿರುದ್ಧ-ಉದ್ದೇಶಗಳಿಗಾಗಿ ವರ್ತಿಸುತ್ತಿರುವಂತೆ ತೋರುತ್ತದೆ. ಕೆಲವೊಮ್ಮೆ ಅದು ಪ್ರತ್ಯೇಕವೂ ಭಿನ್ನವೂ ಆದ ಲಕ್ಷಣಗಳನ್ನು ಒತ್ತಿ ಹೇಳಿದರೆ, ಮತ್ತೆ ಕೆಲವೊಮ್ಮೆ ಭಿನ್ನವೈಶಿಷ್ಟ್ಯಗಳನ್ನು ತನ್ನದೇ ಎಂಬಂತೆ ಅಂತರ್ಗತಗೊಳಿಸಿಕೊಂಡು, ಮುಂದೆ ಇತರ ಪಂಗಡಗಳೊಂದಿಗೆ ವಿಲೀನಗೊಂಡಿತು, ಲೀನಗೊಳಿಸಿಕೊಂಡಿತು. ಐತಿಹಾಸಿಕವಾಗಿ ಭಾರತೀಯ ಸಮಾಜವು, ವಿಶೇಷವಾಗಿ ಅದರ ಸಾಮಾಜಿಕ/ಕುಲ ಪಂಗಡಗಳು ಬೆಳವಣಿಗೆಯ ದಾರಿಯಲ್ಲಿ ಬೇರೆ

ಬೇರೆ ಹಂತಗಳನ್ನು ಹಾದು ಬಂದಿದೆ. ಆದರೆ ಅದು ಒಂದು ಸರಳರೇಖೆಯಲ್ಲ, ವಕ್ರಗತಿ. ಅಲ್ಲಿ ಕೊನೆಯ ಪಕ್ಷ ಕೆಲವು ಸಾಮಾಜಿಕ ಪಂಗಡಗಳ ಅದೃಷ್ಟವು, ಅರಸರ ಹುಚ್ಚು ಖಯಾಲಿಗಳನ್ನಲ್ಲವಾದರೂ ಅವರ ಪಾತ್ರವನ್ನು ಅವಲಂಬಿಸಿದ್ದಿತು.

ಇಲ್ಲಿ ಹಿಂದೂ ಸಮಾಜದ ಸಾಮಾಜಿಕ ವಿಕಾಸವನ್ನು ವಿವರವಾಗಿ ಪರಿಶೀಲಿಸುವುದು ನನ್ನ ಉದ್ದೇಶವಲ್ಲ. ಮುಖ್ಯವಾದ ಹಂತಗಳನ್ನು ಮಾತ್ರ ನೆನಪಿಗೆ ತಂದುಕೊಳ್ಳಲು ಪ್ರಯತ್ನಿಸಲಾಗಿದೆ. ವೇದಯುಗದಲ್ಲಿ ಜಾತಿ ಆಧಾರದ ಮೇಲೆ ಸಾಮಾಜಿಕ ಪಂಗಡಗಳ ಕಟ್ಟುನಿಟ್ಟಾದ ವರ್ಗೀಕರಣವಿರಲಿಲ್ಲ ಎಂದು ಹೇಳಲಾಗಿದೆ. ಸಮಾಜದ ವಿಭಾಗಗಳು ಪರಸ್ಪರ ಸಂಬಂಧವೇ ಇಲ್ಲದ ಗೂಡುಗಳಾಗಿರಲಿಲ್ಲ. ವರ್ಣ ವಿಭಜನೆಯಲ್ಲಿ ಸ್ವಲ್ಪಮಟ್ಟಿನ ಸಾಮ್ಯತೆ ಇದ್ದಿತು. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಈ ನಾಲ್ಕು ವರ್ಣಗಳು ವೃತ್ತಿ ಸಂಬಂಧವಾದ ವರ್ಗಗಳಾಗಿದ್ದು, ಸೂಕ್ತವಾದ ಗುಣವನ್ನು ಆಧಾರವಾಗಿ ಹೊಂದಿದ್ದುವು. ಒಂದು ವರ್ಣಕ್ಕೆ ಸೇರಿದ್ದರೂ ಬೇರೊಂದು ವರ್ಣಕ್ಕೆ ಉಚಿತವಾದ ಗುಣಗಳನ್ನು ಹೊಂದಿರುವ ವ್ಯಕ್ತಿಯು ಸುಲಭವಾಗಿ ಆ ವರ್ಣಕ್ಕೆ ಸೇರಿಕೊಂಡು ಬಿಡಬಹುದಾಗಿತ್ತು. ಹಾಗಾಗಿ ಅದು ಕಟ್ಟುನಿಟ್ಟಾದ ಗಡಿಗಳಿಲ್ಲದ, ಸಡಿಲವಾದ ಒಂದು ವ್ಯವಸ್ಥೆಯಾಗಿತ್ತು; ಜನರು ಅಂತರ-ವರ್ಣ ಚಲನೆಯನ್ನು ಕೈಗೊಳ್ಳಲು ಅವಕಾಶವನ್ನು ಒದಗಿಸಿದ್ದಿತು.

ಒಬ್ಬ ವಿದ್ವಾಂಸ, ಒಬ್ಬ ಆಳುವವನು, ಒಬ್ಬ ವ್ಯಾಪಾರಿ ಅಥವಾ ಕೃಷಿಕ, ಹಾಗೂ ಈ ಮೂವರಿಗೂ ಸೇವೆಸಲ್ಲಿಸುವರೆಂದು ಉದ್ದೇಶಿಸಿದ ಶೂದ್ರ ಪಂಗಡದ ವ್ಯಕ್ತಿ ಇವರು ಒಂದು ಶ್ರೇಣೀಕೃತ ವ್ಯವಸ್ಥೆಯಾಗಿರಲಿಲ್ಲ. ಅಥವಾ ಪ್ರಧಾನ ಅಧೀನ, ಮೇಲು-ಕೀಳು ಪಂಗಡಗಳ ವ್ಯವಸ್ಥೆಯಾಗಿರಲಿಲ್ಲ. ಈ ಪರಿಸ್ಥಿತಿ ಬಹಳ ಕಾಲ ಮುಂದುವರಿಯುವಂತಿರಲಿಲ್ಲ. ಏಕೆಂದರೆ ಸಮಾನ ಲಕ್ಷಣಗಳನ್ನು ಗುರುತಿಸಿ ಒತ್ತಿ ಹೇಳುವುದಕ್ಕಿಂತಲೂ ವ್ಯತ್ಯಾಸಗಳನ್ನು ಗುರುತಿಸಿ ಅದನ್ನು ಉಪಯೋಗಿಸಿಕೊಳ್ಳುವುದೇ ಮಾನವ ಸ್ವಭಾವ. ಋಗ್ವೇದದಲ್ಲೇ ಜಾತಿ ವಿನ್ಯಾಸವು ರೂಪುಗೊಳ್ಳುತ್ತಿದ್ದುದರ ಉಲ್ಲೇಖವಿದೆ. ಐದನೆಯ ವರ್ಣವಾದ ಪಂಚಮರು - ಅಸ್ಪೃಶ್ಯರ ಮೂಲಪುರುಷರು ಅಥವಾ ಸಂವಿಧಾನದಲ್ಲಿ ಅದು ಅಂಗೀಕೃತವಾದಾಗ ನಿರೂಪಿಸಿದಂತೆ ಸಮಕಾಲೀನ ಪರಿಶಿಷ್ಟ ಜಾತಿಗಳು ಅಲ್ಲಿ ಉಲ್ಲೇಖಿತರಾಗಿದ್ದಾರೆ. ಕಾಲ ಕಾಲಕ್ಕೆ ಅನೇಕ ಪಂಗಡಗಳನ್ನು ಸೇರಿಸಲಾಗಿದೆ. ಏಕೆಂದರೆ ಅದರಿಂದ ಅವರಿಗೆ ಹಲವಾರು ಸಾಂವಿಧಾನಿಕ ಪ್ರಯೋಜನಗಳು ದೊರಕುತ್ತವೆ. ವಿಶೇಷವಾಗಿ, ಆರ್ಥಿಕ ಅನುಕೂಲಗಳು, ಶಿಕ್ಷಣ, ಉದ್ಯೋಗ, ಇತರ ರಾಜಕೀಯ ಮೀಸಲಾತಿಗಳು ಇಂಥವು. ಪರಿಶಿಷ್ಟ ಜಾತಿಗಳ ಬಣ್ಣವೂ ಒಳ ವಸ್ತುವೂ ಈಗ ಬದಲಾಗಿವೆ. ರಾಜಕೀಯವಾಗಿ ಪ್ರಭಾವ ಬೀರಬಲ್ಲ ಯಾವುದೇ ಪಂಗಡವು ಈಗ ಪರಿಶಿಷ್ಟ ಜಾತಿ ಎಂದು ಪಟ್ಟಿಕೆಯನ್ನು ಪಡೆದುಕೊಳ್ಳಬಹುದಾಗಿದೆ. ಪರಿಶಿಷ್ಟ ಬುಡಕಟ್ಟುಗಳ (ಎಸ್.ಟಿ) ವಿಷಯದಲ್ಲೂ ಇದೇ ಪ್ರಕ್ರಿಯೆ ಈಗ ಕಾರ್ಯೋನ್ಮುಖವಾಗಿದೆ. ಈ ಎರಡೂ ವರ್ಗಗಳನ್ನು ಪಟ್ಟಭದ್ರ ಹಿತಾಸಕ್ತಿಗಳು ದುರುಪಯೋಗಪಡಿಸಿಕೊಂಡಿವೆ, ಕೆಟ್ಟದಾಗಿ ಬಳಸಿಕೊಂಡಿವೆ. ಈ ಸಂಬಂಧವಾದ ವಿವರಗಳ ಮೇಲೆ ಮುಂದೆ ಬೆಳಕು ಹಾಯಿಸಲಾಗುತ್ತದೆ.

ಸಕಲ ಸಜ್ಜಿಕೆಗಳು, ಕಟ್ಟುನಿಟ್ಟಾದ ನಿಯಮಗಳು ಮತ್ತು ಶ್ರೇಣೀಕೃತ ವ್ಯವಸ್ಥೆ, ಜಾತಿಗಳ ಕ್ರೋಡೀಕರಣ - ಇವು ಉಪನಿಷತ್ತುಗಳ ನಂತರದ ಘಟನೆಗಳು. ಗುಪ್ತ ವಂಶದ ಆಳ್ವಿಕೆಯಲ್ಲಿ ಹಿಂದೂ ಧರ್ಮದ ಪುನರುಜ್ಜೀವನದಿಂದಾಗಿ, ಅಂತರ-ಕ್ರಿಯೆ ಮತ್ತು ಅಂತರ - ವೈಯಕ್ತಿಕ ನಡವಳಿಕೆಗಳನ್ನು ವ್ಯವಸ್ಥೆಗೊಳಿಸಿದ ಹಲವು ಧರ್ಮಶಾಸ್ತ್ರಕಾರರು ಕಾಣಿಸಿಕೊಂಡರು. ವಿಶೇಷವಾಗಿ ಮನುವಿನ ಕೃತಿಗಳಲ್ಲಿ ಇವನ್ನು ನೋಡಬಹುದು. 'ಜಾತಿ'ಯು ಹಿಂದೂ ಸಮಾಜದಲ್ಲಿ ಶಿಖರ ಸ್ಥಿತಿಯನ್ನು ಪಡೆಯಿತು. ಗುಣ ಮತ್ತು ಕರ್ಮಗಳ ಸ್ಥಾನದಲ್ಲಿ ಜನ್ಮವು ಬಂದಿತು. ಒಂದು ಜಾತಿಯಲ್ಲಿ ಹುಟ್ಟುವುದೇ ಮುಖ್ಯ. ಬೇರೆ ಯಾವುದೂ ಮುಖ್ಯವಾಗಲಿಲ್ಲ. ಪ್ರಾಪಂಚಿಕ ಬದುಕನ್ನು ತೊರೆದು ಸನ್ಯಾಸಿಯಾದ ಹೊರತು, ಒಬ್ಬನ ಜಾತಿ ಸ್ಥಾನಮಾನವನ್ನು ತೆಗೆದು ಹಾಕಲು ಬೇರೆ ದಾರಿಯೇ ಇಲ್ಲವೆಂದಂತಾಯಿತು. ಆದರೆ ಜನರ ಎಲ್ಲಾ ಪಂಗಡಗಳಿಗೂ/ವರ್ಗಗಳಿಗೂ ಈ ಆಯ್ಕೆ ಇರಲಿಲ್ಲ. ಇಷ್ಟೊಂದು ಕಟ್ಟುಪಾಡುಗಳಿದ್ದರೂ ಈಗ ಅನೇಕ ಪ್ರಯೋಗವಾದಿ ಅಧ್ಯಯನಗಳು ಆ ಚಲನೆಯನ್ನು ಸ್ಥಿರಪಡಿಸಿವೆ. ವಿಶೇಷವಾಗಿ, ಜಾತಿಪದ್ಧತಿಯೊಳಗೇ ಅನೇಕ ಗುಂಪು ಚಲನೆಗಳು ಕಂಡುಬಂದಿವೆ. (ಎಂ.ಎನ್. ಶ್ರೀನಿವಾಸ್)* ಇದು ಬಯಸುವವರಿಗೆ ಆಗಾಗ ತಮಗಾಗಿ ರಚನೆಯಲ್ಲಿ ಉನ್ನತ ಸ್ಥಾನ ಪಡೆಯಲು ಅವಕಾಶಕೊಟ್ಟಿದೆ. ಅದಕ್ಕಾಗಿ ಅವರು ಕೆಲವು ಪೂರ್ವಾಗತ್ಯಗಳನ್ನು ಪೂರೈಸಬೇಕಾಗಿರುತ್ತದೆ.

ಕಟ್ಟುನಿಟ್ಟಾದ ಜಾತಿ ಪದ್ಧತಿಯು, ಮುಸ್ಲಿಂಧಾಳಿಗಳು ಮತ್ತು ದೇಶದಲ್ಲಿ ಇಸ್ಲಾಮಿಕ್ ಆಳ್ವಿಕೆಯಿದ್ದರೂ ಮಧ್ಯಯುಗದ ಪೂರ್ತಿ ಹಾಗೆಯೇ ಮುಂದುವರಿಯಿತು. ಹಿಂದೂಧರ್ಮಕ್ಕೆ ಒಂದು ಬದಲಿಯೆನಿಸಿದ ಇಸ್ಲಾಂ ಒಂದು ಧಾರ್ಮಿಕ ಶಕ್ತಿಯಾಗಿ ನಿಂತಿತು. ಅದು ಅನೇಕ ಕೆಳಜಾತಿಗಳಿಗೆ ತಾತ್ಕಾಲಿಕ ಪರಿಹಾರವನ್ನು ನೀಡಿತು. ಅವರು ಆಳುವವರ ಬಲಾತ್ಕಾರದಿಂದಲೋ ಸ್ವಂತ ಇಚ್ಛೆಯಿಂದಲೋ ಇಸ್ಲಾಮಿಕ್ ಧರ್ಮವನ್ನು ಅವಲಂಬಿಸಿದರು. ಆದರೂ ಜಾತಿ ಪದ್ಧತಿಯ ಕೆಡುಕುಗಳನ್ನು ನಿರ್ಮೂಲಗೊಳಿಸುವುದರಲ್ಲಿ ಇಸ್ಲಾಂ ಧರ್ಮವೂ ವಿಫಲವಾಯಿತು. ಹಿಂದೂ ಜಾತಿಗಳಿಂದ ಇಸ್ಲಾಮಿಗೆ ಪರಿವರ್ತಿತರಾದವರು ಸಹಜವಾಗಿಯೇ ತಾವು ಅನೇಕ ಪೀಳಿಗೆಗಳಿಂದ ಪಾಲಿಸಿಕೊಂಡು ಬಂದಿದ್ದ ಮೌಲ್ಯಗಳು, ಆಚರಣೆಗಳು ಮತ್ತು ಸಂಪ್ರದಾಯಗಳನ್ನು ತಮ್ಮ ಜೊತೆಯಲ್ಲಿ ತೆಗೆದುಕೊಂಡೇ ಹೋದರು. ಹಿಂದುಗಳು ಕೆಲವು ಆಂತರಿಕ ಸಾಂಸ್ಥಿಕ ಬದಲಾವಣೆಗಳನ್ನು ಮಾಡುವುದರ ಮೂಲಕ, ಇಸ್ಲಾಂ ಒಡ್ಡಿದ ಸವಾಲುಗಳಿಗೆ ಪ್ರತಿಕ್ರಿಯೆ ತೋರಿಸಿದರು. ಹಿಂದೂ ಮಹಿಳೆಯರ 'ಗೌರವ' ವನ್ನು ಕಾಪಾಡಲು ಮತ್ತು ಜಾತಿಯ ಸ್ಥಾನಮಾನವನ್ನು ಉಳಿಸಲು ಬಹುಶಃ ಈ ಅವಧಿಯಲ್ಲಿ 'ಪರ್ದಾ' ಮತ್ತು 'ಸತಿ' ಪದ್ಧತಿಗಳು ಜಾರಿಗೆ ಬಂದುವು. ಮೇಲು ಜಾತಿಗಳು ನೂತನ ಪದ್ಧತಿಗಳನ್ನು ಅಳವಡಿಸಿಕೊಳ್ಳುವುದು ಸಂಗತವಾದ ಪ್ರಕ್ರಿಯೆಯಾಯಿತು.

ಹಾಗೆಯೇ ಇಸ್ಲಾಮಿಕ್-ನಂತರದ ಕಾಲದಲ್ಲಿ ಕ್ರೈಸ್ತ ಧರ್ಮವೂ ಬ್ರಿಟಿಷ್ ಆಳ್ವಿಕೆಯೂ ಬಂದಾಗ ಜಾತಿ ರಚನೆಯಲ್ಲಿ ಮುಖ್ಯವಾದ ಪರಿವರ್ತನೆ ಏನೂ ಆಗಲಿಲ್ಲ. ಇಲ್ಲಿಯೂ ಕೆಳಜಾತಿಯ ಜನರು ಹಿಂದೂ ಧರ್ಮದಲ್ಲಿ ಜಾತಿಯೊಂದಿಗೆ ತಮಗೆ ಅಂಟಿಕೊಂಡಿದ್ದ ಕಳಂಕವನ್ನೂ ಹೀನಾಯವನ್ನೂ ತಪ್ಪಿಸಿಕೊಳ್ಳಲು ಕ್ರೈಸ್ತ ಧರ್ಮಕ್ಕೆ ಮತಾಂತರಗೊಂಡರು.

ಅಪಾರ ಸಂಖ್ಯೆಯ ಬಹುತೇಕ ಕ್ರಿಶ್ಚಿಯನ್ನರು ಕ್ಯಾಥೋಲಿಕರು ಮತ್ತು ಕ್ಯಾಥೋಲಿಕ್ ಧರ್ಮವು ಎಂದೂ ಕ್ರಾಂತಿಕಾರಕವಾಗಿರಲಿಲ್ಲ. ಅದು ಹಿಂದೂಧರ್ಮದ ಅನೇಕ ಲಕ್ಷಣಗಳನ್ನು ಒಪ್ಪಿಕೊಂಡು ಅಳವಡಿಸಿಕೊಂಡಿತು. ಮಾನವ ಜನಾಂಗದ ಸೌಭ್ರಾತೃತ್ವವನ್ನು ಹೇಳಿಕೊಳ್ಳುವ ಧರ್ಮಗಳಿಗೆ ಪರಿವರ್ತನೆಗೊಳ್ಳುವುದು ನೂತನ ಸತ್ವವನ್ನು ಮೂಡಿಸುವುದರಲ್ಲಿ ದುರದೃಷ್ಟವಶಾತ್, ವಿಫಲಗೊಂಡಿತು. ಅದಕ್ಕೆ ಪ್ರತಿಯಾಗಿ ಮತಾಂತರಗೊಂಡವರನ್ನು ಹಳೆಯ ಮೌಲ್ಯಗಳೇ ಕಾಡತೊಡಗಿದುವು. ಮತಾಂತರ-ಪೂರ್ವ ಜಾತಿ ಸ್ಥಾನಮಾನವೇ ಮುಂದುವರಿಯಿತು, ಇಂದು ದಲಿತ ಕ್ರಿಶ್ಚಿಯನ್ನರು ಎಸ್.ಸಿ. ಎಂಬ ಸ್ಥಾನಕ್ಕಾಗಿ ಒತ್ತಾಯ ಪಡಿಸುತ್ತಿರುವುದೇ ಅದಕ್ಕೆ ಜೀವಂತ ನಿದರ್ಶನವಾಗಿದೆ.

ಜಾತಿ ಪದ್ಧತಿಯ ಅನಿಷ್ಟಗಳನ್ನು ನಿರ್ಮೂಲಗೊಳಿಸಲು ಸಾಮಾಜಿಕ ಸುಧಾರಣೆಗಳಿಗಾಗಿ ಶ್ರಮಿಸಿದ ಅನೇಕ ದೇಶೀಯ ಚಳುವಳಿಗಳನ್ನು ನಾವು ಜೊತೆಜೊತೆಯಲ್ಲೇ ನೋಡಬಹುದು. ಬೌದ್ಧಧರ್ಮ, ಜೈನಧರ್ಮ, ಆರ್ಯಸಮಾಜ, ಬ್ರಹ್ಮಸಮಾಜ, ಕಬೀರ್ ಪಂಥ, ಸಿಖ್ ಧರ್ಮ-ಎಲ್ಲ ಉತ್ತರಭಾರತ ಮೂಲದ ಚಳುವಳಿಗಳು; ಹಾಗೆಯೇ 12ನೆಯ ಶತಮಾನದ, ಕರ್ನಾಟಕದ ವೀರಶೈವಧರ್ಮ ಇವೆಲ್ಲವೂ ಅಪೇಕ್ಷಿತ ಫಲವನ್ನು ನೀಡದಾದುವು. ಈ ಚಳುವಳಿಗಳು ಮೊದಲು ಹುಟ್ಟಿಸಿದ ಸುಖಭ್ರಾಂತಿಯು ಆಶಾಜನಕವಾಗಿದ್ದುದೇನೋ ಹೌದು. ಆದರೆ ವಾಸ್ತವದಲ್ಲಿ ಇದ್ದ ಸಾಮಾಜಿಕ ವ್ಯವಸ್ಥೆಗೆ ಇನ್ನಷ್ಟು ಸಮಸ್ಯೆಗಳನ್ನು ಅವು ಕೂಡಿಸಿದಂತಾಯಿತು ಅಷ್ಟೆ. ಜಾತಿ, ಉಪಜಾತಿಗಳ ಹರಡಿಕೆಗೆ ಅವು ಪೋಷಣೆ ನೀಡಿದವು. ಹಾಗಾಗಿ ಕೆಲವೊಮ್ಮೆ ನಾವು, ಈ ಚಳುವಳಿಗಳಿಲ್ಲದೆ ಹೋಗಿದ್ದರೆ ಇಂದು ದೇಶದಲ್ಲಿ ಇರುವುದಕ್ಕಿಂತ ಗಣನೀಯ ಕಡಿಮೆ ಸಂಖ್ಯೆಯಲ್ಲಿ ಜಾತಿಗಳು ಮತ್ತು ಉಪಜಾತಿಗಳು ಇರುತ್ತಿದ್ದುವು. ಇದಕ್ಕೆ ಉಜ್ವಲವಾದ ನಿದರ್ಶನ ಕರ್ನಾಟಕದ ವೀರಶೈವ ಚಳುವಳಿ ಇಂದು ವೀರಶೈವರಲ್ಲಿ ಅನೇಕಾನೇಕ ವೃತ್ತಿ ಪಂಗಡಗಳಿವೆ. ಅವೆಲ್ಲ ಬ್ರಾಹ್ಮಣೀಯ ಹಿಂದೂಧರ್ಮದಂತೆಯೇ ಬೇರೆಬೇರೆ ಜಾತಿಗಳು ಮತ್ತು ಉಪಜಾತಿಗಳಾಗಿವೆ. ಇವೆಲ್ಲಕ್ಕಿಂತ ಮೇಲಿನ ಮಟ್ಟದಲ್ಲಿ ಪುರೋಹಿತವರ್ಗವಿದೆ. ಜಗದ್ಗುರುಗಳು ಮತ್ತು ಮಠಗಳಿಗಿಂತಲೂ ಬೇರೆಯಾಗಿ ಅವು ಚಾಲ್ತಿಯಲ್ಲಿವೆ. ಜಂಗಮರಲ್ಲಿಯೇ ಜಾತಿಗಳು ಮತ್ತು ಉಪಜಾತಿಗಳು ಇದ್ದು, ಅಂತರ್ ಪ್ರವರ್ತಕ ನಿಯಮಗಳು ಹಾಗೂ ಸಾಂಪ್ರದಾಯಿಕವಾದ ಸ್ಥಾನ ಲಕ್ಷಣಗಳು ಕಂಡುಬರುತ್ತವೆ.

ಇಸ್ಲಾಂಧರ್ಮ, ಕ್ರೈಸ್ತಧರ್ಮ, ಅನೇಕ ದೇಶೀಯ ಪ್ರಯತ್ನಗಳು ಇವೆಲ್ಲ ಭಾರತೀಯ ಸಮಾಜ ವ್ಯವಸ್ಥೆಯನ್ನು ಜಟಿಲತರವೂ ಅತ್ಯಂತ ಗೋಜಲಾದುದೂ ಆಗುವಂತೆ ಮಾಡುವುದರಲ್ಲಿ ಶಿಖರವನ್ನು ಮುಟ್ಟಿದುವು. ಇದಕ್ಕೆ ವ್ಯತಿರಿಕ್ತವಾಗಿ, ಶೂದ್ರವರ್ಣಕ್ಕಿಂತ ಕೆಳಗಿನ ಅಸ್ಪೃಶ್ಯ ವರ್ಗಗಳ ಹಾಗೂ ಬುಡಕಟ್ಟುಗಳ ದಯನೀಯ ಸ್ಥಿತಿಯು ಹಾಗೆಯೇ ಮುಂದುವರಿಯಿತು, ಅವರ ಬಗೆಗೆ ಅದೇ ವಿರುದ್ಧ ಪಕ್ಷಪಾತ ಇನ್ನೂ ಬೆಳೆಯಿತು, ಆದ್ದರಿಂದ ಅವರು ಅತ್ಯಂತ ದುಷ್ಪರಿಣಾಮಕ್ಕೊಳಗಾದರು. ನಮಗೆ ತಿಳಿದುಬಂದಿರುವ

ಇತಿಹಾಸಕಾಲದುದ್ದಕ್ಕೂ ಅಸ್ಪೃಶ್ಯರು ಅತಿ ಹೆಚ್ಚು ಪ್ರತ್ಯೇಕಿತರಾಗಿ, ಎಲ್ಲಾ ಬಗೆಯ ಶೋಷಣೆಗೆ, ವಂಚನೆಗೆ ಮತ್ತು ಮೇಲುಜಾತಿಗಳಿಂದ ಹೀನಾಯಕರವಾದ ವ್ಯವಹರಣೆಗೆ ಒಳಪಟ್ಟಿದ್ದಾರೆ. ಹಾಗಾಗಿ ಮೇಲು ಮತ್ತುಕೆಳಜಾತಿಗಳನ್ನು ಪ್ರತ್ಯೇಕಿಸುವ ಸಾಂಪ್ರದಾಯಿಕ ಲಕ್ಷಣಗಳು ಇಲ್ಲಿ ಇಡಿಯಾಗಿ ಅನ್ವಯಗೊಂಡಿತು. ಸಾಮಾಜಿಕ ಮತ್ತು ದೇಶೀಯ ದೂರವನ್ನು ಜಾರಿಗೆ ತರಲಾಯಿತು. ಆರ್ಥಿಕ ಪರಾವಲಂಬನೆ, ಕೆಳಜಾತಿಗಳ ರಾಜಕೀಯ ಪರಾಧೀನತೆಗಳು ಗಾದೆಮಾತಾದುವು. ಪ್ರತ್ಯೇಕಿತ ಜೀವನದ ಪರಿಸ್ಥಿತಿಯ ಜೊತೆಗೆ, ಶಿಕ್ಷಣ ಹಾಗೂ ಜ್ಞಾನ ಸಂಪಾದನೆಗಳ ಮೇಲೆ ನಿಷೇಧ ಇವು ಅವರ ದುಃಖವನ್ನು ಮತ್ತಷ್ಟು ಹೆಚ್ಚಿಸಿದುವು. ಧಾರ್ಮಿಕ ನಿಬಂಧನೆಗಳನ್ನು ಅನ್ವಯಿಸಿದುದರಿಂದ ಅವರು 'ಕೆಳಮಟ್ಟದ ಹಿಂದು'ಗಳಾದರೂ ಹಿಂದೂ ತೆಕ್ಕೆಯೊಳಗೇ ಕಡ್ಡಾಯವಾಗಿ ಇರುವಂತಾಯಿತು.

ಲಕ್ಷಣಗಳಿಗೂ ವಾಸ್ತವ ಪಾರಸ್ಪರಿಕ ಸಂಬಂಧಗಳಿಗೂ ನಡುವೆ ಉಂಟಾದ ತೆರಪನ್ನು ಅಥವಾ ಸಡಿಲತೆಯನ್ನು, ಆಸಕ್ತ ಪಂಗಡಗಳು ಸಾಮಾಜಿಕವಾಗಿ ಚಲನಶೀಲವಾಗಲು ಮಾಡಿದ ಪ್ರಯತ್ನಕ್ಕೆ ಅವಕಾಶಗಳನ್ನು ಒದಗಿಸಿದ ಸಮುಚಿತವಾದ ಅಂಶ ಎಂದು ಭಾವಿಸಬಹುದಾಗಿದೆ. ಮೊದಲು ಶ್ರೀನಿವಾಸ್ ಅವರು ಕಲ್ಪಿಸಿ ಅನಂತರ ಕೆಲವು ಕ್ಷೇತ್ರೀಯ ಅಧ್ಯಯನಗಳು ಬೆಂಬಲಿಸಿದ ಸಾಮಾಜಿಕ ಪರಿಚಲನೆಯ ವಿಧಾನವಾಗಿ ಸಂಸ್ಕೃತೀಕರಣ ಪ್ರಕ್ರಿಯೆಯು ಗುಣ ಹಾಗೂ ಪಾರಸ್ಪರಿಕ ಪ್ರತಿಕ್ರಿಯೆಗಳನ್ನು ಅಗತ್ಯವಾಗಿ ತಮ್ಮಲ್ಲಿ ಅಳವಡಿಸಿಕೊಳ್ಳುತ್ತದೆ. ಅದರಲ್ಲಿ ಹಲವಾರು ಇತ್ಯಾತ್ಮಕ ಮತ್ತು ನೇತ್ಯಾತ್ಮಕ ಮೌಲ್ಯಗಳಿವೆ. ಇದರಲ್ಲಿ ಅಪೇಕ್ಷಿಸುವ ಪಂಗಡಗಳು ತಪ್ಪದೆ 'ನಿರ್ಮಲ' ಅಥವಾ ಮಧ್ಯವಲಯದ ಜಾತಿಗಳಿಂದ ಬಂದಂಥವು. ಪರಿಣಾಮತಃ ಇವು, 'ಮಾಲಿನ್ಯ-ತಡೆ'ಗಿಂತ ಮೇಲು ಮಟ್ಟದವು. ಮಾಲಿನ್ಯ ತಡೆಗಿಂತ ಕೆಳಗಿರುವ ಜಾತಿ ಪಂಗಡಗಳು, ಸಾಂಪ್ರದಾಯಿಕವಾಗಿ ಅಸ್ಪೃಶ್ಯರೆಂದು ವರ್ಗೀಕೃತರಾಗಿದ್ದು ಮೇಲು ಜಾತಿಗೆ ಚಲಿಸುವುದರಲ್ಲಿ ಯಶಸ್ವಿಯಾಗುವುದಿಲ್ಲ. ಸಂಸ್ಕೃತೀಕರಣವು ಒಂದು ಮಾರ್ಗವನ್ನೇನೋ ಒದಗಿಸಿತಾದರೂ, ಕೆಳಮಟ್ಟದ ಆಚರಣೆಯ ಸಾಂಪ್ರದಾಯಿಕ ಲಕ್ಷಣಗಳು ಬದಲಾಗಲಿಲ್ಲ. ಆ ಗುಣಗಳನ್ನು ಪ್ರಶ್ನಿಸಿ ಇತರವುಗಳೊಂದಿಗೆ ಪಾರಸ್ಪರಿಕ ಪರಿಣಾಮಗಳಾಗುವಂತೆ ಹಾಕುವ ಪ್ರಯತ್ನವು ಅನೇಕ ವೇಳೆ ಸಂಘರ್ಷ, ಹೊಡೆದಾಟ, ಸಾಮಾಜಿಕ ಬಹಿಷ್ಕಾರಗಳಿಗೆ ದಾರಿಮಾಡಿತು. ತಡೆಗಳನ್ನು ತೆಗೆದುಹಾಕುವುದರಲ್ಲಿ ಅದು ಎಂದೂ ಯಶಸ್ವಿಯಾಗಲಿಲ್ಲ.

ಇದಕ್ಕೆ ವಿರುದ್ಧವಾಗಿ ಬುಡಕಟ್ಟು ಜನರು ಪರಿಣಾಮಕಾರಿಯಾಗಿ ಹಿಂದೂ ತೆಕ್ಕೆಯಿಂದ ಹೊರಗುಳಿದರು. ಅವರನ್ನು ಹಿಂದುಳಿದವರು, 'ಅಪರಾಧಿ ಬುಡಕಟ್ಟುಗಳು', ಹಿಂದೆ ಅಪರಾಧಿಗಳಾಗಿದ್ದವರು, ಪ್ರಕಟಣೆ ಕೊಡಲ್ಪಟ್ಟವರು, ಕೊಟ್ಟಿಲ್ಲದವರು ಎಂದು ಮುಂತಾಗಿ ಗುರುತಿಸಿದ್ದರೂ ಅವರು ಅಸ್ಪೃಶ್ಯತೆಯ ಕಳಂಕವನ್ನು ಹೊತ್ತಿರಲಿಲ್ಲ. ಆದ್ದರಿಂದ ಅವರ ಆಚರಣೆಗಳು ಮತ್ತು ಸ್ಥಾನಮಾನ ಹೀನಾಯವಾದ ಮಟ್ಟಕ್ಕೆ ಇಳಿದಿರಲಿಲ್ಲ. ಜಾತಿ ಲಕ್ಷಣಗಳ ವ್ಯಾಪ್ತಿಯಿಂದ ಹೊರಗಿರುತ್ತಾ ಅವರಿಗೆ ಇತರರೊಂದಿಗಿದ್ದ ಅಂತರ್‌ಕ್ರಿಯೆ ಕನಿಷ್ಠವಾಗಿತ್ತು. ಹಿಂದೂ ಧರ್ಮದ ಕೆಳಜಾತಿಗಳ ಹಾಗೆ ಬುಡಕಟ್ಟು ಜನರು ಸಂಸ್ಕೃತೀಕರಣದ ಮೂಲಕ

ಮೇಲ್ಮುಖವಾದ ಸಾಮಾಜಿಕ ಚಲನೆಯನ್ನು ಬಯಸುವ ಅಗತ್ಯವಿರಲಿಲ್ಲ. ಆದರೂ ಗಣನೀಯ ಸಂಖ್ಯೆಯಲ್ಲಿ ಬುಡಕಟ್ಟು ಜನರು ಈಶಾನ್ಯಭಾಗ, ಬಿಹಾರ, ಛೋಟಾ ನಾಗಪುರ ಮತ್ತು ದೇಶದ ಇತರ ಹಲವು ಭಾಗಗಳಲ್ಲಿ, ಕ್ರೈಸ್ತ ಮಿಶನರಿಗಳ ಚಟುವಟಿಕೆಯಿಂದಾಗಿ ಕ್ರೈಸ್ತಧರ್ಮವನ್ನು ಅವಲಂಬಿಸಿದರು. ಇದು ನೆರೆಯ ಅಥವಾ ಇತರ ಪ್ರದೇಶಗಳ ಜಾತಿಗಳೊಂದಿಗೆ ಘರ್ಷಣೆಗೆ ದಾರಿ ಮಾಡಲಿಲ್ಲ. ಹೆಚ್ಚೆಂದರೆ ಅದರಿಂದ ಒಂದು ಪ್ರದೇಶದ ಬುಡಕಟ್ಟು ಪಂಗಡಗಳ ನಡುವೆ ಬಿರುಕನ್ನು ಉಂಟುಮಾಡಿತು. ಕ್ರಿಶ್ಚಿಯನ್ ಆಗಿ ಮತಾಂತರಗೊಂಡ ಪಂಗಡಗಳು ವಿದ್ಯಾಭ್ಯಾಸಕ್ಕೆ ಅವಕಾಶ ಮತ್ತು ಇತರ ಸೌಲಭ್ಯಗಳನ್ನು ಪಡೆದರೆ, ಇತರ ಪಂಗಡಗಳು ತಮ್ಮ ಸಾಂಪ್ರದಾಯಿಕ ಜೀವನ ವಿಧಾನಕ್ಕೆ ಅಂಟಿಕೊಂಡುವು.

ಸ್ವಾತಂತ್ರ್ಯ ಬಂದ ಮೇಲೆ, ಭಾರತವು ಸಾರ್ವಭೌಮ, ಜಾತ್ಯತೀತ, ಪ್ರಜಾಪ್ರಭುತ್ವೀಯ ಗಣರಾಜ್ಯವಾದಾಗ, ಜನತೆಯಲ್ಲಿ ಸಮಾನತೆ, ನ್ಯಾಯ ಮೊದಲಾದವುಗಳನ್ನು ಅಧಿಕಗೊಳಿಸಲು ಅಗತ್ಯವಾದ ಸೌಲಭ್ಯಗಳನ್ನು ಒದಗಿಸುವ ಸಲುವಾಗಿ ಸಂವಿಧಾನದಲ್ಲಿ ಹಲವು ಕ್ರಮಗಳನ್ನು ಅಳವಡಿಸಲಾಯಿತು. ಈ ಉದ್ದೇಶದಿಂದ ಸಂವಿಧಾನ ಕರಡು ರಚನಾ ಸಮಿತಿಯ ಅಧ್ಯಕ್ಷರಾಗಿ ಡಾ. ಬಿ.ಆರ್. ಅಂಬೇಡ್ಕರ್ ಅವರು ವಂಚಿತ ಜನವರ್ಗಗಳಿಗಾಗಿ ಹಲವು 'ರಕ್ಷಕ ತಾರತಮ್ಯ' ಕ್ರಮಗಳನ್ನು ಪ್ರತಿಪಾದಿಸಿದರು. ವಿವಿಧ ಅಸ್ಪೃಶ್ಯ ಜಾತಿಗಳನ್ನು ಪರಿಶಿಷ್ಟ ಜಾತಿಗಳೆಂಬ ವರ್ಗಕ್ಕೆ ಸೇರಿಸಲಾಯಿತು; ಬುಡಕಟ್ಟು ಪಂಗಡಗಳನ್ನು ಪರಿಶಿಷ್ಟ (ಅನುಸೂಚಿತ) ಬುಡಕಟ್ಟುಗಳೆಂದು ವರ್ಗೀಕರಿಸಲಾಯಿತು. ಮೀಸಲಾತಿ ನೀತಿಯು ರೂಪುಗೊಳ್ಳುವುದಕ್ಕೆ ಪೂರ್ವಭಾವಿಯಾಗಿ ಈ ವಿಷಯವನ್ನು ರಾಜ್ಯಾಂಗ ರಚನಾಸಭೆ (ಸಂವಿಧಾನ ಸಭೆ)ಯಲ್ಲಿ ವಿವರವಾಗಿ ಚರ್ಚಿಸಲಾಯಿತು. ಎಸ್.ಸಿ.ಗಳು ಮತ್ತು ಎಸ್.ಟಿ.ಗಳಿಗೆ ರಾಜ್ಯ ವಿಧಾನಸಭೆಗಳಲ್ಲೂ ಸಂಸತ್ತಿನಲ್ಲೂ ರಾಜಕೀಯ ಪ್ರಾತಿನಿಧ್ಯವಿರುವುದಕ್ಕಾಗಿ ನಿರ್ದಿಷ್ಟ ಶೇಕಡಾ ಪ್ರಮಾಣವನ್ನು ಸಂವಿಧಾನದಲ್ಲಿ ಸೇರಿಸಲಾಯಿತು, ಅದರಿಂದ ನಾಯಕತ್ವವು ರೂಪುಗೊಳ್ಳುತ್ತದೆಂದು ಭಾವಿಸಲಾಯಿತು; ಆಮೇಲೆ ಅವರ ಅಭಿವೃದ್ಧಿ, ಉಚ್ಛ್ರಾಯಗಳಿಗೆ ನೆರವಾಗಬಹುದಾದ ಶಿಕ್ಷಣ ಸಂಸ್ಥೆಗಳಲ್ಲೂ ಉದ್ಯೋಗಗಳಲ್ಲೂ ಮೀಸಲಾತಿ ಇರಬೇಕೆಂದು ನಿಗದಿಪಡಿಸಲಾಯಿತು.

ಮೀಸಲಾತಿ ನೀತಿಯು ಇತ್ಯಾತ್ಮಕ ಹಾಗೂ ನೇತ್ಯಾತ್ಮಕ ಪ್ರತಿಕ್ರಿಯೆಗಳನ್ನು ಉತ್ಪಾದಿಸಿದೆ. ಇತ್ಯಾತ್ಮಕ ಮುಖದಲ್ಲಿ, ಸಾಂಪ್ರದಾಯಿಕ ರಚನೆಗೆ ಇದರಿಂದ ಹಲವು ತಗ್ಗುಗಳಾಗಿವೆ. ಸಾಂವಿಧಾನಿಕವಾದ ಪ್ರಯೋಜನಗಳನ್ನು ಪಡೆದುಕೊಂಡಿರುವ ಎಸ್.ಸಿ. ವ್ಯಕ್ತಿಗಳು ಮತ್ತು ಕುಟುಂಬಗಳು ಸ್ವಲ್ಪಮಟ್ಟಿಗೆ ಚಲನೆ ತೋರಿಸಿದ್ದಾರೆ; ಉತ್ತಮ ಶಿಕ್ಷಣ ಪಡೆದು ಒಳ್ಳೆಯ ವರಮಾನ ತರುವ ಉದ್ಯೋಗದಲ್ಲಿರುವ ಎಸ್.ಸಿ. ಹುಡುಗರು ಮುಖ್ಯವಾಗಿ ಮೇಲುಜಾತಿಯ ಹುಡುಗಿಯರೊಂದಿಗೆ ಅಂತರ್ಜಾತೀಯ ವಿವಾಹ ಮಾಡಿಕೊಂಡಿದ್ದಾರೆ. ಇದಿಷ್ಟೇ ರಚನೆಯಲ್ಲಿ ವ್ಯತ್ಯಾಸಗಳಿಗೆ ದಾರಿಯಾಗುತ್ತದೆಯೋ ಎಂಬುದನ್ನು ಈಗ ಕಣಿ ಹೇಳುವುದು ಕಷ್ಟ. ಮುಂದೆ ಅವರ ಗಂಡುಮಕ್ಕಳು, ಹೆಣ್ಣು ಮಕ್ಕಳು

ಎಂತಹ ಜೀವನ ನಡೆಸುತ್ತಾರೆ ಎನ್ನುವುದು ಕೊನೆಯಪಕ್ಷ ಮಧ್ಯಮವರ್ಗದ ಆರ್ಥಿಕ ಸುಧಾರಣೆಯ ಜೊತೆಗೆ ಬಹುಶಃ ಶಿಕ್ಷಣ ಹಾಗೂ ದೇಶ ಸಂಬಂಧದ ಚಲನೆಗಳೊಂದಿಗೆ ಬಂಧಿತವಾಗಿದೆ ಎಂದು ತೋರುತ್ತದೆ. ಇದರಿಂದ ಎಲ್ಲ ಪರಿಶಿಷ್ಟ ಜಾತಿಗಳೂ ಮೀಸಲಾತಿ ನೀತಿಯಿಂದ ಸಮಾನವಾಗಿ ಪ್ರಯೋಜನ ಪಡೆದಿವೆ ಎಂದು ಅರ್ಥವಾಗುವುದಿಲ್ಲ. ಇದು ಪರಿಶಿಷ್ಟ ಜಾತಿ ಶ್ರೇಣಿಯಲ್ಲಿಯೇ ಗಣನೀಯ ಪ್ರಮಾಣದ ಅಸಮತೆಯನ್ನೂ ಅಸಮತೋಲನವನ್ನೂ ಉಂಟುಮಾಡಿದೆ.

ಎಸ್.ಸಿ. ಮತ್ತು ಎಸ್.ಟಿಗಳಿಗೆ ತೋರಿಸಿರುವ ಆದ್ಯತಾ ನೀತಿಯು ಹಿಂದೂ ಜನತೆಯ ಇತರ ಎಲ್ಲಾ ಬಡವರ್ಗಗಳಿಗೆ ಹೊಟ್ಟೆಯುರಿಯನ್ನುಂಟುಮಾಡಿದೆ, ಅದರಲ್ಲೂ ಶೂದ್ರವರ್ಣಕ್ಕೆ ಸೇರಿದ ಜಾತಿಪಂಗಡಗಳಿಗೆ ಇಷ್ಟು ವರ್ಷವೂ ವಿಶೇಷವಾಗಿ ಮೇಲು ಹಂತಗಳಲ್ಲಿ ವೃತ್ತಿ ಶಿಕ್ಷಣ ಸಂಸ್ಥೆಗಳಿಗೆ ಪ್ರವೇಶ ಪಡೆಯಲು ಅಗತ್ಯವಾದ ಜಾತಿ/ಬುಡಕಟ್ಟು ಪ್ರಮಾಣ ಪತ್ರವನ್ನು ಪಡೆದು ಹೇಗೋ ನಿಭಾಯಿಸಿಕೊಳ್ಳುವ ಪ್ರವೃತ್ತಿ ಕಂಡು ಬಂದಿದೆ. ಇದೇ ಆಧಾರದ ಮೇಲೆ ಉದ್ಯೋಗ ಪಡೆಯುವುದೂ ವಿದ್ಯಾರ್ಥಿವೇತನ, ಶುಲ್ಕವಿನಾಯಿತಿ ಹಾಗೂ ಇತರ ಆರ್ಥಿಕ ಪ್ರಯೋಜನಗಳನ್ನು ಪಡೆಯುವುದೂ ಸಾಮಾನ್ಯವಾಗಿದೆ. ಇದು ಮೀಸಲಾತಿ ನೀತಿಯನ್ನು ಕುರಿತ ನೇತ್ಯಾತ್ಮಕ ಪ್ರತಿಕ್ರಿಯೆಗಳಲ್ಲಿ ಒಂದು ಈಚಿನ ವರ್ಷಗಳಲ್ಲಿ ಶಿಕ್ಷಣ ಸಂಸ್ಥೆಗಳನ್ನು ನಡೆಸುವ "ನಿರ್ವಾಹಕರು" ಇಲ್ಲಿ ಹಣವನ್ನು ಉತ್ಪಾದಿಸುವ ಯಂತ್ರವೊಂದನ್ನು ಕಂಡುಕೊಂಡಿದ್ದಾರೆ. ಎಸ್.ಸಿ.ಗಳಲ್ಲದ ವಿದ್ಯಾರ್ಥಿಗಳಿಗೆ ಎಸ್.ಸಿ.ಗಳೆಂದು ಪ್ರಮಾಣಪತ್ರ ಕೊಡುವುದು, ಅವರು ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶ ಪಡೆಯುವಂತೆ ಮಾಡುವುದು, ಆಮೇಲೆ ದಾಖಲೆಗಳಲ್ಲಿ ಅವರ ಎಸ್.ಸಿ. ಪಟ್ಟಿಯನ್ನು ಉಳಿಸಲು, ಸಮಾಜ ಕಲ್ಯಾಣ ಇಲಾಖೆಯು ಮೋಸವನ್ನು ಪತ್ತೆಮಾಡಿ, ತಮ್ಮ ಮೇಲೆ ಕ್ರಮ ಜರುಗಿಸದಂತೆ ರಕ್ಷಿಸಬೇಕಾದರೆ ಹಣಕೊಡಿ ಎಂದು ಅವರಿಂದ ಕಂಡಾಪಟ್ಟೆ ಹಣವನ್ನು ಕೀಳುವುದು ಈ ಮೋಸ ಕಂಡು ಬಂದಿದೆ.

ಜನಸಂಖ್ಯಾವಾರು ಎಸ್.ಸಿ.ಗಳು ಅಧಿಕವಾಗಿದ್ದಾರೆ; ಬಿಹಾರ, ಈಶಾನ್ಯಪ್ರಾಂತ, ಒರಿಸ್ಸಾ ಮತ್ತು ಮಧ್ಯಪ್ರದೇಶಗಳ ಹೊರತು ಮಿಕ್ಕ ರಾಜ್ಯಗಳಲ್ಲಿ ಅವರ ಸಂಖ್ಯೆ ತುಂಬಾ ಕಡಿಮೆ. ಎಸ್.ಸಿ.ಗಳು ಈಗ ಉತ್ತಮವಾಗಿ ಸಂಘಟಿತರಾಗಿದ್ದಾರೆ. ತಮ್ಮ ಸಮಸ್ಯೆಗಳ ಮತ್ತು ಅವುಗಳಿಗೆ ಪರಿಹಾರಗಳ ಕಡೆಗೆ ಗಮನ ಸೆಳೆಯುವ ಮಾರ್ಗವಾಗಿ ಚಳುವಳಿ ನಡೆಸುತ್ತಿದ್ದಾರೆ. ಎಸ್.ಟಿ.ಗಳಾದರೋ ಈ ದೃಷ್ಟಿಯಿಂದ ಬಹಳ ದೂರ ಹಿಂದಿದ್ದಾರೆ. ಎಲ್ಲೋ ಕೆಲವು ಕಡೆಗಳಲ್ಲಿ ಮಾತ್ರ ಎನ್.ಜಿ.ಓ.ಗಳು ಅವರಲ್ಲಿ ಸ್ವಲ್ಪಮಟ್ಟಿಗೆ ಜಾಗೃತಿಯನ್ನುಂಟುಮಾಡುತ್ತಿದ್ದಾರೆ. ಶೋಷಕ ಶಕ್ತಿಗಳು ಬುಡಕಟ್ಟು ಪ್ರದೇಶಗಳಲ್ಲಿ ನಿರಂತರವಾಗಿ ಕೆಲಸ ಮಾಡುತ್ತಿವೆ. ಜೊತೆಗೆ ಇನ್ನೂ ಅನೇಕರು, ಶೂದ್ರ ಪಂಗಡಗಳಿಗೆ ಸೇರಿದವರು ತಮಗೆ ಬುಡಕಟ್ಟು ಜನರಿಗೆ ಸಲ್ಲಬೇಕಾದ ಸವಲತ್ತುಗಳನ್ನು ಪಡೆಯುವುದರಲ್ಲಿ ಯಶಸ್ವಿಯಾಗಿದ್ದಾರೆ. ಅನೇಕರು ಬುಡಕಟ್ಟು ಎಂಬ ಪಟ್ಟಿಯನ್ನು ಪಡೆಯಲು

ಪ್ರಯತ್ನಿಸುತ್ತಿದ್ದರೆ, ಕೆಲವರು ಆಗಲೇ ಆ ಪ್ರಯೋಜನಗಳನ್ನು ಅನುಭವಿಸುತ್ತಿದ್ದಾರೆ. ಮೈಸೂರು ಜಿಲ್ಲೆಯಲ್ಲಿ ಪರಿವಾರರು ಬುಡಕಟ್ಟು ಕೋಟಾದಲ್ಲಿ ಮೆಡಿಕಲ್ ಮತ್ತು ಎಂಜಿನಿಯರಿಂಗ್ ಕಾಲೇಜುಗಳಿಗೆ ಸೇರಿಕೊಂಡಿದ್ದಾರೆ. ಅಸಲಿ ಬುಡಕಟ್ಟುಗಳು ಎಲ್ಲೋ ಕಾಣಿಸುತ್ತಲೇ ಇಲ್ಲ.

ಮಂಡಲ್ ಆಯೋಗದ ಆಧಾರದಿಂದ ಮೀಸಲಾತಿ ಸೌಲಭ್ಯಗಳು ಅನೇಕಾನೇಕ ಜಾತಿ-ಪಂಗಡಗಳಿಗೆ ಅನ್ವಯವಾಗುತ್ತಲಿವೆ. ಹಿಂದುಳಿದ ವರ್ಗಗಳು (Backward Classes), ಇತರ ಹಿಂದುಳಿದ ವರ್ಗಗಳು (Other Backward Classes), ಮತ್ತು ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಹಿಂದುಳಿದ ವರ್ಗಗಳು (Socially, Educationally Backward Classes) ಇಂದು ತೃಪ್ತರಾಗಿಲ್ಲ. ಎಸ್.ಸಿ. ಮತ್ತು ಎಸ್.ಟಿ.ಗಳ ಹೊರತು, ಒಟ್ಟು 27% ಅನ್ನು ಅನೇಕ ಪಂಗಡಗಳಿಗೆ ಹಂಚಬೇಕಾಗುತ್ತದೆ. ಈ ಕೆಲವು ಪಂಗಡಗಳು ಈಗ ಹಿಡಿದಿರುವ ದಾರಿ, ಯಾವುದಾದರೂ ವಿಧಾನದಿಂದ ಎಸ್.ಸಿ. ಅಥವಾ ಎಸ್.ಟಿ. ಎಂಬ ಹೆಸರುಪಟ್ಟಿಯನ್ನು ಪಡೆಯುವುದು. ಇದರಿಂದ ಎಸ್.ಟಿ.ಗಳಿಗೆ ಸಲ್ಲುತ್ತಿದ್ದ ಸೌಲಭ್ಯಗಳ ಪ್ರಮಾಣದಲ್ಲಿ ಮೊದಲು ಕಡಿತ ಉಂಟಾಗುತ್ತದೆ, ಆಮೇಲೆ ಇಡೀ ಪಂಗಡಗಳು ಆ ಸೌಲಭ್ಯಗಳಿಂದ ಪೂರ್ತಿಯಾಗಿ ವಂಚಿತವಾಗುತ್ತವೆ. ದಿನದಿನವೂ ಹೊಸ ಹೊಸದಾಗಿ ಜಾತಿ ಪಂಗಡಗಳು ಸಂಘಟಿತರಾಗಿ ಚಳುವಳಿ ಮಾಡುತ್ತಿದ್ದಾರೆ. ಇದರಲ್ಲಿ ರಾಜಕಾರಣಿಗಳೂ ಭಾಗೀದಾರರಾಗಿ ವರ್ತಿಸುತ್ತಾರೆ. ಈಗ ಕರ್ನಾಟಕದಲ್ಲಿ ಅಂತಹ ಹಲವು ಪ್ರಯತ್ನಗಳು ಕಾಣಿಸಿಕೊಂಡಿವೆ.

ಪರಿವಾರ ಜಾತಿಯು ಶುದ್ಧ ಶೂದ್ರವರ್ಣಕ್ಕೆ ಸೇರಿದ ಪಂಗಡ. ಅವರು ಈಗ ತಮ್ಮನ್ನು ಎಸ್.ಟಿ.ಗಳೆಂದು ಪರಿಗಣಿಸಬೇಕೆಂದು ಸರಕಾರದ ಮೇಲೆ ಒತ್ತಡ ತರುತ್ತಿದ್ದಾರೆ, ಅದೇ ಸಮಯಕ್ಕೆ ಅನೇಕ ಪ್ರದೇಶಗಳಲ್ಲಿ ಬುಡಕಟ್ಟು ಜನರ ಸೌಲಭ್ಯಗಳನ್ನು ಅಕ್ರಮವಾಗಿ ಅನುಭೋಗಿಸುತ್ತಿದ್ದಾರೆ. ಕರ್ನಾಟಕದ ಕುರುಬರು (ಕುರಿಗಾಹಿಗಳು) ಕಾಡು ಕುರುಬ ಬುಡಕಟ್ಟನ್ನು ತಮ್ಮೊಳಗೆ ಸೇರಿಸಿಕೊಳ್ಳಲು ವ್ಯವಸ್ಥಿತವಾಗಿ ಪ್ರಯತ್ನ ನಡೆಸುತ್ತಿದ್ದಾರೆ. ಈ ಕಾಡು ಬುಡಕಟ್ಟಿನಲ್ಲಿ ಜೇನುಕುರುಬರು, ಬೆಟ್ಟಕುರುಬರು ಮತ್ತು ಮುಳ್ಳುಕುರುಬರು (ತಮಿಳುನಾಡು ಮತ್ತು ಇತರ ಪ್ರದೇಶಗಳಲ್ಲಿ) ಈ ಉಪ-ಪಂಗಡಗಳಿವೆ. ಕುರುಬರಿಗೆ ರಾಜ್ಯಮಟ್ಟದ ಒಂದು ಸಂಘವಿದ್ದು ಸರಕಾರದ ಮೇಲೆ ಒತ್ತಡ ಹಾಕುತ್ತಲಿದೆ. ಅಲ್ಲಿ ಅನೇಕ ಜನ ರಾಜಕೀಯ ಮುಖಂಡರು, ಎಂ.ಎಲ್.ಎ., ಎಂ.ಪಿ., ಸಚಿವರು, ಬೇರೆ ಬೇರೆ ಹಂತಗಳಲ್ಲಿದ್ದಾರೆ. ಆರ್ಥಿಕವಾಗಿಯೂ ಶೈಕ್ಷಣಿಕವಾಗಿಯೂ ಅವರು ಮುಂದುವರಿದಿದ್ದಾರೆಂದು ಹೇಳಬಹುದು. ಆದರೆ ಕಾಡು ಕುರುಬರನ್ನು ಈ ಹಂತಗಳಿಗೆ ತರಬೇಕಾದರೆ ಯುಗಗಳೇ ಬೇಕಾದಾವು. ಈಚೆಗೆ ಕುರುಬರು ಒಬ್ಬ ಜಗದ್ಗುರುಗಳನ್ನು ಸ್ಥಾಪಿಸಿಕೊಂಡಿದ್ದಾರೆ. ಅಂದಮೇಲೆ ಧಾರ್ಮಿಕ ಸಂಘಟನೆ ಮತ್ತು ಬೇಡಿಕೆ ಸ್ಪಷ್ಟವಾಗಿದೆ. ಯಾವುದೋ ಒಂದು ಹಂತದಲ್ಲಿ, ಕುರುಬ ಜಾತಿಯು ಗಳಿಸಿಕೊಂಡಿರುವ ಅಲ್ಪ ಸ್ವಲ್ಪ

ಪ್ರಭಾವದಿಂದಾಗಿ ರಾಜಕೀಯ ನಿರ್ಧಾರದ ಒಂದು ತಟ್ಟಿನಿಂದ, ಹೆಸರು ಒಂದೇ ಆಗಿದೆ ಎಂದು ಆಧಾರದ ಮೇಲೆ ಬುಡಕಟ್ಟು ಪಂಗಡಗಳನ್ನು ಅದರೊಳಗೆ ಸೇರಿಸಿಬಿಟ್ಟರೆ ಅದು ಬುಡಕಟ್ಟು ಪಂಗಡಗಳ ಮರಣಗಂಟೆಯಾಗುತ್ತದೆ. ಈ ಸ್ಪರ್ಧೆಯಲ್ಲಿ ಉಳಿದುಕೊಳ್ಳುವುದಿರಲಿ, ನಿಲ್ಲುವುದೂ ಕೂಡ ಕಾಡುಕುರುಬರಿಗೆ ಸಾಧ್ಯವಿಲ್ಲ.

ಕೆಲವು ಭಾರತೀಯ ಜನವರ್ಗಗಳಿಗೆ ಸಂವಿಧಾನವು ನೀಡಿರುವ ಭರವಸೆಗಳ ಫಲವಾಗಿ ಕಂಡುಬಂದಿರುವ ಬದಲಾವಣೆಗಳು ತಪ್ಪಲ್ಲ ಅಥವಾ ಅವು ತಮಗೆ ತಾವೇ ಅಕ್ರಮವಾದವೂ ಅಲ್ಲ. ಆದರೆ ಎಸ್.ಸಿ, ಎಸ್.ಟಿ., ಹಣೆಪಟ್ಟಿಯನ್ನು ಕೊಟ್ಟು ಮನಸ್ವಿಯಾಗಿ ಎಲ್ಲರಿಗೂ ಮೀಸಲಾತಿ ಸೌಲಭ್ಯಗಳನ್ನು ಉದ್ದೇಶಪೂರ್ವಕವಾಗಿ ಬಗ್ಗಿಸುತ್ತಾ ಹೋಗುವುದು ಅಕ್ರಮವೆಂಬುದರಲ್ಲಿ ಸಂದೇಹವಿಲ್ಲ. ಪರಂಪರಾಗತವಾಗಿ ಹೀಗೆ ಸಾಮಾಜಿಕ ನ್ಯಾಯ ಮತ್ತು ಹಿತಕರ ನಡವಳಿಕೆ ಮುಂದೆಯೂ ಇರುವುದಿಲ್ಲ. ದಿನಗಳು ಉರುಳಿದಂತೆ ಜಾತಿಯು ಪ್ರಬಲವಾಗುತ್ತಿದೆ. ಜಾತಿರಹಿತ ಪ್ರಜಾಪ್ರಭುತ್ವೀಯ ಜಾತ್ಯಾತೀತ ಗಣರಾಜ್ಯವನ್ನು ಕಟ್ಟುತ್ತೇವೆ ಎನ್ನುವುದು ಬಹು ದೂರದ ಕನಸಾಗಿ ಉಳಿದಿದೆ. ಜಾತಿಗಳು ಈಗ ಪಡೆದುಕೊಂಡಿರುವ ಈಗ ಪಡೆಯುತ್ತಿರುವ ರಾಜಕೀಯ ಪ್ರಭಾವವು ಅದನ್ನು ಅತ್ಯಂತ ಸರ್ವವ್ಯಾಪಕ ವ್ಯವಸ್ಥೆಯನ್ನಾಗಿ ಮಾಡುತ್ತದೆ. ಅದು ದೇಶದ ಭವಿಷ್ಯವನ್ನು ನಿಯಂತ್ರಿಸುತ್ತದೆ ಮತ್ತು ನಿರ್ದೇಶಿಸುತ್ತದೆ.

ಮೇಲಿನ ವಿವರಣೆಗಳು ಏಕೆ ಅಗತ್ಯವಾಗಿವೆಯೆಂದರೆ, ಮೊದಲೇ ಗುರುತಿಸಿದ ನಿರ್ದಿಷ್ಟ ಜನವರ್ಗಗಳಿಗೆ ಸಾಂವಿಧಾನಿಕವಾಗಿ ನೀಡಲಾಗಿರುವ ಎಲ್ಲಾ ಪ್ರಯೋಜನಗಳನ್ನು ಪಡೆದುಕೊಳ್ಳುವ ಸಲುವಾಗಿ ವಿವಿಧ ಹಿಂದೂ ಜಾತಿ-ಪಂಗಡಗಳು ತಮಗೆ ಎಸ್.ಸಿ., ಎಸ್.ಟಿ. ಹೆಸರು ಪಟ್ಟಿಯನ್ನು ಹೇಗಾದರೂ ಗಳಿಸಲು ಸೂಕ್ಷ್ಮವಾಗಿ ಮತ್ತು ದೃಢವಾಗಿ ಮಾಡುತ್ತಿರುವ ಪ್ರಯತ್ನವನ್ನು ಅರ್ಥಮಾಡಿಕೊಳ್ಳಲು ಅವು ಸಂಗತವಾಗುತ್ತವೆ. ಈ ಬೇಡಿಕೆಗಳಲ್ಲಿ ಯಾವುದೇ ನ್ಯಾಯ-ನೀತಿ ಇಲ್ಲ. ತರ್ಕಬದ್ಧತೆಯಂತೂ ಇಲ್ಲವೇ ಇಲ್ಲ. "ಸಂರಕ್ಷಕ ಪಕ್ಷಪಾತ"ವೆನ್ನುವುದಿದೆ ಎಂಬುದೇ ತಿಳಿಯದ, ಅತ್ಯಂತ ಅರ್ಹರಾದ ಲಕ್ಷೋಪಲಕ್ಷ ಎಸ್.ಸಿ.ಗಳೂ ಎಸ್.ಟಿ.ಗಳೂ ಈ ದೇಶದಲ್ಲಿ ಇನ್ನೂ ಇದ್ದಾರೆ. ಅತ್ಯಂತ ಶೋಚನೀಯವಾದ ಬದುಕನ್ನು ಅವರು ನಡೆಸುತ್ತಿದ್ದಾರೆ. ಈ ಕ್ರಮಗಳ ಪ್ರಯೋಜನ ಪಡೆದು ತಮ್ಮ ಜೀವನಮಟ್ಟವನ್ನು ಉತ್ತಮಪಡಿಸಿಕೊಂಡವರು ಅತಿ ಸ್ವಲ್ಪ ಜನ, ಹಿಮಗಲ್ಲುಗುಡ್ಡದ ತುದಿಮಾತ್ರ. ಅವರೂ ದುರಾಶಾಪೀಡಿತರಾಗಿದ್ದಾರೆ, ಎಲ್ಲಾ ಪ್ರಯೋಜನಗಳೂ ತಮಗೆ ಮಾತ್ರವೇ ಇರಬೇಕೆಂದು ಅವರು ಬಾಚಿಕೊಳ್ಳಲು ಬಯಸುತ್ತಾರೆ. ಈ ವಿಷವರ್ತುಲದಲ್ಲಿ ಸಿಕ್ಕಿಕೊಂಡ ಲಕ್ಷಾಂತರ ಎಸ್.ಸಿ. ಮತ್ತು ಎಸ್.ಟಿ.ಗಳ ಪರಿಸ್ಥಿತಿ ನಿಜವಾಗಿಯೂ ತುಂಬಾ ಶೋಚನೀಯವಾಗಿದೆ. ಇದಕ್ಕೆ ಪರಿಹಾರಮಾರ್ಗವೇ ಕಾಣಿಸುತ್ತಿಲ್ಲ. ಏಕೆಂದರೆ, ಎಸ್.ಸಿ. ಅಥವಾ ಎಸ್.ಟಿ. ಆಗಲಾರದ ಹೊಸ ಹೊಸ ಪಂಗಡಗಳಿಗೆ ಸರಕಾರವೇ ಅವಕಾಶ ಮಾಡಿಕೊಡುತ್ತಲಿದೆ. ನೂತನ ಪಂಗಡಗಳು ಗಳಿಸಿಕೊಂಡಿರುವ ಪ್ರಭಾವ ಮತ್ತು

ಪ್ರಜಾಪ್ರಭುತ್ವದಲ್ಲಿ ಓಟು ಬ್ಯಾಂಕುಗಳ ರಾಜಕೀಯಗಳು ಒಟ್ಟುಗೂಡಿ, ನಿಜವಾಗಿ ಅರ್ಹರಾಗಿರುವ ಜನರ ವಿರುದ್ಧವಾಗಿ ಬಲವಾಗಿ ನಿಂತಿವೆ.

ಸಂರಕ್ಷಿತ ಅರಣ್ಯ ಪ್ರದೇಶಗಳನ್ನು ಕುರಿತು ಸರಕಾರವು ಮಾಡಿರುವ ಕಾನೂನುಗಳು, ಆಹಾರೋತ್ಪಾದನೆಯನ್ನೂ ಆಹಾರ ಅರ್ಥವ್ಯವಸ್ಥೆಯನ್ನೂ ಒಂದುಗೂಡಿಸುವ ಅನೇಕ ಬುಡಕಟ್ಟು ಪಂಗಡಗಳನ್ನು ಹೆಚ್ಚುಕಡಮೆ ಬುಡಮೇಲು ಮಾಡಿವೆ. ಉಪಖಂಡದ ಇತಿಹಾಸದಲ್ಲಿ ಬುಡಕಟ್ಟುಗಳು ಕ್ರಮೇಣ ಜಾತಿಗಳೊಂದಿಗೆ ಕೂಡಿಕೊಳ್ಳುವುದು ಪರಿಚಿತವಾದ ಘಟನೆಯೇ ಆಗಿದ್ದರೂ ಅದಕ್ಕೆ ವಿರುದ್ಧವಾದ ಪ್ರಕ್ರಿಯೆ. ಸುಸ್ಥಾಪಿತವಾದ ಹಳ್ಳಿಯ ಜಾತಿ ಪಂಗಡಗಳು, ಬುಡಕಟ್ಟು ಸ್ಥಾನಮಾನಕ್ಕಾಗಿ ಹಕ್ಕೊತ್ತಾಯಪಡಿಸಿ ಅದನ್ನು ಪಡೆದುಕೊಳ್ಳುವುದೀಗ ಈಚೆಗೆ ಕಂಡುಬರುತ್ತಿರುವ ಪ್ರವೃತ್ತಿಯಾಗಿದೆ. ಹಾಗಾಗಿ, ಬುಡಕಟ್ಟುಗಳು ಅಧಿಕ ಸಂಖ್ಯೆಯಲ್ಲಿರದೆ ಹೋಗಿದ್ದರೆ, ಅಥವಾ ಪ್ರಬಲವಾಗಿರದಿದ್ದರೆ, ಸ್ಥಳೀಯ ಎನ್.ಜಿ.ಓ.ಗಳ ಹಾಗೂ ಇತರ ಸಾಮಾಜಿಕ ಕಾರ್ಯಕರ್ತರ ಬೆಂಬಲ ಅವರಿಗೆ ದೊರಕದೆ ಹೋದರೆ, ಅವುಗಳಿಗೆ ಅವನತಿ ಪ್ರಕ್ರಿಯೆ ಪ್ರಾರಂಭವಾಗಿದೆಯೆಂದೇ ಹೇಳಬೇಕು, ಅವರ ಅದೃಷ್ಟವು ಕಟ್ಟಿಹೋಗಿದೆ, ಅವರ ಭವಿಷ್ಯ ತುಂಬಾ ನಿರಾಶಾದಾಯಕವಾಗಿದೆಯೆಂದೇ ತೋರುತ್ತದೆ.

ವಾಸ್ತವಸಂಗತಿಗಳಿಂದ ಮೇಲ್ಕಂಡ ವಿಚಾರಗಳು ಹೊರಪಡುತ್ತವೆ. ಮುಂದಿನ ಅಧ್ಯಾಯಗಳಲ್ಲಿರುವುದು, ಊರು ಕುರುಬರು ಮತ್ತು ಕಾಡು ಕುರುಬರ ತೌಲನಿಕ ಅಧ್ಯಯನ, ಮೊದಲನೆಯದು ಉತ್ತಮ ರೀತಿಯಲ್ಲಿ ವ್ಯವಸ್ಥೆಗೊಂಡ, ಎಲ್ಲಾ ಗುಣಗಳು ಮತ್ತು ಅಂತರ್ ಪ್ರತಿಕ್ರಿಯಾ ಲಕ್ಷಣಗಳನ್ನು ಹೊಂದಿರುವ ಜಾತಿ ರಚನೆ, ಎರಡನೆಯದು ಖಚಿತವಾಗಿ ಬುಡಕಟ್ಟು ಲಕ್ಷಣಗಳನ್ನು ಪ್ರದರ್ಶಿಸುತ್ತದೆ. ಹಾಗಾಗಿ ಎರಡೂ ತಂಡಗಳು ಪೋಷಿಸುವ ಮೌಲ್ಯಗಳು, ಪದ್ಧತಿಗಳು, ಸಂಪ್ರದಾಯಗಳು ಮತ್ತು ಸಾಮಾಜಿಕ ವ್ಯವಸ್ಥೆಗಳು ಸಹಜವಾಗಿಯೇ ಬೇರೆ ಬೇರೆಯಾಗಿವೆ. ಇದು ಮತ್ತು ಇತರ ಅನೇಕ ಜಾತಿ-ಬುಡಕಟ್ಟು ವ್ಯತ್ಯಾಸಗಳು, ಜನರು ತಮಗೆ ಲಾಭದಾಯಕವೆಂದು ಕಂಡುಬಂದುದರ ಕಡೆಗೆ ಹೇಗೆ ಮುಗಿಬೀಳುತ್ತಾರೆ ಎಂಬುದನ್ನು ತೋರಿಸುತ್ತವೆ. ಇದರ ಸತ್ಯತೆಯನ್ನು ಪರೀಕ್ಷಿಸಲು ಹೀಗೆ ಮಾಡಬಹುದು: ಒಂದು ವೇಳೆ ಸರಕಾರವು ಎಸ್.ಟಿ.ಗಳಿಗೆ, ಇಲ್ಲಿ ಕಾಡು ಕುರುಬರಿಗೆ ನೀಡಿರುವ ಆದ್ಯತೆಯ ಸವಲತ್ತುಗಳನ್ನೆಲ್ಲ ಹಿಂತೆಗೆದುಕೊಂಡು ಬಿಟ್ಟರೆ, ಊರು ಕುರುಬರು ಆಗಲೂ ಕಾಡು ಕುರುಬರನ್ನು ತಮ್ಮೊಳಗೆ ಸೇರಿಸಬೇಕೆಂದು ಅವರೊಂದಿಗೆ ವಿಲೀನಗೊಳ್ಳಬೇಕೆಂದು ಪ್ರಚಾರ ಮಾಡುತ್ತಾರೆಯೇ?

ಈ ಪ್ರಕ್ರಿಯೆಯು ಬುಡಕಟ್ಟು ಜನರಿಗೆ ಯಾವುದೇ ಅರ್ಥಪೂರ್ಣವಾದ ವಿಧಾನದಲ್ಲಿ ಸಹಾಯ ಮಾಡುತ್ತದೆಯೆ ಎನ್ನುವುದು ಸಂದೇಹವಾಗಿದೆ. ಅದಕ್ಕೆ ಬದಲು, ಅವರಿಗೆ ಇನ್ನೂ ಹೆಚ್ಚಿನ ವಂಚನೆಗೆ ದಾರಿ ಮಾಡುತ್ತದೆ. ಸೇವೆಗೆ ಪ್ರತಿಯಾಗಿ ಅವರಿಗೆ ತೊಂದರೆಯನ್ನೇ ಉಂಟುಮಾಡುತ್ತದೆ. ಬುಡಕಟ್ಟುಗಳನ್ನೂ ಅವರ ಸಮಸ್ಯೆಗಳನ್ನೂ ಈಗಾಗಲೇ ರಾಜಕೀಯ

ಕ್ಷೇತ್ರದಲ್ಲೂ ಮತ್ತಿತರ ವಲಯಗಳಲ್ಲೂ ಸಾಕಷ್ಟು ಪ್ರಭಾವ ಹೊಂದಿರುವ ಗ್ರಾಮ/ನಗರ ಆಧಾರಿತ ಕುರುಬರಿಂದ ಪ್ರತ್ಯೇಕಗೊಳಿಸಲು ಹೆಚ್ಚು ತರ್ಕಸಮ್ಮತವಾದ ದಾರಿಯನ್ನು ಹಿಡಿಯುವುದು ಅಗತ್ಯವಾಗಿದೆ. ಭಾರತೀಯ ಇತಿಹಾಸದ ಈ ಸಂಧಿಕಾಲದಲ್ಲಿ ಹಕ್ಕುಗಳನ್ನು ತನ್ನ ಬಳಿ ಇಟ್ಟುಕೊಂಡು, ಒತ್ತಾಯಪಡಿಸುವ ಜನವರ್ಗಗಳಿಗೆ ಎಸ್.ಸಿ., ಎಸ್.ಟಿ., ಓ.ಬಿ.ಸಿ, ಬಿಟಿ, ಬಿ.ಸಿ. ಹಣೆಪಟ್ಟಿಗಳನ್ನು ಮಂಜೂರು ಮಾಡುತ್ತಿರುವುದು ರಾಜಕೀಯ ಕ್ಷೇತ್ರವೇ ಎಂದು ತೋರುತ್ತದೆ.

ಸಂಗ್ರಹಿತ ಮಾಹಿತಿಯನ್ನು ವಸ್ತುನಿಷ್ಠವಾಗಿ ವಿಶ್ಲೇಷಣೆ ಮಾಡಿ ನೋಡಿದರೆ, ಅದರಿಂದ, ನೀತಿಗಳು ಮತ್ತು ಅವುಗಳನ್ನು ಕಾರ್ಯಗತಗೊಳಿಸುವ ರೀತಿಗಳು ಹೇಗೆ ಮತ್ತು ಎಲ್ಲಿ ತಪ್ಪಾಗುತ್ತವೆ ಎಂಬುದರ ಮೇಲೆ ಸಾಕಷ್ಟು ಬೆಳಕು ಚೆಲ್ಲಿದ ಹಾಗಾಗಬಹುದು. ಇದು ಅನೇಕಾನೇಕ ಜಾತಿಗಳು ಮತ್ತು ಬುಡಕಟ್ಟು ಪಂಗಡಗಳ ಭವಿಷ್ಯತ್ತಿಗೆ ಸಂಬಂಧ ಪಡುವುದರಿಂದ ಸರಕಾರವು ಒಡನೆಯೇ ಒಂದು ಸಮಗ್ರವಾದ ವಿಮರ್ಶೆಯನ್ನು ಕೈಗೊಳ್ಳಬೇಕು. ಮೀಸಲಾತಿ ನೀತಿಯು ಹೇಗೆ ವರ್ತಿಸುತ್ತಿದೆ, ಯಾರು ಅದರ ಫಲವನ್ನು ಅನುಭವಿಸುತ್ತಿದ್ದಾರೆ, ಯಾವ ಪಂಗಡಗಳಿಗೆ ರಕ್ಷಣೆ ಮತ್ತು ನೆರವು ಅತ್ಯಂತ ಅಗತ್ಯವಾಗಿ, ತುರ್ತಾಗಿ ಬೇಕಾಗಿವೆ ಎಂಬುದರ ವಿವೇಚನೆಯ ಆಧಾರದ ಮೇಲೆ ಪರಿಶಿಷ್ಟದಿಂದ ತೆಗೆಯುವ ಒಂದು ಕ್ರಮವನ್ನು ರೂಪಿಸಬೇಕು. ಪ್ರಯೋಜನಗಳನ್ನು ಸದಾಕಾಲವೂ ತಾವೇ ಅನುಭವಿಸುತ್ತಿರಬೇಕೆಂದು ಆಸೆ ಪಡುವುದು ಮಾನವ ಸ್ವಭಾವದ ಒಂದು ಭಾಗ. ಅವರು ಬಡವರ, ವಂಚಿತರ, ತಮಗಿಂತ ಹೆಚ್ಚಾಗಿ ಆಹಾರ, ವಸ್ತ್ರ ವಸತಿಗಳ ಆವಶ್ಯಕತೆ ಇರುವ ಅರ್ಹ ಪಂಗಡಗಳ ಬಗೆಗೆ ಯೋಚಿಸುವುದಿಲ್ಲ.

ಈ ಅಧ್ಯಯನದ ಮೂಲಕ, ಸಮತೋಲನವಿಲ್ಲದ ಬೆಳವಣಿಗೆಯ ಕಡೆಗೆ, ಮನುಷ್ಯನ ದುಃಖ ದುಮ್ಮಾನಗಳಲ್ಲಿ ಆಗಿರುವ ಹೆಚ್ಚಳ ಹಾಗೂ ಬಡತನಗಳ ಕಡೆಗೆ ಗಮನವನ್ನು ಏಕಾಗ್ರಗೊಳಿಸಲು ಒಂದು ಪ್ರಯತ್ನ ಮಾಡಲಾಗಿದೆ. ಸರಕಾರವು ರಾಜಕೀಯ ಚೌಕಟ್ಟಿನಲ್ಲಿ ಸ್ವಲ್ಪ ಹೆಚ್ಚು ಚುರುಕಿನಿಂದ, ಜಾಣತನದಿಂದ ನಿರ್ವಹಿಸಿದ ಪಕ್ಷದಲ್ಲಿ, ದೇಶವನ್ನು ಸರಿಯಾದ ದಿಕ್ಕಿನಲ್ಲಿ ಮುಂದೆ ಸಾಗುವಂತೆ ಸೂಕ್ತ ಕ್ರಮಗಳನ್ನು ಕೈಗೊಳ್ಳಬಹುದು. ಮಲೇಶಿಯದಂತಹ ಸಣ್ಣದೇಶಗಳು, ಚೈನಾದಂತಹ ದೊಡ್ಡ ದೇಶಗಳು ಈ ನಿಟ್ಟಿನಲ್ಲಿ ದಾಪುಗಾಲು ಹಾಕಲು ಸಾಧ್ಯವಿದ್ದರೆ ಭಾರತಕ್ಕೆ ಏಕಿಲ್ಲ?

---

1. ಎಂ.ಎನ್. ಶ್ರೀನಿವಾಸ್, Social chage in Modern India, New Delhi Orient Longman Limited, 1977, 1-7.

* * *

## ಅಧ್ಯಾಯ : ಮೂರು

# ಬುಡಕಟ್ಟು ಮತ್ತು ಜಾತಿ

ಭಾರತೀಯ ಸಮಾಜದಲ್ಲಿ ಜನರನ್ನು ಬುಡಕಟ್ಟು ಬಣಗಳು ಮತ್ತು ಜಾತಿಪಂಗಡಗಳು ಎಂದು ಪ್ರತ್ಯೇಕಗೊಳಿಸುವ ವಿಚಾರವು ಕಳೆದ ಐದು ದಶಕಗಳಲ್ಲಿ ಆಡಳಿತಗಾರರು ಮತ್ತು ರಾಜಕಾರಣ ನಿಪುಣರ ಜೊತೆಗೆ ಸಮಾಜವಿಜ್ಞಾನಿಗಳ ಗಮನವನ್ನು ಸೆಳೆದಿದೆ. ಈಚೆಗೆ "ಸಂರಕ್ಷಕ ತಾರತಮ್ಯ" ನೀತಿಯು ಸಮಸ್ಯೆಯನ್ನು ಇನ್ನಷ್ಟು ಉಲ್ಬಣಗೊಳಿಸಿದೆ.

ಭಾರತದ ಅನೇಕ ಭಾಗಗಳಲ್ಲಿ ಬುಡಕಟ್ಟು ಜನರು ಜಾತಿಗಳೊಂದಿಗೆ ಸಂಪರ್ಕ ಪಡೆಯುತ್ತಿದ್ದು, ಜಾತಿ ಸಮಾಜ ವ್ಯವಸ್ಥೆಯೊಳಗೆ ವಿಲೀನಗೊಳ್ಳುತ್ತಿದ್ದಾರೆ. ದಕ್ಷಿಣ ಭಾರತದ ಕೊಡವರು ಇದಕ್ಕೆ ಒಂದು ನಿದರ್ಶನ. (ಶ್ರೀನಿವಾಸ್ : 1953)[1] ಇದಕ್ಕೆ ವಿರುದ್ಧವಾಗಿ ವಿಶೇಷವಾಗಿ 1980ರ ನಂತರ ಕೆಲವು ಜಾತಿ ಪಂಗಡಗಳು ತಮಗೆ ಬುಡಕಟ್ಟು ಸ್ಥಾನವನ್ನು ಕೋರುತ್ತಿವೆ.

ಜಾತಿ-ಬುಡಕಟ್ಟು ವ್ಯತ್ಯಾಸವನ್ನು ಕುರಿತ ಚರ್ಚೆಯಲ್ಲಿ ತೊಡಗಿದವರು ಬೇಲೀ. (1961)[2] ಭಾರತೀಯ ಸಮಾಜದಲ್ಲಿನ ಸಾಮಾಜಿಕ ಬದಲಾವಣೆಯ ಪ್ರಕ್ರಿಯೆಯ ಮೌಲ್ಯಮಾಪನ ಮಾಡುವುದಕ್ಕೆ ಮುಂಚೆ ಅವರು 'ಬುಡಕಟ್ಟು-ಜಾತಿ ಪ್ರವೃತ್ತಿ'ಯನ್ನು ವಿಮರ್ಶಿಸುತ್ತಾ ನಾಲ್ಕು ಪ್ರಶ್ನೆಗಳನ್ನು ಮುಂದಿಡುತ್ತಾರೆ.

"ಇದು ಒಳ್ಳೆಯದೆ? ಇದನ್ನು ಮೊದಲು ನಿಲ್ಲಿಸಬೇಕೆ? ಮುಂದೆ ಚಲಿಸಲು ತೊಡಗುವಂತೆ ಬುಡಕಟ್ಟು ಜನರಿಗೆ ನೆರವಾಗಬೇಕೆ? ಈ ಪ್ರಕ್ರಿಯೆಯನ್ನು ಅವರಿಗೆ ಸಂಕಷ್ಟಗಳಾಗದಂತೆ ನಿಯಂತ್ರಿಸಬೇಕೆ? ಅಥವಾ ಬದಲಿಗೆ, ಸರಕಾರವು ಯಾವುದೇ ರೀತಿಯಲ್ಲೂ ಮಧ್ಯಪ್ರವೇಶ ಮಾಡದೆ ಸಾಮಾಜಿಕ ಶಕ್ತಿಗಳು ತಮ್ಮಷ್ಟಕ್ಕೆ ಕಾರ್ಯೋನ್ಮುಖವಾಗಲು ಬಿಡಬೇಕೆ?"

ಎರಡನೆಯದಾಗಿ, "ಬುಡಕಟ್ಟು ಜನರನ್ನು ವಾಸ್ತವವಾಗಿ ಯಾವ ರೀತಿಯಲ್ಲಿ ಒಂದು ಜಾತಿ ಸಮಾಜಕ್ಕೆ ವಿಲೀನಗೊಳಿಸಿಕೊಳ್ಳಲಾಗುತ್ತದೆ? ನಂಟು, ರಾಜಕೀಯ. ಆರ್ಥಿಕತೆ ಅಥವಾ ಧರ್ಮ ಈ ಯಾವ ಸಾಂಸ್ಥಿಕತೆಯು ಈ ಪರಿವರ್ತನೆಯಲ್ಲಿ ತೊಡಗಿಕೊಂಡಿರುತ್ತದೆ? ಅದು ಸಂಭವಿಸುವುದಾದರೂ ಏತಕ್ಕಾಗಿ?"

ಮೂರನೆಯ ಪ್ರಶ್ನೆ : "ಒಂದು ನಿರ್ದಿಷ್ಟ ಜನವರ್ಗವು ಜಾತಿಯೆ, ಬುಡಕಟ್ಟು ಜನರೆ ಎಂದು ಯಾವ ಅಧಾರದಿಂದ ನಾವು ತೀರ್ಮಾನಿಸಬಹುದು?"

ಕೊನೆಯದಾಗಿ, "ಬುಡಕಟ್ಟು ಸಮಾಜಕ್ಕೂ ಜಾತಿ ಸಮಾಜಕ್ಕೂ ನಡುವೆ ತಾತ್ವಿಕ ಹಂತದಲ್ಲಿ ಇರುವ ವ್ಯತ್ಯಾಸ ಏನು?"

ಬುಡಕಟ್ಟು ಮತ್ತು ಜಾತಿ ಇವುಗಳ ನಡುವೆ ಇರುವ ವ್ಯತ್ಯಾಸಗಳ ಮೇಲೆ ಗಮನವನ್ನು ಕೇಂದ್ರೀಕರಿಸುವ ಅಧ್ಯಯನಗಳಲ್ಲಿನ ಮುಖ್ಯವಾದ ದೋಷವೆಂದರೆ, ಪ್ರಶ್ನೆಗಳನ್ನು ರೂಪಿಸಿಕೊಳ್ಳುವಾಗ ಸಮಾಜಶಾಸ್ತ್ರೀಯ ನಿಖರತೆಯ ಕೊರತೆ. ಒಂದು ನಿರ್ದಿಷ್ಟ ಹಿಂದೂ ಪರಿಸರದೊಂದಿಗೆ ಸಹವರ್ತನೆಯಿಂದಿರುವ ನಿರ್ದಿಷ್ಟ ಬುಡಕಟ್ಟಿನ ಸಮಾಜಶಾಸ್ತ್ರೀಯ ಅಧ್ಯಯನವನ್ನು ಕೈಗೆತ್ತಿಕೊಳ್ಳುವುದಕ್ಕೆ ಬದಲಾಗಿ, ಸ್ಪಷ್ಟವಾಗಿಯೇ ಇರುವ ಭೌಗೋಳಿಕ, ಸಾಂಸ್ಕೃತಿಕ, ಆರ್ಥಿಕ ಮೊದಲಾದ ಆಧಾರಗಳನ್ನು ತೆಗೆದುಕೊಂಡು, ಅವು ಮೌಲ್ಯಯುತವಾಗಿದ್ದರೆ ಜಾತಿಯನ್ನು ಬುಡಕಟ್ಟಿನಿಂದ ಪ್ರತ್ಯೇಕಗೊಳಿಸಲು ಅವುಗಳನ್ನು ಅಭ್ಯಾಸ ಬಲದಿಂದ ಮಾನದಂಡವನ್ನಾಗಿ ಉಪಯೋಗಿಸಿಬಿಡುತ್ತೇವೆ.

ಅಲ್ಲದೆ, ಅನೇಕ ವೇಳೆ ಮಾಡುವಂತೆ, ಒಂದು ಬುಡಕಟ್ಟು ಸಮಾಜವು ಹಿಂದೂ ಸಮಾಜದಿಂದ ಪ್ರತಿಯೊಂದು ವಿಷಯದಲ್ಲೂ ಭಿನ್ನವಾಗಿರುತ್ತದೆ ಎಂಬ ಪೂರ್ವಕಲ್ಪನೆಯನ್ನಿಟ್ಟುಕೊಂಡೇ ಹೊರಡಬಾರದು. ಜಾತಿ ಮತ್ತು ಬುಡಕಟ್ಟುಗಳ ನಡುವೆ ಇರುವ ಭಿನ್ನತೆಗಳ ಸಮಗ್ರವಾದ ಪಟ್ಟಿಯನ್ನು ತಯಾರಿಸುವುದು ಸಾಧ್ಯವಿಲ್ಲ. ಒಂದು ಬುಡಕಟ್ಟು ಸಮಾಜದ ಮೂಲಭೂತ ಸೂತ್ರಗಳು ಒಂದು ಹಿಂದೂ ಜಾತಿ ಸಮಾಜದ ಮೂಲಸೂತ್ರಗಳಿಗಿಂತ ಭಿನ್ನ ಎಂಬುದು ನಮ್ಮನ್ನು ತಪ್ಪುದಾರಿಗೆಳೆಯುವಂಥದು. ಏಕೆಂದರೆ, ಅಲ್ಲಿ ಅನೇಕ ಅಂಶಗಳು ಒಂದರಿಂದ ಇನ್ನೊಂದಕ್ಕೆ ಹರಡಿಕೊಳ್ಳುತ್ತವೆ. ನಿದರ್ಶನಕ್ಕೆ ಭಾಷೆ, ಭೌಗೋಳಿಕ ಪರಿಸರ ಇತ್ಯಾದಿ. ಹಾಗಾಗಿ ನಡವಳಿಕೆಯ ಒಟ್ಟು ಸ್ವರೂಪದ ಮೇಲೆ ಕೇಂದ್ರೀಕರಿಸುವುದಕ್ಕೆ ಬದಲಾಗಿ ನಮ್ಮ ಅಧ್ಯಯನವನ್ನು ನಡವಳಿಕೆಯ ನಿರ್ದಿಷ್ಟ ಕ್ಷೇತ್ರಗಳಿಗೆ ಇಳಿಸಬೇಕಾಗುತ್ತದೆ.

ಈ ಕಾರ್ಯವಿಧಾನಗಳು ವಾದದಲ್ಲಿ ಅನ್ಯೋನ್ಯಾಶ್ರಯವುಳ್ಳವಾಗಿವೆ. ಅವು ಸಂಶೋಧನಾಪೂರ್ವ ವರ್ಗೀಕರಣದಲ್ಲಿ ತೊಡಗುವುದಲ್ಲದೆ, ಕೆಲವರನ್ನು ಬುಡಕಟ್ಟುಗಳೆಂದೂ, ಇತರ ಕೆಲವರನ್ನು ಜಾತಿಗಳೆಂದೂ ಲಕ್ಷಣ ಹೇಳುವುದಲ್ಲದೆ, ಅದರ ಆಧಾರದ ಮೇಲೆಯೇ ಖಚಿತವಾದ ಉತ್ತರಗಳನ್ನೂ ಕೊಡಲು ಪ್ರಯತ್ನಿಸುತ್ತವೆ. ಹಾಗಾಗಿ ಅವು ಮುಖ್ಯವಾದ ಸಮಾಜಶಾಸ್ತ್ರೀಯ ಪ್ರಶ್ನೆಯೆಲ್ಲವನ್ನೂ ಬದಿಗೆ ಸರಿಸುತ್ತವೆ. ಬುಡಕಟ್ಟು ಸಮಾಜವ್ಯವಸ್ಥೆಗೂ ಜಾತಿ ಸಮಾಜ ವ್ಯವಸ್ಥೆಗೂ ನಡುವೆ ಯಾವ ವ್ಯತ್ಯಾಸಗಳನ್ನೂ ಗುರುತಿಸಬೇಕು? ಒಟ್ಟಿನಲ್ಲಿ "ಗಮನಿಸಿರುವ" ವ್ಯತ್ಯಾಸಗಳು (ಭೌಗೋಳಿಕ, ಸಾಂಸ್ಕೃತಿಕ ಮೊದಲಾದವು) ಸಮರ್ಥನೆಗೊಳ್ಳದೆಯೇ ಉಳಿದುಬಿಡುತ್ತವೆ.

ಬುಡಕಟ್ಟು ಸಮಾಜದಲ್ಲಿ ಸಾಮಾಜಿಕ ಬದಲಾವಣೆಯ ನೈತಿಕ ಸ್ವರೂಪ, ಜಾತಿ ವ್ಯವಸ್ಥೆಯಲ್ಲಿ ಅವು ಲೀನವಾಗುವಿಕೆ, ಕೆಲವು ಜನರನ್ನು ಬುಡಕಟ್ಟು ಜನರೆಂದು ಯಾವ

ಮಾನದಂಡದಿಂದ ಹೇಳಬಹುದು ಮೊದಲಾದ ಪ್ರಶ್ನೆಗಳನ್ನೂ ಅವುಗಳ ನಡುವೆ ಯಾವ ವ್ಯತ್ಯಾಸವಿದೆ ಎಂದು ತಾತ್ವಿಕ ಪ್ರಶ್ನೆಯನ್ನೂ ಉತ್ತರಿಸಬೇಕಾದರೆ ಮೊದಲು ನಾವು ಒಂದು ಬುಡಕಟ್ಟು ಸಮಾಜವನ್ನೂ ಒಂದು ಜಾತಿ ಸಮಾಜವನ್ನೂ ವಿವರಿಸಲು ಸಾಧ್ಯವಾಗಬೇಕು.

ತಾತ್ವಿಕ ಉತ್ತರಗಳನ್ನು, ಅಮೂರ್ತ ಮಾದರಿಯಲ್ಲಿ ಒಂದು ನಿರ್ದಿಷ್ಟ ಬುಡಕಟ್ಟು ಸಮಾಜದಲ್ಲಿ, ಸಮರ್ಪಕ ರೀತಿಯಲ್ಲಿ ನಿದರ್ಶನವನ್ನು ಕೊಟ್ಟು ವಿವರಿಸಬೇಕಾಗಿಲ್ಲ. ಬುಡಕಟ್ಟು ಮತ್ತು ಜಾತಿ ಸಮಾಜಗಳನ್ನು ಉತ್ತರ-ದಕ್ಷಿಣ ಧ್ರುವಗಳೆಂದೋ, ಎರಡಾಗಿ ಒಡೆದಿರುವವುಗಳೆಂದೋ ಗ್ರಹಿಸುವುದಕ್ಕೆ ಬದಲಾಗಿ ಅವು ಒಂದರಿಂದೊಂದು ಮುಂದುವರಿದವುಗಳೆಂದು ಭಾವಿಸಬೇಕು. "ಇದು ಒಂದು ಬುಡಕಟ್ಟೋ, ಜಾತಿಯೋ?" ಎಂಬ ಪ್ರಶ್ನೆಯ ಸ್ಥಾನದಲ್ಲಿ ಒಂದು ನಿರ್ದಿಷ್ಟ ಸಮಾಜವು ಎಷ್ಟರಮಟ್ಟಿಗೆ ಅದರ ಭಾಗವೆಂಬಂತೆ ಕಾಣುವ ಬುಡಕಟ್ಟು ಮಾದರಿಗೆ ಸಮೀಪವಾಗಿದೆ ಅಥವಾ ಜೈವಿಕವಾದ ಜಾತಿ ಮಾದರಿಗೆ ಸಮೀಪವಾಗಿದೆ ಅಥವಾ ಜೈವಿಕವಾದ ಜಾತಿಮಾದರಿಗೆ ಆ ಬುಡಕಟ್ಟು ಎಷ್ಟುಮಟ್ಟಿಗೆ ನಿಕಟವಾಗಿದೆ ಎಂಬ ಪ್ರಶ್ನೆಯನ್ನಿಟ್ಟುಕೊಂಡು ಪರಿಶೀಲಿಸಬೇಕು. ಜಾತಿ ಮತ್ತು ಬುಡಕಟ್ಟುಗಳನ್ನು ನಿರ್ದಿಷ್ಟ ಸಮಾಜಗಳಲ್ಲಿ ವ್ಯಕ್ತಿಗಳಿಗೆ ಇರುವ ಆಯ್ಕೆಗಳಾಗಿರುವ ಸಾಂಸ್ಥಿಕ ಸಂಕೀರ್ಣಗಳು ಎಂದು ಪರಿಗಣಿಸಬೇಕು. ಪರಿಣಾಮವಾಗಿ, ಬದಲಾವಣೆ ನಡೆಯುತ್ತಿರುವುದನ್ನು ನೋಡುತ್ತೇವೆ. ಅಲ್ಲಿ ಒಂದು ಮಾದರಿಯ ಬೆಲೆಕೊಟ್ಟು ಇನ್ನೊಂದು ಮಾದರಿಯನ್ನು ಆರಿಸಿಕೊಳ್ಳುವುದು ಕಂಡು ಬರುತ್ತದೆ. ಆಗ ನಾವು ಕೇಳಬಹುದು. ಈ ಆಯ್ಕೆಯನ್ನು ಮಾಡುತ್ತಿರುವವರು ಯಾರು, ಅವರೇಕೆ ಹಾಗೆ ಮಾಡುತ್ತಾರೆ? ಕೊನೆಯದಾಗಿ ಜಾತಿ ಅಧ್ಯಯನವು ನಿದರ್ಶಿಸುವಂತೆ, ನೈತಿಕತೆಯ ಪ್ರಶ್ನೆಯೂ ಆಶ್ಚರ್ಯಕರವಾದ ರೀತಿಯಲ್ಲಿ ಅಡಗಿಹೋಗುತ್ತದೆ. ಜಾತಿ ಮತ್ತು ಬುಡಕಟ್ಟು ಎರಡೂ ಬೇರೆಯೇ ಆದ ರಾಜಕೀಯ ಮತ್ತು ಆರ್ಥಿಕ ಪ್ರಜಾಪ್ರಭುತ್ವ ಮತ್ತು ಬಂಡವಾಳಶಾಹಿ ವ್ಯವಸ್ಥೆಯಲ್ಲಿ ವಿಲೀನವಾಗುತ್ತವೆ. ಅಲ್ಲಿ ನಿದರ್ಶನ-ಸಹಿತ ವಿವರಣೆಯಾಗಲಿ, ವರ್ಣನಾ ಸಹಿತ ವರ್ಗೀಕರಣವಾಗಲಿ ಉಪಯೋಗಕ್ಕೆ ಬರುವುದಿಲ್ಲ.

ಆದರೂ ಬೇರೆ ಆಧಾರವನ್ನು ಅನ್ವಯಿಸಿ ಬುಡಕಟ್ಟು-ಜಾತಿ ವ್ಯತ್ಯಾಸಗಳನ್ನು ಉಳಿಸಿಕೊಳ್ಳುವುದು ಮುಖ್ಯ. ಬೇಲೀ ಅವರ ಅಭಿಪ್ರಾಯವನ್ನು ಕೆಲವು ಹಂತದವರೆಗೆ ನಾವು ಒಪ್ಪಿಕೊಳ್ಳಬಹುದಾದರೂ ಸ್ವಲ್ಪ ನಿಂತು, ಹಿಂದಿರುಗಿ ನೋಡಿ ಹೇಗೆ ರಾಜಕೀಯವಾದ ಪ್ರಜಾಪ್ರಭುತ್ವವು ಎಲ್ಲರಿಗೂ ಸ್ವಾತಂತ್ರ್ಯ, ಸಮಾನತೆ ಮತ್ತು ನ್ಯಾಯಗಳನ್ನು ತಂದೀಯಲು ವಿಫಲವಾಗಿದೆ ಎಂಬುದನ್ನು ಗಮನಿಸಬಹುದು. ಕೆಲವರು ಇತರರಿಗಿಂತ ಹೆಚ್ಚಾಗಿ ಸಮಾನತೆ ಪಡೆದಿದ್ದಾರೆ. ಮಾರುಕಟ್ಟೆ ಆರ್ಥಿಕತೆಯು ಶೋಷಣೆ ಹೆಚ್ಚಲು ಅವಕಾಶ ಕೊಟ್ಟಿದೆ, ಅಸಮಾನತೆಯುಂಟಾಗಿದೆ; ಎಂದಿನಿಂದಲೂ ಬಡವರಾಗಿಯೇ ಉಳಿದವರು, ಹಿಂದುಳಿದ, ದಲಿತವರ್ಗಗಳು-ಎಸ್.ಸಿ.ಗಳು ಮತ್ತು ಎಸ್.ಟಿ.ಗಳ ಬಹುದೊಡ್ಡ ಭಾಗ ಇನ್ನೂ ತೀರಾ ಕೆಳಗಿನ ಹಂತದಲ್ಲೇ ಇದ್ದಾರೆ; ಮಧ್ಯಮ ವಲಯದ ಜಾತಿ ಪಂಗಡಗಳು ಎಸ್.ಸಿ. ಮತ್ತು

ಎಸ್.ಟಿ.ಗಳಿಗೆ ಲಭ್ಯವಾಗಿರುವ ಸಾಂವಿಧಾನಿಕ ಸ್ಥಾನಮಾನ ಮತ್ತು ಸವಲತ್ತುಗಳು ತಮಗೂ ದೊರಕಬೇಕೆಂದು ಬೇಡಿಕೆ ಸಲ್ಲಿಸುತ್ತಿವೆ. ಈ ಸಮಸ್ಯೆಯನ್ನು ಸ್ಥಳೀಯ ಹಾಗೂ ಪ್ರಾದೇಶಿಕ ಆಧಾರದಿಂದ ಅನುಭವಾತ್ಮಕವಾಗಿ ಎದುರಿಸಬೇಕಾಗಿದೆ.

ಈ ಅಧ್ಯಾಯದಲ್ಲಿ ಬುಡಕಟ್ಟಿಗೂ ಜಾತಿಗೂ ನಡುವೆ ಇರುವ ವ್ಯತ್ಯಾಸಗಳನ್ನು ಗುರುತಿಸಲು ಪ್ರಯತ್ನಿಸಲಾಗಿದೆ. ಜಾತಿ ಪದ್ಧತಿಯು ಭಾರತಕ್ಕೆ ವಿಶಿಷ್ಟವಾದದ್ದು; ಆದರೆ ಜಾತಿಯನ್ನು ಹೋಲುವ ರಚನೆಗಳು ಇತರ ಸಮಾಜಗಳಲ್ಲಿಯೂ ಕಂಡು ಬರುತ್ತವೆ, ವರ್ಗಾಧಾರಿತ ಸಮಾಜಗಳಲ್ಲೂ ಅವು ಕಾಣಿಸುತ್ತವೆ. ಜಾತಿ ಪದ್ಧತಿಯು ವಿಶಿಷ್ಟವಾಗುವಂತೆ, ಭಾರತಕ್ಕೆ ಸಂಗತವಾಗುವಂತೆ ಮಾಡಿರುವವು ಕೆಲವು ವಿಶೇಷ ಲಕ್ಷಣಗಳು. ಉದಾಹರಣೆಗೆ, ಹುಟ್ಟು ಅಥವಾ ಜನ್ಮತಳೆಯುವುದು ನಿರ್ಧಾರಕ ಅಂಶಗಳಲ್ಲಿ ಒಂದು. ಜಾತೀಯ ಸ್ಥಾನಮಾನವು ಹುಟ್ಟಿನಿಂದ ಬರುವಂಥದೇ ಹೊರತು ಸಂಪಾದಿಸುವಂಥದಲ್ಲ. ಜಾತಿ ಪದ್ಧತಿಯು ತುಂಬಾ ಪೆಡಸಾಗಿರುವಂತೆ ತೋರುತ್ತದೆ, ವ್ಯಕ್ತಿಯು ಜನಿಸುವುದಕ್ಕೆ ಮೊದಲೇ ಅದರ ಗಡಿಗಳನ್ನು ಎಳೆಯಲಾಗಿರುತ್ತದೆ. ಅವು ನಿಗದಿಯಾಗಿಬಿಟ್ಟಿರುವಂಥವು.

ವಿವಿಧ ಜಾತಿಪಂಗಡಗಳ ನಡುವೆ ಎಲ್ಲಾ ರೀತಿಯ ಸಾಮಾಜಿಕ ಅಂತರ್‌ಕ್ರಿಯೆಗಳು, ಆರ್ಥಿಕ ಚಟುವಟಿಕೆಗಳು, ಈಚಿನವರೆಗೂ ವಿದ್ಯಾಭ್ಯಾಸ, ರಾಜಕೀಯದಲ್ಲಿ ಭಾಗವಹಿಸುವಿಕೆ ಮತ್ತು ನ್ಯಾಯಸಂಬಂಧವಾದ ಹಕ್ಕುಗಳು ಇವೆಲ್ಲವೂ ಜಾತಿ ಸ್ಥಾನಮಾನದ ಮೇಲೆ ಕೀಲಿಸಿದ್ದುವು. ಉದ್ಯಮೀಕರಣದಿಂದಾಗಿ ವೃತ್ತಿ ವೈವಿಧ್ಯವು ಕಾಣಿಸಿಕೊಂಡಿದೆ, ಹಾಗಾಗಿ ಜಾತಿಯನ್ನು ಆಧರಿಸಿದ ಸಾಂಪ್ರದಾಯಿಕ ವೃತ್ತಿ ಕ್ಷೀಣಿಸುತ್ತಿದೆ. ಆದರೂ ಕೆಳಮಟ್ಟದ, "ಮೈಲಿಗೆ" ಉಂಟುಮಾಡುವ, ಶೌಚಾಗಾರಗಳನ್ನು ತೊಳೆಯುವುದು, ಸಾರ್ವಜನಿಕ ರಸ್ತೆಗಳನ್ನು ಗುಡಿಸುವುದು, ಚಮ್ಮಾರಿಕೆ, ಕಸಾಯಿ ಕೆಲಸ ಮೊದಲಾದ ವೃತ್ತಿಗಳಿಗೆ ಬಂದಾಗ, ಜಾತಿ ಮತ್ತು ವೃತ್ತಿಪರ ಲಕ್ಷಣವು ತುಂಬಾ ಮುಖ್ಯವಾಗಿಯೇ ಸುಸಂಗತವಾಗಿಯೇ ಉಳಿಯುತ್ತದೆ. ಬೇರೆ ಬೇರೆ ಜಾತಿಗಳು, ನಿರ್ದಿಷ್ಟವಾಗಿ ಗ್ರಾಮಗಳಲ್ಲಿ, ಸಮಾನ ಸ್ಥಾನಮಾನವನ್ನು ಹೊಂದಿರದಿದ್ದ ಪಕ್ಷದಲ್ಲಿ ಅವು ಬೆರೆತು ಜೀವಿಸುತ್ತಿದ್ದಾರೆಂಬ ಬಗೆಗೆ ಸಾಕ್ಷಿಯೇ ಇಲ್ಲವೆಂದು ಹೇಳಬೇಕು. ಪರಿಶಿಷ್ಟ ಜಾತಿಗಳು ಮುಖ್ಯ ಹಳ್ಳಿಯಿಂದ ಸ್ವಲ್ಪ ದೂರದಲ್ಲಿ ವಾಸಮಾಡುವ ನಾಮಸೂಚಕ ವಸತಿ ವಿನ್ಯಾಸವು ಭಾರತದ ಹಳ್ಳಿಗಳಲ್ಲಿ ಈಗಲೂ ಸಾಮಾನ್ಯವಾಗಿ ಕಂಡುಬರುತ್ತದಾದರೂ, ಪಟ್ಟಣಗಳಲ್ಲಿ ಮತ್ತು ನಗರಗಳಲ್ಲಿ ಆ ಲಕ್ಷಣವು ಎದ್ದು ಕಾಣಿಸುವುದಿಲ್ಲ, ಆಚರಣೆಯಲ್ಲಿರಬಹುದು, ಮಂದವಾಗಿರಬಹುದು.

ಸಸ್ಯಾಹಾರ ಮಾಂಸಾಹಾರ ಸೇವನೆಯ ವ್ಯತ್ಯಾಸ, ಮದ್ಯಸೇವನೆ ಮೊದಲಾದ ಕ್ಷೇತ್ರಗಳನ್ನೂ ಆಕ್ರಮಿಸಿ ಪರಿಶೀಲಿಸಲಾಗಿದೆ. ಜಾತಿ ಪಂಗಡಗಳ ನಡುವೆ ಆಹಾರ ಮತ್ತು ಪಾನೀಯಗಳನ್ನು ಹಂಚಿಕೊಳ್ಳುವುದು ಜಾತಿ ಸ್ಥಾನಮಾನವನ್ನು ಸೂಚಿಸುತ್ತದೆ. ಇಲ್ಲಿ ಒಂದು ವರ್ಗಶ್ರೇಣಿಯಿರುವುದನ್ನು ನೋಡಬಹುದು. ಇದು ಲಂಬಾಕೃತಿಯ ವರ್ಗಶ್ರೇಣಿ. ಮೇಲು ಜಾತಿಗಳು-ದ್ವಿಜರು ಅತ್ಯಂತ ಎತ್ತರದಲ್ಲಿ, ಪರಿಶಿಷ್ಟ ಜಾತಿಗಳು (ಹಿಂದೆ ಅಸ್ಪೃಶ್ಯರೆನಿಸಿದ್ದವರು)

ತೀರಾ ಕೆಳಗೆ. ಈ ಎರಡೂ ಬಿಂದುಗಳ ನಡುವೆ ಬೇಕಾದಷ್ಟು ಸಂಖ್ಯೆಯಲ್ಲಿ ಮಧ್ಯಮ ವಲಯ ಜಾತಿ ಪಂಗಡಗಳಿವೆ. ಸಾಮಾನ್ಯವಾಗಿ ಕೆಳ ಜಾತಿಗಳು ಮೇಲು ಜಾತಿಯವರ ಕೈಗಳಿಂದ ಬೇಯಿಸಿದ ಆಹಾರವನ್ನೂ ನೀರನ್ನೂ ತೆಗೆದುಕೊಳ್ಳುತ್ತಾರೆ. ಆದರೆ ಅದಕ್ಕೆ ತಿರುಗುಮುರುಗು ಪರಿಸ್ಥಿತಿ ಸಂಭವಿಸುವುದಿಲ್ಲ. ಆದ್ದರಿಂದ, ಸಾಂಪ್ರದಾಯಿಕ ಗುಣಲಕ್ಷಣಗಳು ಹಳ್ಳಿಗಳಲ್ಲಿನ ಅಂತರ-ಜಾತೀಯ ಪರಸ್ಪರ ಪ್ರತಿಕ್ರಿಯಾ ಪರಿಸ್ಥಿತಿಯಲ್ಲಿ ಇನ್ನೂ ಊರ್ಜಿತವಾಗಿಯೇ ಇವೆ. ಹಳ್ಳಿಗಳಲ್ಲಿ ಕಂಡು ಬರುವ ಲಂಬಾಕೃತಿಯ ವರ್ಗಶ್ರೇಣಿಯು ಹಳ್ಳಿಯ ಗಡಿಗಳನ್ನು ದಾಟಿ ಇತರ ಹಳ್ಳಿಗಳನ್ನು ವ್ಯಾಪಿಸಿದಾಗ ಕ್ಷೇತ್ರೀಯ ಹರಡಿಕೆಯ ರೂಪವನ್ನು ಪಡೆಯುತ್ತದೆ.

ಮದುವೆಯ ನಿಯಮಗಳು, ಬಹುತೇಕ ಹಿರಿಯರು ನಿಷ್ಕರ್ಷಿಸಿದ ಮದುವೆಗಳಾದುದರಿಂದ, ಜಾತಿಯ ಗಡಿಗಳನ್ನು ಎಂದಿಗೂ ದಾಟುವುದಿಲ್ಲ. ಹಾಗೆಯೇ ಧಾರ್ಮಿಕಾಚರಣೆಗಳಲ್ಲಿ ಭಾಗವಹಿಸುವಿಕೆ, ಮತ್ತು ಸಾಮಾಜಿಕ ಜೀವನದ ಇತರ ಮುಖಗಳಲ್ಲೂ ಬೇರೆ ಬೇರೆ ಜಾತಿಗಳಿಗೆ ಸೇರಿದ ಜನರನ್ನು ಬೇರ್ಪಡಿಸುವ ಅಗೋಚರ ರೇಖೆಯು ನಿಯಂತ್ರಿಸುತ್ತದೆ. ಅವು ಸಾಂಪ್ರದಾಯಿಕವಾಗಿ ಆಚರಣಾತ್ಮಕವಾಗಿದ್ದು, ಆರ್ಥಿಕ ಪರಸ್ಪರಾವಲಂಬನವು ಸ್ಪಷ್ಟವಾಗಿ ಗುರುತಿಸಲ್ಪಟ್ಟಿದ್ದು, ಪದ್ಧತಿಯು ಉಳಿದುಕೊಳ್ಳಲು ನೆರವಾಗಿದೆ. ಈಚಿನ ವರ್ಷಗಳಲ್ಲಿ ಈ ಅಸಾಧಾರಣತೆ - ಪರಾಧೀನತೆಯ ಸಂಬಂಧಗಳು ಬದಲಾಗುತ್ತಿವೆ. ಅದಕ್ಕೆ ಕಾರಣ, ಕೆಳ ಜಾತಿಗಳು ಪ್ರತಿಭಟನೆ ಮಾಡುತ್ತಿರುವುದು, ಭಾರತೀಯ ಸಂವಿಧಾನವು ಅವರಿಗೆ ಒಂದು ಆಧಾರವನ್ನು ಒದಗಿಸಿರುವುದು. ಆದರೆ ಅನೇಕ ವೇಳೆ ಇದು ಅಪಾಯಗಳು, ದೊಂಬಿ, ಜಾತಿ-ಮತ ಘರ್ಷಣೆಗಳು ಮತ್ತು ಹೊಡೆದಾಟಗಳಲ್ಲಿ ಪರ್ಯವಸಾನವಾಗಿವೆ.

ಪ್ರಜಾಪ್ರಭುತ್ವವು ಜಾತಿಗೆ ಒಂದು ನೂತನ ಆಯಾಮವನ್ನು ಸೇರಿಸಿದೆ. ಮೀಸಲಾತಿ ಸೌಲಭ್ಯಗಳು ಅದನ್ನು ಇನ್ನಷ್ಟು ಬಲಪಡಿಸಿವೆ. ಪರಿಸ್ಥಿತಿಯು ಈಗ ಕಂಡುಬರುವಂತೆ, ಜಾತಿ ಪಂಗಡಗಳು ಬಲವಾಗಿ ಬೇರು ಬಿಟ್ಟುಕೊಂಡಿವೆ, ಇನ್ನು ಹಿಂದಕ್ಕೆ ಹೋಗುವ ಪ್ರಶ್ನೆಯೇ ಇಲ್ಲ ಎಂದು ತೋರುತ್ತದೆ. ಜಾತಿರಹಿತ ಸಮಾಜವೆನ್ನುವುದು ಬಹು ದೂರದ ಕೂಗಾಗಿದೆ. ಜಾತಿಗಳು ಉಳಿದುಕೊಂಡಿರುತ್ತವೆ, ಭೂಮಿಯ ಮೇಲಿನ ಯಾವ ಶಕ್ತಿಯೂ, ಅದನ್ನು ನಿರ್ಮೂಲ ಮಾಡಬೇಕೆಂಬ ಯಾವ ಅಪೇಕ್ಷೆಯ ಆಲೋಚನೆಯೂ ಮೂಲಭೂತವಾದ ರಚನಾ ವ್ಯತ್ಯಾಸಗಳನ್ನು ತರಲಾರದು. ಆಗೀಗ ಕೆಲವು ಕಚ್ಚುಗಳಾಗಿದ್ದರೂ ಸದ್ಯದ ಭವಿಷ್ಯದಲ್ಲಿ ಭಾರೀ ಪ್ರಮಾಣದ ವ್ಯತ್ಯಾಸಗಳು ಸಂಭವಿಸುವಂತೆ ತೋರುವುದಿಲ್ಲ. ಒಂದು ಜಾತಿರಹಿತ ಸಮಾಜವನ್ನು ಕಟ್ಟಬೇಕು ಎಂಬ ಸಾಂವಿಧಾನಿಕ ಸಂಕಲ್ಪಕ್ಕೂ ಜಾತಿ ಆಧಾರದ ಮೇಲೆ ಕೆಲವು ವರ್ಗದವರನ್ನು ಮೇಲೆ ತರಲು ಮೀಸಲಾತಿ ಸೌಲಭ್ಯಗಳನ್ನು ಒದಗಿಸಬೇಕು ಎಂಬ ಸಾಂವಿಧಾನಿಕ ಅಪೇಕ್ಷೆಗೂ ನಡುವೆ ಎರಡನೆಯದರ ಪ್ರಾಧಾನ್ಯ ಅಧಿಕವಾಗಿ, ಈಗ ಅನೇಕ ಸಂಖ್ಯೆಯಲ್ಲಿ ಹೊಸ ಪಂಗಡಗಳು ಪರಿಶಿಷ್ಟಕ್ಕೆ ಸೇರಿವೆ, ಇನ್ನೂ ಅನೇಕ ವರ್ಗಗಳು ಸರಿಯಾದ ಸಮಯದಲ್ಲಿ ಹಕ್ಕೊತ್ತಾಯಪಡಿಸಲು ರಂಗಪಾರ್ಶ್ವದಲ್ಲಿ ಕಾಯುತ್ತಿವೆ.

ಜಾತಿ ಪಂಗಡಗಳ ಕ್ರೋಡೀಕರಣಕ್ಕೆ ವಿರುದ್ಧವಾಗಿ ಭಾರತದಲ್ಲಿ ಬುಡಕಟ್ಟು ಪರಿಸ್ಥಿತಿಯು ಹೆಚ್ಚು ನವ್ಯವಾಗಿವೆ, ಗಡಿಗಳು ಪೆಡಸನ್ನು ಕಳೆದುಕೊಂಡು ಸಡಿಲವಾಗುತ್ತಿವೆ. ನಾನು ಈ ಮೊದಲು ಬುಡಕಟ್ಟು ಸಮಾಜವನ್ನು 'ಸಾಕ್ಷರತಾ ಪೂರ್ವ' ಎಂದೂ ಜಾತಿ ಸಮಾಜವನ್ನು 'ಸಾಕ್ಷರತಾ' ಎಂದೂ ಲಕ್ಷಣ ಹೇಳಿದುದನ್ನು ಸಂಪೂರ್ಣವಾಗಿ ತೊರೆಯದಿದ್ದರೂ ಸ್ವಲ್ಪಮಟ್ಟಿನ ಮುನ್ನೆಚ್ಚರಿಕೆಯಿಂದ ಸ್ವೀಕರಿಸಬೇಕು. ಏಕೆಂದರೆ, ಸಾಹಿತ್ಯಕ ಸಂಪ್ರದಾಯಗಳನ್ನು ಬೆಳೆಸಿದ್ದು, ಪೋಷಿಸಿದ್ದು ಒಂದು ಪುಟ್ಟ, ಅಲ್ಪಸಂಖ್ಯಾತ ವರ್ಗ. ಅದು ಬಹುಸಂಖ್ಯಾತರನ್ನು ಅಕ್ಷರಜ್ಞಾನ ಪಡೆಯದಂತೆ ನಿಷೇಧಿಸಿತು. ವಿದ್ಯಾವಂತರು ರೀತಿನೀತಿಗಳ ಸಂಹಿತೆಯನ್ನೂ ಇತರ ಸಾಮಾಜಿಕ ನಿಯಮಾವಳಿಯನ್ನೂ ರೂಪಿಸಿ ಬಹುಸಂಖ್ಯಾತರು ಅವುಗಳಿಗೆ ಒಳಪಡುವಂತೆ ಮಾಡಿದರು. ಇಷ್ಟರಮಟ್ಟಿಗೆ ಭಾರತೀಯ ಜಾತಿ ಸಮಾಜವು ಪ್ರಾಚೀನ ಕಾಲದಿಂದ ಸಾಹಿತ್ಯಕ ಪರಂಪರೆಯನ್ನು ಉಳಿಸಿಕೊಂಡು ಬಂದಿರುವುದಾಗಿ ಹೆಮ್ಮೆಪಡಬಹುದು. ಈಗ ಬುಡಕಟ್ಟು ಜನರೂ ಔಪಚಾರಿಕ ಮತ್ತು ಅನೌಪಚಾರಿಕ ಶಿಕ್ಷಣದ ಮೂಲಕ ಸಾಕ್ಷರತೆಯನ್ನು ಪಡೆಯುತ್ತಿದ್ದಾರೆ. ಪ್ರಾರಂಭದಲ್ಲಿ ಕ್ರೈಸ್ತ ಮಿಶನರಿಗಳು ಬುಡಕಟ್ಟು ಪ್ರದೇಶಗಳಿಗೆ ನುಗ್ಗಿದರು, ವಿಶೇಷವಾಗಿ ಈಶಾನ್ಯ ಪ್ರದೇಶ, ಛೋಟಾನಾಗಪುರ ಮತ್ತು ಬೇರೆ ಕಡೆಗಳಲ್ಲಿ ಕ್ರೈಸ್ತ ಧರ್ಮಕ್ಕೆ ಮತಾಂತರಗೊಳಿಸಿ, ಅದರ ಬೆನ್ನಿಗೇ ವಿದ್ಯಾಭ್ಯಾಸ ಮತ್ತು ಆರೋಗ್ಯ ಸೇವೆಗಳನ್ನು ಒದಗಿಸಿದರು. ಬ್ರಿಟಿಷ್ ಸಾಮ್ರಾಜ್ಯದ ಆಳ್ವಿಕೆ ಬರಲಾಗಿ ಮಿಷನರಿ ಚಟುವಟಿಕೆಗಳಿಗೆ ಹೆಚ್ಚಿನ ಚುರುಕು ಮತ್ತು ಬಲ ಬಂದಿತು. ನಾಗಾಲ್ಯಾಂಡ್ ಇಂಗ್ಲೀಷನ್ನು ರಾಜ್ಯದ ಅಧಿಕೃತ ಭಾಷೆಯೆಂದು ಘೋಷಿಸಬೇಕಾದರೆ, ಪರಿಸ್ಥಿತಿ ಹೇಗಿದೆಯೆಂಬುದನ್ನು ಸುಲಭವಾಗಿಯೇ ಅಳತೆಮಾಡಬಹುದು.

ಬೈಲಿ ಈ ವಿಚಾರವನ್ನು ದೀರ್ಘವಾಗಿಯೇ ಚರ್ಚಿಸುತ್ತಾರೆ. ಒಂದು ಬುಡಕಟ್ಟಿಗೂ ಜಾತಿಗೂ ಇರುವ ವ್ಯತ್ಯಾಸವನ್ನು ಕುರಿತು ಅನೇಕ ವೇಳೆ ನೀಡಲಾಗುವ ಸಾಂಪ್ರದಾಯಿಕ ವಿವರಣೆಯನ್ನು ಅವರು ಸುಮ್ಮನೆ ಒಪ್ಪಿಕೊಂಡು ಬಿಡುವುದಿಲ್ಲ. ಭಾಷೆ, ಧರ್ಮ, ಹಿಂದುಳಿದಿರುವಿಕೆ, ಬೆಟ್ಟಪ್ರದೇಶಗಳಲ್ಲಿ ಮತ್ತು ಕಾಡಿನ ಅಂಚುಗಳಲ್ಲಿ ವಾಸಮಾಡುವಿಕೆ ಇವು ವಾದಕ್ಕೆ ಹೆಚ್ಚು ವಿಶ್ವಸನೀಯತೆಯನ್ನು ಕೊಡುತ್ತವೆಯೆಂದು ಅವರು ನಂಬುವುದಿಲ್ಲ. ಮೂಲನಿವಾಸಿತ್ವ ಸ್ಥಾನಮಾನವನ್ನು ಹೇಳುವುದನ್ನೂ ವಾದಕ್ಕೆ ಸಮರ್ಥನೆಯೆಂದು ತೆಗೆದುಕೊಳ್ಳಲಾಗುವುದಿಲ್ಲ. ವಾಸ್ತವವಾಗಿ, ಅವರು ಬುಡಕಟ್ಟು-ಜಾತಿಗಳನ್ನು ಒಂದು ಮುಂದುವರಿಕೆಯಾಗಿ ಹೀಗೆ ಭಾವಿಸುತ್ತಾರೆ : ಒಂದು ತುದಿಯಲ್ಲಿ ರಾಜಕೀಯ ವ್ಯವಸ್ಥೆಯ ಒಂದು ಮೂಲದ ಖಂಡವಾಗಿರುವ, ಸಮಾನತಾವಾದಿಯಾದ ಮಾದರಿಯ ಸಮಾಜವಿದೆ, ಅದಕ್ಕೆ ಯಾರೂ ಆಶ್ರಿತರಿಲ್ಲ; ಇನ್ನೊಂದು ತುದಿಯಲ್ಲಿ ಪ್ರಮಾಣವು ಖಂಡ ರಾಜಕೀಯ ಸಂಬಂಧಗಳನ್ನು ಹೊಂದಿರುವಂತಹ ಒಂದು ಸಮಾಜವಿದೆ, ಬಹುತೇಕ ಜನರು ಅಲ್ಲಿ ಆಶ್ರಿತರಂತೆ ಪಾತ್ರ ನಿರ್ವಹಿಸುತ್ತಾರೆ.[3]

ಬೈಲಿ ಅವರು ಇದನ್ನು ಬುಡಕಟ್ಟು ಜನರಾದ ಕೊಂಡರಿಗೂ, ಬೇರೆ ಬೇರೆ ಜಾತಿಗಳಿಂದ ಪ್ರತಿನಿಧಿತರಾದ ಒರಿಯಾಗಳಿಗೂ ಅನ್ವಯಿಸುವುದರಿಂದ ಅದೊಂದು ನ್ಯಾಯಸಮ್ಮತವಾದ

ಪ್ರತ್ಯೇಕತೆ ಎಂಬಂತೆ ತೋರುತ್ತದೆ. ಆದರೆ ಪ್ರಸ್ತುತ ಅಧ್ಯಯನಕ್ಕೆ, ಅವರೇ ನೀಡಿರುವ ಇನ್ನೊಂದು ಸೂತ್ರವು ಹೆಚ್ಚು ಸಂಗತವಾಗಿರುವಂತೆ ತೋರುತ್ತದೆ. ಹಾಗಾಗಿ ಅನೇಕ ಉಪ-ವಿಭಾಗಗಳಿಂದ ಕೂಡಿದ ಕಾಡುಕುರುಬರನ್ನು ಬುಡಕಟ್ಟು ಎಂದೂ, ಊರು ಕುರುಬರನ್ನು ಒಂದು ಜಾತಿ ಪಂಗಡವೆಂದೂ ಗುರುತಿಸಲು ಅದರಿಂದ ಸಹಾಯವಾಗುತ್ತದೆ. ಮುಂದುವರಿದು ಬೇಲೀ ಹೇಳುತ್ತಾರೆ. "ಒಂದು ನಿರ್ದಿಷ್ಟ ಪಂಗಡವು ಬುಡಕಟ್ಟೋ ಜಾತಿಯೋ ಎಂದು ಸ್ಥಿರಪಡಿಸಿ ಹೇಳುವ ವಿಧಾನಗಳು ಅವೇ ಆಗಿವೆ. ಸಂಪನ್ಮೂಲಗಳ ಮೇಲೆ ನೇರವಾಗಿ ಹತೋಟಿಯನ್ನಿಟ್ಟುಕೊಂಡಿದ್ದು, ಆರ್ಥಿಕತೆಯ ಮೂಲವಸ್ತುಗಳಿಗೆ ಇರುವ ದಾರಿಯು ಇತರರನ್ನು ಅವಲಂಬಿಸದೆ ಇತರರ ಮಧ್ಯವರ್ತಿ ತನದಿಂದ ಬಂದಿರದಿದ್ದರೆ ಅವರನ್ನು ಒಂದು ಬುಡಕಟ್ಟು ಎಂದು ಪರಿಗಣಿಸಬಹುದು."[4]

ಬುಡಕಟ್ಟನ್ನು ಕುರಿತ ಮೇಲಿನ ವರ್ಣನೆಯು ಇನ್ನೂ ಒಪ್ಪುವಂಥದೇ ಆಗಿದ್ದರೂ, ಭಾಗಶಃ ಅಗತ್ಯಕ್ಕಿಂತ ಅಧಿಕವಾಗಿದೆ. ಅದಕ್ಕೆ ಕಾರಣ, ಸರಕಾರವು ಜಾರಿಗೆ ತಂದಿರುವ ಹಲವು ಅರಣ್ಯ ಕಾನೂನುಗಳು. ಅವು ಬುಡಕಟ್ಟು ಜನರನ್ನು ಅವರ ಮೂಲನೆಲೆಯಿಂದಲೂ ಮೂಲ ಅರ್ಥ ವ್ಯವಸ್ಥೆಯಿಂದಲೂ ಕದಲಿಸಿ ಬುಡಮೇಲು ಮಾಡಿವೆ. ಅರಣ್ಯಾಧಿಕಾರಿಗಳು ಮತ್ತು ಅಂತಹ ಇತರರಿಂದಾಗಿ ಬುಡಕಟ್ಟು ಜನರನ್ನು ಕೂಲಿಕಾರರನ್ನಾಗಿ (ಕಾರ್ಮಿಕರನ್ನಾಗಿ) ಇನ್ನೂ ದೊಡ್ಡದಾದ ಒಂದು ಅರ್ಥವ್ಯವಸ್ಥೆಗೆ ಒಳಪಡಿಸಿವೆ. ಇಷ್ಟೆಲ್ಲಾ ಅರಣ್ಯ ಕಾನೂನುಗಳಿದ್ದರೂ ಅವರು ಇನ್ನೂ ಸಂಪನ್ಮೂಲಗಳನ್ನು ತಮ್ಮ ಅಂಕೆಯಲ್ಲಿಟ್ಟುಕೊಂಡಿದ್ದಾರೆ, ಆರ್ಥಿಕತೆಯ ಉತ್ಪಾದನಾ ವಸ್ತುಗಳ ಕಡೆಗೆ ಹಾದಿಯನ್ನು ಉಳಿಸಿಕೊಂಡಿದ್ದಾರೆ. ಈ ಅರ್ಥದಲ್ಲಿ, ಅನೇಕ ಇತರ ವಿಧಾನಗಳಿಂದಲೂ ನಾನು ಕಾಡು ಕುರುಬರನ್ನು ಬುಡಕಟ್ಟು ಪಂಗಡವೆಂದು ವರ್ಣಿಸುತ್ತೇನೆ.

ಹೆಚ್ಚೆಂದರೆ ಬುಡಕಟ್ಟುಗಳು ಮತ್ತು ಜಾತಿಗಳು ಒಂದು ಮುಂದುವರಿಕೆಯನ್ನು ತೋರಿಸುತ್ತವೆ; ಅವು ಪರಸ್ಪರ ಬದಲಾವಣೆಗೊಳ್ಳಲಾರವು. ಬುಡಕಟ್ಟುಗಳ ನೆರೆಯಲ್ಲೇ ಬದುಕುತ್ತಿರುವ ಜಾತಿ ಪಂಗಡಗಳ ಅಧಿಕ ಪ್ರಾಧಾನ್ಯವೂ ಒಂದಿಲ್ಲ ಒಂದು ಬಗೆಯ ಪಾರಸ್ಪರಿಕ ಕ್ರಿಯೆ-ಪ್ರತಿಕ್ರಿಯೆಗಳೂ, ಕಾಲ ಕಳೆದಂತೆ, ಸಂಖ್ಯಾ ದೃಷ್ಟಿಯಿಂದ ಬಲವಾಗಿರುವ ಬುಡಕಟ್ಟು ಪಂಗಡಕ್ಕೆ ಕೆಲವು ಜಾತಿ ಲಕ್ಷಣಗಳನ್ನು ನೀಡಿ, ಅದನ್ನು ಜಾತಿಯಂತಹ ಪಂಗಡವನ್ನಾಗಿ ಮಾಡುತ್ತದೆ. ಅದು ನೆರೆಯಲ್ಲಿರುವ ಇತರ ಜಾತಿಗಳು ಅದಕ್ಕೆ ಕೊಡುವ ಸ್ಥಾನವು ತೀರಾ ಕೆಳಮಟ್ಟದ್ದೂ ಅಲ್ಲ. ಇದಕ್ಕೆ ಕರ್ನಾಟಕದ ಕೊಡವರು (ಕೂರ್ಗಿಗಳು) ಮತ್ತು ಅರಸುಗಳು (ಹಿಂದೆ ರಾಜ್ಯವನ್ನು ಆಳುತ್ತಿದ್ದವರು) ನಿದರ್ಶನ. ಈ ಎರಡು ಪಂಗಡಗಳೂ ಮಿಶ್ರಿತ ಮೂಲದಿಂದ ಬಂದವರು; ಆದರೆ ಅವರಿಬ್ಬರೂ ಕ್ಷತ್ರಿಯ ಸ್ಥಾನಮಾನವನ್ನು ಹೇಳಿಕೊಳ್ಳುತ್ತಾರೆ. ಇಲ್ಲಿ ವಿಜಯವಾಗಲಿ, ಸಂಸ್ಕೃತೀಕರಣವಾಗಲಿ ವರ್ತಿಸದೆ, ವರ್ಣಸಂಕರದ ಪ್ರಕ್ರಿಯೆಯು ವರ್ತಿಸಿದೆ ಎಂದು ಹೇಳುವುದು ಸಂಭವನೀಯ ವಿವರಣೆಯಾಗುತ್ತದೆ.

ಒಂದು ಬುಡಕಟ್ಟು ಪಂಗಡವು ಜಾತಿಯ ರೂಪವನ್ನು ಪಡೆಯಿತೆಂದಮೇಲೆ, ಮೊದಲಿನ ಸ್ಥಿತಿಗೆ ಹಿಂದಿರುಗುವುದು ತುಂಬಾ ಕಷ್ಟ. ಆದರೆ ಸಾಂವಿಧಾನಿಕ ಸೌಲಭ್ಯಗಳು ಈ ಪಂಗಡಗಳಿಗೆ

ತಮ್ಮ 'ಮೂಲದ ಬೇರುಗಳನ್ನು' ಹುಡುಕಲು ಪ್ರೋತ್ಸಾಹ ನೀಡಿವೆ, ಹಾಗೆ ಪ್ರಚೋದಿಸಲು ಅವು ನೇರವಾಗಿ ಹೊಣೆಯಾಗಿವೆ. ಧಾರ್ಮಿಕ ಮತಾಂತರದ ಮೂಲಕ ಕ್ರಿಶ್ಚಿಯನ್ನರಾದವರು ಈಗ "ದಲಿತ" ಸ್ಥಾನಮಾನಕ್ಕಾಗಿ ಹಾತೊರೆಯುತ್ತಿದ್ದಾರೆ. ತಾವು ಹಿದೆ ಅಸ್ಪೃಶ್ಯ ಜಾತಿಗಳಾಗಿದ್ದು ಮತಾಂತರಗೊಂಡವರೆಂದೂ, ಆದ್ದರಿಂದ ಯಥಾಪೂರ್ವ ಸ್ಥಿತಿಯ ಆಧಾರದಿಂದ, ಪರಿಶಿಷ್ಟಜಾತಿಗಳಿಗೆ ಸಮನಾದ ಸಾಂವಿಧಾನಿಕ ಸವಲತ್ತುಗಳನ್ನು ತಮಗೆ ಅನ್ವಯಿಸಬೇಕೆಂದೂ, ಅವರು ವಾದಿಸುತ್ತಿದ್ದಾರೆ.

ಸಂವಿಧಾನವನ್ನು ರಚಿಸಿದವರು, ಮತ್ತು ಸಂವಿಧಾನ ಸಭೆಯ ಚರ್ಚೆಗಳಲ್ಲಿ ಭಾಗವಹಿಸಿದವರು ಪರಿಶಿಷ್ಟಕ್ಕೆ ಜನವರ್ಗಗಳನ್ನು ಸೇರಿಸಲು ಕೆಲವು ನಿರ್ದಿಷ್ಟ ತತ್ವಗಳನ್ನು ರೂಪಿಸಿದ್ದರು. ಆದರೆ ಈಗ ಅವೆಲ್ಲವನ್ನು ರಾಜಕೀಯ ತುರ್ತು ಮೀರಿಸಿಬಿಟ್ಟಿದೆ. ಸರಕಾರಗಳು ಮನಸ್ವಿಯಾಗಿ ಯಾವ ಯಾವುದೋ ಗುಂಪುಗಳನ್ನು ಪರಿಶಿಷ್ಟರಲ್ಲಿ ಸೇರಿಸುತ್ತಾ ಬಂದಿವೆ. ಸಿಖ್‌ಧರ್ಮಕ್ಕೆ ಪರಿವರ್ತನೆಗೊಂಡ ಪರಿಶಿಷ್ಟಜಾತಿಯ ಮತಾಂತರಗಳನ್ನು ಸೇರಿಸಬೇಕೇ ಬೇಡವೆ ಎಂಬ ವಿಷಯವು ಸಂವಿಧಾನ ಸಭೆಯಲ್ಲಿ ಭಾರೀ ಚರ್ಚೆಯನ್ನು ಎಬ್ಬಿಸಿತು; ಆದರೆ ಇಂದು ನವ ಬೌದ್ಧರೆನಿಸಿದ ಎಸ್.ಸಿ. (ಬಹುತೇಕ ಮಹರ್‌ರು) ವರ್ಗದವರು ಆ ಹಕ್ಕುಗಳನ್ನು ಪಡೆದಿದ್ದಾರೆ ಎಂಬುದನ್ನು ನಾವು ಬಲ್ಲೆವು. ಬ್ರಿಟೀಷರ ಆಳ್ವಿಕೆಯ ಕಾಲದಲ್ಲಿ "ಅಪರಾಧಿ ಬುಡಕಟ್ಟುಗಳು" (Criminal Tribes) ಎನಿಸಿದ್ದ ಒಡ್ಡರು ಮತ್ತು ಲಂಬಾಣಿಗಳು, ಕರ್ನಾಟಕದಲ್ಲಿ, ಬಹು ಮಟ್ಟಿಗೆ ರಾಜಕೀಯ ಮುಖಂಡರು ತೋರಿಸಿದ ಉದಾರತೆಯಿಂದಾಗಿ ಈಗ ಎಸ್.ಸಿ. ಸ್ಥಾನಮಾನವನ್ನು ಅನುಭೋಗಿಸುತ್ತಿದ್ದಾರೆ. ಹಾಗೆಯೇ ಪರಿವಾರರು ಅನಧಿಕೃತವಾಗಿ ಈಗಾಗಲೆ ಸೌಲಭ್ಯಗಳನ್ನು ಅನುಭವಿಸುತ್ತಿದ್ದರೂ, ಅಧಿಕೃತವಾಗಿ ಎಸ್.ಟಿ. ಎಂಬ ಪಟ್ಟಿಯನ್ನು ಪಡೆಯಲು ಪ್ರಯತ್ನಿಸುತ್ತಿದ್ದಾರೆ. ಈಗ ಎಲ್ಲಾ ಉಪ-ಪಂಗಡಗಳೊಂದಿಗೆ ಕಾಡು ಕುರುಬರು ತಮ್ಮಿಂದ ಬೇರೆಯಲ್ಲ, ತಾವಿಬ್ಬರೂ ಒಂದೇ ಎಂಬುದಾಗಿ ಊರು ಕುರುಬರು ವಾದಿಸುತ್ತಿದ್ದಾರೆ. ರಾಜ್ಯ ವಿಧಾನಸಭೆ ಮತ್ತು ಪಾರ್ಲಿಮೆಂಟುಗಳ ಶಿಫಾರಸಿನ ಮೇಲೆ ಭಾರತದ ರಾಷ್ಟ್ರಪತಿಯವರು ಇದನ್ನೇನಾದರೂ ಅನುಮೋದಿಸಿದ ಪಕ್ಷದಲ್ಲಿ ಕಾಡು ಕುರುಬರನ್ನು ಖಾಯಂ ಆಗಿ, ಮತ್ತೆ ತಲೆಯೆತ್ತದಂತೆ ಕಗ್ಗತ್ತಲ ಪ್ರಪಾತಕ್ಕೆ ತಳ್ಳಿದಂತಾಗುತ್ತದೆ. ಅವರು ತಮ್ಮ ಬದುಕನ್ನು ಉತ್ತಮಪಡಿಸಿಕೊಳ್ಳಲು ಸಾಂವಿಧಾನಿಕ ಸೌಲಭ್ಯಗಳನ್ನು ಪಡೆಯುವ ಆಸೆಯನ್ನು ಎಂದೆಂದೂ ಬಿಟ್ಟುಕೊಟ್ಟಂತಾಗುತ್ತದೆ.

ಎಸ್.ಸಿ ಅಲ್ಲದವರು, ಎಸ್.ಟಿ ಅಲ್ಲದವರು ತಾವು ಎಸ್.ಸಿಗಳು ಎಸ್.ಟಿಗಳು ಎಂದು ಹೇಳಿ ದಾಟಿಕೊಂಡು ಹೋಗುವ ಪ್ರವೃತ್ತಿಯು ಎಲ್ಲಾ ರಾಜ್ಯಗಳಲ್ಲೂ ದೇಶಾದ್ಯಂತವೂ ಕಂಡು ಬಂದಿದೆ. ಇವುಗಳಲ್ಲಿ ಒಂದಿಲ್ಲೊಂದು ಸ್ಥಾನವನ್ನು ಕೋರಿ ಒತ್ತಾಯ ಪಡಿಸುವ ಪಂಗಡಗಳ ಸಂಖ್ಯೆ ಅನೇಕ ಪಟ್ಟು ಅಧಿಕವಾಗುತ್ತಿದೆ. ಈ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳುವುದು ನಿಜವಾಗಿ ಕಷ್ಟವಾಗಿದ್ದರೂ, ಸಮಕಾಲೀನ ಭಾರತದಲ್ಲಿ ಅದು ಸತ್ಯವಾದ ಸಂಗತಿಯಾಗಿದೆ. ಸಂವಿಧಾನದ ಮೂಲ ಅರ್ಥವನ್ನು ಹಿಂದೆ ಹಾಕಲಾಗಿದೆ. ಇಂದು

ಅನೇಕರು ತಮ್ಮ ಪ್ರಾಚೀನತೆಯ ಬೇರುಗಳನ್ನು ಕೆದಕುತ್ತಿದ್ದಾರೆ. ಅಲ್ಲಿ ತಮ್ಮ ನೆಲೆ ಸಿಕ್ಕದೆ ಹೋದ ಪಕ್ಷದಲ್ಲಿ, ಅಥವಾ ಅದು ಸಾಲದೆ ಹೋದರೆ ಮುಂದಿನ ಅತ್ಯುತ್ತಮ ಮಾರ್ಗವೆಂದರೆ, ಜನರನ್ನು ಕೂಡಿಸುವುದು, ತಮ್ಮನ್ನೇ ಸಂಘಟಿಸಿಕೊಳ್ಳುವುದು, ಚಳುವಳಿ ಪ್ರಾರಂಭಿಸುವುದು, ಅದನ್ನೊಂದು ರಾಜಕೀಯ ವಿಚಾರವನ್ನಾಗಿ ಮಾಡುವುದು ಕಾಲ ಕ್ರಮದಲ್ಲಿ ಯಶಸ್ಸು ಗಳಿಸುವುದು. ಜನರನ್ನು ಬೇರೆ ಬೇರೆ ನೆಪಗಳಿಂದ ಒಡೆಯುವುದು, ಸಮೃದ್ಧವಾಗಿ ಲಾಭದ ಬೆಳೆ ಪಡೆಯಲು ಅನುಕೂಲವಾಗುವಂತೆ, ಅಶಾಂತಿ, ಕೋಲಾಹಲಗಳನ್ನು ಉಂಟುಮಾಡುವುದು, ರಾಜಕಾರಣಿಗಳ ಹಿತಾಸಕ್ತಿಗೆ ಹೊಂದಿಕೆಯಾಗುವಂಥದಾಗಿದೆ.

ಈಶಾನ್ಯ ಪ್ರಾಂತ ಬಿಹಾರದ ಛೋಟಾನಾಗಪುರ ಪ್ರದೇಶ, ಒರಿಸ್ಸಾ, ಮಧ್ಯಪ್ರದೇಶ ಮತ್ತು ಬುಡಕಟ್ಟುಗಳು ಸಾಂದ್ರೀಕರಿಸಿರುವ ಇತರ ಪ್ರದೇಶಗಳಲ್ಲಿ ಅವರು ಸುವ್ಯವಸ್ಥಿತರಾಗಿದ್ದಾರೆ. ರಾಜಕಾರಣಿಗಳಾಗಲಿ, ಸರಕಾರಗಳಾಗಲಿ ಅವರನ್ನು ಅಲಕ್ಷಿಸಲು ಸಾಧ್ಯವೇ ಇಲ್ಲ. ಆದರೆ ದೇಶದ ಬೇರೆ ಭಾಗಗಳಲ್ಲಿ ಬುಡಕಟ್ಟುಗಳು ಬಹಳ ಕಡಿಮೆ ಸಂಖ್ಯೆಯಲ್ಲಿವೆ. ಅಲ್ಲಿ ಅವರ ಸಮಸ್ಯೆಗಳನ್ನು ಕುರಿತು ಗಮನ ಕೊಟ್ಟಿರುವುದು ತುಂಬಾ ಕಡಿಮೆ. ಕೆಲವು ಎನ್ ಜಿ ಓ ಗಳು ಇರುವ ಸ್ಥಳಗಳಲ್ಲಿ ಮಾತ್ರ ಸ್ವಲ್ಪ ಮಟ್ಟಿಗೆ ಬುಡಕಟ್ಟು ಜನರ ಸಂಘಟನೆ, ಅವರ ಸಮಸ್ಯೆಗಳನ್ನು ದನಿಯೆತ್ತಿ ಹೇಳಿ ಪರಿಹಾರ ಬಯಸುವ ಕ್ರಿಯೆ ಕಂಡು ಬರುತ್ತದೆ.

ಕರ್ನಾಟಕದಲ್ಲಿ ಬುಡಕಟ್ಟು ಜನಸಂಖ್ಯೆ ತುಂಬಾ ಕಡಿಮೆ. ಉತ್ತರ, ದಕ್ಷಿಣ ಕನ್ನಡ, ಕೊಡಗು, ಮೈಸೂರು, ಚಿಕ್ಕಮಗಳೂರು ಈ 4-5 ಜಿಲ್ಲೆಗಳು ಬುಡಕಟ್ಟು ಜನ ವರ್ಗಗಳನ್ನು ಹೊಂದಿವೆ. ಆದರೂ ಶೂದ್ರ ವರ್ಣದ ವರ್ಗಗಳಿಗೆ ಸೇರಿದ ಜನರು ಸಂಘಟಿತರಾಗಿ ತಮ್ಮನ್ನು ಎಸ್.ಟಿ. ಗುಂಪಿಗೆ ಸೇರಿಸಬೇಕೆಂದು ಒತ್ತಾಯಪಡಿಸುತ್ತಿದ್ದಾರೆ. ಹೀಗೆ ಇತರರಿಗೆ ಹೊಟ್ಟೆಯುರಿ ಉಂಟಾಗಲು ಮುಖ್ಯ ಕಾರಣ ಕೇವಲ ಮೀಸಲಾತಿ ಸೌಲಭ್ಯಗಳು ಅಷ್ಟೇ. ಅವರಿಗೂ ಎಸ್. ಟಿ ಗಳಿಗೂ ನಿಜವಾಗಿ ಸಮಾನವಾಗಿರುವ ಅಂಶ ಯಾವುದೂ ಇಲ್ಲ. ಮಾರ್ಚಿ 1996 ರಷ್ಟು ಈಚೆಗೆ ಊರು ಕುರುಬರು ಸಮುದಾಯಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ವಿಚಾರಗಳನ್ನು ತಿಳಿಸಲು ಒಂದು ರಾಜ್ಯ ಮಟ್ಟದ ಸಮಾವೇಶವನ್ನು ನಡೆಸಿದರು. ಕೊನೆಯಲ್ಲಿ ಕುರುಬರು ಎಂದರೆ ಅವರು ಊರು ಕುರುಬರು ಮಾತ್ರವಲ್ಲ, ಕಾಡು ಕುರುಬರು, ಬೆಟ್ಟ ಹಾಗೂ ಜೇನು ಕುರುಬರೂ ಅವರಲ್ಲಿ ಸೇರುತ್ತಾರೆ ಎಂದು ನಿರ್ಣಯಿಸಿ ಪತ್ರಿಕಾ ಹೇಳಿಕೆಗಳನ್ನು ನೀಡಿದರು. ಇಂತಹ ವ್ಯವಸ್ಥಿತ ಪ್ರಯತ್ನಗಳಿಂದ ಸರಕಾರದ ಮೇಲೂ ಆಳುವ ಪಕ್ಷದ ಮೇಲೂ ರಾಜಕೀಯ ಪ್ರಭಾವವನ್ನು ಸೃಷ್ಟಿಸಲು ಸಾಧ್ಯವಾಗುತ್ತದೆ. ಈ ಹುನ್ನಾರು ತಪ್ಪುದಾರಿಗೆಳೆಯುವಂಥದು ಎಂದಾಗಲಿ, ಈಗಾಗಲೇ ಎಲ್ಲವನ್ನು ಕಳೆದುಕೊಂಡು ನಿರ್ಗತಿಕರಾಗಿರುವ ಜನರನ್ನು ತಪ್ಪುದಾರಿಗೆಳೆಯುವ ಅಥವಾ ಅವರನ್ನು ವಂಚಿಸುವ ಕ್ರಮವಾಗಿದೆ ಎಂದಾಗಲಿ ಯೋಚಿಸುವವರು ಬಹಳ ಕಡಿಮೆ ಜನ.

ಅವರ ನಡುವೆ ಇದ್ದೂ ಕಾರ್ಯೋನ್ಮುಖವಾಗಿರುವ ಒಂದು ಸ್ವಯಂ ಸೇವಾ ಸಂಸ್ಥೆಯ ಕೆಲಸದಿಂದಾಗಿ ಇಂದು ಕಾಡು ಕುರುಬರೂ ಸಂಘಟಿತರಾಗಿದ್ದಾರೆ ಎಂಬುದನ್ನು ಇಲ್ಲಿ ಸೂಚಿಸಲೇಬೇಕು. ಅದು ಡೀಡ್ (ಡೆವಲಪ್‌ಮೆಂಟ್ ಥ್ರೂ ಎಜುಕೇಷನ್ - ಶಿಕ್ಷಣದ ಮೂಲಕ ಅಭಿವೃದ್ಧಿ) ಎಂಬ ಹೆಸರಿನ ಸಂಸ್ಥೆ. ಮೈಸೂರು ಜಿಲ್ಲೆಯ ಹುಣಸೂರು ತಾಲ್ಲೂಕಿನಲ್ಲಿ ಡಾ. ಜೆರ್ರಿ ಪೈಸ್ ಎಂಬುವವರು ಅದನ್ನು ಸ್ಥಾಪಿಸಿದ್ದಾರೆ. ಅವರು ಕಲ್ಕತ್ತೆಯಲ್ಲಿ ಕಾರ್ಯನಿರತವಾಗಿರುವ "ಬ್ರದರ್ಸ್ ಟು ಆಲ್ ಮೆನ್" ಎಂಬ ಕ್ರಿಶ್ಚಿಯನ್ ಸಂಸ್ಥೆಯಲ್ಲಿ ಸಮಾಜಕಾರ್ಯವನ್ನು ಮಾಡಿ ಅನುಭವ ಪಡೆದವರು, ಆಮೇಲೆ ಕರ್ನಾಟಕಕ್ಕೆ ಬರುವುದಕ್ಕೆ ಮುಂಚಿತವಾಗಿ ಒಂದು ದಶಕದಷ್ಟು ಕಾಲ ಬಿಹಾರದಲ್ಲಿ ಕೆಲಸ ಮಾಡಿದರು.. ಅವರು ತಮ್ಮ ಕಾರ್ಯ ಚಟುವಟಿಕೆಗೆ ಹುಣಸೂರು ತಾಲೂಕನ್ನು ಆರಿಸಿಕೊಂಡು ಸಂಸ್ಥೆಯನ್ನು 1980 ರಲ್ಲಿ ನೋಂದಾಯಿಸಿದರು.

ಜೆರ್ರಿ ಪೈಸ್ ಒಬ್ಬ ಅರ್ಹತೆ ಹೊಂದಿದ ವೈದ್ಯರಾಗಿದ್ದರೂ, ತಾವು ಸ್ಥಾಪಿಸುತ್ತಿರುವ ಸಂಸ್ಥೆಯು ವಿದ್ಯಾಭ್ಯಾಸ ಮತ್ತು ಅದಕ್ಕೆ ಸಂಬಂಧಪಟ್ಟ ಅಂಶಗಳ ಮೇಲೆ ಕೇಂದ್ರಿಕರಿಸಬೇಕೆ ಹೊರತು, ಕಾಡು ಕುರುಬರ ನಡುವೆ ಕೆಲಸ ಮಾಡುವಾಗ ಅದು ಆರೋಗ್ಯ / ವೈದ್ಯಕ್ಷೇತ್ರವನ್ನು ಪ್ರವೇಶ ಸಾಧನವಾಗಿ ಉಪಯೋಗಿಸಲಿಲ್ಲ. ಕಾಡು ಕುರುಬರು ಹುಣಸೂರು ಮತ್ತು ನೆರೆಯ ಹೆಗ್ಗಡದೇವನ ಕೋಟೆ (ಎಚ್ ಡಿ ಕೋಟೆ) ತಾಲ್ಲೂಕುಗಳಲ್ಲೂ, ಕೊಡಗು ಜಿಲ್ಲೆಯಲ್ಲೂ ಹರಡಿಕೊಂಡಿದ್ದಾರೆ. ಅದರ ಉಪವಿಭಾಗಗಳಾದ ಬೆಟ್ಟ ಕುರುಬ, ಮತ್ತು ಜೇನು ಕುರುಬರೂ ಸೇರಿದಂತೆ ಕಾಡು ಕುರುಬರ ಸಂಖ್ಯೆ ಹುಣಸೂರು ತಾಲ್ಲೂಕಿನಲ್ಲಿ ಹೆಚ್ಚು.

ಡಾ. ಪೈಸ್ 1990 ರಲ್ಲಿ ಡೀಡ್ ಸಂಸ್ಥೆಯನ್ನು ಬಿಟ್ಟರು, ಆ ಮೊದಲು ಒಂದು ದಶಕ ಕಾಲ ಅವರು ಕಾಡುಕುರುಬರ ನಡುವೆ ಕೆಲಸ ಮಾಡಿದ್ದರು. ಈಗ ಅವರು ಆಕ್ಸ್‌ಫಾಮ್ ಎಂಬ ಸಂಸ್ಥೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಈಗಲೂ ಅವರು ಡೀಡ್‌ನಲ್ಲಿ ನಿರ್ದೇಶಕರ ಮಂಡಳಿಯ ಓರ್ವ ಸದಸ್ಯರಾಗಿ ಮುಂದುವರಿದಿದ್ದಾರೆ. ಈಗ ಅಧ್ಯಕ್ಷರು ಶ್ರೀ ನಂಜುಂಡಯ್ಯ; ಶ್ರೀ ಶ್ರೀಕಾಂತ್ ಅದರ ಪ್ರಧಾನ ಕಾರ್ಯದರ್ಶಿ - ಖಜಾಂಚಿ ಹಾಗೂ ಸಂಘಟನಾಧಿಕಾರಿ.

ವಾಸ್ತವವಾಗಿ ಇಂದು ಕಾಡುಕುರುಬರಲ್ಲಿ ಕಂಡುಬರುತ್ತಿರುವ ರಾಜಕೀಯ ಪ್ರಜ್ಞೆ ಮತ್ತು ಸಾಮಾನ್ಯ ಜಾಗೃತಿ, ಹೆಚ್ಚು ಕಡಿಮೆ ಶ್ರೀಕಾಂತ ಅವರ ಕೆಲಸವೇ ಆಗಿದೆ. ಸಮಾಜ ಕಾರ್ಯದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದಿರುವ ಶ್ರೀಕಾಂತ ಅವರಿಗೆ ಈ ಕಾರ್ಯದಲ್ಲಿ ಬುಡಕಟ್ಟಿನ ಹಾಗೂ ಬುಡಕಟ್ಟಲ್ಲದ ಕಾರ್ಯಕರ್ತರ ಒಂದು ತಂಡವು ನೆರವು ನೀಡುತ್ತಿದೆ.

1980ರ ಪ್ರಾರಂಭ ವರ್ಷಗಳಲ್ಲಿ ಡೀಡ್ ತೊಡಗಿಸಿದ ಸಮುದಾಯ ವ್ಯವಸ್ಥೆಯ ಪ್ರಕ್ರಿಯೆಯಿಂದ ಎರಡು ಮುಖ್ಯ ಸಂಘಟನೆಗಳು ರೂಪುಗೊಂಡವು. ಮೊದಲನೆಯದು, ಬುಡಕಟ್ಟು ಕೃಷಿಕರ ಸಂಘ (ಬಿ ಕೆ ಎಸ್); ಎರಡನೆಯದು, ವನವಾಸಿ ಮಹಿಳಾ ಸಂಘ. (ವಿ ಎಂ ಎಸ್) ಈ ಬಿ ಕೆ ಎಸ್ ಮತ್ತು ವಿ ಎಂ ಎಸ್ ಎರಡೂ ಕೂಡಿ ಬುಡಕಟ್ಟು ಸಮುದಾಯದ ಸಮಾಜಿಕ-ರಾಜಕೀಯ ಹಾಗೂ ಆರ್ಥಿಕ ಪ್ರಗತಿಗೆ ಕಾರಣವಾಗಿವೆ. ಕುರುಬರ ಸಂಘವು

ನೀಡಿದ ಪತ್ರಿಕಾ ಹೇಳಿಕೆಗಳಿಗೆ ಪ್ರತಿಕ್ರಿಯೆ ತೋರಿಸಿದ್ದು ಈ ಸಂಘಟನೆಗಳೇ. ಇವಲ್ಲದೆ ಇನ್ನೂ ಹಲವು ಕಾರ್ಯ ತಂಡಗಳಿವೆ. ಅವುಗಳಲ್ಲಿ ಬಡಕಟ್ಟು ಜನರೇ ಸಕ್ರಿಯವಾಗಿ ಪಾತ್ರ ವಹಿಸಿದ್ದಾರೆ. ಒಂದು ರೀತಿಯಲ್ಲಿ, ಹುಣಸೂರು ತಾಲ್ಲೂಕಿನ ಕಾಡು ಕುರುಬರು ನೆರೆಯ ಎಚ್. ಡಿ. ಕೋಟೆ ತಾಲೂಕಿನಲ್ಲಿ ವಾಸ ಮಾಡುತ್ತಿರುವ ಇತರ ಕಾಡು ಕುರುಬರಿಗೆ ನಾಯಕತ್ವವನ್ನು ಒದಗಿಸಿದ್ದಾರೆ. ಅಲ್ಲಿಯೂ ಹೆಚ್ಚಿನ ಸಂಖ್ಯೆಯಲ್ಲಿ ಎನ್. ಜಿ. ಓ ಗಳು ಕೆಲಸ ಮಾಡುತ್ತಿದ್ದು ಸ್ವಲ್ಪ ಮಟ್ಟಿಗೆ ಪುನರುಕ್ತಿ, ಸ್ಪರ್ಧೆ ಮತ್ತು ಗೊಂದಲಗಳೂ ಉಂಟಾಗಿವೆ.

ಊರು ಕುರುಬರ ಸಂಖ್ಯಾಬಲವು, ಅವರು ರಾಜ್ಯದ ಎಲ್ಲ ಕಡೆಯೂ ಕಂಡು ಬರುವುದರಿಂದಾಗಿ, ಬಹುತೇಕ ಮೈಸೂರು ಮತ್ತು ಕೊಡಗು ಜಿಲ್ಲೆಗಳಲ್ಲಿ ಕಂಡು ಬರುವ ಮುಷ್ಟಿ ಪ್ರಮಾಣದ ಕಾಡು ಕುರುಬರ ಅಭಿವೃದ್ಧಿಗೆ ಅಪಾಯವನ್ನೊಡ್ಡಿದೆ. ಬೇರೆ ಬೇರೆ ಸಮಯಗಳಲ್ಲಿ ಸೂತ್ರಗಳನ್ನು ಹಿಡಿದು, ಬೇರೆ ಬೇರೆ ಹಂತಗಳಲ್ಲಿ ಸರಕಾರದ ಮೇಲೆ ಒತ್ತಡ ತರಲು, ಎಲ್ಲ ಕುರುಬ ಉಪವಿಭಾಗಗಳನ್ನು ಒಂದೇ ತಂಡವಾಗಿ ಮಾಡುವಂತೆ ಮನವೊಲಿಸಲು ಅನೇಕ ಜನ ಎಂ. ಪಿ. ಗಳಿದ್ದಾರೆ, ಎಂ. ಎಲ್. ಎ ಗಳೂ ಸಚಿವರೂ ಇದ್ದಾರೆ. ಅಲ್ಲದೆ ಶಿಕ್ಷಣ, ವೃತ್ತಿ ವೈವಿಧ್ಯ, ಆಸ್ತಿ ಪಾಸ್ತಿ, ನಿಧಿ ಮೊದಲಾದ ಅಂಶಗಳಲ್ಲಿ ಊರುಕುರುಬರು ಉತ್ತಮ ರೀತಿಯಲ್ಲಿ ಸಜ್ಜುಗೊಂಡಿದ್ದಾರೆ. ಕಾಡು ಕುರುಬರಲ್ಲಿ ಸಾಕಷ್ಟು ಅರಿವೂ ಸಾಮಾನ್ಯ ಜಾಗೃತಿಯೂ ಬಂದಿರುವುದರಿಂದ ಊರು ಕುರುಬರ ಆಶೋತ್ತರಗಳಿಗೆ ತಡೆಯಾಗಬಹುದು, ಅವು ಈಡೇರಲು ನಿರೀಕ್ಷಿಸಿದುದಕ್ಕಿಂತಲೂ ದೀರ್ಘವಾದ ಸಮಯಬೇಕಾಗಬಹುದು. ಊರು ಕುರುಬರು ರಾಜ್ಯಮಟ್ಟದಲ್ಲಿ ಒಂದು ಶಕ್ತಿಯಾಗಿದ್ದರೆ, ಬುಡಕಟ್ಟು ಜನರು ರಾಷ್ಟ್ರಮಟ್ಟದಲ್ಲಿ ಒಂದು ಶಕ್ತಿಯಾಗಿ ಮೂಡುತ್ತಿದ್ದಾರೆ. ಅವರೂ ಅವರ ಮುಖಂಡರೂ 1996 ಫೆಬ್ರುವರಿಯಲ್ಲಿ ದೆಹಲಿಯಲ್ಲಿ ಸೇರಿ, ಭೂರಿಯಾ ಸಮಿತಿ ವರದಿಯನ್ನು ಕಾರ್ಯಗತಗೊಳಿಸಬೇಕೆಂದೂ, ಇತರ ಬೇಡಿಕೆಗಳನ್ನು ಈಡೇರಿಸಬೇಕೆಂದೂ ಕೇಂದ್ರ ಸರಕಾರದ ಮೇಲೆ ಒತ್ತಾಯ ತಂದರು. ಬೇಡಿಕೆಗಳಲ್ಲಿ ಮುಖ್ಯವಾಗಿದ್ದುದು ಬುಡಕಟ್ಟುಗಳಿಗೆ ಸ್ವಯಮಾಡಳಿತ ಕೊಡಬೇಕು ಎನ್ನುವುದು. ಇದರಲ್ಲಿ ಬುಡಕಟ್ಟು ಕೃಷಿಕರ ಸಂಘ (ಬಿ. ಕೆ. ಎಸ್) ದ ಪ್ರತಿನಿಧಿಗಳು ಸಕ್ರಿಯವಾದ ಪಾತ್ರವನ್ನು ನಿರ್ವಹಿಸಿದ್ದರು. ಭಾರತ ಸರಕಾರವೂ ಇತರ ಅನೇಕ ರಾಜಕೀಯ ನಾಯಕರೂ ಅವರ ಬೇಡಿಕೆಗೆ ಬೆಂಬಲವನ್ನು ವ್ಯಕ್ತಪಡಿಸಿದ್ದಾರೆ. ಬದಲಾದ ಪರಿಸ್ಥಿತಿಯಲ್ಲಿ ನೂತನ ಸರಕಾರವು ಬುಡಕಟ್ಟುಗಳಿಗೆ ಸ್ವಯಮಾಡಳಿತವನ್ನು ಇತರ ಸೌಲಭ್ಯಗಳನ್ನು ನೀಡಿ ಎಷ್ಟು ಮಟ್ಟಿಗೆ ಆಶ್ವಾಸನೆಯನ್ನು ಪೂರೈಸುತ್ತದೆ ಎಂಬುದನ್ನು ಕಾದು ನೋಡಬೇಕಾಗಿದೆ.

ಮುಂದಿನ ಅಧ್ಯಾಯದಲ್ಲಿ ನಾಲ್ಕು ಜಿಲ್ಲೆಗಳಿಂದ ಸಂಗ್ರಹಿಸಿದ ಸುಮಾರು 601 ಕುರುಬ ಮಾಹಿತಿದಾರರು ಕೊಟ್ಟ ಮಾಹಿತಿಯನ್ನು ವಿಶ್ಲೇಷಿಸಲಾಗುತ್ತದೆ. ಸಾಂದರ್ಭಿಕವಾಗಿ ಈ ವಿಶ್ಲೇಷಣೆಯು ಜಾತಿ - ಬುಡಕಟ್ಟು ವ್ಯತ್ಯಾಸಗಳನ್ನು ಎತ್ತಿ ತೋರಿಸುತ್ತದೆ. ಐತಿಹಾಸಿಕವಾಗಿ ಅನೇಕ ರೀತಿಗಳಲ್ಲಿ ಒಂದೇ ಸಮನಾದ ಅಂತರ - ಕ್ರಿಯೆ ಹಾಗೂ ಜಾತಿ

ಪದ್ಧತಿಯ ಪ್ರಭಾವವು ಬುಡಕಟ್ಟು ಜನರ ಮೇಲೆ ಕಂಡು ಬಂದಿದ್ದರೂ, ಅದರ ವ್ಯತಿರಿಕ್ತ, ಸ್ಥಿತಿಯು ಅಂದರೆ, ಜಾತಿಗಳು ಬುಡಕಟ್ಟು ಜೀವನಶೈಲಿಯನ್ನು ಅಳವಡಿಸಿಕೊಳ್ಳುವಿಕೆಯು ಕಂಡು ಬಂದಿರಲಿಲ್ಲ. 20 ನೆಯ ಶತಮಾನದ ಕೊನೆಗೆ ಅನೇಕ ಜಾತಿ ಪಂಗಡಗಳು ಬುಡಕಟ್ಟು ಸೋಗು ಧರಿಸುತ್ತಿರುವಂತೆ ಕಾಣಿಸುತ್ತಿದೆ. ಜಾತಿ ಪದ್ಧತಿಯೇ 'ಮೀಸಲಾತಿ ಪ್ರಯೋಜನಗಳ' ಸಲುವಾಗಿ ಧೃವೀಕರಿಸುತ್ತಿರುವುದೂ ಕಾಣಿಸುತ್ತದೆ.

---

1. ಎಂ.ಎನ್. ಶ್ರೀನಿವಾಸ್ : Religion and Society Among Coorgs of South India, ಆಕ್ಸ್‌ಫರ್ಡ್, 1952.
2. ಎಫ್.ಜಿ. ಬೈಲಿ, Tribe and Caste in India, in Continution to Indian Sociology ಕೃತಿಯಲ್ಲಿ ಸಂ.V. ಅಕ್ಟೋಬರ್ 1961, ಪು. 7-19.
3. ಎಫ್.ಜಿ. ಬೈಲಿ - Tribe, Caste and Nation ಮ್ಯಾಂಚೆಸ್ಟರ್ ವಿಶ್ವವಿದ್ಯಾಲಯ ಪ್ರೆಸ್, ಮ್ಯಾಂಚೆಸ್ಟರ್, 1960, ಪುಟ-264.
4. ಎಫ್.ಜಿ. ಬೈಲಿ - Tribe, Caste and Nation ಮ್ಯಾಂಚೆಸ್ಟರ್ ವಿಶ್ವವಿದ್ಯಾಲಯ ಪ್ರೆಸ್, ಮ್ಯಾಂಚೆಸ್ಟರ್, 1960, ಪುಟ - 265.

* * *

## ಅಧ್ಯಾಯ : ನಾಲ್ಕು

# ಕರ್ನಾಟಕದ ಕುರುಬರು

ಒಂದೇ ಹೆಸರನ್ನು ಹೊಂದಿರುವ ಎರಡು ಸ್ಥೂಲ ವಿಭಾಗಗಳನ್ನು ಪ್ರಕಾಶಗೊಳಿಸಿ ತೋರಿಸಲು ಇಲ್ಲಿ ಪ್ರಯತ್ನಿಸಲಾಗಿದೆ. ಆಮೇಲೆ ಬೇರೆ ಬೇರೆ ಹೆಸರುಗಳಿರುವ ಅನೇಕ ಉಪವಿಭಾಗಗಳನ್ನು ಉಲ್ಲೇಖಿಸಲಾಗಿದೆ. ಕಾಡು ಕುರುಬರನ್ನು ಈಚೀನವರೆಗೂ ಹೆಚ್ಚು ಕಡಿಮೆ ಅರಣ್ಯಗಳಲ್ಲಿ ವಾಸ ಮಾಡುವ ಬುಡಕಟ್ಟು ಜನರೆಂದು ಹೇಳಬಹುದಾಗಿತ್ತು. ಅವರು ಬಹುಮಟ್ಟಿಗೆ ಕರ್ನಾಟಕದ ಮೈಸೂರು ಮತ್ತು ಕೊಡಗು ಜಿಲ್ಲೆಗಳಿಗೆ ಸೀಮಿತರಾಗಿದ್ದಾರೆ. ಕಾಡುಗಳಲ್ಲಿ, ಕಾಡುಗಳ ಸುತ್ತ, ಬೆಟ್ಟ ಪ್ರದೇಶಗಳಲ್ಲಿ ಜೀವಿಸುತ್ತಿರುವ ಇವರು ಆಹಾರವನ್ನು ಹೆಕ್ಕಿ ಜೀವಿಸುವವರು, ಕೆಲವು ವೇಳೆ ಸರದಿ ಬೇಸಾಯ ಮಾಡುವವರು. ಕಾಡು ಕುರುಬರಲ್ಲಿ ಸಗೋತ್ರ ವಿವಾಹ (ಅಂತರ್ ವಿವಾಹ) ದ ಪದ್ಧತಿಯಿರುವ ಉಪವಿಭಾಗಗಳಿವೆ - ಬೆಟ್ಟ ಕುರುಬ, ಜೇನು ಕುರುಬ ಮತ್ತು ಮುಳ್ಳು ಕುರುಬ. ಬಹುತೇಕ ತಮಿಳುನಾಡಿನ ನೀಲಗಿರಿ ಪ್ರದೇಶದಲ್ಲಿ ಮುಳ್ಳು ಕುರುಬರು ಕಂಡು ಬರುತ್ತಾರೆ. ಹಾಗಾಗಿ ಪ್ರಸ್ತುತ ಅಧ್ಯಯನವು ಬೆಟ್ಟಕುರುಬ ಮತ್ತು ಜೇನು ಕುರುಬರನ್ನು ಮಾತ್ರ ಒಳಗೊಳ್ಳುತ್ತದೆ.

ಊರು ಕುರುಬ (ಹಳ್ಳಿ) ರನ್ನು ಇನ್ನು ಮುಂದೆ ಕುರುಬರೆಂದು ಮಾತ್ರ ಉಲ್ಲೇಖಿಸಲಾಗುತ್ತದೆ. ಇವರು ಕರ್ನಾಟಕದ ಹಳ್ಳಿಗಳಲ್ಲಿ, ಪಟ್ಟಣಗಳಲ್ಲಿ ಮತ್ತು ನಗರಗಳಲ್ಲಿ ಕಂಡು ಬರುತ್ತಾರೆ. ಜನಗಣತಿಯು ಜಾತಿಯನ್ನು ದಾಖಲಿಸುವುದಿಲ್ಲವಾದ್ದರಿಂದ ಕುರುಬರ ಜನಸಂಖ್ಯೆಯನ್ನು ಗುರತಿಸುವುದು ಸಾಧ್ಯವಾಗುವುದಿಲ್ಲ. 1970 ಮತ್ತು 1980 ರಲ್ಲಿ ಎಲ್.ಜಿ. ಹಾವನೂರು ಮತ್ತು ವೆಂಕಟಸ್ವಾಮಿ ಅವರ ನೇತೃತ್ವದ ಎರಡು ಹಿಂದುಳಿದ ವರ್ಗಗಳ ಆಯೋಗಗಳು ವಿವಿಧ ಜನಗಣತಿಗಳು ಮತ್ತು ಇತರ ವರದಿಗಳಿಂದ ಸಂಗ್ರಹಿಸಿ, ಕೆಲವೊಮ್ಮೆ ಶತಮಾನದ ತಿರುವಿಗೆ ಹಿಂದಕ್ಕೆ ಹೋಗಿ, ಪ್ರಸ್ತುತ ಇರುವ ಕುರುಬರ ಸಂಖ್ಯೆಯ ಅಂದಾಜನ್ನು ನೀಡಿವೆ. ಆದರೆ ಸಂಘವು ಉತ್ಪ್ರೇಕ್ಷಿತ ಜನಸಂಖ್ಯೆಯನ್ನು ಕೊಡುತ್ತದೆ. ಆಯೋಗಗಳು ಸ್ವೀಕರಿಸಿರುವ ಸಂಖ್ಯೆಯಲ್ಲೂ ದೋಷಗಳಿವೆ. ನಿದರ್ಶನಕ್ಕೆ ಹಾವನೂರು ಆಯೋಗದ ವರದಿಯಲ್ಲಿ ಮಿತ ಸಂಖ್ಯೆಯಲ್ಲಾದರೂ ಕರ್ನಾಟಕದ ಇತರ ಕೆಲವು ಜಿಲ್ಲೆಗಳಲ್ಲಿ ಕಾಡು ಕುರುಬರು ಕಂಡುಬರುತ್ತಾರೆ. ವಿವರಗಳನ್ನು ಮುಂದಿನ ಪಟ್ಟಿಕೆಗಳಲ್ಲಿ ಕೊಟ್ಟಿದೆ.

ಕ್ಷೇತ್ರ ಮಾಹಿತಿಯಲ್ಲೂ ಕೂಡ, ಬಳ್ಳಾರಿ, ಚಿತ್ರದುರ್ಗ ಮತ್ತು ಧಾರವಾಡ ಜಿಲ್ಲೆಗಳಿಗೆ ಸೇರಿದವರೆನ್ನಲಾಗಿದೆ ಕೆಲವರು ಕಾಡು ಕರುಬರಾಗಿ, ಇತರ ಉಪಪಂಗಡಗಳೊಂದಿಗೆ ಹಿಂದಿರುಗಿದ್ದಾರೆ.

ಥರ್ಸ್ಟನ್, ಬುಡಕಟ್ಟು ಮತ್ತು ಜಾತಿ ಕುರುಬರ ಒಂದು ವರ್ಣನಾತ್ಮಕ ನಿರೂಪಣೆಯನ್ನು ಅವರ ಮೂಲವನ್ನು ಕುರಿತ ಕೆಲವು ಐತಿಹ್ಯಗಳನ್ನು ಕೊಡುತ್ತಾರೆ. ತಮಗಿಂತ ಹಿಂದೆ ಬಿಷಪ್ ಕಾಲ್ಡ್‌ವೆಲ್ ಮತ್ತು ಸ್ಟುವರ್ಟ್ ಬರೆದ ಕೃತಿಗಳಿಂದ ಅವರು ಉದ್ಧರಿಸುತ್ತಾರೆ. ಇದು ಸ್ಟುವರ್ಟ್ ಹೇಳಿರುವ ಮಾತು : "ಅವರು (ಕುರುಬರು) ದಕ್ಷಿಣ ಭಾರತದಲ್ಲಿ ಹಿಂದೊಮ್ಮೆ ಅತ್ಯಂತ ಪ್ರಬಲರಾಗಿದ್ದ ಪ್ರಾಚೀನ ಪಲ್ಲವರ ಆಧುನಿಕ ಪ್ರತಿನಿಧಿಗಳು". ಇದರ ಜೊತೆಗೆ ಥರ್ಸ್ಟನ್ ಇನ್ನೊಂದು ಐತಿಹ್ಯವನ್ನು ದಾಖಲಿಸುತ್ತಾರೆ. ಮೂಲತಃ ಕುರುಬರು ಕಾಪುಗಳಾಗಿದ್ದರು ಎಂದು ಅದು ಸೂಚಿಸುತ್ತದೆ. ಎಲ್. ಅನಂತಕೃಷ್ಣ ಅಯ್ಯರ್ ಅವರ ಕೃತಿಯಲ್ಲಿ ಇಂಥದೇ ಇನ್ನೊಂದು ರಾಜಮನೆತನದ ಮೂಲದ ಉಲ್ಲೇಖವಿದೆ. ಕಾಡು ಮತ್ತು ಊರು ಕುರುಬರ ನಡುವೆ ವ್ಯತ್ಯಾಸಗಳಿಗೆ ಕಾರಣ ಭೌಗೋಳಿಕ ಮತ್ತು ಪರಿಸರ ವ್ಯತ್ಯಾಸಗಳು ಎಂದು ವಿವರಿಸಲು ಅವರು ಪ್ರಯತ್ನಿಸಿದ್ದಾರೆ. 7-8 ನೇ ಶತಮಾನಗಳಲ್ಲಿ ಚೋಳ ಮತ್ತು ಚಾಲುಕ್ಯ ಅರಸರು ಪಲ್ಲವರನ್ನು ಸೋಲಿಸಿದುದರ ಪರಿಣಾಮ ಇದು ಎಂದು ಅವರು ಹೇಳುತ್ತಾರೆ.

ಕುರುಬರ ಮೂಲವನ್ನು ವಿವರಿಸಲು ಮಾಡುವ ಇಡೀ ಕಸರತ್ತು ಊಹಾತ್ಮಕ ಇತಿಹಾಸದಲ್ಲಿ ಮುಸುಕಿಕೊಂಡಿದೆ. ಒಂದಕ್ಕಿಂತ ಹೆಚ್ಚು ಐತಿಹ್ಯಗಳಿರುವಾಗ ಈ ಅಸ್ಪಷ್ಟತೆ ಇನ್ನೂ ಹೆಚ್ಚು. ಕಾಡು ಕುರುಬರನ್ನೂ ಊರು ಕುರುಬರನ್ನೂ ಒಂದೇ ಮೂಲಕ್ಕೆ ಸೇರಿಸಲು ಹೋಗುವುದೇ ಅತ್ಯಂತ ಕೆಟ್ಟ ಗೊಂದಲಕ್ಕೆ ಕಾರಣವಾಗಿದೆ. ಎ - ಬಿ - ಸಿ ಪಟ್ಟಿಗಳಲ್ಲಿ ಹಾವನೂರು ಆಯೋಗದ ವರದಿಯ ಪ್ರಕಾರ ಕೊಟ್ಟಿರುವ ಜನಗಣತಿಯ ಅಂಕೆ ಸಂಖ್ಯೆಗಳೂ ಸರಿಯಾಗಿಲ್ಲ, ತಪ್ಪುದಾರಿಗೆಳೆಯುತ್ತವೆ. 1961 ರಷ್ಟು ಹಿಂದೆಯೇ ಕಾಡು ಕುರುಬರು ಮತ್ತು ಜೇನು ಕುರುಬರು ರಾಜ್ಯದ ಸುಮಾರು ಹತ್ತು ಜಿಲ್ಲೆಗಳಲ್ಲಿ ಕಂಡು ಬರುತ್ತಿದ್ದರೆ ಅದು ಆಶ್ಚರ್ಯಕರವಾಗಿ ಭಾಸವಾಗುತ್ತದೆ, ಮತ್ತು ವಿವಾದಾಸ್ಪದವಾಗಿದೆ. ಜನಗಣತಿಯ ಮಾಹಿತಿ ನಿರ್ದಿಷ್ಟವಲ್ಲ. ಹಾವನೂರು ಆಯೋಗವು ಕೆಲವು ಜಿಲ್ಲೆಗಳಿಗೆ 1941 ನ್ನು ಆಧಾರವರ್ಷವಾಗಿಟ್ಟುಕೊಂಡು , ಇತರ ಕೆಲವು ಜಿಲ್ಲೆಗಳಿಗೆ 1931 ನ್ನು, ಇನ್ನೂ ಕೆಲವಕ್ಕೆ 1911-1901 ನೆಯ ವರ್ಷಗಳನ್ನು ಇಟ್ಟುಕೊಂಡಿದೆ. ಇದನ್ನು A ಪಟ್ಟಿಕೆಯಿಂದ ನೋಡಬಹುದು. ಆದ್ದರಿಂದ ಈ ಮಾಹಿತಿಯನ್ನು ಸಾಕಷ್ಟು ಹಿಂಜರಿಕೆಯಿಂದಲೇ ತೆಗೆದುಕೊಳ್ಳಬೇಕಾಗಿದೆ. ಈ ಇಡೀ ಕಸರತ್ತನ್ನು ಕೈಗೊಂಡಿರುವುದಾದರೂ ಹಿಂದುಳಿದ ವರ್ಗಗಳು ಎಂಬ ವರ್ಗದಲ್ಲಿ ಮೀಸಲಾತಿ ಸೌಲಭ್ಯಗಳನ್ನು ಒದಗಿಸುವುದಕ್ಕಾಗಿಯೇ.

1984 ರ ವೆಂಕಟಸ್ವಾಮಿ ಆಯೋಗದ ವರದಿಯಲ್ಲಿ ಕುರುಬ ಜನಸಂಖ್ಯೆಯಲ್ಲಿ ಸುಮಾರಾಗಿ 4,67,000 ಎಂಬ ಏರಿಕೆಯ ಸಂಖ್ಯೆಯಿದೆ. ಕುರುಬರ ಸಂಘವೇನೋ ತಮ್ಮ

ಜನಸಂಖ್ಯೆ ರಾಜ್ಯದ ಒಟ್ಟು ಜನಸಂಖ್ಯೆಯ 10% ಆಗಿದೆ ಎಂದೂ, ವಿಶೇಷವಾಗಿ ಶಿಕ್ಷಣ ಮತ್ತು ಉದ್ಯೋಗ ಕ್ಷೇತ್ರಗಳಲ್ಲಿ ತಮಗೆ ನ್ಯಾಯವು ಸಂದಿಲ್ಲವೆಂದೂ, ಆದ್ದರಿಂದ ಒಡನೆಯೇ ತಮ್ಮನ್ನು ಎಸ್. ಟಿ. ವರ್ಗಕ್ಕೆ ಸೇರಿಸಬೇಕೆಂದೂ ಕೇಳುತ್ತಿದೆ. ಮತ್ತೆ ಮತ್ತೆ ಸರಕಾರದ ಮೇಲೆ ಒತ್ತಡ ಹೇರಲು ಅವರು ಪ್ರತಿಭಟನಾ ಸಭೆಗಳನ್ನು ನಡೆಸುತ್ತಿದ್ದಾರೆ. ಉದ್ದಕ್ಕೂ ಅವರು ನಿಯಮವೆಂಬಂತೆ, ಕಾಡು ಕುರುಬರು, ಬೆಟ್ಟಕುರುಬರು ಮತ್ತು ಜೇನು ಕುರುಬರನ್ನೂ ಕುರುಬ ಸಮುದಾಯದಲ್ಲಿ ಸದಸ್ಯರನ್ನಾಗಿ ಸೇರಿಸಿಕೊಂಡಿದ್ದಾರೆ. ಆದರೆ ಎರಡೂ ಪಂಗಡಗಳ ನಡುವೆ ಯಾವುದೇ ಬಗೆಯ ಅಂತರ - ಕ್ರಿಯೆ ನಡೆಯುವುದು ಕಂಡು ಬಂದಿಲ್ಲ, ಅಥವಾ ನಡೆಯುವುದಕ್ಕೆ ಸಾಕ್ಷ್ಯಾಧಾರವಿಲ್ಲ.

ವೆಂಕಟಸ್ವಾಮಿ ವರದಿಯ ಪ್ರಕಾರ, "ಕುರುಬರು ಕುರಿಗಾಹಿಗಳ ಒಂದು ಗ್ರಾಮೀಣ ಸಮುದಾಯ. ಸಾಂಪ್ರದಾಯಿಕವಾಗಿ ಅವರು ಕುರಿಮಂದೆಗಳನ್ನು ಸಾಕುತ್ತಾರೆ ಮತ್ತು ಉಣ್ಣೆಯ ಕಂಬಳಿಗಳನ್ನು ನೇಯುತ್ತಾರೆ."

## ಪಟ್ಟಿಕೆ - ಎ

**ಎಲ್. ಜಿ. ಹಾವನೂರು ಆಯೋಗದ ವರದಿಯ (1975) ಪ್ರಕಾರ 1972 ರಲ್ಲಿ ರಾಜ್ಯದಲ್ಲಿದ್ದ ಕುರುಬರ ಜನಸಂಖ್ಯೆ - 20,32,032. ಇದು ರಾಜ್ಯದ ಜನಸಂಖ್ಯೆಯ ಶೇಕಡಾ 6.77 %ಆಗಿದೆ.**

| 1<br>ಕ್ರಸಂ. | 2<br>ಜಿಲ್ಲೆ | 3<br>ಆಧಾರ ವರ್ಷ | 4<br>ಆ.ವ.ಜನ. ಸಂಖ್ಯೆ | 5<br>1971 ಕ್ಕೆ ಅಂದಾಜು ಜನಸಂಖ್ಯೆ | 6<br>1956 ರಾಜ್ಯ ಮರು ವಿಂಗಡನೆಯಂತೆ 1971 ಕ್ಕೆ ಅಂದಾಜು ಜನಸಂಖ್ಯೆ | 7<br>1972 ಕ್ಕೆ ಅಂದಾಜು ಜನಸಂಖ್ಯೆ |
|---|---|---|---|---|---|---|
| 1. | ಬೆಂಗಳೂರು | 1941 | 55,248 | 128,319 | 128,390 | 132,733 |
| 2. | ಚಿಕ್ಕಮಗಳೂರು | 1941 | 32,041 | 65,876 | 65,876 | 67,411 |
| 3. | ಚಿತ್ರದುರ್ಗ | 1941 | 47,648 | 91,679 | 91,679 | 94,218 |
| 4. | ಹಾಸನ | 1941 | 49,002 | 86,052 | 86,052 | 88,031 |
| 5. | ಕೋಲಾರ | 1941 | 46,449 | 72,372 | 72,372 | 73,328 |
| 6. | ಮಂಡ್ಯ | 1941 | 42,468 | 77,237 | 77,137 | 79,328 |
| 7. | ಮೈಸೂರು | 1941 | 111,686 | 196,780 | 218,209 | 223,511 |
| 8. | ಶಿವಮೊಗ್ಗ | 1941 | 26,160 | 61,607 | 61,607 | 63,326 |
| 9. | ತುಮಕೂರು | 1941 | 55,349 | 94,259 | 94,259 | 96,050 |
| 10. | ಬಳ್ಳಾರಿ | 1911 | 100,997 | 187,414 | 116,609 | 119,250 |
| 11. | ಕೊಡಗು | 1901 | 7,373 | 15,940 | 15,940 | 16,240 |

| | | | | | | |
|---|---|---|---|---|---|---|
| 12. | ದಕ್ಷಿಣ ಕನ್ನಡ | 1901 | 227 | 490 | 373 | 382 |
| 13. | ಬೆಳಗಾವಿ | 1931 | 83,310 | 163,116 | 155,495 | 158,947 |
| 14. | ಬಿಜಾಪುರ | 1931 | 122,367 | 232,081 | 232,011 | 236,558 |
| 15. | ಧಾರವಾಡ | 1931 | 106,031 | 200,462 | 200,462 | 204,471 |
| 16. | ಉತ್ತರ ಕನ್ನಡ | 1931 | 1,185 | 2,408 | 2,408 | 2,464 |
| 17. | ಬೀದರ್ | 1911 | 62,241 | 120,586 | 56,663 | 58,040 |
| 18. | ಗುಲ್ಬರ್ಗಾ | 1911 | 100,821 | 181,810 | 152,284 | 165,984 |
| 19. | ರಾಯಚೂರು | 1911 | 105,047 | 189,589 | 156,942 | 161,462 |

ಮೂಲ : ಮೊದಲನೆಯ ಕರ್ನಾಟಕ ಹಿಂದುಳಿದ ವರ್ಗಗಳ ಆಯೋಗದ ವರದಿ. ಅಧ್ಯಕ್ಷರು : ಎಲ್. ಜಿ. ಹಾವನೂರು, 1975, 4 ಸಂಪುಟಗಳು, ಬೆಂಗಳೂರು.

## ಪಟ್ಟಿಕೆ - ಬಿ

ಎಲ್. ಜಿ. ಹಾವನೂರು ಆಯೋಗದ ವರದಿಯ (1975) ಪ್ರಕಾರ ರಾಜ್ಯದಲ್ಲಿ 1972 ರಲ್ಲಿ ಇದ್ದ ಜೇನು ಕುರುಬರ (ಎಸ್. ಟಿ) ಸಂಖ್ಯೆ 4,670. ಇದು ರಾಜ್ಯದ ಜನಸಂಖ್ಯೆಯ ಶೇಕಡಾ 0.01% ಆಗಿದೆ.

| ಕ್ರಸಂ. | ಜಿಲ್ಲೆ | ಆಧಾರ ವರ್ಷ | ಆ.ವ.ಜನ. ಸಂಖ್ಯೆ | 1971 ಕ್ಕೆ ಅಂದಾಜು ಜನಸಂಖ್ಯೆ | 1956 ರಾಜ್ಯ ಮರು ವಿಂಗಡನೆಯಂತೆ 1971 ಕ್ಕೆ ಅಂದಾಜು ಜನಸಂಖ್ಯೆ | 1972 ಕ್ಕೆ ಅಂದಾಜು ಜನಸಂಖ್ಯೆ |
|---|---|---|---|---|---|---|
| 1. | ಬೆಂಗಳೂರು | 1961 | 659 | - | - | 916 |
| 2. | ಚಿಕ್ಕಮಗಳೂರು | 1961 | 2 | - | - | 2 |
| 3. | ಚಿತ್ರದುರ್ಗ | 1961 | 17 | - | - | 23 |
| 4. | ಹಾಸನ | 1961 | 31 | - | - | 39 |
| 5. | ಕೋಲಾರ | 1961 | 95 | - | - | 114 |
| 6. | ಮೈಸೂರು | 1961 | 2,358 | - | - | 3,011 |
| 7. | ಶಿವಮೊಗ್ಗ | 1961 | 19 | - | - | 25 |
| 8. | ತುಮಕೂರು | 1961 | 120 | - | - | 146 |
| 9. | ಬಳ್ಳಾರಿ | 1961 | 322 | - | - | 404 |
| | | ಒಟ್ಟು | | | | **4,670** |

ಮೂಲ : ಮೊದಲನೆಯ ಕರ್ನಾಟಕ ಹಿಂದುಳಿದ ವರ್ಗಗಳ ಆಯೋಗದ ವರದಿ - ಅಧ್ಯಕ್ಷರು ಎಲ್.ಜಿ. ಹಾವನೂರು, 1975, 4 ಸಂಪುಟಗಳು, ಬೆಂಗಳೂರು.

## ಪಟ್ಟಿಕೆ - ಸಿ

ಎಲ್.ಜಿ. ಹಾವನೂರು ಆಯೋಗದ ವರದಿಯ ಪ್ರಕಾರ (1975) ರಾಜ್ಯದಲ್ಲಿ 1972 ರಲ್ಲಿ ಇದ್ದ ಕಾಡು ಕುರುಬರ (ಎಸ್. ಟಿ. ) ಸಂಖ್ಯೆ - 5,135. ಇದು ರಾಜ್ಯದ ಒಟ್ಟು ಜನಸಂಖ್ಯೆಯ ಶೇಕಡಾ 0. 02% ಆಗಿದೆ.

| ಕ್ರಮ ಸಂಖ್ಯೆ | ಜಿಲ್ಲೆ | ಆಧಾರ ವರ್ಷ | ಆಧಾರ ವರ್ಷದ ಜನಸಂಖ್ಯೆ | 1972 ಕ್ಕೆ ಅಂದಾಜು ಜನಸಂಖ್ಯೆ |
|---|---|---|---|---|
| 1. | ಬೆಂಗಳೂರು | 1961 | 369 | 513 |
| 2. | ಚಿಕ್ಕಮಗಳೂರು | 1961 | 28 | 35 |
| 3. | ಚಿತ್ರದುರ್ಗ | 1961 | 22 | 29 |
| 4. | ಹಾಸನ | 1961 | 22 | 28 |
| 5. | ಕೋಲಾರ | 1961 | 23 | 27 |
| 6. | ಮಂಡ್ಯ | 1961 | 69 | 91 |
| 7. | ಮೈಸೂರು | 1961 | 3,001 | 3,821 |
| 8. | ಶಿವಮೊಗ್ಗ | 1961 | 94 | 123 |
| 9. | ತುಮಕೂರು | 1961 | 122 | 148 |
| 10. | ಬಳ್ಳಾರಿ | 1961 | 255 | 320 |
| | | | | 5,135 |
| 11. | ಕೊಡಗು | 1961 | 9,246 | 11,020 |

ಮೂಲ : ಮೊದಲನೆಯ ಕರ್ನಾಟಕ ಹಿಂದುಳಿದ ವರ್ಗಗಳ ಆಯೋಗದ ವರದಿ. ಅಧ್ಯಕ್ಷರು - ಎಲ್. ಜಿ. ಹಾವನೂರು, 1975, 4 ಸಂಪುಟಗಳು, ಬೆಂಗಳೂರು.

## ಪಟ್ಟಿಕೆ - ಡಿ

ರಾಜ್ಯದಲ್ಲಿನ ಕುರುಬ ಜಾತಿಯ ಜನ ಸಂಖ್ಯಾ ರಚನೆ
(ಟಿ. ವೆಂಕಟಸ್ವಾಮಿ ವರದಿ)

| 1<br>ಕ್ರಮ ಸಂಖ್ಯೆ | 2<br>ಜಿಲ್ಲೆ | 3<br>ಜಾತಿಯ ಜನಸಂಖ್ಯೆಯ ರಚನಾ ವಿನ್ಯಾಸ |
|---|---|---|
| 1. | ಬೆಂಗಳೂರು | 139,582 |
| 2. | ಬೆಳಗಾವಿ | 866,247 |
| 3. | ಬಳ್ಳಾರಿ | 120,245 |
| 4. | ಬೀದರ್ | 76,426 |

| | | |
|---|---|---|
| 5. | ಬಿಜಾಪುರ | 302,093 |
| 6. | ಚಿಕ್ಕಮಗಳೂರು | 81,984 |
| 7. | ಚಿತ್ರದುರ್ಗ | 121,052 |
| 8. | ದಕ್ಷಿಣ ಕನ್ನಡ | 256 |
| 9. | ಧಾರವಾಡ | 278,488 |
| 10. | ಗುಲ್ಬರ್ಗಾ | 171,509 |
| 11. | ಹಾಸನ | 100,972 |
| 12. | ಕೊಡಗು | 2,706 |
| 13. | ಕೋಲಾರ | 98,481 |
| 14. | ಮಂಡ್ಯ | 83,481 |
| 15. | ಮೈಸೂರು | 237,386 |
| 16. | ರಾಯಚೂರು | 243,215 |
| 17. | ಶಿವಮೊಗ್ಗ | 74,010 |
| 18. | ತುಮಕೂರು | 106,843 |
| 19. | ಉತ್ತರ ಕನ್ನಡ | 5,735 |
| | ಒಟ್ಟು | 3,110,711. |

## ಪಟ್ಟಿಕೆ - ಡಿ - ೧

1984 ರ ಸರ್ವೆ ಪ್ರಕಾರ ಕರ್ನಾಟಕ ರಾಜ್ಯದಲ್ಲಿನ ಜಾತಿ / ಸಮುದಾಯಗಳ ಜನಸಂಖ್ಯೆ
(ಟಿ. ವೆಂಕಟಸ್ವಾಮಿ ಆಯೋಗದ ವರದಿಯ ಪ್ರಕಾರ)

| ಕ್ರ.ಸಂ | ಧರ್ಮ | ಜಾತಿ | ಜನಸಂಖ್ಯೆ | ಒಟ್ಟು ಜನಸಂಖ್ಯೆಯ % |
|---|---|---|---|---|
| 1. | ಹಿಂದೂ | ಕುರುಬ | 25,01,465 | 6.92 % |

ಮೂಲ : ಎರಡನೆಯ ಹಿಂದುಳಿದ ವರ್ಗಗಳ ಆಯೋಗದ ವರದಿ, ಅಧ್ಯಕ್ಷರು : ಟಿ. ವೆಂಕಟಸ್ವಾಮಿ, 1986, 2 ಸಂಪುಟಗಳು, ಬೆಂಗಳೂರು.

ಬೇರೆ ಬೇರೆ ರಾಜ್ಯಗಳಲ್ಲಿ ಬೇರೆ ಬೇರೆ ಹೆಸರುಗಳಿಂದ ಪ್ರಸಿದ್ಧವಾಗಿರುವ ಕುರುಬರದು ದೇಶಾದ್ಯಂತ ಹರಡಿಕೊಂಡಿರುವ ಏಕೈಕ ಸಮುದಾಯ ಇರುವುದಾಗಿ ಸಂಘದ ಸದಸ್ಯರು ಹೇಳುತ್ತಾರೆ. ತಮಗೆ ಪ್ರಾಚೀನತೆಯಿದೆ, ರಾಜವಂಶದ ಮೂಲವಿದೆ ಎಂದು ಹೇಳಿಕೊಂಡರೂ, ಹೇಗೋ ತಮಗೆ ಭಾರೀ ಅನ್ಯಾಯವಾಗಿದೆ ಎಂದು ದೂರುತ್ತಾರೆ. ಅದನ್ನು ಸರಿಪಡಿಸಲು ಈಗ ತಮ್ಮನ್ನು ಪರಿಶಿಷ್ಟ ಬುಡಕಟ್ಟು ವರ್ಗಕ್ಕೆ ಸೇರಿಸಬೇಕೆಂದು ಅವರು ಒತ್ತಾಯ ಪಡಿಸುತ್ತಾರೆ.

ಕೊಡಗಿನ ಕಾಡು ಕುರುಬರು ಮತ್ತು ಜೇನು ಕುರುಬರನ್ನು ಕುರಿತು ವೆಂಕಟಸ್ವಾಮಿ ವರದಿಯು, "ಅವರು ಕಾಡುಗಳಲ್ಲಿದ್ದು ಈಗಲೂ ಆದಿವಾಸಿ ಜೀವನವನ್ನು ನಡೆಸುತ್ತಿದ್ದಾರೆ" ಎಂದು ಹೇಳುತ್ತದೆ. "ಅವರು ಈ ಕುರುಬರಿಗಿಂತ ಬೇರೆಯೇ ಆಗಿದ್ದು ಅವರನ್ನು ಪರಿಶಿಷ್ಟ ಬುಡಕಟ್ಟಿನ ಪಟ್ಟಿಯಲ್ಲಿ ಸೇರಿಸಲಾಗಿದೆ."

ಕೆ. ಎಸ್. ಸಿಂಗ್ ಅವರು ಸಂಪಾದಿಸಿರುವ ಭಾರತದ ಜನ - ರಾಷ್ಟ್ರೀಯ ಮಾಲಿಕೆ - ಪರಿಶಿಷ್ಟ ಬುಡಕಟ್ಟುಗಳು (People of India - National Series - The Scheduled Tribes) ಕೃತಿಯಲ್ಲಿ ಜೇನು ಕುರುಬರ ಉಲ್ಲೇಖವಿದೆ. ಅದರ ಪ್ರಕಾರ ಅವರ ಜನಸಂಖ್ಯೆ 1971 ರಲ್ಲಿದ್ದ 6656 ರಿಂದ 1981 ರಲ್ಲಿ 34,747 ಕ್ಕೆ ನೆನೆದಿದೆ. ಈ ಹೆಚ್ಚಳಕ್ಕೆ ಕಾರಣ, ಕೊಡಗು ಜಿಲ್ಲೆಯ ಹೊರಗಿರುವ ಪರಿಶಿಷ್ಟೇತರ ಸಮುದಾಯವಾದ ಕುರುಬರನ್ನು ಗಣನೆ ಮಾಡಿರುವುದೇ ಆಗಿರಬೇಕು. ಹಾಗೆಯೇ ಈ ಗ್ರಂಥದಲ್ಲಿ ಕಾಡು ಕುರುಬರು ಮತ್ತು ಬೆಟ್ಟ ಕುರುಬರನ್ನು ಕುರಿತೂ ಮಾಹಿತಿಯಿದೆ. ಇಲ್ಲೂ ಅವರ ಸಂಖ್ಯೆಯು 1971 ರಲ್ಲಿ 8,192 ಇದ್ದದ್ದು 1981 ರ ಜನಗಣತಿಯಂತೆ 2,09,677 ಆಗಿದೆ. 1981 ರ ಜನಗಣತಿಯ ಪ್ರಕಾರ ಆಗಿರುವ ಈ ನೆಗೆತಕ್ಕೆ ಕಾರಣ, ಬೇರೊಂದು ಸಮುದಾಯವನ್ನು ಕರ್ನಾಟಕದಲ್ಲಿ ಪರಿಶಿಷ್ಟ ಬುಡಕಟ್ಟಲ್ಲದ ಕುರುಬ ಸಮುದಾಯವನ್ನು ಕೂಡಿಸಿಬಿಟ್ಟಿರುವುದಾಗಿರಬೇಕು.

ಹಾಗೆಯೇ, 1971 - 1981 ನಡುವೆ ಹೆಗ್ಗಡದೇವನ ಕೋಟೆಯ ಬುಡಕಟ್ಟು ಜನರನ್ನು ಕುರಿತು ನಂಜುಂಡರಾವ್ ಮಾಡಿರುವ ಅಧ್ಯಯನದಲ್ಲಿ, ಬುಡಕಟ್ಟು ಜನರು ವಾರ್ಷಿಕವಾಗಿ 30.4% ಅಗಾಧ ಹೆಚ್ಚಳ ತೋರಿಸಿರುವುದನ್ನು ಗುರುತಿಸಿದ್ದಾರೆ.

ಹೆಚ್.ಡಿ. ಕೋಟೆ ತಾಲ್ಲೂಕಿನ ಒಟ್ಟು ಬುಡಕಟ್ಟು ಜನರ ಸಂಖ್ಯೆಯು 1971ರ ಜನಗಣತಿಯಂತೆ 6686 ಇದ್ದದ್ದು 1981ರ ವೇಳೆಗೆ 20,232ಕ್ಕೆ ಏರಿತು. ಇದಕ್ಕೆ ಕಾರಣ 'ನಾಯಕ', 'ಪರಿವಾರ', 'ಯರವ' ಮೊದಲಾದ ಅನೇಕ ಇತರ ಪಂಗಡಗಳನ್ನು 1981ರ ಜನಗಣತಿಯಲ್ಲಿ ಪರಿಶಿಷ್ಟ ಬುಡಕಟ್ಟುಗಳ ಪಟ್ಟಿಗೆ ಸೇರಿಸಿದ್ದುದು ಜೊತೆಗೆ ಇನ್ನೂ ಒಂದು ಕಾರಣ.

ಕಟ್ಟುನಿಟ್ಟಾದ ಸಂರಕ್ಷಣಾ ಕ್ರಮಗಳಿಂದಾಗಿ ಗಣನೀಯ ಸಂಖ್ಯೆಯ ಬುಡಕಟ್ಟು ಜನರನ್ನು ಅರಣ್ಯ ಪ್ರದೇಶಗಳಿಂದ ಬೇರೆ ಕಡೆಗೆ ಸ್ಥಳಾಂತರಿಸಲಾಗಿತ್ತು, 1981 ರ ಜನಗಣತಿಯ ಪ್ರಕಾರ ಈ ಸಂಖ್ಯೆಗಳು ಇದಕ್ಕೆ ಧಾರಾಳವಾದ ನಿದರ್ಶನ ಕೊಡುತ್ತವೆ:

| | ಬೇಗೂರು ಅರಣ್ಯ | ಕಾಕನಕೋಟೆ ಅರಣ್ಯ |
|---|---|---|
| 1971 | 519 | 859 |
| 1981 | 126 | 544 |

ಇದು ಬುಡಕಟ್ಟಲ್ಲದವರನ್ನು ಕೂಡಿಸಿ ಬುಡಕಟ್ಟು ವರ್ಗವನ್ನು ವಿಸ್ತರಿಸಲು, ದೊಡ್ಡದು ಮಾಡಲು ಪಟ್ಟು ಹಿಡಿದ ಪಯತ್ನವನ್ನು ಸೂಚಿಸುತ್ತದೆ. ಕುರುಬರು, ಕಾಡು

ಕುರುಬ, ಬೆಟ್ಟಕುರುಬ, ಜೇನು ಕುರುಬ, ಕೊಡಗಿನ ಕುರುಬರು ಮತ್ತು ತಾವು ಸಮಾನಾರ್ಥಕಗಳು, ಆದ್ದರಿಂದ ಸರಕಾರವು ತಾವೆಲ್ಲರೂ ಒಂದೇ ಎಂದು ಪರಿಗಣಿಸಬೇಕು ಎಂದು ವಾದಿಸುತ್ತಿರುವ ಹಾಗೆ.

ಬುಡಕಟ್ಟು ಜನರು ಜಾತಿಯ ಲಕ್ಷಣಗಳನ್ನು ಪಡೆದುಕೊಳ್ಳುವುದು ಧೀರ್ಘಕಾಲಿಕವಾದ, ನಿಧಾನವಾದ ಪ್ರಕ್ರಿಯೆ, ಬ್ರಿಟಿಷ್ ಆಡಳಿತದ ಕಾಲದಿಂದಲೂ ನಡೆದುಕೊಂಡು ಬಂದಿರುವಂಥದು. ಆದರೆ ಅದಕ್ಕೆ ವ್ಯತಿರಿಕ್ತವಾದ ಪ್ರಕ್ರಿಯೆ, ಸುಸ್ಥಾಪಿತವಾದ ಜಾತಿ ಪಂಗಡಗಳು ತಮಗೆ ಬುಡಕಟ್ಟು ಸ್ಥಾನವನ್ನು ಕೊಡಬೇಕೆಂದು ಹಂಬಲಿಸುತ್ತಿರುವುದು ಭಾರತದ ಇತಿಹಾಸದಲ್ಲಿ ಒಂದು ಹೊಸದಾದ ಸಂದರ್ಭ, ಇದು ಕಾಣಿಸಿಕೊಂಡಿರುವುದು ಮುಖ್ಯವಾಗಿ ಸ್ವಾತಂತ್ರ್ಯೋತ್ತರ ಕಾಲದಲ್ಲಿ ಈ ಪ್ರಕ್ರಿಯೆಯನ್ನು ಗಮನಿಸಿ, ವಿವಿಧ ಸರಕಾರಗಳು ಈ ಬೇಡಿಕೆಗಳನ್ನು ಈಡೇರಿಸಲು ಒಪ್ಪಿದ ಪಕ್ಷದಲ್ಲಿ ಅದು ಹೆಚ್ಚು ಗುರುತಳ ಸಮಸ್ಯೆಗಳನ್ನು ಎಬ್ಬಿಸುತ್ತದೆಯೇ ಹೊರತು ಪರಿಹರಿಸುವುದಿಲ್ಲ. ಏಕೆಂದರೆ ಈಚಿನ ದಶಕಗಳಲ್ಲಿ ಒಂದಾದ ಮೇಲೊಂದರಂತೆ ಜಾತಿ ಪಂಗಡಗಳು ತಮಗೆ ಎಸ್. ಸಿ., ಎಸ್. ಟಿ. ಸ್ಥಾನ ಬೇಕೆಂದು ಒತ್ತಾಯ ಪಡಿಸುತ್ತಿವೆ. ಈ ಪ್ರಕ್ರಿಯೆಯು ಆ ಪಂಗಡಗಳ ಏಕೀಕರಣಕ್ಕೆ ಎಡೆ ಮಾಡಿದ್ದರೆ, ಅದು ಜಾತಿ ಪದ್ಧತಿಯ ಅನಿಷ್ಟ ಪರಿಣಾಮಗಳಿಗೆ ವಿರುದ್ಧವಾದ ಪರಿಸ್ಥಿತಿಯನ್ನುಂಟು ಮಾಡುತ್ತಿತ್ತು. ಆದರೆ ಪರಿಸ್ಥಿತಿ ಹಾಗಿಲ್ಲ. ಧಾರ್ಮಿಕ ಮತಾಂತರಗಳು, ಸುಧಾರಣ ಚಳುವಳಿಗಳು, ಸಂಸ್ಕೃತೀಕರಣ ಇವೆಲ್ಲವೂ ಜಾತಿ ಪಂಗಡಗಳಲ್ಲೇ ಇನ್ನಷ್ಟು ವಿಭಾಗ, ಒಳ ವಿಭಾಗಗಳನ್ನು ಮಾಡಲು, ಅವನ್ನು ಚೂರು ಚೂರಾಗಿ ಒಡೆಯಲು ಅವಕಾಶ ಮಾಡಿದ ಹಾಗೆಯೇ ಪರಿಶಿಷ್ಟಗೊಳಿಸುವುದು ಕೂಡ, ಬಹುಶಃ ಹೆಚ್ಚು ಸಂಖ್ಯೆಯ ಬಿರುಕುಗಳನ್ನು ಸೃಷ್ಟಿಸಬಹುದು. ಸ್ಪರ್ಧಿಸುತ್ತಿರುವ ಪಂಗಡಗಳು ಈಗಿರುವ ಪೆಡಸುತನಕ್ಕೆ ವಿಭೇದಕ ಶತ್ರುಗಳಿಗೆ ಇನ್ನಷ್ಟು ಇಂಬು ಕೊಡುತ್ತವೆ. ಡಾ. ಬಿ. ಆರ್. ಅಂಬೇಡ್ಕರ್ ಅವರ ಪ್ರಯತ್ನವನ್ನು ಉಲ್ಲೇಖಿಸಿ ಇದನ್ನು ಸ್ಥಿರೀಕರಿಸಬಹುದು. ಅಸ್ಪೃಶ್ಯತೆಯ ಮೂಲವನ್ನು ಗುರುತಿಸಲು ಪ್ರಯತ್ನಿಸಿ ಅಂಬೇಡ್ಕರ್ ಅವರು ಭಾರತೀಯ ಅಸ್ಪೃಶ್ಯರು - ಅವರ ಮೂಲ ಪುರುಷರು - ಮೂಲತಃ ಬೌದ್ಧರಾಗಿದ್ದರು ಎಂದು ಪ್ರತಿಪಾದಿಸಿದರು. ಹೇಗೆ ಧಾರ್ಮಿಕ ಭಿನ್ನತೆಗಳು ಹಿಂದೂ ಧರ್ಮವನ್ನು ಕಾರ್ಯೋನ್ಮುಖವಾಗುವಂತೆ ಮಾಡಿ, ಬೌದ್ಧ ಧರ್ಮದ ನೆಲೆ ಕೊಟ್ಟು ತನ್ನ ಹಿಂದಿನ ವೈಭವವನ್ನು ಉಳಿಸಿಕೊಂಡಿತು, ಇದು ನಡೆದದ್ದು ಗುಪ್ತ ವಂಶದ ಆಳ್ವಿಕೆಯ ಸಮಯದಲ್ಲಿ ಎಂದು ಹೇಳಿ ಅದಕ್ಕೆ ಐತಿಹಾಸಿಕ ಮಹತ್ವವನ್ನು ಕೊಡಲು ಅವರು ಪ್ರಯತ್ನಿಸಿದರು.

ಅದರ ಒಂದು ಭಾಗ, ಗುಪ್ತರ ಕಾಲದಲ್ಲಿ ಹಿಂದೂ ಧರ್ಮದ ಸುವರ್ಣ ಯುಗ ಎಂಬುದು, ಐತಿಹಾಸಿಕವಾದರೂ, ಮುಂದಿನ ಅಸ್ಪೃಶ್ಯರ ಬೌದ್ಧ ಪ್ರಾಚೀನತೆ ಹೆಚ್ಚೆಂದರೆ ಊಹೆ. ಎಲ್ಲಾ 'ಅಸ್ಪೃಶ್ಯ' ಸಮುದಾಯಗಳೂ ಅದನ್ನು ಪ್ರಮಾಣಿಸುತ್ತವೆಯೆ ಎನ್ನುವುದೂ ಸಂದೇಹ. ಅಂಬೇಡ್ಕರರ ಕಾಲದಿಂದೀಚೆಗೆ ಬೌದ್ಧ ಧರ್ಮಕ್ಕೆ ಪರಿವರ್ತನೆಗೊಳ್ಳುವುದು

ಮಹಾರಾಷ್ಟ್ರದ ಕೆಲವು ಅಸ್ಪೃಶ್ಯ ಪಂಗಡಗಳ ಭಾಗಗಳನ್ನು ಮಾತ್ರ ಆಕರ್ಷಿಸಿರುವ ವಿಚಾರವಾಗಿದೆ. ಮಹಾರಾಷ್ಟ್ರದಲ್ಲಿ ಅದು ಮಹರ್ ಜಾತಿ ಪಂಗಡಗಳಿಗೆ ಸೀಮಿತಗೊಂಡಿದ್ದರೆ, ಉತ್ತರ ಪ್ರದೇಶದಲ್ಲಿ ಕೆಲವು ಚಮಾರರು ಬೌದ್ಧಧರ್ಮವನ್ನು ಅವಲಂಬಿಸಿದ್ದಾರೆ. ಈ ಪ್ರಕ್ರಿಯೆ ಇಡೀ ಭಾರತಾದ್ಯಂತ ಹರಡಿಲ್ಲ, ಹಿಂದಿನ ಎಲ್ಲಾ 'ಅಸ್ಪೃಶ್ಯ' ಜಾತಿ ಪಂಗಡಗಳನ್ನು ಒಳಗೊಂಡಿಲ್ಲ. ಅಂಬೇಡ್ಕರರು ಹಿಂದೂ ಧರ್ಮದ ವಿರುದ್ಧ ಸಾರಿದ ಧರ್ಮ ಯುದ್ಧದ ಜಾಡಿನಲ್ಲಿ ಬೌದ್ಧಧರ್ಮವನ್ನು ಅವಲಂಬಿಸಿದವರನ್ನು ಸಾಮಾನ್ಯವಾಗಿ ನವ - ಬೌದ್ಧರು (Neo - Buddhists) ಎಂದು ಕರೆಯಲಾಗುತ್ತದೆ. ಜೊತೆಗೆ ಅವರನ್ನು ಮಹರ್ - ಬೌದ್ಧರು, ಚಮಾರ್ - ಬೌದ್ಧರು ಎಂದೂ ಗುರುತಿಸಲಾಗುತ್ತದೆ. ಈ ವಿಷಯದ ಮೇಲೆ ಸುನಂದಾ ಪಟವರ್ಧನ ಮತ್ತು ಒವೆನ್ ಎಂ.ಲಿಂಚ್ ಅವರ ಕೃತಿಗಳು ಹೆಚ್ಚಿನ ಬೆಳಕು ಚೆಲ್ಲುತ್ತವೆ. ಇಲ್ಲಿ ಸೂಚಿಸಿರುವುದು ಇಷ್ಟೆ. ಜಾತಿ ಪದ್ಧತಿಯ ಸ್ವರೂಪವೇ ಹಾಗೆ ವೈರುಧ್ಯಗಳೂ, ಭಿನ್ನಮತಗಳೂ ಸೇರಿದಂತೆ ಎಲ್ಲವನ್ನು ತನ್ನೆಡೆಗೆ ವಿಲೀನಗೊಳಿಸಿಕೊಂಡು ಬಿಡುವುದು.

ಈ ಕೆಲವು ಸಾಮಾನ್ಯ ವಿಚಾರಗಳಾದ ಮೇಲೆ ಈಗ ನಾವು ಕುರುಬ ಮಾಹಿತಿದಾರರಿಂದ ಪಡೆದಿರುವ ಅಂಕಿ ಅಂಶಗಳ ವಿಶ್ಲೇಷಣೆಯ ಕಡೆಗೆ ತಿರುಗೋಣ. ಈ ಅಧ್ಯಯನವು ಕರ್ನಾಟಕದ ನಾಲ್ಕು ಜಿಲ್ಲೆಗಳಲ್ಲಿ ಹರಡಿಕೊಂಡಿರುವ ಕುರುಬ ಕುಟುಂಬಗಳ 601 ಮಾದರಿಗಳನ್ನು ಒಳಗೊಂಡಿದೆ. ಬಳ್ಳಾರಿ, ಚಿತ್ರದುರ್ಗ, ಧಾರವಾಡ ಮತ್ತು ಮೈಸೂರು ಜಿಲ್ಲೆಗಳಲ್ಲಿ, ರಾಜ್ಯದ ಕುರುಬ ಜನಸಂಖ್ಯೆಯ ಸುಮಾರು 1/3 ಭಾಗ ಇದ್ದಾರೆ. (ಎಲ್. ಜಿ. ಹಾವನೂರು ಆಯೋಗವು 1972 ಕ್ಕೆ ಮಾಡಿರುವ ಅಂದಾಜಾದ 20,31,734 ರಲ್ಲಿ 6,41,450 ಜನ); ಅದು ರಾಜ್ಯದ ಒಟ್ಟು ಕುರುಬ ಜನಸಂಖ್ಯೆಯ 1/4 ಕ್ಕಿಂತ ಸ್ವಲ್ಪ ಕಡಮೆ (1984 ರ ವೆಂಕಟಸ್ವಾಮಿ ಆಯೋಗದ ವರದಿಯಂತೆ, 31,01,465 ರಲ್ಲಿ 7,57,171). ಈ ನಾಲ್ಕು ಜಿಲ್ಲೆಗಳನ್ನು ಆರಿಸಿಕೊಂಡಿರುವುದಾದರೂ ಬೇರೆ ಬೇರೆ ಆಡಳಿತೀಯ ವಿಭಾಗಗಳ ಆಧಾರದ ಮೇಲೆ. ಚಿತ್ರದುರ್ಗ ಮತ್ತು ಮೈಸೂರು ಜಿಲ್ಲೆಗಳು 'ಹಳೆಯ ಮೈಸೂರಿಗೆ' ಸೇರಿದವು; ದೇಶಿಯ ರಾಜರ ಆಳಿಕೆಯಲ್ಲಿ ಇದ್ದವು. ಬಳ್ಳಾರಿ ಮತ್ತು ಧಾರವಾಡಗಳಾದರೆ ಮದರಾಸು ಮತ್ತು ಮುಂಬಯಿ ಪ್ರೆಸಿಡೆನ್ಸಿಗಳ ವಲಯಗಳಿಗೆ ಸೇರಿದವು. 1956 ರಲ್ಲಿ ಏಕೀಕೃತ ಕರ್ನಾಟಕವು ರೂಪುಗೊಂಡುದರಿಂದ ಮದರಾಸು ಮತ್ತು ಮುಂಬಯಿ ಪ್ರೆಸಿಡೆನ್ಸಿಗಳಲ್ಲಿದ್ದ ಕನ್ನಡ ಮಾತನಾಡುವ ಪ್ರದೇಶಗಳು 'ಹಳೆಯ ಮೈಸೂರಿಗೆ' ಸೇರಿಕೊಂಡವು. ಈಗ ಧಾರವಾಡ ಜಿಲ್ಲೆಯು ಕುರುಬ ಮಠದ ಸ್ಥಾನವಾಗಿದೆ. ಅವರ ಧಾರ್ಮಿಕ ನಾಯಕತ್ವದ ಹೊಣೆಯನ್ನು ಹೊತ್ತ ಮೊದಲ ಮಠಾಧಿಪತಿಗಳು ಮೈಸೂರು ಜಿಲ್ಲೆಯಿಂದ ಬಂದವರು.

ಮೈಸೂರು ಜಿಲ್ಲೆಯಲ್ಲಿ ಅಧ್ಯಯನವು 145 ಕುರುಬ ಕುಟುಂಬಗಳನ್ನು ಒಳಗೊಂಡಿದೆ. ಇವು ಜಿಲ್ಲಾ ಕೇಂದ್ರದಲ್ಲಿ, ಬೇರೆ ಬೇರೆ ತಾಲೂಕುಗಳ ಹಳ್ಳಿಗಳಲ್ಲಿ ಹಾಗೂ ಪಟ್ಟಣ ಮತ್ತು ನಗರಗಳ ವಿಸ್ತರಣಗಳಲ್ಲಿ ಹರಡಿಕೊಂಡಿವೆ. ಒಟ್ಟಿನಲ್ಲಿ ಸುಮಾರು 9 ಸ್ಥಳಗಳನ್ನು ಪರಿಶೀಲಿಸಲಾಗಿದೆ.

ಧಾರವಾಡ ಜಿಲ್ಲೆಯಲ್ಲಿ 151 ಕುಟುಂಬಗಳನ್ನು ಸೇರಿಸಿಕೊಂಡಿದೆ. ಇವು ಹಳ್ಳಿಗಳು, ಜಿಲ್ಲಾ ಕೇಂದ್ರ, ಇತರ ನಗರಗಳು ಮತ್ತು ಪಟ್ಟಣಗಳಲ್ಲಿನ 14 ಸ್ಥಳಗಳಲ್ಲಿ ಹರಡಿವೆ.

ಬಳ್ಳಾರಿ ಜಿಲ್ಲೆಯಲ್ಲಾದರೇ 150 ಕುರುಬ ಕುಟುಂಬಗಳು ಪರಿಶೀಲನೆಗೆ ಒಳಪಟ್ಟಿವೆ. ಯಥಾ ಪ್ರಕಾರ ಜಿಲ್ಲಾಕೇಂದ್ರ, ಪಟ್ಟಣಗಳು, ತಾಲೂಕು ಕೇಂದ್ರಗಳು ಮತ್ತು ಹಳ್ಳಿಗಳು ಸೇರಿ ಒಟ್ಟು 12 ಸ್ಥಳಗಳನ್ನು ವ್ಯಾಪಿಸಿವೆ. ಚಿತ್ರದುರ್ಗದಲ್ಲಿ 155 ಕುಟುಂಬಗಳನ್ನು ಅಧ್ಯಯನ ಮಾಡಲಾಗಿದೆ. ಎರಡು ನಗರ, ಎರಡು ತಾಲೂಕು ಕೇಂದ್ರಗಳು, ಪಟ್ಟಣಗಳು ಮತ್ತು ನಾಲ್ಕು ಹಳ್ಳಿಗಳು - ಒಟ್ಟು 8 ಸ್ಥಳಗಳನ್ನು ಇದರಲ್ಲಿ ಸೇರಿಸಲಾಗಿದೆ.

ನಾಲ್ಕೂ ಜಿಲ್ಲೆಗಳಿಂದ ಪಡೆದ ಮಾದರಿಯ ವಿವರಗಳನ್ನು ಕೆಳಗೆ ತಃಖ್ತೆಯಲ್ಲಿ ತೋರಿಸಲಾಗಿದೆ. ಗ್ರಂಥದ ಕೊನೆಯಲ್ಲಿ ನಕ್ಷೆಗಳಲ್ಲೂ ಇದನ್ನು ನಿರೂಪಿಸಿದೆ. ಸಾಧ್ಯವಾದ ಮಟ್ಟಿಗೆ ಒಳ ಪ್ರದೇಶದ ಸ್ಥಳಗಳನ್ನು ಹೆದ್ದಾರಿ ಮಾರ್ಗಗಳ ಮೇಲಿನ ಸ್ಥಳಗಳನ್ನು ಸೇರಿಸಲಾಗಿದೆ. ಕುಟುಂಬ ಮತ್ತು ಮಾಹಿತಿದಾರರ ಲಭ್ಯತೆ ಇವುಗಳನ್ನು ಅವಲಂಬಿಸಿ ಮಾದರಿಯ ಗಾತ್ರವನ್ನು ಹೊಂದಿಸಲಾಯಿತು. ಪ್ರತಿಯೊಂದು ಜಿಲ್ಲೆಯಿಂದ ಪಡೆದುಕೊಂಡ ಒಟ್ಟು ಮಾದರಿಯಲ್ಲಿ ದೊಡ್ಡ ಪ್ರಮಾಣದ ವ್ಯತ್ಯಾಸವಾಗದಂತೆ, ಏರುಪೇರಾಗದಂತೆ ಗಮನ ಕೊಡಲಾಯಿತು. ಅತಿ ಎತ್ತರದ ಸಂಖ್ಯೆ 10, ಅತಿ ಕಡಿಮೆಯದು 4 ಮಿಕ್ಕವೆಲ್ಲ ಈ ಎರಡೂ ಸಂಖ್ಯೆಗಳ ನಡುವಿನವು. ಹಾಗಾಗಿ ತಿಳಿದಿರುವ ಅಂಕಿ ಅಂಶಗಳ ಮೂಲವು ಇಲ್ಲದ ಸಂದರ್ಭದಲ್ಲಿ ಎಷ್ಟು ಸಾಧ್ಯವೋ ಅಷ್ಟು ಸ್ಥಳಗಳನ್ನು, ಕುಟುಂಬಗಳನ್ನೂ ಒಳಪಡಿಸಿಕೊಳ್ಳುವುದಕ್ಕಾಗಿ ಅಧ್ಯಯನವು ಶ್ರಮಿಸಿ, ವಸ್ತುನಿಷ್ಠವಾಗಿ ನಿಗದಿಪಡಿಸಲು ಪ್ರಯತ್ನಿಸಿದೆ.

### ನಾಲ್ಕು ಜಿಲ್ಲೆಗಳಿಂದ ಪಡೆದ ಮಾಹಿತಿ ಮಾದರಿ, ಸ್ಥಳಗಳು ಮತ್ತು ಗಾತ್ರಗಳೊಂದಿಗೆ

| ಎ | ಮೈಸೂರು ಜಿಲ್ಲೆ | ಸಂಖ್ಯೆ | ಒಳಪಟ್ಟಸ್ಥಳ |
|---|---|---|---|
| 1. | ಕುರುಬಗೇರಿ | 10 | ಮೈಸೂರುನಗರ |
| 2. | ತೊಣಚಿ ಕೊಪ್ಪಲು | 10 | ಮೈಸೂರು ಬಡಾವಣೆ |
| 3. | ಕುರುಬರ ಹಳ್ಳಿ(ಆಲನಹಳ್ಳಿ) | 10 | ಮೈಸೂರು ಬಡಾವಣೆ |
| 4. | ಹೊಸ ಬಂಡೀಕೇರಿ | 10 | ಮೈಸೂರು ನಗರ |
| 5. | ಸಿದ್ದರಾಮನ ಹುಂಡಿ | 20 | ಹಳ್ಳಿ |
| 6. | ಬಸವನಪುರ ಮತ್ತು ಅಮಚವಾಡಿ | 25 | ಹಳ್ಳಿ |
| 7. | ಕಳಲೆ | 20 | ಹಳ್ಳಿ |
| 8. | ಕಾಳನಹುಂಡಿ | 20 | ಹಳ್ಳಿ |
| 9. | ಗಂಧನ ಹಟ್ಟಿ | 20 | ಹಳ್ಳಿ |
| | ಒಟ್ಟು | **145** | |

| ಬಿ. | ಧಾರವಾಡ ಜಿಲ್ಲೆ | ಸಂಖ್ಯೆ | ಸ್ಥಳ |
|---|---|---|---|
| 1. | ಧಾರವಾಡ | 21 | ನಗರ |
| 2. | ಗದಗ | 10 | ನಗರ |
| 3. | ಹುಬ್ಬಳ್ಳಿ | 10 | ನಗರ |
| 4. | ಅಮ್ಮಿನಭಾವಿ | 10 | ಹಳ್ಳಿ |
| 5. | ಅಮರಗೋಳ | 10 | ಹಳ್ಳಿ |
| 6. | ಬ್ಯಾಹಟ್ಟಿ | 10 | ಹಳ್ಳಿ |
| 7. | ಚಿಕ್ಕಲಿಂಗದಹಳ್ಳಿ | 10 | ಹಳ್ಳಿ |
| 8. | ಹೆಬಸೂರು | 10 | ಹಳ್ಳಿ |
| 9. | ಹೀಲದಹಳ್ಳಿ | 10 | ಹಳ್ಳಿ |
| 10. | ಕನಕಪುರ | 10 | ಹಳ್ಳಿ |
| 11. | ನವಿಲೂರು | 10 | ಹಳ್ಳಿ |
| 12. | ಉದಗಟ್ಟಿ | 10 | ಹಳ್ಳಿ |
| 13. | ಹುಯಿಲಗೋಳ | 10 | ಹಳ್ಳಿ |
| | ಒಟ್ಟು | **151** | |

| ಸಿ. | ಬಳ್ಳಾರಿ | ಸಂಖ್ಯೆ | ಸ್ಥಳ |
|---|---|---|---|
| 1. | ಬಂಡಿಹಟ್ಟಿ | 10 | ಬಳ್ಳಾರಿ ನಗರ |
| 2. | ಕುರುಬ ಓಣಿ | 20 | ಬಳ್ಳಾರಿನಗರ |
| 3. | ಹೊಸಪೇಟೆ, ಕುರುಬಓಣಿ | 20 | ಪಟ್ಟಣ |
| 4. | ಪಟೇಲನಗರ | 10 | ಬಡಾವಣೆ |
| 5. | ಹೂವಿನ ಹಡಗಲಿ | 12 | ತಾಲ್ಲೂಕ ಕೇಂದ್ರ |
| 6. | ಕಮಾಲಾಪುರ | 12 | ಹಳ್ಳಿ |
| 7. | ಕೃಷ್ಣನಗರ | 14 | ಹಳ್ಳಿ |
| 8. | ಮೈಲಾರ | 12 | ಹಳ್ಳಿ |
| 9. | ಹೊಸಹಳ್ಳಿ | 10 | ಹಳ್ಳಿ |
| 10. | ಹಿರೇ ಹಡಗಲಿ | 10 | ಹಳ್ಳಿ |
| 11. | ಉಚ್ಚಂಗಿ ದುರ್ಗ | 10 | ಹಳ್ಳಿ |
| 12. | ವೊಡ್ಡು | 10 | ಹಳ್ಳಿ |
| | ಒಟ್ಟು | **151** | |

| ಡಿ. | ಚಿತ್ರದುರ್ಗ ಜಿಲ್ಲೆ | ಸಂಖ್ಯೆ | ಸ್ಥಳ |
|---|---|---|---|
| 1. | ಚಿತ್ರದುರ್ಗ | 20 | ನಗರ |
| 2. | ದಾವಣಗೆರೆ | 30 | ನಗರ, ತಾಲ್ಲೂಕು ಕೇಂದ್ರ |
| 3. | ಹರಿಹರ | 25 | ಪಟ್ಟಣ ತಾಲ್ಲೂಕು ಕೇಂದ್ರ |
| 4. | ಹೊಸದುರ್ಗ | 20 | ಪಟ್ಟಣ ತಾಲ್ಲೂಕು ಕೇಂದ್ರ |
| 5. | ಬಿಳಿಚೋಡು | 15 | ಹಳ್ಳಿ |
| 6. | ಬಾನುವಳ್ಳಿ | 15 | ಹಳ್ಳಿ |
| 7. | ಹರ್ತಿಕೋಟೆ | 15 | ಹಳ್ಳಿ |
| 8. | ಲೋಕಿಕೆರೆ | 15 | ಹಳ್ಳಿ |
| | ಒಟ್ಟು | **155** | |

601 ಜನ ಮಾಹಿತಿದಾರರೂ ತಾವು, ಕುರುಬ ಎಂಬುದಕ್ಕೆ ಇನ್ನೊಂದು ಜನಪ್ರಿಯ ಹೆಸರಾದ ಹಾಲು ಮತಕ್ಕೆ ಸೇರಿದವರೆಂದು ಘೋಷಿಸಿದ್ದಾರೆ. ಬಣ ಅಥವಾ ಕನ್ನಡದಲ್ಲಿ ಪ್ರಚಲಿತವಾಗಿರುವ ಬೆಡಗು ವಿವರಗಳು ಸ್ವಾರಸ್ಯವಾದ ಅಂಶಗಳನ್ನು ಹೊಂದಿವೆ. ಕುಲ ನಾಮಗಳಾದ ವಸ್ತು/ ಪ್ರಾಣಿ ನಾಮಗಳನ್ನು 'ಪೂಜಾವಸ್ತು'ವನ್ನಾಗಿ ಪರಿಗಣಿಸಲು ಬರುವುದಿಲ್ಲ. ಉದಾಹರಣೆಗೆ ಚಂದ್ರಗುಲ, ರಾಣಿಗುಲ, ಸಂಗಂ ಗುಲ ಇವು ಮನೆದೇವರಿಗೆ ಸಂಬಂಧಿಸಿದ ವಸ್ತುವಾಗಲಿ ಪ್ರಾಣಿಯಾಗಲಿ ಅಲ್ಲ ; ಆದರೆ ಹಂಸಗುಲ, ಚೂರಿಗುಲ, ಬೆಳ್ಳಗುಲ ಇವು ವಸ್ತು / ಪ್ರಾಣಿ, ಪಕ್ಷಿಗಳನ್ನು ಸೂಚಿಸುತ್ತವೆ. ಈ ಬಣ / ಬೆಡಗು / ಕುಲ ಎನ್ನುವುದು ದ್ವಿಜರಲ್ಲಿ ಗೋತ್ರ ಇದ್ದ ಹಾಗೆ. ಅದು ವಿವಾಹದ ಸಾಂಸ್ಥಿಕತೆಯನ್ನು ನಿಯಂತ್ರಿಸುತ್ತದೆ. ಸದಸ್ಯರೆಲ್ಲರೂ ಒಬ್ಬ ಪೂರ್ವಜನಿಂದ ಬಂದ ಸೋದರ ಸೋದರಿಯರೆಂದು ಪರಿಗಣಿಸಲಾಗುವುದರಿಂದ, ಸಗೋತ್ರ ವಿವಾಹಕ್ಕೆ ಅವಕಾಶವಿರುವುದಿಲ್ಲವಾಗಿ, ಒಂದೇ ಕುಲನಾಮಕ್ಕೆ ಅಥವಾ ಅದೇ ಬೆಡಗಿಗೆ ಸೇರಿದ ಸದಸ್ಯರು ಪರಸ್ಪರ ವಿವಾಹ ಮಾಡಿಕೊಳ್ಳುವುದಿಲ್ಲ.

ಮೈಸೂರು ಜಿಲ್ಲೆಯ 145 ಕುರುಬ ಕುಟುಂಬಗಳಲ್ಲಿ 8 ಮನೆಯವರು ಉತ್ತರ ಕೊಡಲಿಲ್ಲ. ಮಿಕ್ಕವರು 31 ಬೇರೆ ಬೇರೆ ಕುಲ / ಬಣಗಳಿಗೆ ಸೇರಿದ್ದಾರೆ. ಧಾರವಾಡ ಜಿಲ್ಲೆಯ 143 ಕುಟುಂಬಗಳು 46 ಬಣಗಳ ಪಟ್ಟಿ ನೀಡಿದ್ದಾರೆ. ಬಳ್ಳಾರಿ ಅತಿ ಹೆಚ್ಚು - 143 ಕುಟುಂಬಗಳು, 76 ಬಣಗಳಿಗೆ ಸೇರಿವೆ. ಚಿತ್ರದುರ್ಗದಲ್ಲಾದರೆ 143 ಕುಟುಂಬಗಳನ್ನು ಒಳಗೊಳ್ಳುವ 49 ಕುಲ ನಾಮಗಳಿವೆ. ಇಲ್ಲಿ ಒಂದು ಸ್ವಾರಸ್ಯವಾದ ವಿಚಾರವೆಂದರೆ ನಾಲ್ಕು ಜಿಲ್ಲೆಗಳಿಗೆ ಸಮಾನವಾಗಿರುವ ಕುಲನಾಮಗಳು ತುಂಬಾ ಕಡಿಮೆಯಾಗಿರುವುದು.

ಮಾದರಿಯಾಗಿ ತೆಗೆದುಕೊಳ್ಳಲಾಗಿರುವ ಎಲ್ಲ 601 ಕುಟುಂಬಗಳೂ ತಾವು ಕುರುಬ ಜಾತಿಗೆ ಸೇರಿದವರೆಂದು ಹೇಳಿಕೊಂಡಿದ್ದಾರೆ. ಅಲ್ಲದೆ ಎಲ್ಲರೂ ತಾವು ಹಾಲುಮತ

ಉಪಜಾತಿಗೆ ಸೇರಿದವರೆಂದೂ ಹೇಳಿದ್ದಾರೆ. ಸ್ಥಳಗಳು, ಹಳ್ಳಿ, ನಗರ, ಪಟ್ಟಣ, ಭೌಗೋಳಿಕ ವ್ಯತ್ಯಾಸಗಳು, ದೂರ ಈ ಯಾವುದೇ ಪರಿಗಣನೆಯಿಲ್ಲದೆ ಎಲ್ಲರೂ ಒಂದೇ ರೀತಿಯಾಗಿ ಪ್ರತಿಸ್ಪಂದಿಸಿದ್ದಾರೆ. ಹಾಲುಮತ ಮತ್ತು ಕುರುಬ ಎರಡೂ ಸಮಾನಾರ್ಥಕಗಳಾಗಿರುವುದರಿಂದ ನಾವು ಅವುಗಳನ್ನು ಉಪಜಾತಿ ಮತ್ತು ಜಾತಿ ಎಂದು ನಿರ್ಧರಿಸಲು ಸಾಧ್ಯವಿಲ್ಲ.

ಉಪಜಾತಿಗಳನ್ನು ಕುರಿತ ಮಾಹಿತಿಯನ್ನು ಶ್ರೇಣೀಕರಿಸಿ ತಾಳೆ ನೋಡಲು ಅನುವಾಗುವಂತೆ ಕೇಳಲಾದ ಇನ್ನೊಂದು ಪ್ರಶ್ನೆಗೆ ಉತ್ತರವಾಗಿ ನಾಲ್ಕು ಜಿಲ್ಲೆಗಳ ಮಾಹಿತಿದಾರರಲ್ಲಿ ಹೋಲಿಕೆ ಮತ್ತು ವ್ಯತ್ಯಾಸ ಎರಡೂ ಇವೆ. ಮೈಸೂರು ಜಿಲ್ಲೆಯ 56 ಜನ ಮಾಹಿತಿದಾರರಿಗೆ ತಮ್ಮ ಉಪ - ಜಾತಿ ಯಾವುದೆಂದು ತಿಳಿಯದು. ಮಿಕ್ಕವರು ಒಟ್ಟು 21 ಉಪಜಾತಿಗಳ ಪಟ್ಟಿಯನ್ನು ಪೂರೈಸಿದ್ದಾರೆ. ತುಂಬಾ ಸ್ವಾರಸ್ಯವಾದ ಒಂದು ವಿಚಾರವೆಂದರೆ, ಮಾಹಿತಿದಾರರು ಮೊದಲ ಮೂರು ಸ್ಥಾನಗಳನ್ನು ಕಾಡು ಕುರುಬ, ಮುಳ್ಳು ಕುರುಬ ಮತ್ತು ಜೇನು ಕುರುಬರಿಗೂ, ಐದನೆಯ ಸ್ಥಾನವನ್ನು ಬೆಟ್ಟಕುರುಬರಿಗೂ ಕೊಡುತ್ತಾರೆ. ಈ ಯಾವ ಉಪಜಾತಿಗಳನ್ನು ಎಸ್. ಟಿ. ಗಳೆಂದು ನಿರ್ದಿಷ್ಟ ಪಡಿಸಿಲ್ಲ. ಇವುಗಳನ್ನು ಕುರುಬ ಉಪಜಾತಿಗಳೆಂದು ಹೇಳುವುದೇ ತಪ್ಪು. ಏಕೆಂದರೆ ಹಾವನೂರು ಮತ್ತು ವೆಂಕಟಸ್ವಾಮಿ ಆಯೋಗಗಳೆರಡರ ವರದಿಯಲ್ಲೂ ಬಹುತೇಕ ಮೈಸೂರು ಮತ್ತು ಕೊಡಗು ಜಿಲ್ಲೆಗಳಲ್ಲಿ ಕಂಡು ಬರುವ ಕಾಡು ಕುರುಬ, ಜೇನು ಕುರುಬ ಮತ್ತು ಬೆಟ್ಟ ಕುರುಬರು ಪರಿಶಿಷ್ಟ ಬುಡಕಟ್ಟುಗಳಾಗಿದ್ದಾರೆ. ಎಸ್. ಟಿ. ಪಂಗಡಗಳ ಹೆಸರುಗಳನ್ನು ಹೇಳಿಕೊಳ್ಳುವುದರಲ್ಲಿ ಕುರುಬರಿಗಿರುವ ಉಪಯೋಗ ಮತ್ತು ಉದ್ದೇಶ ಸ್ಪಷ್ಟವಾಗುತ್ತದೆ. ಮುಳ್ಳು ಕುರುಬರು ಕರ್ನಾಟಕದಲ್ಲಿ ಕಂಡು ಬರುವುದಿಲ್ಲ. ಆದರೆ ಮುಳ್ಳು ಕುರುಬರನ್ನು ತಮ್ಮ ಒಂದು ಉಪಜಾತಿಯೆಂದು ಹೇಳಿ ಮಾಹಿತಿದಾರರು ತಮಗೇ ಗೊತ್ತಿಲ್ಲದೆ ತಮ್ಮ ಹುನ್ನಾರನ್ನು ಬಯಲು ಪಡಿಸಿಬಿಟ್ಟಿದ್ದಾರೆ.

ಧಾರವಾಡ ಜಿಲ್ಲೆಯಲ್ಲೂ 151 ಮಾಹಿತಿದಾರ ಕುಟುಂಬಗಳಲ್ಲಿ 32 ಜನರಿಗೆ ಉಪಜಾತಿ ತಿಳಿದಿಲ್ಲ. ಮಿಕ್ಕವರು 31 ಉಪಜಾತಿ ಹೆಸರುಗಳನ್ನು ಕೊಟ್ಟಿದ್ದಾರೆ. ಅವುಗಳಲ್ಲಿ ಕಾಡು ಕುರುಬ, ಜೇನು ಕುರುಬ, ಬೆಟ್ಟ ಕುರುಬರಿಗೆ ಕ್ರಮವಾಗಿ 1, 3, 5 ನೆಯ ಸ್ಥಾನಗಳನ್ನು ಕೊಡಲಾಗಿದೆ.

ಆಶ್ಚರ್ಯವೆಂದರೆ ಇಲ್ಲಿ ಮುಳ್ಳು ಕುರುಬರನ್ನು ತಂದಿಲ್ಲ. ಆದರೆ ಈ ಯಾವ ಉಪಜಾತಿಯನ್ನಾಗಲಿ, ಎಸ್. ಟಿ. ಪಂಗಡವನ್ನಾಗಲಿ ಹಾವನೂರು ಆಯೋಗದ ವರದಿಯು ಧಾರವಾಡ ಜಿಲ್ಲೆಗೆ ಸೇರಿಸುವುದಿಲ್ಲ. ಧಾರವಾಡ ಜಿಲ್ಲೆಯಲ್ಲಿನ ಧೋರಣೆ ಹೀಗಿದೆ : ಚಿಕ್ಕ ಪಟ್ಟಣಗಳಲ್ಲೂ ದೊಡ್ಡ ನಗರಗಳಲ್ಲೂ, ಕುರುಬರು ಹೇಗೆ ಸಂಘಟಿತರಾಗಿದ್ದಾರೆಂದರೆ, ಕುರುಬ ಸಂಘವನ್ನು ಅವರು ಪ್ರತ್ಯಯದೊಂದಿಗೆ ಕಾಡು - ಕುರುಬರೆಂದೇ ನೋಂದಾಯಿಸಿದ್ದಾರೆ. ಕಾಗಿನೆಲೆಯಲ್ಲಿರುವ ಜಾತಿಯ ಗುರುಗಳ ಆಶೀರ್ವಾದದಿಂದಾಗಿ ಜಿಲ್ಲೆಯಾದ್ಯಂತ ಸಂಘಗಳು ಕಾಣಿಸಿಕೊಳ್ಳುತ್ತಿವೆ. ಇವರು ಯಾವ ಬುಡಕಟ್ಟುಗಳಲ್ಲ.

ಬಳ್ಳಾರಿ ಜಿಲ್ಲೆಯಲ್ಲಿ 150 ಮಾದರಿ ಮಾಹಿತಿದಾರರು 21 ಉಪಜಾತಿಗಳನ್ನು ಹೆಸರಿಸಿದ್ದಾರೆ. ಇಲ್ಲೂ ಕಾಡುಕುರುಬ, ಜೇನು ಕುರುಬ, ಮುಳ್ಳು ಕುರುಬ, ಬೆಟ್ಟ ಕುರುಬರಿಗೆ ಕ್ರಮವಾಗಿ 2, 3, 12, 15 ನೇ ಶ್ರೇಯಾಂಕಗಳನ್ನು ನೀಡಲಾಗಿದೆ. ಜೇನು ಕುರುಬ ಮತ್ತು ಕಾಡು ಕುರುಬ ಎಸ್. ಟಿ. ಪಂಗಡಗಳನ್ನು ಹಾವನೂರು ಆಯೋಗವು ಪಟ್ಟಿ ಮಾಡಿದೆ. ಜೊತೆಗೆ ಬಳ್ಳಾರಿ ಜಿಲ್ಲೆಯ ನಮ್ಮ ಮಾಹಿತಿದಾರರು ಎರಡು ಉಪ - ವಿಭಾಗಗಳನ್ನು ಕೂಡಿಸಿದ್ದಾರೆ. ಮೇಲಿನ ನಾಲ್ಕು ವಿಭಾಗಗಳನ್ನು ಎಸ್. ಟಿ. ಗಳೆಂದು ವರ್ಣಿಸಿಲ್ಲ. ಹಾಗಾಗಿ ಈ ಪ್ರಯತ್ನಗಳು ಸ್ಪಷ್ಟವಾಗಿ ಜಾತಿ ಪಂಗಡಗಳನ್ನು ಬುಡಕಟ್ಟು ಪಟ್ಟಿಗೆ ಸೇರಿಸುವ ಪ್ರಯತ್ನವಾಗಿರುವುದು ಕಂಡು ಬರುತ್ತದೆ.

ಚಿತ್ರದುರ್ಗ ಜಿಲ್ಲೆಯ 155 ಮಾಹಿತಿದಾರರಲ್ಲಿ 22 ಜನರು ಉತ್ತರ ಕೊಟ್ಟಿಲ್ಲ. ಕುರುಬರ ಪೈಕಿ 28 ಉಪಜಾತಿಗಳ ಪಟ್ಟಿ ಕಂಡು ಬರುತ್ತದೆ. ಮತ್ತೆ ಇಲ್ಲೂ ಕಾಡು ಕುರುಬರು ಮತ್ತು ಜೇನು ಕುರುಬರು 2 ನೆಯ ಮತ್ತು 3 ನೆಯ ಸ್ಥಾನಗಳನ್ನು ಪಡೆದಿದ್ದರೆ, ಮುಳ್ಳು ಕುರುಬರು ಮತ್ತು ಬೆಟ್ಟ ಕುರುಬರು ಪಟ್ಟಿಯಲ್ಲಿ 9 ನೆಯ ಮತ್ತು 10 ನೆಯ ಸ್ಥಾನದಲ್ಲಿದ್ದಾರೆ. ಹಾವನೂರು ಆಯೋಗದ ವರದಿಯು ಜೇನುಕುರುಬರನ್ನು, ಕಾಡುಕುರುಬರನ್ನೂ ದಾಖಲಿಸಿದೆ. ಆದರೆ ಅಲ್ಲಿ ಅವರು ಎಸ್. ಟಿ. ಪಂಗಡಗಳಾಗಿದ್ದಾರೆ. ಈ ಮಾಹಿತಿದಾರರು ಇನ್ನೆರಡು ಉಪ ಪಂಗಡಗಳನ್ನು ಕೂಡಿಸಿದ್ದಾರೆಯಾದರೂ ಅವರು ಇನ್ನು ಎಸ್. ಟಿ. ಸ್ಥಾನಮಾನ ಬೇಕೆಂದು ಒತ್ತಾಯಿಸಿಲ್ಲ.

ಸಾಂಪ್ರದಾಯಿಕವಾದ ಕೆಲವು ಜಾತಿ ಪಂಗಡಗಳು ನಾಲ್ಕೂ ಜಿಲ್ಲೆಗಳಿಗೆ ಸಮಾನವಾಗಿದ್ದು, ಒಂದೇ ಬಗೆಯಾಗಿ ಕಾಣಿಸಿಕೊಳ್ಳುತ್ತವೆ. ನಿದರ್ಶನಕ್ಕೆ, ಹತ್ತಿ ಕಂಕಣ ಮತ್ತು ಉಣ್ಣೆ ಕಂಕಣ ಪಂಗಡಗಳಿವೆ. ಮದುವೆಯ ಹೆಣ್ಣು ಮತ್ತು ಗಂಡುಗಳಿಗೂ, ಮದುವೆಯ ಸಮಯದಲ್ಲಿ ಕೆಲವು ಆಚರಣೆಗಳಲ್ಲಿ ಭಾಗವಹಿಸುವ ಕೆಲವು ವಿವಾಹಿತ ಹೆಂಗಸರು ಮತ್ತು ಗಂಡಸರಿಗೂ, ಬಲಗೈ ಮಣಿಕಟ್ಟಿಗೆ ವೀಳೆಯದೆಲೆಯ ಸುರಳಿಯನ್ನು ಹತ್ತಿಯ ನೂಲಿನಿಂದ ಅಥವಾ ಉಣ್ಣೆಯ ನೂಲಿನಿಂದ ಕಟ್ಟುತ್ತಾರೆ. ಇವು ಹತ್ತಿ ಕಂಕಣ, ಉಣ್ಣೆ ಕಂಕಣ ಪಂಗಡಗಳು.

ಆಮೇಲೆ ಬಿಳಿ ಮತ್ತು ಕರಿ ಕಂಬಳಿ ಪಂಗಡಗಳಿವೆ. ಸದಸ್ಯರು ಧಾರ್ಮಿಕಾಚರಣೆಗಳ ಸಂದರ್ಭದಲ್ಲಿ ಬಹುಮಟ್ಟಿಗೆ ಉಪಯೋಗಿಸುವ ಬಿಳಿಯ ಮತ್ತು ಕರಿಯ ಕಂಬಳಿಗಳ ಆಧಾರದಿಂದ ಈ ವ್ಯತ್ಯಾಸ ಕಂಡು ಬರುತ್ತದೆ. ಹಂಡೆ ಕುರುಬ ಎಂಬ ಪಂಗಡವನ್ನೂ ಪಟ್ಟಿಯಲ್ಲಿ ಸೇರಿಸಲಾಗಿದೆ.

ಕೆಲವು ಪ್ರಾದೇಶಿಕ ವ್ಯತ್ಯಾಸಗಳು ಎದ್ದು ಕಾಣುತ್ತವೆ. ಉದಾಹರಣೆಗೆ ಮೈಸೂರು ಜಿಲ್ಲೆಯಲ್ಲಿ ಗೊಂಡ, ರಾಜಗೊಂಡ, ಧನಗರ್ ಮತ್ತು ಸೋಲಿಗ ಇವರನ್ನು ಸೇರಿಸಲಾಗಿದೆ. ಇವುಗಳ ಸೇರ್ಪಡೆಗೆ ಯಾವುದಾದರೂ ಅರ್ಥಸಹಿತ ವಿವರಣೆ ಇದ್ದರೆ ಅದನ್ನು ಈಚಿನ ದಿನಗಳಲ್ಲಿ ಕುರುಬ ಕಾರ್ಯಕರ್ತರು ಸೃಷ್ಟಿಸಿರುವ ಸಾಹಿತ್ಯದಲ್ಲಿ ನೋಡಬೇಕು. ಇಲ್ಲದೆ

ಹೋದರೆ ಕುರುಬರ ನಡುವೆ ಸೋಲಿಗರನ್ನು ಹೇಗೆ ಸೇರಿಸಲಾಗಿದೆ ಎಂಬುದನ್ನು ವಿವರಿಸುವುದು ತುಂಬಾ ಕಷ್ಟ. ಸೋಲಿಗರು ಮೈಸೂರು ಜಿಲ್ಲೆಯಲ್ಲಿ ಕಂಡು ಬರುವ ಇನ್ನೊಂದು ಪರಿಶಿಷ್ಟ ಬುಡಕಟ್ಟು. (ಎಸ್. ಟಿ.)

ಧಾರವಾಡ ಜಿಲ್ಲೆಯಲ್ಲಿ ಗೊಂಡ, ಭಾಗಿ, ರಾಹುತ ಮತ್ತು ಧನಗರ್ ಉಪ ಪಂಗಡಗಳು ಕಾಣಿಸಿಕೊಳ್ಳುತ್ತವೆ. ಬಿಳಿ ಮತ್ತು ಕರಿ ಎಲಿ ಉಲ್ಲೇಖವೂ ಇದೆ (ಬಿಳಿ ಮತ್ತು ಕರಿ ಬಣ್ಣದ ಎಲೆ). ಬಹುಶಃ ಧಾರ್ಮಿಕಾಚರಣೆಗಳ ಸಂದರ್ಭಗಳಲ್ಲಿ ಬಳಸುವ ವೀಳೆಯದೆಲೆಯ ಬಣ್ಣವನ್ನು ಇದು ಸೂಚಿಸಬಹುದು.

ಕುರುಬರ ಪೈಕಿ ಒಡೆಯರ್ ಎಂಬ ಉಪವಿಭಾಗವು ಪುರೋಹಿತ ವರ್ಗವಾಗಿದೆ. ಅವರು ವಿರಳವಾಗಿ ಕಂಡು ಬರುತ್ತಾರೆ. ಮೈಸೂರು ಜಿಲ್ಲೆಯಲ್ಲಿ ಕಳಲೆ ಗ್ರಾಮದಲ್ಲಿ ಅವರಿದ್ದಾರೆ. ತುಮಕೂರು ಜಿಲ್ಲೆಯಲ್ಲಿದ್ದಾರೆ, ಧಾರವಾಡ ಜಿಲ್ಲೆಯಲ್ಲಿಯೂ ಅವರ ಪ್ರಾತಿನಿಧ್ಯವಿದೆ. ಅವರು ಸಸ್ಯಾಹಾರಿಗಳು ಮತ್ತು ಮದ್ಯಪಾನ ಮಾಡದವರು. ಅವರು ಕುರುಬರ ಹೆಣ್ಣುಮಕ್ಕಳನ್ನು ಮದುವೆ ಮಾಡಿಕೊಳ್ಳುತ್ತಾರೆ, ಆದರೆ ತಮ್ಮ ಹೆಣ್ಣುಮಕ್ಕಳನ್ನು ಕುರುಬರಿಗೆ ಮದುವೆ ಮಾಡಿಕೊಡುವುದಿಲ್ಲ. ಆಚರಣೆಗಳಲ್ಲಿ ಅವರಿಗೆ ಎತ್ತರದ ಸ್ಥಾನವಿರುವುದರಿಂದ, ಅವರು ಅತ್ಯುನ್ನತವಾದ ಶ್ರೇಯಾಂಕವನ್ನು ಪಡೆಯುತ್ತಾರೆ. ಆದರೆ ನಮ್ಮ ಮಾಹಿತಿದಾರರು ಒದಗಿಸಿದ ವಿವರಗಳಲ್ಲಿ ಅದು ಕಾಣುವುದಿಲ್ಲ.

ಬಳ್ಳಾರಿಯಲ್ಲಿ ಧನಗರ್ ಕುರುಬರನ್ನು ದಾಖಲಿಸಲಾಗಿದೆ, ಜೊತೆಗೆ ದೊಡ್ಡ, ಸಣ್ಣ ಮತ್ತು ಕರಿಕಂಬಳಿ ಪಂಗಡಗಳೂ ಇವೆ. ಒಡೆಯರ್ ವಿಭಾಗವು ಪ್ರತಿನಿಧಿತವಾಗಿದ್ದರೂ ಶ್ರೇಯಾಂಕದ ಪಟ್ಟಿಯಲ್ಲಿ ತುಂಬ ಕೊನೆಯ ಹಂತಕ್ಕೆ ಅವರು ಸೇರುತ್ತಾರೆ.

ಚಿತ್ರದುರ್ಗ ಜಿಲ್ಲೆಯಲ್ಲೂ ಮತ್ತೆ ರಾಜಗೊಂಡ, ಶಿವಗೊಂಡ ಮತ್ತು ಗೊಂಡ ಪಂಗಡಗಳನ್ನು ದಾಖಲು ಮಾಡಲಾಗಿದೆ. ಜೊತೆಗೆ ಇತರ ಜಿಲ್ಲೆಗಳಲ್ಲಿ ಸೇರಿಸಿರದ ಕೆಲವು ಉಪಜಾತಿಗಳು ಇಲ್ಲಿ ಸೇರಿವೆ. ನೊಣಬ, ಗಂಗಡಿಕಾರ, ಎಳವ ಕುರುಬ ಇಂಥ ಪಂಗಡಗಳು. ಈ ಎಲ್ಲಾ ವೈವಿಧ್ಯದ ನಡುವೆಯೂ ಬುಡಕಟ್ಟುಗಳಲ್ಲಿ ಕಂಡುಬರುವ ನಾಲ್ಕು ವಿಭಾಗಗಳು ಶ್ರೇಯಾಂಕನ ಪಟ್ಟಿಯಲ್ಲಿ ಹೆಮ್ಮೆಯ ಸ್ಥಾನವನ್ನು ಪಡೆಯುತ್ತವೆ. ಮುಖ್ಯವಾದ ಒಂದೇ ಒಂದು ವ್ಯತ್ಯಾಸ, ಬುಡಕಟ್ಟು ವಿಭಾಗಗಳು ಪರಿಶಿಷ್ಟ ವರ್ಗಗಳಾಗಿವೆ. ಅದೇ ಹೆಸರಿನ ಕುರುಬ ಉಪಜಾತಿಗಳು ಜಾತಿಯಾಗಿಯೇ ಉಳಿಯುತ್ತವೆ, ಅವು ಯಾವಾಗ ಬುಡಕಟ್ಟಿನ ಪಕ್ಷಕ್ಕೆ ನೆಗೆಯುತ್ತವೆ ಎಂಬುದನ್ನು ಭವಿಷ್ಯತ್ತು ತಾನೇ ಹೇಳಬೇಕು!

1961ರ ಜನಗಣತಿಯಲ್ಲಿ ಮೈಸೂರು ಮತ್ತು ಕೊಡಗು ಜಿಲ್ಲೆಗಳ ಹೊರಗಿನ ಜೇನು ಕುರುಬರನ್ನು ಕಾಡು ಕುರುಬರನ್ನೂ ತಪ್ಪಾಗಿ ದಾಖಲು ಮಾಡಲಾಗಿದೆ ಎಂದು ಕಾಡುಕುರುಬ ಬುಡಕಟ್ಟು ಹಿರಿಯರು ಅಭಿಪ್ರಾಯ ಪಡುತ್ತಾರೆ. ಜನಗಣತಿಯು ಅವರನ್ನು ಹಿಂದುಗಳೆಂದು ತೋರಿಸಿರುವುದನ್ನು ಅವರು ವಿರೋಧಿಸುತ್ತಾರೆ. ಜನಗಣತಿಯಲ್ಲಿ ಎಣಿಕೆಯು ಕೇವಲ ಯಾಂತ್ರಿಕವಾಗಿದೆ. ಈ ಕೆಲಸದಲ್ಲಿ ನಿಯುಕ್ತರಾದವರು ಬಹುಮಟ್ಟಿಗೆ ಪ್ರಾಥಮಿಕ ಶಾಲಾ ಶಿಕ್ಷಕ ಶಿಕ್ಷಕಿಯರು. ಅವರು ಸ್ವಲ್ಪವೂ ಕೆದಕಿ ಪರಿಶೀಲಿಸದೆ, ವಿಷಯವನ್ನು ಸ್ಥಿರ

ಪಡಿಸಿಕೊಳ್ಳದೆಯೇ ಕಲಮುಗಳನ್ನು ಭರ್ತಿಮಾಡಿಕೊಂಡು ಹೋಗುತ್ತಾರೆ. ಮೈಸೂರು ಸೇರಿದಂತೆ ಹತ್ತು ಜಿಲ್ಲೆಗಳಲ್ಲಿ ಜೇನು ಕುರುಬ, ಕಾಡು ಕುರುಬ ಜನಸಂಖ್ಯೆಯನ್ನು ತೋರಿಸಿರುವುದು ಕೇವಲ ಕಾಲ್ಪನಿಕ. ಕುರುಬರು ಎಲ್ಲಾ ಬುಡಕಟ್ಟು ಉಪವಿಭಾಗಗಳನ್ನು ಕುರುಬ ಜಾತಿಯ ಉಪಜಾತಿಗಳೆಂದು ಪಟ್ಟಿ ಮಾಡಿ ಅವರಲ್ಲಿ ಒಂದು ಶ್ರೇಣಿಯನ್ನು ನಿಗದಿಗೊಳಿಸಿರುವುದು ವಿಚಿತ್ರವಾಗಿದೆ.

ತಡವಾಗಿಯಾದರೂ ಸ್ವಲ್ಪ ಪ್ರಯೋಜನಗಳನ್ನು ಕೊಡುವ, ಮೇಲಿನ ವ್ಯವಸ್ಥಿತ ಪರಿಶೀಲನೆಯಿಂದ ಈಗ, ಕುರುಬರು ಜಾತಿ ಶ್ರೇಣಿಯ ಕಡೆಗೆ ಹೇಗೆ ನೋಡುತ್ತಾರೆ, ತಮ್ಮನ್ನು ಇತರರನ್ನು ಆ ಶ್ರೇಣಿಯಲ್ಲಿ ಎಲ್ಲಿ ಇರಿಸಿಕೊಳ್ಳುತ್ತಾರೆ ಎಂಬುದರ ಕಡೆಗೆ ಗಮನ ಕೊಡೋಣ. ಯಾರನ್ನು ಅವರು ಮೇಲುಮಟ್ಟದವರೆಂದು ಪರಿಗಣಿಸುತ್ತಾರೆ, ಯಾವ ಉಪಜಾತಿಗಳನ್ನು ಶ್ರೇಣಿಯಲ್ಲಿ ಕೆಳಮಟ್ಟಗಳಲ್ಲಿ ಇರಿಸುತ್ತಾರೆ, ಅವು ಹೇಗೆ ಕೆಳಜಾತಿಗಳಾಗಿಯೇ ಉಳಿಯುತ್ತವೆ? ಜಾತಿ ನಿರ್ಮೂಲನದ ಬಗೆಗೆ ಅಭಿಪ್ರಾಯಗಳು, ಜಾತಿ ವ್ಯವಸ್ಥೆಯನ್ನು ಹೇಗೆ ಉಪಯೋಗಕ್ಕೆ ತಂದುಕೊಳ್ಳಬಹುದು ಎಂಬ ಅಂಶಗಳನ್ನು ಸಂಗ್ರಹಿಸಲಾಗಿದೆ. ಸಹಪಂಕ್ತಿ ಭೋಜನ, ಅಂತರ್‌ಜಾತೀಯ ವಿವಾಹಗಳನ್ನು ಕುರಿತ ಅಭಿಪ್ರಾಯಗಳನ್ನು ಸಂಗ್ರಹಿಸಲಾಗಿದೆ. ಉದ್ದೇಶಿತ ಗುರಿಯನ್ನು ತಲುಪಲು ಕೈಗೊಳ್ಳುವ ಕ್ರಮಗಳನ್ನು ವಸ್ತುನಿಷ್ಠವಾಗಿ ರೂಪಿಸಲು ಈ ಮಾಹಿತಿ ಅತ್ಯಗತ್ಯವಾಗುತ್ತದೆ.

ಮೈಸೂರು, ಧಾರವಾಡ, ಬಳ್ಳಾರಿ ಮತ್ತು ಚಿತ್ರದುರ್ಗ ಜಿಲ್ಲೆಗಳ ಕುರುಬರಲ್ಲಿ ಅನುಕ್ರಮದಲ್ಲಿ ಬಹುತೇಕವಾಗಿ 121, 95, 104 ಮತ್ತು 112 ಜನರು ಜಾತಿ ಶ್ರೇಣಿಯಲ್ಲಿ ಮಧ್ಯಮದ ಸ್ಥಾನವನ್ನು ಹೇಳಿಕೊಳ್ಳುತ್ತಾರೆ. ಕೆಲವರು, ಅಂದರೆ 31 ಜನರು ತಾವು ಮೇಲು ಜಾತಿಯವರೆಂದು ಹೇಳುತ್ತಾರೆ. 133 ಜನರು ಕೆಳವರ್ಗಗಳೆಂದು ಪರಿಗಣಿಸಿಕೊಳ್ಳುತ್ತಾರೆ. ಐವರು ಮಾತ್ರ ತಮ್ಮದು ಯಾವ ಸ್ಥಾನವೆಂಬುದು ತಿಳಿಯದೆಂದು ಹೇಳುತ್ತಾರೆ.

ಪ್ರಸ್ತುತ ಅಧ್ಯಯನದ ವ್ಯಾಪ್ತಿಗೆ ಬಂದಿರುವ ನಾಲ್ಕೂ ಜಿಲ್ಲೆಗಳಲ್ಲಿ ಕುರುಬರು ಮೇಲುವರ್ಗದ ಜಾತಿಗಳು, ಕೆಳವರ್ಗದ ಜಾತಿಗಳ ವಿಷಯದಲ್ಲಿ ಏಕಾಭಿಪ್ರಾಯವುಳ್ಳವರಾಗಿದ್ದಾರೆ. ಮೇಲು ಜಾತಿಗಳಲ್ಲಿ ಲಿಂಗಾಯತರು, ಸುಮಾರಾಗಿ ಅವರ ಎಲ್ಲಾ ಉಪಜಾತಿಗಳು, ಪುರೋಹಿತ ವರ್ಗವಾದ ಜಂಗಮರು, ಆಮೇಲೆ ಬ್ರಾಹ್ಮಣರು, ಜೈನರು, ಅರಸು, ಶೆಟ್ಟಿ (ವೈಶ್ಯ), ಒಕ್ಕಲಿಗ, ಅವರ ಉಪಜಾತಿಗಳು, 'ರೆಡ್ಡಿ, ಉಪ್ಪಾರ, ಮರಾಠರು ಮತ್ತು ನೇಯ್ಗೆಯವರು (ದೇವಾಂಗ) ಪಟ್ಟಿಗೊಂಡಿದ್ದಾರೆ. ಕುರುಬರಿಗಿಂತ ಕೆಳಗಿನ ಜಾತಿಗಳಲ್ಲಿ ಎಸ್‌ಸಿಗಳು ಮತ್ತು ಎಸ್‌ಟಿಗಳು ಬರುತ್ತಾರೆ. 580 ಜನ ಮಾಹಿತಿದಾರರು ಇದನ್ನು ಅನುಮೋದಿಸುತ್ತಾರೆ. ಈಡಿಗ (ಹೆಂಡ ಇಳಿಸುವವರು), ಮಡಿವಾಳ (ಅಗಸರು), ಪರಿವಾರ ತಮ್ಮ ಪ್ರಾದೇಶಿಕ ನಾಮಗಳೊಂದಿಗೆ, ಆಮೇಲೆ ಬೆಸ್ತ (ಮೀನುಗಾರರು), ಮುಸ್ಲಿಮರು, ಕ್ರಿಶ್ಚಿಯನ್ನರು, ಲಂಬಾಣಿ, ಬೋವಿ, ಕೊರವ, ಬೇಗಾರ ಇವರು ಸೇರುತ್ತಾರೆ. ಕೊನೆಯ ನಾಲ್ಕು ಪಂಗಡಗಳನ್ನು ಎಸ್.ಸಿ. ವರ್ಗದಲ್ಲಿ ಹೇಳಲಾಗಿದೆ.

ಕುರುಬರಿಗೆ ಶ್ರೇಣೀಕೃತ ಅನುಕ್ರಮದಲ್ಲಿ ಜಾತಿಯ ಮಹತ್ವವೇನೆನ್ನುವುದು ತಿಳಿದಿದೆ ಎಂಬುದನ್ನು ಇದು ಸೂಚಿಸುತ್ತದೆ. ಆದ್ದರಿಂದ ಅವರು ಕೆಲವು ಪಂಗಡಗಳನ್ನು ಗೌರವದಿಂದ ಕಾಣುತ್ತಾರೆ; ಕೆಳಜಾತಿಗಳ ವಿರುದ್ಧ ತಾರತಮ್ಯ ತೋರಿಸುತ್ತಾರೆ. ಕಾಡುಕುರುಬ, ಬೆಟ್ಟ ಕುರುಬ, ಜೇನು ಕುರುಬ ಮತ್ತು ಮುಳ್ಳು ಕುರುಬರು ಎಸ್.ಟಿ. ವರ್ಗಕ್ಕೆ ಸೇರುತ್ತಾರೆ ಎಂಬುದರಿಂದಾಗಿ, ಅವರು ಕುರುಬರಿಗಿಂತ ತುಂಬಾ ಕೆಳಗಿನ ಹಂತದಲ್ಲಿ, ಬಹುಶಃ ಎಸ್.ಟಿ.ಗಳ ಸಮಕ್ಕೆ ನಿಲ್ಲುತ್ತಾರೆ. ಆದರೂ ಕುರುಬರು ಈ ಹೆಸರುಗಳನ್ನು ಅಳವಡಿಸಿಕೊಂಡು ಅಥವಾ 'ನಕಲು ಮಾಡಿ' ತಮ್ಮ ಉಪ-ಜಾತಿಗಳೆಂದು ಹೇಳುವುದು ಗೊಂದಲಕ್ಕೆ ಆಸ್ಪದ ಕೊಟ್ಟಿದೆ. ಪ್ರಶ್ನೆ ತುಂಬಾ ನಾಜೂಕಿನದಾಗಿದೆ.

601ರಲ್ಲಿ 65 ಜನರನ್ನು ಬಿಟ್ಟರೆ ಮಿಕ್ಕ ಕುರುಬರು, ತಾವು ಕಾಡು ಕುರುಬರ ಮತ್ತು ಆ ಬುಡಕಟ್ಟಿನ ಉಪ ವಿಭಾಗಗಳ ವಿಚಾರವಾಗಿ ಕೇಳಿರುವುದಾಗಿ ಹೇಳುತ್ತಾರೆ. ಅಂಥವೇ ಪಂಗಡಗಳನ್ನು ಕುರುಬ ಉಪಜಾತಿಗಳೆಂದು ಹೇಳಿಕೊಂಡಿರುವುದನ್ನು ಅವರು ಮರೆತುಬಿಟ್ಟಿದ್ದಾರೆ. ಆದರೂ ಕಾಡು ಕುರುಬರೂ ಕುರುಬರೂ ಸಂಬಂಧಿಗಳೆ ಎಂಬ ಪ್ರಶ್ನೆಗೆ 428 ಜನರು 'ಇಲ್ಲ' ಎಂದು ಉತ್ತರ ಕೊಟ್ಟಿದ್ದಾರೆ; 131 ಜನರು ಹೌದೆನ್ನುತ್ತಾರೆ; 42 ಜನ ಉತ್ತರಕೊಡುವುದಿಲ್ಲ. ಉತ್ತರ ಕೊಟ್ಟ ಒಟ್ಟು 515 ಜನರು ಕುರುಬರು ಹಿಂದುಗಳೆಂದೂ, ಜಾತಿಯನ್ನು ಪ್ರತಿನಿಧಿಸುತ್ತಾರೆಂದೂ ಹೇಳಿದ್ದಾರೆ. ಹಾಗೆಯೇ ಒಟ್ಟು 515 ಜನರು ಮೇಲು ಮತ್ತು ಕೆಳ ಜಾತಿಗಳೊಂದಿಗೆ ಅಂತರ್ - ಸಂಪರ್ಕ ಹೊಂದಿರುವುದಾಗಿ ಹೇಳುತ್ತಾರೆ. ಕುರುಬರು ಕೆಳಜಾತಿಗಳನ್ನು ತಮಗೆ ಸಮಾನರೆಂದು ಪರಿಗಣಿಸುತ್ತಾರೆಯೇ ಎಂಬ ಪ್ರಶ್ನೆಗೆ 463 ಜನರು 'ಹೌದು' ಎಂದು ಉತ್ತರ ಕೊಡುತ್ತಾರೆ. ಕುರುಬರು ತಮಗಿಂತ ಮೇಲು ಜಾತಿಗಳೊಂದಿಗೆ ತಮ್ಮನ್ನು ಸಮಾನವೆಂದು ಹೇಳಿಕೊಳ್ಳುತ್ತಾರೆಯೆ ಎಂಬ ಪ್ರಶ್ನೆಗೆ 401 ಜನ 'ಹೌದು' ಎಂದು ಉತ್ತರ ಕೊಡುತ್ತಾರೆ. ಉಳಿದ 200 ಜನರು 'ಇಲ್ಲ' ಎನ್ನುತ್ತಾರೆ. ಇದರಲ್ಲಿ ವೈರುಧ್ಯವೇನೂ ಇಲ್ಲ. ಅವರು ಮೇಲುಜಾತಿಗಳೊಂದಿಗೆ ಸಮನೆಂದು ತಮ್ಮನ್ನು ಪರಿಗಣಿಸಿಕೊಂಡರೂ ಕೆಳ ಜಾತಿಗಳ ವಿಷಯದಲ್ಲಿ ಉದಾರವಾಗಿಯೂ ಇರಬಹುದು.

ಜಾತಿಗಳ ನಿರ್ಮೂಲನದ ವಿಷಯಕ್ಕೆ ಬಂದರೆ, 601 ಜನರಲ್ಲಿ 404 ಜನ ಮಾಹಿತಿದಾರರು ಜಾತಿಗಳನ್ನು ರದ್ದುಪಡಿಸಬಾರದು ಎನ್ನುತ್ತಾರೆ. ಉಳಿದವರಲ್ಲಿ 193 ಜನರು ಅದರ ಪರವಾಗಿದ್ದರೆ 4 ಜನರಿಗೆ ಸ್ವತಂತ್ರ ಅಭಿಪ್ರಾಯವಿಲ್ಲ. ಜಾತಿ ಪದ್ಧತಿಯನ್ನು ರದ್ದುಪಡಿಸಬೇಕು ಎನ್ನುವವರು, ಅದನ್ನು ಮುಂದುವರಿಸಬೇಕು ಎನ್ನುವವರು ಅನೇಕ ಕಾರಣಗಳನ್ನು ಕೊಟ್ಟು, ಉಳಿಸಬೇಕು ಎನ್ನುತ್ತಾರೆ. ಕೆಲವರಂತೂ ಒತ್ತಾಯ ಪಡಿಸುತ್ತಾರೆ. ಜಾತಿ ಪದ್ಧತಿಯ ಪರ ಮತ್ತು ವಿರೋಧ ಅಭಿಪ್ರಾಯಗಳಲ್ಲಿ ಕೆಲವು ಹೀಗಿವೆ: "ನಮ್ಮ ದಿನ ನಿತ್ಯದ ಬದುಕಿನಲ್ಲಿ ಜಾತಿ ಪದ್ಧತಿಯು ಒಂದು ಮುಖ್ಯವಾದ ಪಾತ್ರವನ್ನು ವಹಿಸುತ್ತದೆ. ಆದ್ದರಿಂದ ಅದು ಅತ್ಯಗತ್ಯವಾಗಿದೆ. ಅದು ಪೀಳಿಗೆಯಿಂದ ಪೀಳಿಗೆಗೆ ನಡೆದುಕೊಂಡು ಬಂದಿದೆ." "ಮನುಷ್ಯ ಜೀವಿಗಳಿಗೆ ಅದು ಅನಿವಾರ್ಯವಾದ ವ್ಯವಸ್ಥೆ". "ಸಾಮಾಜಿಕ ಮತ್ತು

ಆಚರಣಾತ್ಮಕ ಜೀವನಕ್ಕೆ ಅಗತ್ಯವಾದ ಸ್ಥಾನಮಾನವನ್ನು ಅದು ಕೊಡುತ್ತದೆ." "ಅದು ಐಕ್ಯತೆಯನ್ನು ಬೆಳೆಸುತ್ತದೆ. ಗುರುತಿಸುವುದು ಸುಲಭವಾಗುತ್ತದೆ." "ಅದನ್ನು ನಿಷೇಧಿಸಬಾರದು, ಮುಂದುವರಿಸಬೇಕು." ಜಾತಿ ಪದ್ಧತಿಯ ವಿರುದ್ಧವಾದ ಅಭಿಪ್ರಾಯಗಳು ಕಡಿಮೆಯಾದರೂ ಅಷ್ಟೇ ಮುಖ್ಯವಾದವು: "ಮಾನವರೆಲ್ಲರೂ ಒಂದೇ;" "ಅಸಮತೆಯನ್ನು ಸೃಷ್ಟಿಸಿ ಜನರಲ್ಲಿ ಭೇದಕಲ್ಪನೆಯನ್ನು ಹೆಚ್ಚಿಸುತ್ತದೆ"; "ಮತೀಯ ಸಂಘರ್ಷಗಳು ಮತ್ತು ದೊಂಬಿಗಳಿಗೆ ಕಾರಣವಾಗುತ್ತದೆ;" "ಬೆಳವಣಿಗೆಗೆ, ಅಭಿವೃದ್ಧಿಗೆ ಅದು ದೊಡ್ಡ ಅಡ್ಡಿಯಾಗಿದೆ." "ರಾಷ್ಟ್ರೀಯ ಐಕ್ಯತೆ, ಶಾಂತಿ, ಸುವ್ಯವಸ್ಥೆಗಳ ಪಾಲನೆಗೆ ಅದು ದೊಡ್ಡ ತಡೆಯಾಗುವುದರಿಂದ ಅದನ್ನು ನಾಶಪಡಿಸಬೇಕು." "ಆಧುನೀಕರಣ ಪ್ರಕ್ರಿಯೆಯ ಮೇಲೆ ಅದು ದುಷ್ಪರಿಣಾಮವನ್ನುಂಟು ಮಾಡುತ್ತದೆ." "ಅರ್ಹತೆಯನ್ನು ಆದ್ಯತೆಯ ಮೇಲೆ ಪರಿಗಣಿಸಬೇಕೇ ಹೊರತು ಜಾತಿಯಿಂದಲ್ಲ."

ಮಾದರಿಯ ಕೊನೆಯ ಪಕ್ಷ 1/3 ರಷ್ಟು ಜನರು ವಿಚಾರ ಮಾಡುವವರಂತೆ ತೋರುತ್ತಾರೆ, ಮಾನವೀಯ ಮೌಲ್ಯಗಳ ಮೇಲೆ ಜಾತಿ ಪದ್ಧತಿಯ ದುಷ್ಪರಿಣಾಮಗಳನ್ನು, ನೈತಿಕತೆ ಹಾಗೂ ಸಮಾಜಗಳ ಮೇಲೆ ಅದರಿಂದಾಗುವ ಹಾನಿಯನ್ನು ಅರಿತುಕೊಂಡಿರುವಂತೆ ತೋರುತ್ತದೆ. ಇದು ಪ್ರಾಮಾಣಿಕವಾದ ಅಭಿಪ್ರಾಯವಾಗಿದ್ದರೆ, ಸಮಾಜದ ಒಳಿತಿನ ಬಗೆಗೆ ಕಾಳಜಿಯಾಗಿದ್ದರೆ, ಅದು ಸಣ್ಣ ಕ್ರಮವಾಗಿ ಪ್ರಾರಂಭವಾಗಿದ್ದರೂ ಶುಭ ಶಕುನವೆಂದೇ ಹೇಳಬೇಕು. ಬದುಕಿನ ಎಲ್ಲಾ ಕ್ಷೇತ್ರಗಳಿಂದ ಸಮಾನ ಮನಸ್ಕರಾದ ಜನರು ಇದಕ್ಕೆ ಸೇರಿಕೊಂಡ ಪಕ್ಷದಲ್ಲಿ, ಜಾತೀಯ ವ್ಯಕ್ತಿಪೂಜೆಗಳಿಂದ ಮುಕ್ತವಾದ ನಿಜವಾದ ಜಾತ್ಯತೀತ ಸಮಾಜದ ಅತ್ಯುತ್ತಮ ಉದಾಹರಣೆಯಾಗಿ, ಕಳೆದುಹೋದ ಕೆಟ್ಟ ಭೂತಕಾಲವನ್ನು ಮರೆಯಲು ಸಹಾಯ ಮಾಡುತ್ತದೆ. ದುರದೃಷ್ಟವಶಾತ್, ಇತಿಹಾಸವನ್ನು ನೋಡಿದರೆ, ಇಂತಹ ಕ್ರಮಗಳು ಪಟ್ಟಭದ್ರ ಹಿತಗಳ ಒತ್ತಡಕ್ಕೆ ಸಿಕ್ಕಿ ಹಾಗೇ ಸೊರಗಿಹೋಗಿವೆ.

ವಿವೇಕಾನಂದ, ಮಹಾತ್ಮಾಗಾಂಧಿಯವರೂ ಕೂಡಿದಂತೆ, ಬುದ್ಧ, ಬಸವ, ಅಂಬೇಡ್ಕರ್, ಕಬೀರ್ ಮೊದಲಾದ ಅನೇಕ ಮಹನೀಯರ ಕೆಲಸವನ್ನು ಜನರು ಕಿವುಡುಗೇಳಿರುವಂತೆ ತೋರುತ್ತದೆ. ಕೆಲವು ಮಾಹಿತಿದಾರರಾದರೂ ಈ ರೀತಿಯಾಗಿ ಆಲೋಚನೆ ಮಾಡುತ್ತಿರುವುದು ಒಳ್ಳೆಯ ಚಿಹ್ನೆ. ದೇಶವು ಹಲವು ಹತ್ತು ಬಗೆಯ ಜಾತಿ ಆಧಾರಿತ ಮೀಸಲಾತಿಗಳಿಂದ, ಉದಾರವಾದ ರಾಜಕೀಯ ನಿರ್ಧಾರಗಳ ಫಲವಾದ ಈ ಕ್ರಮಗಳಿಂದ ಇಡೀ ದೇಶವು ತಳಮಳಗೊಳ್ಳುತ್ತಿರುವಾಗ ಇದು ಒಳ್ಳೆಯ ತಿರುವಾಗಿದೆ.

ಕುರುಬ ಉಪಜಾತಿಗಳಲ್ಲಿ ಸಹ ಪಂಕ್ತಿ ಭೋಜನ ಮತ್ತು ವಿವಾಹ ಪದ್ಧತಿ ಇದೆಯೆ ಎಂಬ ಪ್ರಶ್ನೆಗೆ 201 ಜನ ಮಾಹಿತಿದಾರರು ಪರಸ್ಪರರೊಂದಿಗೆ ಊಟ ಮಾಡುವುದಾಗಿ ಹೇಳಿದ್ದಾರೆ. 138 ಜನ ಪರಸ್ಪರದಲ್ಲಿ ಊಟ, ಮದುವೆ ಎರಡೂ ಉಂಟು ಎಂದಿದ್ದಾರೆ. 162 ಜನರು ಆ ಬಗೆಯ ಸಂಬಂಧಗಳು ಉಪಜಾತಿಗಳ ನಡುವೆ ಇಲ್ಲ ಎಂದರೆ, ಒಂದುನೂರು ಜನರು ಪ್ರತಿಕ್ರಿಯೆ ತೋರಿಸಿಲ್ಲ. ಉಪಜಾತಿಗಳ ನಡುವಣ ಅಂತರ್ಜಾತೀಯ ವಿವಾಹಗಳ

ವಿಚಾರದಲ್ಲಿ, 423 ಜನರಲ್ಲಿ ಮೇಲು ಜಾತಿಗೆ ಸೇರಿದ ಹುಡುಗ ಹುಡುಗಿಯರಿದ್ದರೂ ಆ ಬಗೆಯ ವಿವಾಹದ ಪರವಾಗಿ ಹೇಳುವುದಿಲ್ಲ. 8 ಜನ ಮಾತ್ರ ಮೇಲು ಜಾತಿಯ ಹುಡುಗರೊಂದಿಗೆ, 4 ಜನ ಮಾತ್ರ ಮೇಲು ಜಾತಿಯ ಹುಡುಗಿಯರೊಂದಿಗೆ ವಿವಾಹ ಆಗಬಹುದು ಎನ್ನುತ್ತಾರೆ. ಆದರೆ ಯಾರಿಗೂ ಬುಡಕಟ್ಟಿನಲ್ಲಿ ಜನಿಸಿದ ವಧು ಅಥವಾ ವರನ ವಿಷಯದಲ್ಲಿ ಆಸಕ್ತಿಯಿಲ್ಲ. 163 ಜನರು ಮೇಲು ಜಾತಿಗಳಿಂದ ಬಂದ ಹುಡುಗ - ಹುಡುಗಿಯರೊಂದಿಗೆ ಮದುವೆಗೆ ಸಮ್ಮತಿಸಿದರೆ, ಬುಡಕಟ್ಟು ಮೂಲದ ವಧು-ವರರ ಬಗೆಗೆ ಯಾರಿಗೂ ಆಸಕ್ತಿಯಿಲ್ಲ.

ಮೇಲಿನ ಅಂಶಗಳಿಂದ ಕೆಲವು ಸಾಮಾನ್ಯ ತೀರ್ಮಾನಗಳಿಗೆ ಬರಬಹುದು. ಕುರುಬರು ಸಂಪ್ರದಾಯಶೀಲವಾದ ಊಳಿಗಮಾನ್ಯ ಪಂಗಡವಾಗಿದ್ದಾರೆ. ಆಶೋತ್ತರಗಳು ಒಂದುಕಡೆ, ಅಲ್ಪ ಸಾಧನೆ ಇನ್ನೊಂದು ಕಡೆ - ಎರಡರ ನಡುವೆ ಸಿಕ್ಕಿಕೊಂಡಿರುವ ಅವರು ಆಧುನೀಕರಣಕ್ಕಿಂತ ಸಂಪ್ರದಾಯ ಬದ್ಧತೆಗೆ ಹಂಬಲಿಸುತ್ತಾರೆ. ಕುರುಬರಲ್ಲಿ ಬಹುಮಟ್ಟಿನವರು ಜಾತಿ ಪದ್ಧತಿಯನ್ನು ಉಳಿಸಬೇಕು ಎಂದು ಬಯಸುತ್ತಾರೆ. ಉಪ-ಜಾತಿಗಳ ನಡುವೆಯೂ ಸಹಭೋಜನ ಮತ್ತು ಅಂತರ್ಜಾತೀಯ ವಿವಾಹಗಳನ್ನು ಅವರು ಸ್ವಾಗತಿಸುವುದಿಲ್ಲ. ಬಹುತೇಕ ಜನರು ಅಂತರ್ಜಾತೀಯ ವಿವಾಹವನ್ನು ಒಪ್ಪುವುದಿಲ್ಲ. ವೃತ್ತಿ, ವಿದ್ಯಾಭ್ಯಾಸ, ರಾಜಕೀಯ ಮತ್ತು ಧಾರ್ಮಿಕ ಆಶೋತ್ತರಗಳು ಈ ವಿಚಾರಗಳಲ್ಲೂ ಸಾಮಾನ್ಯ ಅಭಿಪ್ರಾಯಗಳನ್ನು ಹೀಗೆ ಸಂಗ್ರಹಿಸಬಹುದು. ಇವೆಲ್ಲ ಒಟ್ಟುಗೂಡಿ ಅವರು ಜಾತಿ ಆಧಾರದಿಂದ ಸಂಘಟಿತರಾಗುವಂತೆ ಮಾಡಿವೆ. ಬುಡಕಟ್ಟುಗಳನ್ನು ತಮ್ಮಲ್ಲೇ ವಿಲೀನಗೊಳಿಸಿಕೊಂಡು ಅಥವಾ ತಾವು ಆ ಪಂಗಡಗಳಿಗೇ ಸೇರಿದವರೆಂದು ಹೇಳಿಕೊಂಡು ಎಂದೋ ಒಂದು ದಿನ ಪರಿಶಿಷ್ಟ ಪಂಗಡದ ನೆಲೆಗೆ ತಲುಪುವ ನಿರೀಕ್ಷೆಯನ್ನು ಅವರು ಬೆಳೆಸಿಕೊಳ್ಳುವಂತೆ ಮಾಡಿವೆ.

ವೃತ್ತಿ ಹಿನ್ನೆಲೆ : ಕುರುಬ ಜಾತಿಯ ಸಾಂಪ್ರದಾಯಿಕ ವೃತ್ತಿ ಕುರಿ ಸಾಕುವುದು ಮತ್ತು ಉಣ್ಣೆಯ ಕಂಬಳಿಗಳನ್ನು ನೇಯುವುದು. ವೆಂಕಟಸ್ವಾಮಿ ಆಯೋಗದ ವರದಿಯಲ್ಲಿ ಅವರನ್ನು ಕುರಿ ಸಾಕಾಣಿಕೆ ಮತ್ತು ಕಂಬಳಿ ನೇಯುವಿಕೆಗಳಲ್ಲಿ ತೊಡಗಿರುವ ಕುರಿಗಾಹಿ ಸಮುದಾಯ ಎಂದು ವರ್ಣಿಸಲಾಗಿದೆ. ಭಾರತೀಯ ಸಮಾಜದ ಬಹುತೇಕ ಜಾತಿಗಳಲ್ಲಿ ಸಾಂಪ್ರದಾಯಿಕ ಜಾತಿ ವೃತ್ತಿಗಳು ಎಷ್ಟು ಮಾತ್ರಕ್ಕೂ ಬೆಲೆಯುಳ್ಳದಾಗಿ ನಿಂತಿಲ್ಲ. ಆದರೂ ಕೆಲವು ಕೀಳೆನಿಸುವ, ಮಲಿನಗೊಳಿಸುವ ವೃತ್ತಿಗಳನ್ನು ಕೆಳಜಾತಿಗಳು ನಿರ್ವಹಿಸುತ್ತಿದ್ದಾರೆ. ನಿರ್ದಿಷ್ಟ ಜಾತಿಗಳ ಹಲವು ಸದಸ್ಯರು ಬಹಳ ಹಿಂದೆಯೇ ಸಾಂಪ್ರದಾಯಿಕ ವೃತ್ತಿಯನ್ನು ತೊರೆದಿದ್ದರೂ ಆ ಒಂದು ಕಳಂಕವನ್ನು ಇನ್ನೂ ಹೊತ್ತುಕೊಂಡೇ ಇವೆ. ಅಲ್ಲದೆ, ಅನೇಕ ಸಂದರ್ಭಗಳಲ್ಲಿ, ಸಾಂಪ್ರದಾಯಿಕ ವೃತ್ತಿಯು ಮಾತ್ರವೇ ಸಮುದಾಯದ / ಜಾತಿಯ ಸದಸ್ಯರೆಲ್ಲರಿಗೂ ಅಗತ್ಯವಾದಷ್ಟು ಆರ್ಥಿಕ ಸುಭದ್ರತೆಯನ್ನು ನೀಡಲಾರದಾಗಿದೆ.

ಆರ್ಥಿಕ ವೈವಿಧ್ಯೀಕರಣದಿಂದಾಗಿ, ಒಂದು ಜಾತಿಯ ಸದಸ್ಯರು ಸಾಮಾನ್ಯವಾಗಿ ಬೇರೆ ವೃತ್ತಿಗಳನ್ನು ಮುಖ್ಯ ವೃತ್ತಿಯನ್ನಾಗಿಯೋ ಸಾಂಪ್ರದಾಯಿಕ ವೃತ್ತಿಯಿಂದ ಬರುವ ವರಮಾನಕ್ಕೆ

ಪೂರಕವಾಗಿ ಅನುಸರಿಸುತ್ತಾರೆ. ಒಂದು ನಿರ್ದಿಷ್ಟ ವೃತ್ತಿಯಲ್ಲಿ ನಿರತರಾಗಿರುವ ಜನರ ಸಂಖ್ಯೆ, ಒದಗಿಸುತ್ತಿರುವ ಸೇವೆಗಳ ಸ್ವರೂಪ, ಸಮುದಾಯದ ಅಗತ್ಯಗಳು ಇವು, ಸಾಂಪ್ರದಾಯಿಕ ವೃತ್ತಿಯ ಜೊತೆಗೆ ಬೇರೆ ಬೇರೆ ವೃತ್ತಿಗಳನ್ನು ಹಿಡಿಯಬೇಕೆ ಬೇಡವೆ ಎಂಬುದನ್ನು ನಿರ್ಧರಿಸುತ್ತವೆ. ಎಂದಿನಿಂದಲೂ ಕೃಷಿಯು ಬದಲಿ ಉದ್ಯೋಗವನ್ನು ಒದಗಿಸಿದೆ. ಈಗಲಾದರೆ ಇನ್ನೂ ಅನೇಕ ಉದ್ಯೋಗಾವಕಾಶಗಳು ಲಭ್ಯವಾಗಿವೆ. ಆದರೂ ಕೆಲವು ಜಾತಿನಾಮಗಳು ನಿರ್ದಿಷ್ಟ ವೃತ್ತಿಯಿಂದ ಬಂದಿವೆ ಅಥ್‌ವಾ ಅದರೊಂದಿಗೆ ಸಂಬಂಧಪಟ್ಟಿರುತ್ತವೆ. ಬಡಗಿ, ಅಕ್ಕಸಾಲೆ, ಚಮ್ಮಾರ ಇವು ಇಂಥವು. ಪ್ರಸ್ತುತ ಅಧ್ಯಯನದಲ್ಲಿ 163 ಜನರು ಕುರಿ ಸಾಕುವುದನ್ನು ತಮ್ಮ ವೃತ್ತಿಯೆಂದು ಹೇಳಿದ್ದಾರೆ; 292 ಜನರು ಕುರಿ ಸಾಕಾಣಿಕೆಯ ಜೊತೆಗೆ ಕಂಬಳಿ ನೇಯುವುದನ್ನು ಹೇಳಿದ್ದಾರೆ. 14 ಜನ ಮಾತ್ರ ಯಾವ ವೃತ್ತಿಯನ್ನು ಸ್ಪಷ್ಟವಾಗಿ ಹೇಳಿಲ್ಲ. 132 ಜನರು ಕೃಷಿಯೊಂದಿಗೆ ಸಂಬಂಧಪಟ್ಟಿದ್ದಾರೆ. ಅಂದರೆ ಬೇಸಾಯಗಾರರಾಗಿ ಮತ್ತು ಕೃಷಿಯ ಕೂಲಿಯಾಳುಗಳಾಗಿ ಕೆಲಸ ಮಾಡುತ್ತಾರೆ. ಮಾಹಿತಿದಾರರಾದ 601 ಜನರಲ್ಲಿ 455 ಜನರು, ಅಂದರೆ 3/4 ಭಾಗ ಇನ್ನೂ ಸಾಂಪ್ರದಾಯಿಕ ಜಾತಿ ವೃತ್ತಿಯನ್ನು ಮುಂದುವರಿಸುತ್ತಿರುವುದು ಸುಸಂಗತವಾಗಿದೆ ಮತ್ತು ಗಮನಾರ್ಹವಾಗಿದೆ. ಇಲ್ಲಿ ಮುಖ್ಯವಾದ ವಿಷಯವೇನೆಂದರೆ, ಕುರಿ ಸಾಕಾಣಿಕೆಯು ಯಾವುದೇ ಬಗೆಯ ಕಳಂಕವಿಲ್ಲದ ವೃತ್ತಿಯಾಗಿರುವುದು. ಸರಕಾರವು ಹೆಚ್ಚಾಗಿ ಪ್ರೋತ್ಸಾಹ ನೀಡುತ್ತಿರುವ, ವೃತ್ತಿ ತಂಡಗಳ ಅಗತ್ಯಗಳನ್ನು ಪೂರೈಸಲೆಂದೇ ಒಂದು ಪ್ರತ್ಯೇಕ ಮಂಡಳಿಯು ಅಸ್ತಿತ್ವದಲ್ಲಿರುವ ಈ ದಿನಗಳಲ್ಲಿ ಅದು ಹೆಚ್ಚು ಲಾಭದಾಯಕವಾಗಿರುವುದು ಸಹಜವಾಗಿದೆ.

ಕುರುಬ ಜಾತಿಯ ಸಾಮಾಜಿಕ - ಆರ್ಥಿಕ ಪರಿಸ್ಥಿತಿಯು ಈ ವರ್ಗವು ಜಾತಿ ಶ್ರೇಣಿಯಲ್ಲಿ ಮಧ್ಯಸ್ಥಾನವನ್ನು ಪಡೆದುಕೊಂಡಿರುವುದನ್ನು ತೋರಿಸುತ್ತದೆ. ಆದ್ದರಿಂದ ಸಾಮಾಜಿಕ ಸ್ಥಾನಮಾನವು ಉತ್ತಮವಾಗಿದೆ ಮತ್ತು ಜಾತಿಗೆ ಅಥವಾ ಸಾಂಪ್ರದಾಯಕ ಜಾತಿ ವೃತ್ತಿಗೆ ಯಾವುದೇ ಕಳಂಕ ಅಥವಾ ತಾರತಮ್ಯ ಅಂಟಿಕೊಂಡಿಲ್ಲ. ಬಳಕೆ ಮಾತಿನಲ್ಲಿ ಕುರುಬ ಎಂಬ ಪದವನ್ನು 'ದಡ್ಡ' ಎಂಬ ಅರ್ಥದಲ್ಲಿ ಉಪಯೋಗಿಸಲಾಗುತ್ತದೆ. ಆದರೆ ಈ ಅರ್ಥಗಳು ಸಾಂಪ್ರದಾಯಿಕ 'ತಮಾಷೆ'ಗಳು ಅಥವಾ ಅಡ್ಡ ಹೆಸರುಗಳು. ಯಾವುದೇ ಸಮುದಾಯದಲ್ಲೂ ಇವಕ್ಕೆ ಬೆಲೆಯಿಲ್ಲ. ಆದರೂ ಆಗಾಗ, ಜಾತಿ ಯಾವುದೇ ಇರಲಿ, ಬುದ್ಧಿಯಿಲ್ಲದ ವ್ಯಕ್ತಿಗೆ ವಿಶೇಷಣವಾಗಿ ಅವು ಕಾಣಿಸಿಕೊಳ್ಳುತ್ತವೆ. ಹಾಗೆಯೇ ಧನಗರ್ ಎನ್ನುವುದು ಒರಟು ಅಥವಾ ಪೆಡಸು ವ್ಯಕ್ತಿ ಎಂದು ಸೂಚಿಸುವ ಬೈಗಳವಾಗಿ ಅನೇಕ ವೇಳೆ ಉಪಯೋಗವಾಗುತ್ತದೆ.

ಕುರುಬರ ವೃತ್ತಿ ಹಿನ್ನೆಲೆಯನ್ನು ಕೆಳಗೆ ಚರ್ಚಿಸಲಾಗಿದೆ. 601 ಜನರ ಮಾದರಿಯಲ್ಲಿ, 298 ಜನರು ತಮಗೆ ಸ್ವಂತದ ಜಮೀನಿದೆ ಎಂದು ಹೇಳಿದ್ದಾರೆ; 142 ಜನರು ಕೃಷಿಕ್ಷೇತ್ರದಲ್ಲಿ ಕೂಲಿಕಾರರೆಂದು ಹೇಳುತ್ತಾರೆ. 58 ಜನ ಸರಕಾರಿ ನೌಕರರಿದ್ದಾರೆ. 49 ಜನರು ಖಾಸಗಿ

ವಲಯದಲ್ಲಿ ಕೆಲಸ ಮಾಡುತ್ತಾರೆ. 37 ಜನರು ಸಣ್ಣಪುಟ್ಟ ವ್ಯವಹಾರ ಮಾಡುತ್ತಾರೆ. 21 ಜನ ಮಾಹಿತಿದಾರರು ಉತ್ತರ ಕೊಟ್ಟಿಲ್ಲ, ಮಿಕ್ಕ 16 ಜನರು ಜಮೀನಿನ ಒಡೆಯರಲ್ಲವಾದರೂ ಜಮೀನು ಇಟ್ಟುಕೊಂಡು ಕೃಷಿಯಲ್ಲಿ ತೊಡಗಿದ್ದಾರೆ.

ಗಣನೆಗೆ ಬಾರದಷ್ಟು ಜನ (8) ರೈತರು ಪಾಲು ಬೆಳೆ ಗದ್ದೆ ಬೇಸಾಯದಲ್ಲಿ ತೊಡಗಿದ್ದಾರೆ; 11 ಜನರು 1ರಿಂದ 5 ಎಕರೆಗಳಷ್ಟು ಭೂಮಿಯನ್ನು ಭೋಗ್ಯ ಮಾಡಿಕೊಂಡಿದ್ದಾರೆ. 147 ಜನರು ಗದ್ದೆಯ ಒಡೆತನ ಹೊಂದಿದ್ದು ಬೇಸಾಯ ಮಾಡುತ್ತಾರೆ. 147 ಜನರಲ್ಲಿ 76 ಜನರಿಗೆ 5 ಎಕರೆ ಅಥವಾ ಅದಕ್ಕಿಂತ ಹೆಚ್ಚು, 14 ಜನರಿಗೆ 4 ಎಕರೆ, 15 ಜನರಿಗೆ 3 ಎಕರೆ, 20 ಜನರಿಗೆ 2 ಎಕರೆ ಮತ್ತು 21 ಜನರಿಗೆ ತಲಾ 1 ಎಕರೆ ಗದ್ದೆಯಿದೆ. ಒಟ್ಟು 61 ಜನ ರೈತರು ಗದ್ದೆಗಳಲ್ಲಿ ಭತ್ತ, ಗೋಧಿ ಬೆಳೆಯುತ್ತಾರೆ. 26 ಜನರು ಕಬ್ಬು ಬೆಳೆಯುತ್ತಾರೆ. ಕೊಳ, ತೋಡಿದ ಬಾವಿ ಮತ್ತು ನಾಲೆಗಳು ಬೇಸಾಯಕ್ಕೆ ಬೇಕಾದ ನೀರಾವರಿ ಮೂಲಗಳಾಗಿವೆ.

ಕೆಲವೇ ರೈತರು ಒಣಬೇಸಾಯದಲ್ಲಿ ತೊಡಗಿದ್ದಾರೆ. ಅವರಿಗೆ 1ರಿಂದ 5 ಎಕರೆಗಳ ಒಡೆತನವಿದೆ. 22 ಜನರು 1 ರಿಂದ 5 ಎಕರೆಗಳವರೆಗೆ ಪಾಲು ಬೆಳೆ ಬೇಸಾಯ ಮಾಡುತ್ತಾರೆ. ಇಲ್ಲಿ 384 ಜನರಿಗೆ ಒಣ ಬೇಸಾಯ ಅನ್ವಯವಾಗುವುದಿಲ್ಲ. ಮಿಕ್ಕ 217 ಜನರಿಗೆ ಒಣನೆಲ (ಹೊಲ) ವಿದೆ. 79 ರೈತರು 5ಕ್ಕಿಂತ ಹೆಚ್ಚು ಎಕರೆಯನ್ನು, 26 ಜನರು 4 ಎಕರೆಯನ್ನು, 48 ಜನರು 3 ಎಕರೆಯನ್ನು, 47 ಜನರು 2 ಎಕರೆಯನ್ನು ಪಡೆದಿದ್ದಾರೆ. 17 ಜನರಿಗೆ ತಲಾ 1 ಎಕರೆ ಹೊಲವಿದೆ. ಈ ಒಣಬೇಸಾಯಕ್ಕೆ ಮಳೆ ನೀರೇ ಮುಖ್ಯವಾದ ಮೂಲವಾಗಿದೆ.

ಭೂಮಿಯ ಒಡೆತನ, ಭೋಗ್ಯ, ಅಥವಾ ಗದ್ದೆ - ಹೊಲ - ತೋಟಗಳಲ್ಲಿ ಪಾಲು ಹಂಚಿಕೆಯ ಬೇಸಾಯ ಇವುಗಳನ್ನು ಕುರಿತು ಚರ್ಚಿಸುವಾಗ ಒಂದು ಅಂಶವನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳಬೇಕು. ಕೆಲವು ಸದಸ್ಯರು ಈ ಎಲ್ಲಾ ವರ್ಗಗಳಲ್ಲೂ ಕಾಣಿಸಿಕೊಳ್ಳುತ್ತಾರೆ. ಹಾಗಾಗಿ ಅವರು ಕುರುಬರಲ್ಲಿ 'ಕೆನೆ'ಯಂತಿದ್ದು ಸ್ಥಿತಿವಂತಿಕೆಯನ್ನು ಪ್ರತಿನಿಧಿಸುತ್ತಾರೆ. ಸಾಮಾನ್ಯವಾಗಿ ಹೊಲಗಳಲ್ಲಿ ರಾಗಿಯನ್ನೂ ಜೋಳವನ್ನೂ ಬೆಳೆಯಲಾಗುತ್ತದೆ. ಸುಮಾರು 171 ಜನ ರೈತರು ರಾಗಿ ಮತ್ತು ಜೋಳವನ್ನು ಬೆಳೆದರೆ, 104 ರೈತರು ಅವುಗಳ ಜೊತೆಗೆ ವಿವಿಧ ಕಾಳುಗಳನ್ನು ಬೆಳೆಯುತ್ತಾರೆ.

ಕೆಲವೇ ಜನರು, ಸುಮಾರು 19 ಜನರು, ತೋಟವನ್ನು ಹೊಂದಿದ್ದು ಅಲ್ಲಿ ತರಕಾರಿಗಳನ್ನು ಬೆಳೆಯುತ್ತಾರೆ. ಇಬ್ಬರು ರೈತರು ಮಾತ್ರ ತಲಾ 2 ಎಕರೆಗಳನ್ನು ಭೋಗ್ಯ ಮಾಡಿಕೊಂಡಿದ್ದಾರೆ. ಇಲ್ಲಿ ಯಾರೂ ಪಾಲು ಬೇಸಾಯ ಮಾಡುತ್ತಿಲ್ಲ. ಒಬ್ಬ ರೈತನಿಗೆ ಮಾತ್ರ 5 ಎಕರೆಗಿಂತ ಹೆಚ್ಚಿನ ಪ್ಲಾಂಟೇಷನ್ ಇದ್ದು ಕಾಫಿಯನ್ನು ಸಂಬಾರ ಪದಾರ್ಥಗಳನ್ನು ಬೆಳೆಯುತ್ತಿದ್ದಾರೆ. ಈ ವರ್ಗದಲ್ಲಿ ಭೋಗ್ಯ ಮಾಡಿಕೊಂಡಿರುವ ಅಥವಾ ಪಾಲು ಬೆಳೆ ತೆಗೆಯುವ ಸದಸ್ಯರು ಯಾರೂ ಇಲ್ಲ.

ಒಟ್ಟು 320 ರೈತರು ತಾವು ಬೆಳೆದ ಬೆಲೆಗಳ ಮೌಲ್ಯವನ್ನು ಕೊಟ್ಟಿದ್ದಾರೆ. 101 ಜನರು ಬೇಸಾಯದಿಂದ ತಮಗೆ ಬರುವ ವಾರ್ಷಿಕ ವರಮಾನ 3000/- ರೂಪಾಯಿಗಳಿಗಿಂತ

ಕಡಿಮೆ ಎಂದು ಹೇಳುತ್ತಾರೆ. 71 ಜನ ರೈತರಿಗೆ ವಾರ್ಷಿಕ 3000/-, 6000/- ರೂ. ವರಮಾನ ಬರುತ್ತದೆ. ಸುಮಾರು 20 ಜನರು ತಮ್ಮ ವಾರ್ಷಿಕ ವರಮಾನವು 6000/- ರೂ.ಗಳಿಂದ 9000/- ರೂ.ಗಳವರೆಗಿದೆ ಎಂದಿದ್ದಾರೆ. 40 ಜನರು 9000/- ದಿಂದ 12000/- ರೂ.ಗಳನ್ನು ದಾಖಲಿಸಿದ್ದಾರೆ. 88 ಜನರು 12000/- ರೂಪಾಯಿಗಳಿಗಿಂತಲೂ ಅಧಿಕ ವರಮಾನವನ್ನು ಹೇಳಿದ್ದಾರೆ.

ಅರ್ಥ ವ್ಯವಸ್ಥೆಯಲ್ಲಿ ಗಣನೀಯವಾದ ವೈವಿಧ್ಯವಿದೆ. ನಮ್ಮ ಮಾಹಿತಿದಾರರು ಅದರ ಪ್ರಯೋಜನ ಪಡೆದುಕೊಂಡಿರುವಂತೆ ತೋರುತ್ತದೆ. ಕೃಷಿಯ ಆಧುನೀಕರಣ, ಹಸಿರು ಕ್ರಾಂತಿ, ಶ್ವೇತ ಕ್ರಾಂತಿಗಳು ದೇಶದಲ್ಲಿ ಜಾರಿಗೆ ಬಂದಿವೆ. ಕರ್ನಾಟಕವೇನೂ ಅದಕ್ಕೆ ಹೊರತಾಗಿಲ್ಲ. ನೀರಾವರಿ ಸೌಲಭ್ಯಗಳ ಲಭ್ಯತೆಯಿಂದಾಗಿ ನಗದು ಬೆಳೆಗಳ ಬೇಸಾಯಕ್ಕೆ ಅವಕಾಶವಾಗಿದೆ, ವಿಶೇಷವಾಗಿ ಕಬ್ಬು ಮತ್ತು ಭತ್ತ. ಈ ಅವಕಾಶಗಳನ್ನು ನಮ್ಮ ಮಾಹಿತಿದಾರರೂ ಉಪಯೋಗಿಸಿಕೊಂಡಿರುವುದು ಸ್ಪಷ್ಟವಾಗಿದೆ. ಆರ್ಥಿಕ ವೈವಿಧ್ಯದೊಂದಿಗೆ ವೃತ್ತಿ ಸಂಚಲನೆಯೂ ಕಾಣಿಸಿಕೊಂಡಿದೆ. ಇದು ಸಾಂಪ್ರದಾಯಿಕ ಕುರಿ ಸಾಕಾಣಿಕೆ ಮತ್ತು ಕಂಬಳಿ ನೇಯುವಿಕೆಗಳು ಪೀಳಿಗೆಯಿಂದ ಪೀಳಿಗೆಗೆ ಹೇಗೆ ಬಂದಿದೆ ಎನ್ನುವುದರಲ್ಲಿ ವ್ಯಕ್ತವಾಗುತ್ತದೆ. ಈ ಕೆಳಗಿನ ಪಟ್ಟಿಕೆಯು ಇದನ್ನು ಸ್ಥಿರಪಡಿಸುತ್ತದೆ.

**ಸಾಂಪ್ರದಾಯಿಕ ವೃತ್ತಿಯಲ್ಲಿ ಪೀಳಿಗೆಗಳಲ್ಲಿ ಆಗಿರುವ**
**ವ್ಯತ್ಯಾಸವನ್ನು ತೋರಿಸುವ ಪಟ್ಟಿಕೆ**

| | ಜಿಲ್ಲೆಗಳು | | | |
|---|---|---|---|---|
| | ಮೈ | ಧಾ | ಬ | ಚಿ |
| **1. ತಾತನ ಪೀಳಿಗೆ** | | | | |
| (ಅ) ಕುರಿ ಸಾಕುವುದು | 16 | 30 | 28 | 13 |
| (ಆ) ಕಂಬಳಿ ನೇಯುವುದು | 02 | 06 | 05 | 23 |
| **2. ತಂದೆಯ ಪೀಳಿಗೆ :** | | | | |
| (ಅ) ಕುರಿ ಸಾಕುವುದು | 01 | 18 | 18 | 04 |
| (ಆ) ಕಂಬಳಿ ನೇಯುವುದು | - | 06 | 04 | 11 |
| **3. ಈಗ :** | | | | |
| (ಅ) ಕುರಿ ಸಾಕುವುದು | 01 | 05 | 06 | 01 |
| (ಆ) ಕಂಬಳಿ ನೇಯುವುದು | - | 02 | 05 | 01 |

ಹೀಗೆ ಸಾಂಪ್ರದಾಯಿಕ ವೃತ್ತಿಯಲ್ಲಿ ಕ್ರಮೇಣ ಇಳಿತಾಯವಾಗಿರುವುದಕ್ಕೆ ಕಾರಣ, ದೇಶದಲ್ಲಿ ಸಾಮಾನ್ಯವಾಗಿಯೂ ಕರ್ನಾಟಕದಲ್ಲಿ ವಿಶೇಷವಾಗಿಯೂ ಕಂಡು ಬಂದಿರುವ ಶಿಕ್ಷಣ ಪ್ರಸಾರ ಮತ್ತು ಲಾಭದಾಯಕ ಉದ್ಯೋಗಾವಕಾಶಗಳು ಹಾಗೂ ಉದ್ಯಮೀಕರಣ.

ಶಿಕ್ಷಣ : ಐತಿಹಾಸಿಕವಾಗಿ ನೋಡಿದರೆ ಔಪಚಾರಿಕ ಶಿಕ್ಷಣ ಮತ್ತು ಶಾಲಾ ವ್ಯವಸ್ಥೆ ಈಚೀನ ಘಟನೆಗಳು. ಭಾರತದಲ್ಲಿ ಬ್ರಿಟಿಷರ ಆಳಿಕೆಯ ಆಗಮನವಾದ ಮೇಲೆ ಇವು ಸಂಭವಿಸಿದುವು. ಶಿಕ್ಷಣದ ಸಾಂಪ್ರದಾಯಿಕ ವ್ಯವಸ್ಥೆಯು ಬಹುಮಟ್ಟಿಗೆ ಧಾರ್ಮಿಕ ಲಕ್ಷಣವನ್ನು ಹೊಂದಿದ್ದು ಬಹು ಸೀಮಿತವಾದ ಅನ್ವಯವನ್ನು ಹೊಂದಿತ್ತು. ಕಂಠಪಾಠದಿಂದ ಕಲಿಯುವ ಸ್ಮೃತಿ ಶಿಕ್ಷಣ, ಶ್ರುತಿ ಶಿಕ್ಷಣಗಳನ್ನು ಗುರುವು ಶಿಷ್ಯನ ಕಿವಿಗಳಲ್ಲಿ ಉಸುರಿ ಕಲಿಸುತ್ತಿದ್ದನು. ಗುರುಕುಲ ಮಾದರಿಯ ಶಿಕ್ಷಣವು ಪವಿತ್ರವೆನಿಸಿದ ಸಂಸ್ಕೃತ ಸಾಹಿತ್ಯದ ಅಧ್ಯಯನವಾಗಿತ್ತು. ಅದನ್ನು ಸಂಪಾದಿಸುವ ಅರ್ಹತೆ ಬಹುಮಟ್ಟಿಗೆ ಬ್ರಾಹ್ಮಣರಿಗೆ ಮಾತ್ರ ಇದ್ದಿತು. ಇನ್ನೆರಡು ದ್ವಿಜ ವರ್ಣಗಳಾದ ಕ್ಷತ್ರೀಯ ಮತ್ತು ವೈಶ್ಯರಿಗೆ ನಿರ್ದಿಷ್ಟ ಕ್ಷೇತ್ರಗಳಲ್ಲಿ ಮಿತವಾದ ಜ್ಞಾನವನ್ನು ಮಾತ್ರ ಬೋಧಿಸಲಾಗುತ್ತಿದ್ದಿತು. ಹಾಗಾಗಿ ಭಾರತದ ಜನಕೋಟಿಯ ಬಹುಭಾಗವು ಜ್ಞಾನಾರ್ಜನೆಯ ಅವಕಾಶದಿಂದ ವಂಚಿತವಾಗಿದ್ದಿತು. ಅದನ್ನು ಒಂದು ವರ್ಗದಲ್ಲಿ ಸಂಗ್ರಹಿಸಿಟ್ಟು ಅದು ಸಮಸ್ತ ಶಕ್ತಿ, ಸ್ಥಾನಗೌರವ ಮತ್ತು ಉಳಿಯುವಿಕೆಗಳ ಮೂಲವೆಂಬುದಾಗಿ ಸಮರ್ಥಿಸಲಾಗಿತ್ತು.

ಮಧ್ಯಕಾಲೀನ ಭಾರತದಲ್ಲಿ ಮುಸ್ಲಿಂ ಅರಸರ ಆಳಿಕೆಯಲ್ಲಿ ಮದರಸಗಳು ಇನ್ನೊಂದು ಧಾರ್ಮಿಕ ಪಂಗಡವಾದ ಮುಸ್ಲಿಂರಿಗೆ ಅಷ್ಟೇ ಧಾರ್ಮಿಕವಾದ ಶಿಕ್ಷಣವನ್ನು ಒದಗಿಸಿದುವು. ಪರ್ಷಿಯನ್ ಮತ್ತು ಅರಾಬಿಕ್ ಈ ಎರಡು ಭಾಷೆಗಳ ಕಲಿಕೆಯು ಎಲ್ಲರಿಗೂ ಮುಕ್ತವಾಗಿದ್ದು, ಅನೇಕ ಹಿಂದೂ ವಿದ್ವಾಂಸರು ಈ ಎರಡು ರಾಜಭಾಷೆಗಳಲ್ಲಿ ಪ್ರಾವೀಣ್ಯವನ್ನು ಪಡೆದರು.

ಬ್ರಿಟಿಷರು ಬಂದ ಮೇಲೆಯೇ ಶಿಕ್ಷಣ ವ್ಯವಸ್ಥೆಯಲ್ಲಿ ಆಮೂಲಾಗ್ರ ಬದಲಾವಣೆಗಳುಂಟಾದದ್ದು. ನಿರ್ದಿಷ್ಟವಾಗಿ ಹೇಳಬೇಕೆಂದರೆ ಕ್ರೈಸ್ತ ಮಿಷನರಿಗಳು (ಧರ್ಮ ಪ್ರಚಾರಕರು) ಭಾರತೀಯರನ್ನು ಕ್ರೈಸ್ತ ಮತಕ್ಕೆ ಪರಿವರ್ತಿಸುವುದಕ್ಕೆ ಮುಂಚಿತವಾಗಿ ಸಮಾಜ ಸೇವಾ ಚಟುವಟಿಕೆಗಳನ್ನು ಪ್ರಾರಂಭಿಸಿದರು. ಆದರೆ ಆಡಳಿತದಲ್ಲಿ ನೆರವಾಗಲು ಸ್ಥಳೀಯ ಜನರಿಗೆ ಶಿಕ್ಷಣವನ್ನು ತರಬೇತಿಯನ್ನೂ ಕೊಡುವುದಕ್ಕಾಗಿ ಮಾರ್ಗೋಪಾಯಗಳನ್ನು ಬ್ರಿಟಿಷ್ ಆಡಳಿತವು ಕಂಡುಕೊಳ್ಳಬೇಕಾಯಿತು. ಸರಕಾರವೇ ಆಸಕ್ತಿ ತಳೆದುದರಿಂದಾಗಿ ಲೌಕಿಕ ಶಿಕ್ಷಣ ಕೇಂದ್ರಗಳಾಗಿ ಶಾಲೆಗಳು ಸ್ಥಾಪನೆಗೊಂಡುವು. ಆಧುನಿಕ ಜ್ಞಾನವು ದೊರಕಬೇಕೆಂಬ ಉದ್ದೇಶದಿಂದ ಇಂಗ್ಲಿಷ್ ಭಾಷೆಯನ್ನು ಕಲಿಸಲು ಪ್ರಾರಂಭಿಸಲಾಯಿತು. ಇದರಿಂದ ವಿದ್ಯಾವಂತರಾದ ಭಾರತೀಯರು ಆಡಳಿತದ ಕೆಳಗಿನ ಹಂತಗಳನ್ನು ತುಂಬುವಂತಾಯಿತು. ಬ್ರಿಟಿಷ್ ಆಡಳಿತವನ್ನು ನಡೆಸಲು ಅಲ್ಲಿಂದ ಜನರನ್ನು ಕರೆತರುವುದು ಸಾಧ್ಯವಿರಲಿಲ್ಲವಾದ್ದರಿಂದ, ಆ ಹುದ್ದೆಗಳನ್ನು ತುಂಬಲು ಗುಮಾಸ್ತರನ್ನು ಇಲ್ಲೇ ಉತ್ಪಾದಿಸುವ ಸಲುವಾಗಿ ಇಂಗ್ಲಿಷ್ ವಿದ್ಯಾಭ್ಯಾಸವನ್ನು ಜಾರಿಗೆ ತಂದನು ಎಂಬುದಾಗಿ ಲಾರ್ಡ್ ಮೆಕಾಲೆಯ ಮೇಲೆ ಆರೋಪಗಳನ್ನು ಹೊರಿಸಲಾಯಿತು. ಆದರೆ, ಅದು ಒಟ್ಟಿನ ಮೇಲೆ ಭಾರತೀಯರಿಗೆ ಪರಿಣಾಮತಃ ಒಂದು ವರವೇ ಆಯಿತು. ಆ ಸಮಯದಲ್ಲಿ

ಭಾರತದಲ್ಲಿ ಕಾರ್ಯ ನಿರತರಾಗಿದ್ದ ಅನೇಕ ಸಮಾಜ ಸುಧಾರಕರಿಗೆ, ಇಂಗ್ಲಿಷನ್ನು ಇಲ್ಲಿ ಪ್ರವೇಶಗೊಳಿಸಿದ್ದು ಸ್ವಾಗತಾರ್ಹ ಕ್ರಮವಾಯಿತು. ರಾಜಾರಾಮ್‌ಮೋಹನರಾಯ್ ಈ ಯೋಜನೆಯನ್ನು ಹೃತ್ಪೂರ್ವಕವಾಗಿ ಬೆಂಬಲಿಸಿದರು.

ಯೋಜನೆಯ ದೋಷಗಳು ಏನೇ ಇರಲಿ, ಅದು ಭಾರತವನ್ನು ಪ್ರಪಂಚದ ನಕ್ಷೆಯಲ್ಲಿ ಸೇರಿಸಿತು. ಆಗಲೇ ಅಕ್ಷರಸ್ಥರಾಗಿದ್ದವರು, ಬ್ರಾಹ್ಮಣರು ಮತ್ತು ಇತರ ಮೇಲು ಜಾತಿಗಳು, ಮಿಕ್ಕವರಿಗಿಂತ ಮುಂದೆ ಹೋಗಲು ಈ ಅವಕಾಶವನ್ನು ಉಪಯೋಗಿಸಿಕೊಂಡರು. ಅದು ಶಿಕ್ಷಣವನ್ನು ಮೊದಲಬಾರಿಗೆ ಜಾತ್ಯತೀತಗೊಳಿಸಿದ ಪ್ರಶಂಸನೀಯ ಕ್ರಮವೂ ಆಯಿತು. ಈ ಶಿಕ್ಷಣವನ್ನು ಅಸ್ಪೃಶ್ಯ ಜಾತಿಗಳೂ ಸೇರಿದಂತೆ ಭಾರತೀಯರ ಎಲ್ಲಾ ವರ್ಗಗಳಿಗೂ ಮುಕ್ತವಾಗಿ ತೆರೆದಿಡಲಾಯಿತು. ಆದರೆ ಇಲ್ಲೂ ಇದಕ್ಕೆ ಮಧ್ಯಮ, ಕೆಳ ಮತ್ತು ಅತ್ಯಂತ ಕೆಳಗಿನ ವರ್ಗಗಳು ಪ್ರತಿಸ್ಪಂದಿಸಲು ನಿಧಾನ ಮಾಡಿದುವು.

ಸ್ವಾತಂತ್ರ್ಯ ಬಂದು 50 ವರ್ಷಗಳಾದ ಮೇಲೆಯೂ, ಸ್ವಾತಂತ್ರ್ಯೋತ್ತರ ಭಾರತದಲ್ಲಿ, ವಿಶೇಷವಾಗಿ ವೈದ್ಯ ಮತ್ತು ಎಂಜಿನಿಯರಿಂಗ್ ಅಂತಹ ತಾಂತ್ರಿಕ ಮತ್ತು ವೃತ್ತಿಪರ ಶಿಕ್ಷಣ ನೀಡುವ ಶಿಕ್ಷಣ ಸಂಸ್ಥೆಗಳಿಗೆ ಪ್ರವೇಶ ಪಡೆಯಲು ಸೀಟುಗಳ ಮೀಸಲಾತಿಯಿರಬೇಕೆಂದು ಹಂಬಲಿಸಲಾಗುತ್ತಿದೆ.

1950ರಿಂದ ಈಚೆಗೆ ನೇಮಕಗೊಂಡ ಎಲ್ಲಾ ಹಿಂದುಳಿದ ವರ್ಗಗಳ ಆಯೋಗಗಳೂ, ನಾಗನಗೌಡ, ಎಲ್.ಜಿ. ಹಾವನೂರು, ವೆಂಕಟಸ್ವಾಮಿ ಮತ್ತು ಚಿನ್ನಪ್ಪರೆಡ್ಡಿ ಆಯೋಗಗಳು ಶೈಕ್ಷಣಿಕವಾಗಿ ಮುಂದುವರಿದ ಅಥವಾ ಹಿಂದುಳಿದಿರುವ ಜಾತಿಗಳನ್ನು ವಿದ್ಯಾರ್ಥಿಗಳ ಸಂಖ್ಯೆಯಿಂದ ತೀರ್ಮಾನಿಸಿದ್ದಾರೆ. ಅಂದರೆ ಒಟ್ಟು 1000 ಸಂಖ್ಯೆಗೆ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ತೇರ್ಗಡೆಯಾದವರ ಶೇಕಡವಾರು ಪರಿಮಾಣವನ್ನು ಆಧಾರವಾಗಿ ಇಟ್ಟುಕೊಂಡಿದ್ದಾರೆ. ಈ ಲೆಕ್ಕಾಚಾರವು ವಿಶ್ವಾಸಾರ್ಹ ಸೂಚಕವಾಗುತ್ತದೆಯೇ ಎನ್ನುವುದು ಸಂದೇಹ. ಔಪಚಾರಿಕ ಶಿಕ್ಷಣವೇ ಮಾನವನ ಪ್ರಗತಿಯ ಸರ್ವಸ್ವವೂ ಅಲ್ಲ. ಸರ್ವ ಲಕ್ಷ್ಯವೂ ಅಲ್ಲ. ಏಕೆಂದರೆ ಬಹಳ ಕಾಲದವರೆಗೆ ಶಿಕ್ಷಣವು ಬಹುಮಟ್ಟಿಗೆ ಧಾರ್ಮಿಕ ವಿಷಯಗಳಿಗೆ ಸೀಮಿತಗೊಂಡಿದ್ದು, ಭಾರತದಲ್ಲಿ ಶೂದ್ರ ವರ್ಣಕ್ಕೆ ಸೇರಿದವರು ಮತ್ತು ಸ್ತ್ರೀಯರು ಅದನ್ನು ಪಡೆಯಲು ಅವಕಾಶವಿರಲಿಲ್ಲ.

ಒಂದು ನಿರ್ದಿಷ್ಟ ಪಂಗಡದ ಹಿಂದುಳಿವಿಕೆ ಅಥವಾ ಮುಂದುವರಿದಿಕೆಗಳನ್ನು ಅಳತೆ ಮಾಡಲು ಬೇರೆ ದಾರಿಗಳಿರಲೂಬಹುದು. ಆದರೆ ಇಲ್ಲೂ ದೋಷಗಳಿವೆ. ಶಿಕ್ಷಣವು ವ್ಯಕ್ತಿಗತವಾಗಿ ಗಳಿಸಿಕೊಳ್ಳುವ ವಸ್ತು. ಭಾರತೀಯ ಜಾತಿ ಪದ್ಧತಿಯಲ್ಲಿ ಸ್ಥಾನವೆನ್ನುವುದು ಒಂದು ಪಂಗಡದ ಅಥವಾ ಗುಂಪಿನ, ಸಮೂಹದ ಆರೋಪಿತ ವಿದ್ಯಮಾನ. ಈ ತೆರನಾದ ಸಂಪಾದಿತ ಹಾಗೂ ಆರೋಪಿತ ಸ್ಥಾನ ವ್ಯತ್ಯಾಸವನ್ನು ಉಪೇಕ್ಷೆ ಮಾಡುವಹಾಗಿಲ್ಲ. ಆದರೂ ಹಿಂದುಳಿದ ವರ್ಗಗಳ ಆಯೋಗಗಳೆಲ್ಲವೂ ಇದನ್ನು ಒಂದು ಮುಖ್ಯವಾದ ಆಧಾರವನ್ನಾಗಿ ಮಾಡಿಕೊಂಡುದರಿಂದ ಅದನ್ನು ಅನೇಕ ಮುಖ್ಯ ಅಂಶಗಳಲ್ಲಿ ಒಂದನ್ನಾಗಿ

ಇಟ್ಟುಕೊಳ್ಳಬಹುದು. ಚರ - ಸ್ಥಿರ ಆಸ್ತಿ, ವ್ಯವಹಾರೋದ್ಯಮ, ರಾಜಕೀಯ ಮತ್ತು ಧಾರ್ಮಿಕ ಪದವಿಗಳು ಮೊದಲಾದವು. ಪ್ರಾದೇಶಿಕ ವ್ಯತ್ಯಾಸ ಕೂಡ ಇತರ ಮುಖ್ಯ ಆಧಾರಗಳಾಗಬಲ್ಲವು. ಈಗಾಗಲೇ ಕುರುಬರ ಭೂ ಒಡೆತನ ಮತ್ತು ವಾರ್ಷಿಕ ವರಮಾನಗಳನ್ನು ಪರಿಶೀಲಿಸಿಯಾಗಿರುವುದರಿಂದ, ಈಗ ಸ್ಥಾನಮಾನ ನಿರ್ಣಯಕ್ಕಾಗಿ ಶಿಕ್ಷಣ ಕ್ಷೇತ್ರವನ್ನಿಷ್ಟು ನೋಡೋಣ.

ಈ ಅಧ್ಯಯನವು ಒಳಗೊಂಡಿರುವ ಒಟ್ಟು ಜನಸಂಖ್ಯೆ 4102. ಇವರಲ್ಲಿ 2168 ಪುರುಷರು, 1934 ಮಹಿಳೆಯರು. ಎಲ್ಲರೂ ಕನ್ನಡ ಮಾತನಾಡುವವರೇ. ಆದರೆ ಧಾರವಾಡ ಜಿಲ್ಲೆಯಲ್ಲಿ ಸ್ವಲ್ಪ ಮರಾಠಿ ಬೆರೆಯುತ್ತದೆ. ಬಳ್ಳಾರಿ ಜಿಲ್ಲೆಯಲ್ಲಿ ಸ್ವಲ್ಪ ತೆಲುಗು ಬೆರಕೆಯಾಗುವ ಹಾಗೆ. ಶಾಲಾ ಕಾಲೇಜುಗಳಿಗೆ ಹೋಗುವ ವಯೋಮಿತಿ, ಅಂದರೆ 5-20 ವರ್ಷದವರು ಜನಸಂಖ್ಯೆಯ ಸುಮಾರು 1/3 ಆಗುತ್ತಾರೆ. ಅಂದರೆ, 4102ರಲ್ಲಿ ಸುಮಾರು 1486 ಜನ ಈ ಗುಂಪಿನವರು. ಈ ಸಂಖ್ಯೆಯನ್ನು 7ನೆಯ ತರಗತಿ, ಎಸ್‌ಎಸ್‌ಎಲ್‌ಸಿ, ಪಿಯುಸಿ, ಪದವಿ ತರಗತಿ, ಕಾನೂನು, ವೈದ್ಯ ಮತ್ತು ಎಂಜಿನಿಯರಿಂಗ್ ಸೇರಿ, ಸ್ನಾತಕೋತ್ತರ ತರಗತಿ, ಡಿಪ್ಲೋಮಾ ತರಗತಿಗಳಲ್ಲಿ ಓದುತ್ತಿರುವವರ ಸಂಖ್ಯೆಯೊಂದಿಗೆ ಹೋಲಿಸಿ ನೋಡಿದರೆ ಮೇಲೆ ಕೊಟ್ಟ ವಯೋಮಾನ ವರ್ಗೀಕರಣಕ್ಕಿಂತ ತುಂಬಾ ಅಧಿಕವಾಗಿರುವುದು ಕಂಡುಬರುತ್ತದೆ.

4102 ಕುರುಬ ಜನಸಂಖ್ಯೆಯಲ್ಲಿ 762 ಜನ ಸಾಕ್ಷರರಿದ್ದಾರೆ. ಅವರಲ್ಲಿ 471 ಜನರು ಧಾರವಾಡದಿಂದ, 192 ಜನ ಚಿತ್ರದುರ್ಗ ಜಿಲ್ಲೆಯಿಂದ ಬಂದವರು. 61 ಜನ ಸಾಕ್ಷರವಿರುವ ಬಳ್ಳಾರಿ ಮೂರನೆಯ ಸ್ಥಾನ ಪಡೆಯುತ್ತದೆ. 44 ಸದಸ್ಯರು ಮಾತ್ರ ಇರುವ ಮೈಸೂರು ಜಿಲ್ಲೆ ಕೊನೆಯ ಸ್ಥಾನದಲ್ಲಿದೆ. ಜಿಲ್ಲೆಯಿಂದ ಜಿಲ್ಲೆಗೆ ಇರುವ ಈ ವ್ಯತ್ಯಾಸವು ಅಷ್ಟು ಮಹತ್ವದ್ದಲ್ಲವಾದರೂ, ಶಿಕ್ಷಣ ಸಂಸ್ಥೆಗಳು, ವಿದ್ಯಾರ್ಥಿ ನಿಲಯಗಳು ಮತ್ತಿತರ ಶಿಷ್ಯವೇತನಗಳಂತಹ ಸೌಲಭ್ಯಗಳ ಕೊರತೆಯೊಂದಿಗೆ ಇದನ್ನು ಸಂಬಂಧಗೊಳಿಸಬಹುದು. ಈ ಸೌಲಭ್ಯಗಳು ಸರಕಾರದಿಂದ, ಸಮಾಜ, ಸಮುದಾಯಗಳಿಂದ ಶಿಕ್ಷಣಾಸಕ್ತ ಸಂಸ್ಥೆಗಳಿಂದ ಬರುವಂಥವು.

ಪಂಗಡದ ಹಿಂದುಳಿವಿಕೆ ಅಥವಾ ಮುಂದುವರಿವಿಕೆಗಳ ಸಾಮಾಜಿಕವಾಗಿ ಶಾಲಾ ಶಿಕ್ಷಣವನ್ನು ತೆಗೆದುಕೊಳ್ಳುವುದಾದರೆ ಕುರುಬರದು ಅಷ್ಟೇನೂ ಕೆಟ್ಟ ಪರಿಸ್ಥಿತಿಯಲ್ಲ ಎನಿಸುತ್ತದೆ.

7ನೆಯ ತರಗತಿಯಲ್ಲಿ ಓದುತ್ತಿರುವ ಮಕ್ಕಳ ಸಂಖ್ಯೆ ಹೀಗಿದೆ: ಮೈಸೂರು, ಧಾರವಾಡ, ಬಳ್ಳಾರಿ ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಕ್ರಮವಾಗಿ 128, 163, 172, 220 ಜನ ಮಕ್ಕಳು ಓದುತ್ತಿದ್ದಾರೆ. ಎಸ್‌ಎಸ್‌ಎಲ್‌ಸಿ ತರಗತಿಯಲ್ಲಿರುವವರು ಅದೇ ಕ್ರಮದಲ್ಲಿ 86, 84, 87 ಮತ್ತು 146 ಜನ. ಈ ಜಿಲ್ಲೆಗಳಲ್ಲಿ ಅದೇ ಕ್ರಮದಲ್ಲಿ ಪ್ರೀಯೂನಿವರ್ಸಿಟಿ ತರಗತಿಯಲ್ಲಿ ಓದುವವರ ಸಂಖ್ಯೆ 44, 56, 46 ಮತ್ತು 75. ಪದವಿ ತರಗತಿಗಳಲ್ಲಿ ಕಾನೂನು, ಎಂಜಿನಿಯರಿಂಗ್ ಮತ್ತು ವೈದ್ಯ ವಿದ್ಯಾರ್ಥಿಗಳ ಸಂಖ್ಯೆ 23, 48, 18, 47.

ಸ್ನಾತಕೋತ್ತರ ಪದವೀಧರರು ಮತ್ತು ಎಂಜಿನಿಯರಿಂಗ್ ಮೊದಲಾದ ಕ್ಷೇತ್ರಗಳಲ್ಲಿ ಡಿಪ್ಲೋಮಾ ಓದುವವರು ಬಹಳ ಕಡಿಮೆ. ಒಟ್ಟಿನಲ್ಲಿ 18 ಜನ ಸ್ನಾತಕೋತ್ತರ ಪದವಿಗಳಿಗಾಗಿ ಅಧ್ಯಯನ ಮಾಡುತ್ತಿದ್ದಾರೆ. ಮೇಲೆ ಹೇಳಿದ ಜಿಲ್ಲಾ ಅನುಕ್ರಮದಲ್ಲಿ ಹಂಚಿಕೆ 5, 5, 2, 6 ಆಗಿದೆ. ಡಿಪ್ಲೋಮಾ ಕಲಿಯುತ್ತಿರುವವರು 48 ಜನ. ಧಾರವಾಡ ಜಿಲ್ಲೆಯಲ್ಲಿ ಅತಿ ಹೆಚ್ಚು, 36 ವಿದ್ಯಾರ್ಥಿಗಳು, ಚಿತ್ರದುರ್ಗದಿಂದ 9, ಬಳ್ಳಾರಿಯಿಂದ 2, ಮೈಸೂರಿನಿಂದ ಒಬ್ಬ ವಿದ್ಯಾರ್ಥಿ ಮಾತ್ರ. ಕೆಳಗಿನ ಪಟ್ಟಿಕೆಯು ಕುರುಬ ಸಮುದಾಯ ಜಾತಿಯ ಶೈಕ್ಷಣಿಕ ಸಾಧನೆಯ ಚಿತ್ರವನ್ನು ಕೊಡುತ್ತದೆ.

## ಕುರುಬರ ಶೈಕ್ಷಣಿಕ ಸಾಧನೆ

| ಶಿಕ್ಷಣಮಟ್ಟ | ಸಾಕ್ಷರರು | ಸೆಕೆಂಡರಿ ಶಾಲೆ | ಎಸ್‌ಎಸ್‌ಎಲ್‌ಸಿ | ಪಿಯುಸಿ | ಪದವಿ ಲಾ.ವೈದ್ಯ ಎಂಜಿನಿಯರಿಂಗ್ | ಸ್ನಾತಕೋತ್ತರ ಪದವಿ | ಇತರ | ಒಟ್ಟು |
|---|---|---|---|---|---|---|---|---|
| ಮೈಸೂರು | 29 | 80 | 57 | 35 | 15 | 5 | 1 | 222(856) |
| | % (13.06) | (36.03) | (25.67) | (15.76) | (06.75) | (02.25) | (00.45) | (25.93) |
| ಧಾರವಾಡ | 142 | 82 | 57 | 50 | 29 | 5 | 17 | 382(1060) |
| | % (37.17) | (21.46) | (14.92) | (13.08) | (07.50) | (01.30) | (04.45) | (36.03) |
| ಬಳ್ಳಾರಿ | 31 | 92 | 54 | 33 | 19 | 2 | 2 | 233 (1069) |
| | % (13.30) | (39.48) | (23.17) | (14.16) | (08.15) | (00.85) | (00.85) | (21.79) |
| ಚಿತ್ರದುರ್ಗ | 77 | 108 | 86 | 55 | 28 | 4 | 9 | 367 (1117) |
| | % (20.98) | (29.42) | (23.43) | (14.98) | (07.62) | (01.08) | (02.45) | (32.85) |
| ಒಟ್ಟು | 279 | 362 | 254 | 173 | 91 | 16 | 29 | 1204 (4102) |
| | % (06.80) | (08.82) | (06.19) | (04.21) | (02.21) | (00.39) | (00.70) | (29.35) |

ಒಟ್ಟಾರೆ ಚಿತ್ರವು ರಾಷ್ಟ್ರ / ರಾಜ್ಯ ಸರಾಸರಿಯ ಕೆಳಗಿದ್ದರೂ, ಸಮುದಾಯವು ಸಾಮಾನ್ಯ ಶಿಕ್ಷಣದಲ್ಲಿ ಹಿಂದೆ ಬಿದ್ದಿಲ್ಲ ಎಂದು ಹೇಳಬಹುದು. ಕುರುಬರೂ ಸೇರಿದಂತೆ ಶೂದ್ರವರ್ಣದ ಜನರು ಶಾಲಾ ಕಾಲೇಜುಗಳಿಗೆ ಸೇರಿಕೊಳ್ಳತೊಡಗಿದುದು ಈಚೆಗೆ ಆದರೂ ಕೂಡ ಅವರ ಸಾಧನೆ ಗಮನಾರ್ಹವಾಗಿದೆ. ಇನ್ನು ಖಾತೆಯನ್ನು ತೆರೆಯಬೇಕಾಗಿರುವ ಅನೇಕ ಜಾತಿಗಳು ಮತ್ತು ಸಮುದಾಯಗಳಿಗೆ ಹೋಲಿಸಿದರೆ ಇದು ಗಟ್ಟಿಯಾದ ಸಾಧನೆಯೇ. ಮೇಲ್ಕಂಡ ನಾಲ್ಕು ಜಿಲ್ಲೆಗಳಲ್ಲಿ ಅದೇ ಅನುಕ್ರಮದಲ್ಲಿ 25, 39, 28, 35 ಹೀಗೆ 126 ಜನ ವೇತನ ತರುವ ನೌಕರಿಗಳಲ್ಲಿದ್ದಾರೆ. ಈ ನೌಕರಿಗಳು ಬೇರೆ ಬೇರೆ ಸರಕಾರಿ ಇಲಾಖೆಗಳಲ್ಲಿವೆ. ಜೊತೆಗೆ 3 ಜನ ವೈದ್ಯರು, 4 ಜನ ಎಂಜಿನಿಯರರು ಮತ್ತು 5 ಜನ ವಕೀಲರು ಇದ್ದಾರೆ. 601 ಜನ ಮಾಹಿತಿದಾರರ ಪೈಕಿ 67 ಜನರನ್ನು ಬಿಟ್ಟರೆ ಮಿಕ್ಕವರಿಗೆ, ಶಿಕ್ಷಣವು ಎತ್ತರದ ಸ್ಥಾನಮಾನ ಪಡೆಯಲು ಸಹಾಯ ಮಾಡುತ್ತದೆ. ಆರ್ಥಿಕ ಭದ್ರತೆಯನ್ನು ಕೊಡುತ್ತದೆ. ರಾಜಕೀಯ ಪ್ರಜ್ಞೆಯನ್ನು ಮೂಡಿಸಿ, ಪಂಗಡದ ರಾಜಕೀಯ ಸಂಘಟನೆಗೆ ದಾರಿ ಮಾಡುತ್ತದೆ ಎಂಬುದನ್ನು ಒಪ್ಪುತ್ತಾರೆ. ಎಲ್ಲಕ್ಕಿಂತ ಮಿಗಿಲಾಗಿ ಅದು ಪ್ರಗತಿ ಮತ್ತು ಆಧುನೀಕರಣದ

ಕಡೆಗೆ ಒಯ್ಯುತ್ತದೆ. ಔಪಚಾರಿಕ ಶಿಕ್ಷಣದ ಪ್ರಯೋಜನಗಳನ್ನು ಕುರಿತ ಈ ಅರಿವನ್ನು ಇತರ ಸಮುದಾಯಗಳು ಮತ್ತು ಜಾತಿ - ಪಂಗಡಗಳಿಗೆ ಹಾನಿಕರವಾಗದಂತೆ ಸರಿಯಾದ ದಿಕ್ಕಿನಲ್ಲಿ ಹರಿಸಬೇಕಾಗುತ್ತದೆ.

ಜಿಲ್ಲಾ ಕುರುಬ ಸಂಘವು ಈ ನಿಟ್ಟಿನಲ್ಲಿ ಮುಂದಾಗಿದ್ದು, ಅನೇಕ ಮುಖಂಡರು ಅದಕ್ಕೆ ನೆರವಾಗಿದ್ದಾರೆ. ಶಿಕ್ಷಣ ಸಂಸ್ಥೆಗಳನ್ನು, ಹಾಸ್ಟೆಲುಗಳನ್ನು ಸ್ಥಾಪಿಸಿ, ನಡೆಸುತ್ತಿದ್ದಾರೆ. ಪ್ರಸ್ತುತ ಅಧ್ಯಯನವು ಒಳಗೊಂಡಿರುವ ನಾಲ್ಕೂ ಜಿಲ್ಲೆಗಳಿಗೆ ಸಂಬಂಧಿಸಿದಂತೆ ನಮ್ಮ ಮಾಹಿತಿದಾರರು ಅಂತಹ ಸಂಸ್ಥೆಗಳನ್ನು ಪಟ್ಟಿಮಾಡಿದ್ದಾರೆ. 27 ಸಂಸ್ಥೆಗಳಿರುವ ಧಾರವಾಡ ಮೊದಲನೆಯ ಸ್ಥಾನದಲ್ಲಿದೆ. ಕುರುಬ ಗುರುಗಳೊಬ್ಬರು ಈಚೆಗೆ ಪೀಠಸ್ಥರಾಗಿದ್ದು ಅನೇಕ ಶಿಕ್ಷಣ ಸಂಸ್ಥೆಗಳನ್ನು ಹಾಸ್ಟೆಲ್ ಸೌಲಭ್ಯದೊಂದಿಗೆ ನಡೆಸಲು ನೇರವಾಗಿ ಕಾರಣರಾಗಿದ್ದಾರೆ. ಬಳ್ಳಾರಿಯಲ್ಲಿ ಅಂತಹ 15 ಸಂಸ್ಥೆಗಳಿದ್ದರೆ, ಚಿತ್ರದುರ್ಗದಲ್ಲಿ 13 ಸಂಸ್ಥೆಗಳು, 13 ಹಾಸ್ಟಲುಗಳು ಇವೆ. ಮೈಸೂರು ಜಿಲ್ಲೆಯಲ್ಲಿ ಅಂತಹ 10 ಸಂಸ್ಥೆಗಳಿವೆ. 'ಸಮುದಾಯ ಶಿಕ್ಷಣ ಸಂಸ್ಥೆಗಳು' ಸಲ್ಲಿಸುತ್ತಿರುವ ಉತ್ತಮ ಸೇವೆಯನ್ನು ಕುರಿತು 180 ಮಾಹಿತಿದಾರರು ಮಾತ್ರ ಒಳ್ಳೆಯ ಅಭಿಪ್ರಾಯ ನೀಡಿದ್ದಾರೆ. 367 ಜನರಿಗೆ ಅವುಗಳ ಬಗೆಗೆ ತಿಳಿದಿಲ್ಲವಾದ್ದರಿಂದ ಏನೂ ಹೇಳುವುದಿಲ್ಲ. 54 ಜನರು ಬಹುವಾಗಿ ಟೀಕೆ ಮಾಡಿದ್ದಾರೆ. ಒಟ್ಟಿನಲ್ಲಿ ನೇತ್ಯಾತ್ಮಕ ಧ್ವನಿಯಿಂದ ಮಾತನಾಡಿದ್ದಾರೆ.

ಹೀಗೆ ಔಪಚಾರಿಕ ಶಿಕ್ಷಣವು ಜನರಿಗೆ, ಅದರಲ್ಲೂ ಸಾಂಪ್ರದಾಯಿಕವಾಗಿ ಜ್ಞಾನ ಸಂಪಾದನೆಯ ಅವಕಾಶದಿಂದ ವಂಚಿತರಾಗಿದ್ದವರಿಗೆ ಹೊಸ ದಾರಿಗಳನ್ನು ತೆರೆದುಕೊಟ್ಟಿದೆ. ಸ್ವಾತಂತ್ರ್ಯ ಬಂದಾಗಿನಿಂದಲೂ "ಸಂರಕ್ಷಕ ತಾರತಮ್ಯ" ನೀತಿಯು ಎಸ್‌ಸಿ ಮತ್ತು ಎಸ್‌ಟಿಗಳ ಪರವಾಗಿದ್ದು ಕ್ರಮೇಣ ವ್ಯಾಪ್ತಿಯನ್ನು ವಿಸ್ತರಿಸಿಕೊಂಡಿದೆ. ಪ್ರತಿಯೊಂದು ರಾಜ್ಯವೂ ಹಿಂದುಳಿದ ವರ್ಗಗಳ ಆಯೋಗಗಳನ್ನು ರಚಿಸಲಾಗಿ, ಅವು ಸಮಸ್ಯೆಗಳನ್ನು ಎದುರಿಸಿ ಹೋರಾಡಬೇಕಾದ ವಿಧಾನಗಳನ್ನು ಸೂಚಿಸಿವೆ. ಈಗ ಓಬಿಸಿ (OBC)ಗಳೂ ಸೌಲಭ್ಯಗಳನ್ನು ಪಡೆಯಲು ಅರ್ಹರಾಗಿದ್ದಾರೆ. ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಅವರಿಗಾಗಿ ನಿರ್ದಿಷ್ಟ ಸಂಖ್ಯೆಯ ಸ್ಥಾನಗಳು ಮೀಸಲಾಗಿವೆ, ಸರಕಾರೀ ನೌಕರಿಗಳಲ್ಲಿ ನಿರ್ದಿಷ್ಟವಾದ 'ಕೋಟಾ' ಇದೆ. ಅಖಿಲ ಭಾರತ ಮಟ್ಟದಲ್ಲಿ ಮಂಡಲ್ ಆಯೋಗವು 27% ಸೀಟುಗಳು ಮತ್ತು ಉದ್ಯೋಗಗಳನ್ನು ಶಿಫಾರಸು ಮಾಡಿದೆ. ಆದರೂ ರಾಜ್ಯ ಮಟ್ಟದಲ್ಲಿ ಹಾಗೂ ಕೇಂದ್ರ ಸರಕಾರದ ಮಟ್ಟದಲ್ಲಿ ರಚಿತವಾದ ವಿವಿಧ ಆಯೋಗಗಳ ಶಿಫಾರಸುಗಳನ್ನು ಕುರಿತು ಎಲ್ಲಾ ಜಾತಿ ಪಂಗಡಗಳಿಗೂ ಅತೃಪ್ತಿಯಿದೆ. ಏಕೆಂದರೆ ಮೀಸಲಾತಿಯು ಒಟ್ಟಾರೆ 50% ಗಡಿಯನ್ನು ದಾಟಕೂಡದು ಎಂಬುದಾಗಿ ಸರ್ವೋನ್ನತ ನ್ಯಾಯಾಲಯವು ಆದೇಶಿಸಿದೆ. ಹಾಗಿದ್ದರೂ ಕೆಲವು ರಾಜ್ಯಗಳು ಮುಂದೆ ಹೆಜ್ಜೆಯಿಟ್ಟು ಅಧಿಕ ಶೇಕಡಾವಾರು ಮೀಸಲಾತಿ ನೀಡಿವೆ. ಬಹುಕಾಲದಿಂದಲೂ ಬಿ.ಸಿ.ಗಳು ಮತ್ತು ಓ.ಬಿ.ಸಿಗಳು, ಗುಟ್ಟಾಗಿ ಅಗತ್ಯವಾದ ಪ್ರಮಾಣ ಪತ್ರವನ್ನು ಹಾಜರುಪಡಿಸಿ ಎಸ್‌ಸಿ ಮತ್ತು ಎಸ್‌ಟಿಗಳ ಪಾಲನ್ನು ಕಬಳಿಸುತ್ತಿದ್ದರು. ಈಗ ಅವರಿಗೆ ಧೈರ್ಯ ಬಂದಿದೆ. ಅವರು ಹೆಚ್ಚು ಸಂಘಟಿತವಾಗಿ ಎಸ್‌ಟಿಗಳ ಪಾಲಿನಲ್ಲಿ ಕಡಿತ ಮಾಡಿ ತಮಗೆ ನೀಡಬೇಕೆಂದು

ಬಹಿರಂಗವಾಗಿ ಒತ್ತಾಯ ಪಡಿಸುತ್ತಿದ್ದಾರೆ. ಪರಿವಾರ ಜಾತಿಗೆ ಸೇರಿದ ಮಾಜಿ ಎಂಎಲ್‌ಎ ಒಬ್ಬರು ಪರಿವಾರ ಸಮುದಾಯವನ್ನು ಎಸ್‌ಟಿಗಳಿಗೆ ಸಮನೆಂದು ಪರಿಗಣಿಸಿ ಅವರು ಪಡೆದಿರುವ ಮೀಸಲಾತಿ ಕೋಟಾವನ್ನು ಇಬ್ಬರಿಗೂ ಹಂಚಬೇಕೆಂದು ಬಹಿರಂಗವಾಗಿ ಒತ್ತಾಯಪಡಿಸಿದುದರಲ್ಲಿ ಆಶ್ಚರ್ಯವಿಲ್ಲ. ಅವರ ಬೆಂಬಲವಾಗಿ ರಾಜಕೀಯ ಬೆಂಬಲವೂ ಇದ್ದ ಪಕ್ಷದಲ್ಲಿ ಅವರು ಯಶಸ್ವಿಯೂ ಆಗಬಹುದು. ಯಾರೂ ಬಲ್ಲರು!

ಇದೇ ಬಗೆಯ ವಿಶ್ಲೇಷಣೆಯನ್ನು 5ನೆಯ ಅಧ್ಯಾಯದಲ್ಲಿ ಬುಡಕಟ್ಟು ಪಂಗಡವಾದ ಕಾಡು ಕುರುಬರಿಗಾಗಿ ನಡೆಸಲಾಗುತ್ತದೆ. ಅವರ ನಡುವೆ ಹೋಲಿಕೆಗಳನ್ನು ಅವು ಇದ್ದರೆ, ವ್ಯತ್ಯಾಸಗಳನ್ನು ಎತ್ತಿ ತೋರಿಸಲಾಗುತ್ತದೆ. ಬಿ.ಸಿ ಮತ್ತು ಓ.ಬಿ.ಸಿಗಳಲ್ಲಿರುವ 'ಕೆನೆಯಂತಹ ಸ್ತರ'ಕ್ಕಿರುವ ಮೀಸಲಾತಿ ಪ್ರಯೋಜನಗಳನ್ನು ತೆಗೆಯುವುದೆಂಬ ವಿಚಾರ ಹೇಳುವುದು ಸುಲಭ, ಮಾಡುವುದು ತುಂಬಾ ಕಷ್ಟ. ಏಕೆಂದರೆ ಬಿ.ಸಿ, ಓ.ಬಿ.ಸಿಗಳಲ್ಲಿಯೂ ಕೂಡ ಅಸಂಖ್ಯಾತ ಜನರು 'ಬಡತನ ರೇಖೆ'ಯಿಂದ ಕೆಳಗಿದ್ದಾರೆ. ಆದರೆ ಯಾರೂ, ಅವರ ಸಮುದಾಯ ಮುಖಂಡರೂ ಕೂಡ, ಅವರ ಬಗೆಗೆ ತಲೆಕೆಡಿಸಿಕೊಂಡಿಲ್ಲ. ಆದರೆ ಯೋಜನೆಗೆ ಯಾವುದೇ ತಡೆಯಾಗಲಿ, ಕ್ರಮ ಕೈಗೊಂಡಿರುವುದಾಗಲಿ ನಡೆದಿಲ್ಲ, ಮೌಲ್ಯಮಾಪನವಂತೂ ದೂರವೇ ಉಳಿಯಿತು. ತನ್ನೊಳಗೇ ಅಡಕಗೊಂಡ ಮೌಲ್ಯಮಾಪನವೂ ಸೇರಿದ ಒಂದು ಹೆಚ್ಚು ತರ್ಕ ಸಮ್ಮತ ವಿಧಾನವು ರೂಪುಗೊಳ್ಳಬೇಕು. ಮೀಸಲಾತಿಯನ್ನು ತೆಗೆಯಲು ಅವಕಾಶವಿರುವಂತೆ ಅದನ್ನು ರಚಿಸಬೇಕು.

ಕಾಡು ಕುರುಬ ಬುಡಕಟ್ಟು ಪಂಗಡದವರು, ಸ್ವಲ್ಪವಾದರೂ ಮೀಸಲಾತಿ ಸೌಲಭ್ಯಗಳನ್ನು ಇಂದು ಅನುಭವಿಸುತ್ತಿದ್ದರೆ ಅದಕ್ಕೆ ಬಹುತೇಕ ಕಾರಣ, ಅವರ ನಡುವೆಯೇ ಇದ್ದುಕೊಂಡು ಉತ್ತಮ ರೀತಿಯಲ್ಲಿ ಕೆಲಸ ಮಾಡುತ್ತಿರುವ ಕೆಲವು ಎನ್.ಜಿ.ಓ (ಸರಕಾರಿಯೇತರ ಸಂಘಗಳು). ಜಾತಿಗಳಿಗೆ ಅವರು ಒತ್ತಾಯಪಡಿಸಿದರೆಂಬ ಕಾರಣದಿಂದ ಬುಡಕಟ್ಟು ಹಣೆಪಟ್ಟಿಯನ್ನು ಕೊಡುತ್ತಾ ಹೋದರೆ ಅದು ಬಹುಶಃ ಬುಡಕಟ್ಟುಗಳ ಅಭಿವೃದ್ಧಿಗೆ ಮರಣ ಗಂಟೆಯ ಮೊಳಗಾಗುತ್ತದೆ. ಇರಲಿ, ದತ್ತಾಂಶಗಳ ವಿಶ್ಲೇಷಣೆಯಿಂದ, ಕುರುಬ ಜಾತಿ ಪಂಗಡಕ್ಕೆ ದೂರಾಗಿ ಬುಡಕಟ್ಟುಗಳ ಸಾಮಾಜಿಕ - ಆರ್ಥಿಕ ಹಾಗೂ ಶೈಕ್ಷಣಿಕ ಪ್ರಗತಿ ಸಾಧನೆಯ ಮೇಲೆ ಬೆಳಕು ಚೆಲ್ಲಿದರೆ ಸ್ಪಷ್ಟ ಚಿತ್ರ ಸಿಗುವುದು.

---

1. ನಂಜುಂಡರಾವ್. ಎಲ್ - 1988, Tibals in Heggadadevana Kote Taluk, (Mysore District) ಅಪ್ರಕಟಿತ ಸರ್ವೆ ವರದಿ ಪು. 26
2. (1973) Change among India's Harijans, Maharashtra a case study, ದೆಹಲಿ ಓರಿಯೆಂಟ್ ಲಾಂಗ್‌ಮನ್ ಮತ್ತು ಓವೆನ್, ಎಂ. ಲಿಂಚ್
3. ಲಿನ್ಸಿ, ಓವೆನ್. ಎಂ (1969) The Politics of Untouchability Social Mobility and Social Change in a Society of India, ನ್ಯೂಯಾರ್ಕ್, ಕೊಲಂಬಿಯಾ ಯೂನಿವರ್ಸಿಟಿ ಪ್ರೆಸ್.

* * *

ಅಧ್ಯಾಯ : ಐದು

# ಹಾಡಿ (ನೆಲೆ)ಗಳಲ್ಲಿರುವ ಕಾಡು ಕುರುಬರು

ಇನ್ನೂ ಆದಿವಾಸಿ ಬದುಕನ್ನೇ ನಡೆಸುತ್ತಿರುವ ಕಾಡು ಕುರುಬರು ಮತ್ತು ಜೇನು ಕುರುಬರು ಅರಣ್ಯ ವಾಸಿ ಬುಡಕಟ್ಟುಗಳಾಗಿದ್ದಾರೆ. ಇವರು ಪರಿಶಿಷ್ಟ ಬುಡಕಟ್ಟುಗಳಾಗಿದ್ದು, ವೆಂಕಟಸ್ವಾಮಿ ಆಯೋಗದ ವರದಿಯಂತೆ ಇತರ ಕುರುಬರಿಗಿಂತ ಬೇರೆಯಾಗಿದ್ದಾರೆ. ಇವರು ಮೈಸೂರು ಮತ್ತು ಕೊಡಗು ಜಿಲ್ಲೆಗಳಲ್ಲಿ ಕೇಂದ್ರೀಕೃತರಾಗಿದ್ದಾರೆ. ಪ್ರಸ್ತುತ ಅಧ್ಯಯನವು ಮೈಸೂರು ಜಿಲ್ಲೆಯ ಎರಡು ತಾಲ್ಲೂಕುಗಳನ್ನು ಕುರಿತಾಗಿದೆ. ಹುಣಸೂರು ತಾಲ್ಲೂಕಿನಲ್ಲಿ ಎನ್.ಜಿ.ಓ ಸಂಸ್ಥೆ - ಡೀಡ್ ಕಳೆದ 16-17 ವರ್ಷಗಳಿಂದ ಕಾಡುಕುರುಬರ ನಡುವೆ ಇದ್ದುಕೊಂಡು ಕಾರ್ಯತತ್ಪರವಾಗಿದೆ. ಹುಣಸೂರು ತಾಲ್ಲೂಕಿನ ನೆರೆಯ ಹೆಗ್ಗಡದೇವನಕೋಟೆ ತಾಲ್ಲೂಕಿನಲ್ಲೂ ಕೂಡ ಈ ಬುಡಕಟ್ಟು ಜನರು ಹೆಚ್ಚಾಗಿ ನೆಲೆಸಿದ್ದಾರೆ. ಅಧ್ಯಯನಕ್ಕೆ ಮಾದರಿಗಳನ್ನು ಅಂತರಸಂತೆ ಮತ್ತು ಎನ್. ಬೇಗೂರು ಈ ಎರಡು ಪ್ರದೇಶಗಳಿಂದ ತೆಗೆದುಕೊಳ್ಳಲಾಗಿದೆ. ಆದರೂ ಈ ಪ್ರದೇಶವನ್ನು ಒಟ್ಟಾರೆ ಹೆ.ದೇ.ಕೋಟೆ ಎಂದೇ ಉಲ್ಲೇಖಿಸಲಾಗುತ್ತದೆ. ಇಲ್ಲೂ ನಾಲ್ಕೈದು ಎನ್.ಜಿ.ಓಗಳು ಕೆಲಸ ಮಾಡುತ್ತಿವೆ. ಹಲವು ವರ್ಷಗಳಿಂದ ಶ್ರಮಿಸುತ್ತಿರುವ ಅವುಗಳ ಪೈಕಿ ಮುಖ್ಯವಾದ ಕೆಲವು ಮೈರಾಡಾ (Myrada), ಫೆಡಿನಾ - ವಿಕಾಸ (Fedina-Vikasa), ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ (SVYM). ಅಧ್ಯಯನವು 601 ಕುಟುಂಬಗಳ ಮಾಹಿತಿಯನ್ನು ಮಾದರಿಯಾಗಿ ತೆಗೆದುಕೊಂಡಿದೆ. ಹುಣಸೂರು ಪ್ರದೇಶದಲ್ಲಿ 301 ಕುಟುಂಬಗಳನ್ನು ಹೆ.ದೇ.ಕೋಟೆ ಪ್ರದೇಶದಲ್ಲಿ 300 ಕುಟುಂಬಗಳನ್ನು ತೆಗೆದುಕೊಳ್ಳಲಾಗಿದೆ. ಇವುಗಳಲ್ಲಿ ಎನ್. ಬೇಗೂರು ಮತ್ತು ಅಂತರಸಂತೆ ಪ್ರದೇಶಗಳಿಂದ ತಲಾ 150 ಕುಟುಂಬಗಳನ್ನು ಮಾದರಿಯಾಗಿ ತೆಗೆದುಕೊಂಡಿದೆ. ಪ್ರಸ್ತುತ ಅಧ್ಯಯನದ ಉದ್ದೇಶಕ್ಕೆ ಕಾಡು ಕುರುಬ ಎಂಬ ಪದವನ್ನು ಕುಲನಾಮವನ್ನಾಗಿ ಪರಿಗಣಿಸಿದೆ. ಇತರ ಮೂರು ಉಪ-ವಿಭಾಗಗಳಾದ ಬೆಟ್ಟ ಕುರುಬರು, ಜೇನು ಕುರುಬರು ಮತ್ತು ಮುಳ್ಳು ಕುರುಬರು (ಅಥವಾ ಮುಳ್ಳು ಕುರುಂಬ) ಅದರಲ್ಲೇ ಸೇರುತ್ತಾರೆ. ಮುಳ್ಳು ಕುರುಬರು ಬಹುಮಟ್ಟಿಗೆ ತಮಿಳುನಾಡು - ನೀಲಗಿರಿ

ಪ್ರದೇಶದಲ್ಲಿ ಕಂಡು ಬರುವುದರಿಂದ ಆ ಉಪವಿಭಾಗವನ್ನು ಈ ಅಧ್ಯಯನದಲ್ಲಿ ಸೇರಿಸಿಲ್ಲ. ಬೆಟ್ಟ ಕುರುಬರು (ಬೆಟ್ಟದ ಬುಡಕಟ್ಟು) ಕಾಡು ಕುರುಬರಿಗೆ ಹೆಚ್ಚು ಹತ್ತಿರದವರಾಗಬೇಕು. ಜೇನು ಕುರುಬರು ಬೆಟ್ಟ ಕುರುಬರಿಗಿಂತ ಸಂಖ್ಯಾ ದೃಷ್ಟಿಯಿಂದ ಹೆಚ್ಚಾಗಿರುವ ಪಂಗಡ.

ಮಾದರಿಯಲ್ಲಿ ಹೆ.ದೇ.ಕೋಟೆ ಪ್ರದೇಶದಿಂದ ಆರಿಸಿಕೊಂಡ 119 ಬೆಟ್ಟ ಕುರುಬ ಕುಟುಂಬಗಳೂ 181 ಜೇನು ಕುರುಬ ಕುಟುಂಬಗಳೂ ಸೇರುತ್ತವೆ. ಅದೇ ಸಮಯಕ್ಕೆ ಹುಣಸೂರು ತಾಲ್ಲೂಕಿಗೆ ಸೇರಿದ 295 ಜೇನು ಕುರುಬ ಕುಟುಂಬಗಳೂ 6 ಬೆಟ್ಟ ಕುರುಬ ಕುಟುಂಬಗಳು ಪ್ರಸಕ್ತ ಅಧ್ಯಯನಕ್ಕೆ ಒಳಪಟ್ಟಿವೆ. ಮಾದರಿ ತೆಗೆದುಕೊಂಡ ತಾಲ್ಲೂಕುಗಳು, ಸ್ಥಳಗಳು ಮತ್ತು ಗಾತ್ರ ಮುಂದಿನ ಪಟ್ಟಿಕೆಯಲ್ಲಿ ಕಂಡು ಬರುತ್ತವೆ. ಎರಡೂ ಗುಂಪುಗಳು ಅಂತರ್ವಿವಾಹವುಳ್ಳವು. ಆದರೆ ಸಹ ಭೋಜನ ಮಾಡುವುದಿಲ್ಲ. ಬೇರೆ ಬೇರೆ ಸಾಂಪ್ರದಾಯಿಕ ವೃತ್ತಿಗಳನ್ನು ನಡೆಸುತ್ತಾರೆ.

**ಪಟ್ಟಿಕೆ : ೧ ಎರಡು ತಾಲ್ಲೂಕುಗಳಿಂದ ಸಂಗ್ರಹಿಸಿದ ಮಾದರಿಗಳು, ಸ್ಥಳ ಮತ್ತು ಗಾತ್ರಗಳೊಂದಿಗೆ**

| | ಹುಣಸೂರು ತಾಲ್ಲೂಕು | ಅಳವಡಿಸಿದ ಕುಟುಂಬಗಳ ಸಂಖ್ಯೆ |
|---|---|---|
| 1. | ಭರತ ವಾಡಿ | 26 |
| 2. | ಬಿಲ್ಲೆ ಹೊಸಹಳ್ಳಿ | 37 |
| 3. | ಬೆಟ್ಟದ ಹಾಡಿ | 10 |
| 4. | ಚಿಕ್ಕ ಹೆಜ್ಜೂರು | 10 |
| 5. | ಹರಳ ಹಳ್ಳಿ | 13 |
| 6. | ಅಯ್ಯನಕೆರೆ | 31 |
| 7. | ಕಪ್ಪನಕಟ್ಟೆ | 39 |
| 8. | ಕೆರೆ ಹಾಡಿ | 09 |
| 9. | ಕೊಳವಿಗೆ | 42 |
| 10. | ನೇರಳ ಕುಪ್ಪೆ 'ಎ' | 29 |
| 11. | ನೇರಳ ಕುಪ್ಪೆ 'ಬಿ' | 22 |
| 12. | ವೀರನಹೊಸಳ್ಳಿ | 33 |
| | ಒಟ್ಟು | 301 |
| | **ಹೆ.ದೇ.ಕೋಟೆ ತಾಲ್ಲೂಕು - ಎನ್. ಬೇಗೂರು ಪ್ರದೇಶ** | |
| 1. | ಬ್ರಹ್ಮಗಿರಿ | 19 |
| 2. | ಶಿಲೆ ಮಾಸ್ತಿ ಹಾಡಿ | 02 |
| 3. | ದೇವನ ಹಾಡಿ | 06 |

| | | |
|---|---|---|
| 4. | ದೊಣ್ಣೆ ಮಾದನ ಹಾಡಿ | 07 |
| 5. | ಎಲಿಚಿಕಟ್ಟೆ | 06 |
| 6. | ಹೊಸಹಳ್ಳಿ | 15 |
| 7. | ಜಾಗನಕೋಟೆ | 36 |
| 8. | ಕೆಂಪನಹಾಡಿ | 29 |
| 9. | ಮಾಳದಹಾಡಿ | 27 |
| 10. | ರಾಜಪುರ | 09 |
| | ಒಟ್ಟು | 150 |

**ಹೆ.ದೇ.ಕೋಟೆ ತಾಲ್ಲೂಕು - ಅಂತರಸಂತೆ ಪ್ರದೇಶ**

| | | |
|---|---|---|
| 1. | ಹುಣಸೆ ಕುಪ್ಪೆ 'ಎ' | 18 |
| 2. | ಹುಣಸೆಕುಪ್ಪೆ 'ಬಿ' | 19 |
| 3. | ಕಾರಾಪುರ ಹಾಡಿ | 33 |
| 4. | ಕೆರೆಹಾಡಿ | 02 |
| 5. | ಮಾಳದ ಹಾಡಿ | 14 |
| 6. | ಮಂಚೇಗೌಡನ ಹಾಡಿ | 27 |
| 7. | ಸೀಗೂರು ಹಾಡಿ | 37 |
| | ಒಟ್ಟು | 150 |

ಪ್ರಸ್ತುತ ಅಧ್ಯಯನವು ಜಾತಿ - ಬುಡಕಟ್ಟು ಲಕ್ಷಣಗಳ ಮೇಲೆ ಕೇಂದ್ರೀಕರಿಸಿರುವುದರಿಂದ ಅಧ್ಯಯನವು ಊರು ಕುರುಬ (ಗ್ರಾಮಕುರುಬ) ಮತ್ತು ಕಾಡು ಕುರುಬರನ್ನು ಜಾತಿ ಮತ್ತು ಬುಡಕಟ್ಟುಗಳ ನಡುವೆ ಬೇರೆ ದಾರಿ ಹಿಡಿದವರು ಎಂದು ಪರಿಗಣಿಸುತ್ತದೆಯೇ ಹೊರತು, ಬುಡಕಟ್ಟುಗಳಲ್ಲಿನ ಒಳ ಉಪಭಾಗಗಳೆಂದಲ್ಲ.

ಬುಡಕಟ್ಟು ಜನರೇ ತಮಗೂ ಜಾತಿಗೂ, ತಮ್ಮಲ್ಲೇ ವಿವಿಧ ಒಳಪಂಗಡಗಳ ನಡುವೆಯೂ ಇರುವ ವ್ಯತ್ಯಾಸಗಳನ್ನು ಪಟ್ಟಿ ಮಾಡಿದ್ದಾರೆ. ರೂಢಿಗಳು, ಸಂಪ್ರದಾಯಗಳು, ಜಾತಿ - ಬುಡಕಟ್ಟುಗಳನ್ನು ವಿವಿಧ ಬುಡಕಟ್ಟು ಒಳವಿಭಾಗಗಳನ್ನು ಗುರುತಿಸಿ ಪ್ರತ್ಯೇಕಿಸುವ ಆಚರಣೆಗಳು ಈ ಸಂದರ್ಭದಲ್ಲಿ ಉಕ್ತವಾಗಿವೆ. ಕಸಬು, ಭಾಷೆ, ಉಡುಗೆ, ಆಹಾರ ಅಭ್ಯಾಸಗಳು, ತಮ್ಮ ಪೂರ್ವಜರಿಗೆ ಕೊಡುವ ಮರ್ಯಾದೆ, ಮದುವೆಯ ಹಲವು ರೀತಿಗಳು ಬುಡಕಟ್ಟು ಮತ್ತು ಜಾತಿಯ ನಡುವೆ, ವಿವಿಧ ಬುಡಕಟ್ಟು ವಿಭಾಗಗಳ ನಡುವೆ ಬೇರೆ ಬೇರೆಯಾಗಿವೆ. ಒಂದೇ ಮಾತಿನಲ್ಲಿ ಹೇಳುವುದಾದರೆ, ಅವರ ಜೀವನ ಶೈಲಿಯೇ ಈ ವ್ಯತ್ಯಾಸಗಳನ್ನು ಎತ್ತಿ ತೋರಿಸುತ್ತದೆ. ಈ ಪರಿಸ್ಥಿತಿಯಲ್ಲಿ ಕಾಡು ಕುರುಬರಲ್ಲಿ ಹೆಚ್ಚಿನವರು,

ಹೆ.ದೇ. ಕೋಟೆ ಪ್ರದೇಶದ 300ರಲ್ಲಿ 291 ಜನರು, ಹುಣಸೂರು ತಾಲ್ಲೂಕಿನ 301ರಲ್ಲಿ 296 ಜನರು, ಕಾಡು ಮತ್ತು ಊರು ಕುರುಬರ ನಡುವೆ ರಕ್ತ ಸಂಬಂಧವಿಲ್ಲ ಎಂದು ಹೇಳುತ್ತಾರೆ. ಎರಡರಲ್ಲಿ ಯಾವುದೊಂದನ್ನು ಇನ್ನೊಂದರ ಒಳಪಂಗಡ ಎಂದು ಹೇಳಲು ಸಾಧ್ಯವಿಲ್ಲ. ಹೆ.ದೇ.ಕೋಟೆ ಪ್ರದೇಶದ 242 ಜನರೂ ಹುಣಸೂರು ತಾಲ್ಲೂಕಿನ 278 ಜನರು ಹೀಗೆ ಹೇಳಿದ್ದಾರೆ. ಉದಾಸೀನ ಮಾಡಬಹುದಾದಷ್ಟು ಅಲ್ಪ ಸಂಖ್ಯೆಯ ಜನರು ಮಾತ್ರ ಬೇರೆ ರೀತಿಯಾಗಿ ವ್ಯಕ್ತಪಡಿಸಿದ್ದಾರೆ. ಹೆ.ದೇ. ಕೋಟೆ ತಾಲ್ಲೂಕಿನ 9 ಜನ ಮಾಹಿತಿದಾರರೂ ಹುಣಸೂರಿನಲ್ಲಿ 5 ಜನರೂ, ಊರು ಮತ್ತು ಕಾಡು ಕುರುಬರ ನಡುವೆ ಸಂಬಂಧವಿದೆ ಎಂದು ಹೇಳುತ್ತಾರೆ. ಹಾಗೆಯೇ ಹೆ.ದೇ. ಕೋಟೆಯ 58 ಜನರು ಹುಣಸೂರು ತಾಲ್ಲೂಕಿನ 23 ಜನರೂ ಊರು ಕುರುಬರು ಒಂದು ಉಪ-ಪಂಗಡ ಎಂದು ಹೇಳಿದ್ದಾರೆ.

ಕಾಡು ಕುರುಬರ ಕುಲನಾಮಗಳು ಕುರುಬರಲ್ಲಿ ಕಂಡು ಬರುವ ಕುಲಗಳಿಂದ ಸಂಪೂರ್ಣವಾಗಿ ಭಿನ್ನವಾದವು. ಉದಾಹರಣೆಗೆ ಕಣ್ಣಾಯಿನ್ ಮಕ್ಕ, ಕಲಕರ್ ಮಕ್ಕ, ಕೊಡುಮಗೆ, ಕುರೆತಮಗೆ ಮೊದಲಾದವು ಈ ಹೆಸರುಗಳು ಕುರುಬರ ಹೆಸರುಗಳಿಗಿಂತ ಬೇರೆ ಎಂಬುದನ್ನು ಸೂಚಿಸುತ್ತವೆ. ಕಾಡು ಕುರುಬರಿಗೂ ಕುರುಬರಿಗೂ ಸಂಬಂಧದ ಅತಿ ದೂರದ ಸಾಧ್ಯತೆಯೂ ಇಲ್ಲ. ಎಷ್ಟೇ ಚಿಹ್ನೆಗಳು ಕುಲದೇವತಾ ಸಂಬಂಧಿಯಾಗಿರುತ್ತವೆ. ಹುಣಸೂರು ಪ್ರದೇಶದ 301ರಲ್ಲಿ 295 ಜನರು ಇದನ್ನು ಹೇಳುತ್ತಾರೆ. ಕುಲದೇವತಾ ಸೂಚಕ ವಸ್ತುವು ಪವಿತ್ರವಾದದ್ದು. ಆದ್ದರಿಂದ ಅದನ್ನು ಕೊಲ್ಲುವುದಾಗಲಿ, ತಿನ್ನುವುದಾಗಲಿ ನಿಷಿದ್ಧ. ಹೆ.ದೇ.ಕೋಟೆ ಮತ್ತು ಹುಣಸೂರು ಪ್ರದೇಶಗಳ 298 ಮತ್ತು 295 ಜನ ಕಾಡು ಕುರುಬರು ಕುಲದೇವತಾ ಚಿಹ್ನೆಯನ್ನು ಪರಮ ಪವಿತ್ರವೆಂದು ಪರಿಗಣಿಸುತ್ತಾರೆ. ಒಂದು ಕುಲದಲ್ಲಿ ಹಲವು ಕುಲದೇವತಾ ಪಂಗಡಗಳಿರುತ್ತವೆ. ಒಟ್ಟು ಬುಡಕಟ್ಟಿನಲ್ಲಿ ಹೀಗೆ ನೂರಾರು ಬಣಗಳಿರುವುದುಂಟು. ಇದು ಕಾಡು ಕುರುಬರು ಮತ್ತು ಕುರುಬರ ನಡುವೆ ಇರುವ ಅತಿ ಮುಖ್ಯವಾದ ಒಂದು ವ್ಯತ್ಯಾಸ. ಕೆಲವು ಬಣ ನಾಮಗಳು ಕೂಡ ಬಸವೇಶ್ವರ, ಮಾದೇಶ್ವರ, ಮಾರಮ್ಮ, ಚೌಡಮ್ಮ ಮುಂತಾದ ದೇವ ದೇವತೆಗಳನ್ನು ಸೂಚಿಸುತ್ತವೆ. ಇವುಗಳ ಜೊತೆಗೆ ಕಾಡು ಕುರುಬರು ಅನುಗ್ರಹ ಮಾಡುವ ಮತ್ತು ಕೆಡಕು ಮಾಡುವ ದೇವತೆಗಳನ್ನು ಪ್ರತ್ಯೇಕಿಸಿ ಗುರುತಿಸುತ್ತಾರೆ. ಇದನ್ನು ಸ್ವಲ್ಪ ಮುಂದೆ ಚರ್ಚಿಸಲಾಗುತ್ತದೆ.

ಬುಡಕಟ್ಟು ಸಮಾಜದ ಒಂದು ಮುಖ್ಯವಾದ ಲಕ್ಷಣ ಕಾಲಕಾಲಕ್ಕೆ ಸ್ಥಳದಿಂದ ಸ್ಥಳಕ್ಕೆ ವಲಸೆ ಹೋಗುವುದು. ಇದಕ್ಕೆ ಹಲವು ಕಾರಣಗಳಿರಬಹುದು. ಮೊದಲನೆಯದಾಗಿ, ಅವರು ಇನ್ನೂ ಆಹಾರವನ್ನು ಹೆಕ್ಕಿ ಸಂಗ್ರಹಿಸುವ ಮತ್ತು ಬೇಟೆಯಾಡುವ ಅಭ್ಯಾಸವನ್ನು ಇಟ್ಟುಕೊಂಡಿರುವುದರಿಂದ, ಒಂದು ಸ್ಥಳವನ್ನು ಸಂಪೂರ್ಣವಾಗಿ ಬಳಸಿಕೊಂಡು ಮುಗಿಸಿದ ಮೇಲೆ, ಇನ್ನು ಅಲ್ಲಿ ಸಂಗ್ರಹಿಸಲು ಆಹಾರ ದೊರಕುವುದಿಲ್ಲವೆಂದಾಗ, ಬೇರೊಂದು ಸ್ಥಳಕ್ಕೆ ವಲಸೆ ಹೋಗುವ ಸಾಧ್ಯತೆಯಿದೆ. ಸರಕಾರವು ಆವರ್ತಕ ಬೇಸಾಯ ಪದ್ಧತಿಯನ್ನು ನಿಷೇಧಿಸಿದೆ. ಅತಿ ಸಣ್ಣ ಅರಣ್ಯೋತ್ಪಾದನೆಗಳನ್ನು ಸಂಗ್ರಹಿಸಿಕೊಳ್ಳಲು ಕೂಡ ಅವರನ್ನು

ಅರಣ್ಯಕ್ಕೆ ಪ್ರವೇಶಿಸಲು ಬಿಡದೆ ತಡೆಯುವುದರಿಂದ ಬುಡಕಟ್ಟು ಜನರು ಹೊಸ ಸ್ಥಳಗಳಿಗೆ ವಲಸೆ ಹೋಗಲೇಬೇಕಾಗಿದೆ. ಅನೇಕ ಬುಡಕಟ್ಟು ಕುಟುಂಬಗಳು, ವರ್ಷದ ಗಣನೀಯ ಭಾಗದಲ್ಲಿ, ಕಡ್ಡಾಯವಾಗಿ ದಿನಕ್ಕೆ ಒಂದು ಊಟ ಮಾಡುತ್ತಾರೆ. ಅದು ಬೇರುಗಳು, ಕಾಯಿಗಳು, ಸೊಪ್ಪುಗಳು, ಗೆಡ್ಡೆಗಳು - ಇವನ್ನು ಅರಣ್ಯ ಪ್ರದೇಶದಿಂದ ಸಂಗ್ರಹಿಸಿ ತಂದವುಗಳಾಗಿರುತ್ತದೆ. ಬೇಸಾಯವು ಇನ್ನು ಸ್ಥಿರತೆ ಪಡೆದಿರುವುದಿಲ್ಲ. ಇಂತಹ ಜನರು ಹೊಸ ಸ್ಥಳಗಳಿಗೆ ಕಡ್ಡಾಯವಾಗಿ ಹೋಗಲೇಬೇಕಾಗುತ್ತದೆ. ಅಷ್ಟಿಷ್ಟು ಬೆಳಸು ವನ್ಯ ಪ್ರಾಣಿಗಳ ಧಾಳಿಯಿಂದ ತಪ್ಪಿಸಿಕೊಂಡು ಉಳಿದರೆ ಅದನ್ನು ತಂದು ಸಮುದಾಯವು ಹಂಚಿಕೊಳ್ಳುತ್ತದೆ. ಅದು ಕೆಲವು ವಾರಗಳಿಂದ ಕೆಲವು ತಿಂಗಳುಗಳವರೆಗೆ ಸಾಲುತ್ತದೆ. ಉಳಿದ ಸಮಯದಲ್ಲಿ ಜೀವ ಹಿಡಿದುಕೊಳ್ಳಲು ದಾರಿಗಳನ್ನು ಅವರು ಹುಡುಕಬೇಕಾಗುತ್ತದೆ.

ಕಾಡು ಕುರುಬರ ವಲಸಿಗ ಲಕ್ಷಣವು ನಿರಂತರವಾದುದೆಂಬಂತೆ ತೋರುತ್ತದೆ. ಇದಕ್ಕೆ ವ್ಯತಿರಿಕ್ತವಾಗಿ ಕುರುಬರು ಹಳ್ಳಿಗಳಲ್ಲಿ ಸ್ಥಾಪಿತ ಜೀವನವನ್ನು ನಡೆಸುತ್ತಾರೆ. ಕುರಿಮಂದೆಗಳನ್ನು ಸಾಕಿಕೊಂಡು ದೂರದೂರದ ಪ್ರವೇಶಗಳಿಗೆ ಮಂದೆಯನ್ನು ಮೇಯಲು ಕೊಂಡೊಯ್ಯುವ ಕುರುಬರನ್ನೂ ಕೂಡ ವಲಸೆ ಹೋಗುವವರೆಂದು ಹೇಳಲು ಸಾಧ್ಯವಿಲ್ಲ. ಕುಟುಂಬದ ಕೆಲವು ಗಂಡಸರು ಮಾತ್ರ ಮಂದೆಯೊಂದಿಗೆ ಹೋಗುತ್ತಾರೆ, ಆದರೆ ಕೆಲ ದಿನಗಳ ನಂತರ ಹಳ್ಳಿಗೆ ಹಿಂದಿರುಗುತ್ತಾರೆ. ಕಾಡು ಕುರುಬರ ವಲಸೆಗೆ ಇತರ ಕಾರಣಗಳೂ ಇವೆ. ಬಹುತೇಕ ಜನರು 30 ವರ್ಷಗಳ ಅವಧಿಯಲ್ಲಿ ವಲಸೆ ಬಂದವರು. ಹೆ.ದೇ. ಕೋಟೆ ಮತ್ತು ಹುಣಸೂರು ಪ್ರದೇಶಕ್ಕೆ ಸಂಬಂಧಿಸಿದಂತೆ 50 ವರ್ಷಗಳನ್ನು ಕುರಿತ ಮಾಹಿತಿ ನಮಗೆ ದೊರೆತಿದೆ. ಇಲ್ಲಿ ಕಂಡುಬಂದಿರುವ ಚಲನೆ ಒಂದು ಹಾಡಿಯಿಂದ ಇನ್ನೊಂದಕ್ಕೆ, ಆಗಾಗ ನೆರೆಯ ತಾಲ್ಲೂಕುಗಳಿಗೆ, ಹುಣಸೂರು ತಾಲ್ಲೂಕಿಗಿಂತ ಹೆ.ದೇ.ಕೋಟೆ ತಾಲ್ಲೂಕು ಹೆಚ್ಚಿನ ವಲಸೆಯನ್ನು ಕಂಡಿದೆ.

ಎಲ್ಲಿಂದ ವಲಸೆ ಬಂದರೋ ಆ ಸ್ಥಳಗಳು, ಹೊಸ ಸ್ಥಳಗಳ ಹೆಸರುಗಳು ಉಪಲಬ್ಧವಿವೆ. ಕೆಲವು ಕಾಡು ಕುರುಬರು ಕೊಡಗು ಪ್ರದೇಶದಿಂದ ಹುಣಸೂರು ತಾಲ್ಲೂಕಿಗೆ ವಲಸೆ ಬಂದಿದ್ದಾರೆ. ಹಾಗೆಯೇ ಹುಣಸೂರು ತಾಲ್ಲೂಕಿನಿಂದಲೂ ಕೊಡಗಿಗೆ ಕಾಡು ಕುರುಬರು ಕಾಫಿ ತೋಟಗಳಲ್ಲಿ ಕೂಲಿ ಕಾರ್ಮಿಕರಾಗಿ ಕೆಲಸ ಮಾಡಲು ತಾತ್ಕಾಲಿಕವಾಗಿಯೋ ಖಾಯಂ ಆಗಿಯೋ ವಲಸೆ ಹೋಗಿದ್ದಾರೆ. ವಲಸೆಗೆ ಇತರ ಎಲ್ಲ ಕಾರಣಗಳಿಗಿಂತ ಮಿಗಿಲಾಗಿ ಜೀವನೋಪಾಯ ಸಂಪಾದನೆ ಮುಖ್ಯವಾಗುತ್ತದೆ. ಹೆ.ದೇ.ಕೋಟೆ ಪ್ರದೇಶದಿಂದ 41, ಹುಣಸೂರು ಪ್ರದೇಶದಿಂದ 15, ಒಟ್ಟು 56 ಜನ ಮಾಹಿತಿದಾರರು ಇದನ್ನು ಹೇಳಿದ್ದಾರೆ. ವಲಸೆಯನ್ನು ಪ್ರಚೋದಿಸುವ ಮುಂದಿನ ಮುಖ್ಯವಾದ ಅಂಶ ಒಂದು ಸ್ಥಳದಲ್ಲಿ ಮೊದಲೇ ಬಂಧುಗಳು ನೆಲೆಸಿರುವುದು. ಹೆ.ದೇ. ಕೋಟೆಯಿಂದ 23, ಹುಣಸೂರಿನಿಂದ 21 ಹೀಗೆ 44 ಜನರು ವಲಸೆಗೆ ಇದನ್ನು ಕಾರಣವೆಂದು ಹೇಳಿದ್ದಾರೆ. ಸರಕಾರಿ ನೌಕರರು ಸಾಂವಿಧಾನಿಕ ಪ್ರಯೋಜನಗಳನ್ನು ನೀಡಿ ಬುಡಕಟ್ಟು ಜನರು ವಲಸೆ ಬರಲು ಆಕರ್ಷಿಸಿದ್ದಾರೆ. ಹೆ.ದೇ.

ಕೋಟೆಯಿಂದ 35, ಹುಣಸೂರಿನಿಂದ 2 ಹೀಗೆ 37 ಕುಟುಂಬಗಳು ಈ ಕಾರಣವನ್ನು ಕೊಟ್ಟಿದ್ದಾರೆ. ಮದುವೆಯೂ ಕಾರಣಗಳಲ್ಲಿ ಒಂದು. ಇದು ಸಾಂಪ್ರದಾಯಿಕವಾದ ಪಿತೃವಂಶ ಕ್ರಮದ ವಿನ್ಯಾಸವಲ್ಲ, ವಿವಾಹಿತ ಸ್ತ್ರೀಯರು ಸಾಮಾನ್ಯವಾಗಿ ತಮ್ಮ ಪತಿಗೃಹಕ್ಕೆ ಹೋಗುವ ಪದ್ಧತಿಯಿಲ್ಲ. ಬುಡಕಟ್ಟುಗಳಲ್ಲಿ ಪಿತೃವಂಶ ಕ್ರಮ ವಿನ್ಯಾಸವಿದ್ದರೂ ಗಂಡನೋ ಹೆಂಡತಿಯೋ ಅವಳ ಅಥವಾ ಅವನ ಮನೆಗೆ ಹೋಗಿ ವಾಸ ಮಾಡಬಹುದು. ಆಗಾಗ, ಹೊಸದಾಗಿ ಮದುವೆಯಾದ ದಂಪತಿಗಳು ಸ್ವತಂತ್ರ ಕುಟುಂಬವನ್ನು ಹೂಡುತ್ತಾರೆ. ಎರಡೂ ಕಡೆಯ ಅತ್ತೆ - ಮಾವಂದಿರು ವಿವಾಹಿತ ಮಗಳು ಅಥವಾ ಸೊಸೆಯ ಕೈಯಿಂದ ಏನನ್ನು ತಿನ್ನುವುದಿಲ್ಲ. ಕೇವಲ 11 ಕುಟುಂಬಗಳು, ಹೆ.ದೇ. ಕೋಟೆಯಿಂದ 5, ಹುಣಸೂರಿನಿಂದ 6, ಆವರ್ತ ಬೇಸಾಯದ ಮೇಲೆ ಸರಕಾರವು ನಿಷೇಧ ಹಾಕಿರುವುದು ವಲಸೆಗೆ ದಾರಿ ಮಾಡುತ್ತದೆ ಎಂದು ಅಭಿಪ್ರಾಯ ಪಡುತ್ತಾರೆ.

ಹೀಗೆ ವಲಸೆಯು ಕಾಡು ಕುರುಬರಲ್ಲಿ ಒಂದು ಮಾಮೂಲು ವಿಷಯವಾಗಿದೆಂಬುದನ್ನು ನೋಡಬಹುದು. ಒಂದಲ್ಲ ಒಂದು ಕಾರಣಕ್ಕೆ ಜನರು ಒಂದು ಹಾಡಿಯಿಂದ ಇನ್ನೊಂದಕ್ಕೋ, ತಾಲ್ಲೂಕಿನ ಬೇರೆ ಬೇರೆ ಹಾಡಿಗಳಿಗೋ, ಕೆಲವೊಮ್ಮೆ ತಾಲ್ಲೂಕಿನ ಹೊರಗೆ ಬೇರೆ ತಾಲ್ಲೂಕಿಗೋ ವಲಸೆ ಹೋಗುತ್ತಾರೆ. ಒಂದು ನಿರ್ದಿಷ್ಟ ಸ್ಥಳದಲ್ಲಿ - ಹಾಡಿಯಲ್ಲಿ ವಾಸವಾಗಿದ್ದೇವೆ ಎಂದು ಹೇಳುವವರು ಬಹಳ ಹಿಂದೆ ಅಲ್ಲಿಗೆ ವಲಸೆ ಬಂದಿರಬೇಕು. ಹೆ.ದೇ. ಕೋಟೆಯಲ್ಲಿ 300ರ ಪೈಕಿ 244 ಕುಟುಂಬಗಳು ನಿರ್ದಿಷ್ಟ ಹಾಡಿಗಳಲ್ಲಿ ತಾವು ಖಾಯಂ ಆಗಿ ವಾಸ ಮಾಡುತ್ತಿರುವುದಾಗಿ ಹೇಳುತ್ತಾರೆ. ಹಾಗೆಯೇ ಹುಣಸೂರು ತಾಲ್ಲೂಕಿನಲ್ಲಿ 277 ಕುಟುಂಬಗಳಿವೆ. ಮಿಕ್ಕ ಕುಟುಂಬಗಳು ವಲಸಿಗರು. ನಿರ್ದಿಷ್ಟ ಸ್ಥಳಗಳಿಗೆ ವಲಸೆ ಹೋಗಲು ಕಾಡು ಕುರುಬರೇ ಕಾರಣಗಳನ್ನು ಕೊಡುತ್ತಾರೆ. ಬುಡಕಟ್ಟು ಅಭಿವೃದ್ಧಿ ಯೋಜನೆಗಳಿಗೆ ಸರಕಾರವು ನೀಡುವ ನೆರವು ತಮ್ಮನ್ನು ಆಕರ್ಷಿಸಿದುದಾಗಿ ಸುಮಾರು 39 ಕುಟುಂಬಗಳು (ಹೆ.ದೇ.ಕೋಟೆ 26, ಹುಣಸೂರು 13) ವಿವರಿಸುತ್ತಾರೆ. ಇತರ 23 ಮಾಹಿತಿದಾರರು 'ಸುಭದ್ರತೆ'ಯನ್ನು ಕಾರಣವಾಗಿ ಕೊಡುತ್ತಾರೆ. ವನ್ಯ ಮೃಗಗಳಿಂದ ರಕ್ಷಣೆಗಿಂತ ಮಿಗಿಲಾಗಿ ಬಗೆ ಬಗೆಯ ಜನರ ಹಾವಳಿಯಿಂದ ಕಾಡು ಕುರುಬರಿಗೆ ರಕ್ಷಣೆ ಬೇಕಾಗಿದ್ದಿರಬೇಕು. ವ್ಯವಹಾರೋದ್ಯಮಿಗಳು, ಗುತ್ತಿಗೆದಾರರು, ಅರಣ್ಯಾಧಿಕಾರಿಗಳು, ಹೆಂಡ - ಸಾರಾಯಿ ವ್ಯವಹಾರಸ್ಥರು, ಮತ್ಸರಿಗಳಾದ ನೆರೆ ಹಳ್ಳಿಯ ಜನರು, ಒಂಟಿಯಾಗಿ ಅಥವಾ ಜೊತೆಯಾಗಿ ಬುಡಕಟ್ಟು ಜನರ ಜೀವಕ್ಕೆ ಗಂಡಾಂತರದ ಭೀತಿಯನ್ನು ಒಡ್ಡುತ್ತಾರೆ. ಈ ಬೆದರಿಕೆಗಳಿಂದ ತಪ್ಪಿಸಿಕೊಳ್ಳಲು ಜನರು ಸುರಕ್ಷಿತ ಸ್ಥಳಗಳಿಗೆ ವಲಸೆ ಹೋಗುತ್ತಾರೆ. ಇದಕ್ಕೆ ವಿರುದ್ಧವಾಗಿ ಕುರುಬರು ಸುಸ್ಥಾಪಿತವಾದ ಗ್ರಾಮೀಣ ಸಮುದಾಯವಾಗಿದ್ದಾರೆ. ಈಗ ಅವರು ಪಟ್ಟಣಗಳಿಗೂ ನಗರಗಳಿಗೂ ಪ್ರವೇಶಿಸಿದ್ದಾರೆ.

ಪ್ರಸ್ತುತ ಮಾದರಿಯು 2891 ಜನರನ್ನು ಒಳಗೊಂಡಿವೆ. ಇವರಲ್ಲಿ 1384 ಜನರು ಹೆ.ದೇ.ಕೋಟೆಯಿಂದಲೂ 1507 ಜನರು ಹುಣಸೂರು ತಾಲ್ಲೂಕಿನಿಂದಲೂ ಬಂದವರು.

1384 ಜನರಲ್ಲಿ 703 ಜನ ಪುರುಷರು, 681 ಜನ ಮಹಿಳೆಯರು; ಇದಕ್ಕೆ ಸಂವಾದಿಯಾಗಿ ಹುಣಸೂರು ತಾಲ್ಲೂಕಿನವರಲ್ಲಿ 782 ಜನ ಪುರುಷರು ಮತ್ತು 725 ಜನ ಮಹಿಳೆಯರು. ಎರಡೂ ತಾಲ್ಲೂಕುಗಳಲ್ಲಿ ಪುರುಷರ ಸಂಖ್ಯೆ ಹೆಚ್ಚು. ಹಾವನೂರು ಆಯೋಗದ ಪ್ರಕಾರ, 1961ನೆಯ ಆಧಾರ ವರ್ಷಕ್ಕೆ ಮೈಸೂರು ಜಿಲ್ಲೆಯಲ್ಲಿನ ಕಾಡು (ಬೆಟ್ಟ) ಮತ್ತು ಜೇನು ಕುರುಬರ ಜನಸಂಖ್ಯೆ ಕ್ರಮವಾಗಿ 3001 ಮತ್ತು 2358 ಇದ್ದಿತು; 1972ಕ್ಕೆ ಪ್ರಕ್ಷೇಪಿತ ಸಂಖ್ಯೆ 3821 ಮತ್ತು 3001 ಆಗಿತ್ತು. ನಂಜುಂಡರಾವ್ ಅವರ ವರದಿಯು ಕಾಡು ಕುರುಬರ ಜೊತೆಗೆ ಹೆ.ದೇ. ಕೋಟೆ ತಾಲ್ಲೂಕಿನಲ್ಲಿ ಕಂಡು ಬರುವ ಇನ್ನೂ 3-4 ಬುಡಕಟ್ಟುಗಳನ್ನು ಸೇರಿಸುತ್ತದೆ. ಹಾಗಾಗಿ ಪ್ರಸ್ತುತ ಅಧ್ಯಯನಕ್ಕೆ ತೆಗೆದುಕೊಂಡಿರುವ ಮಾದರಿಯು ಸಾಕಷ್ಟಿದೆ ಮತ್ತು ಕೆಲವು ವಿಹಿತವಾದ ನಿರ್ಣಯಗಳಿಗೆ ಬರಲು ಅದರಿಂದ ಸಾಧ್ಯವಾಗುತ್ತದೆ.

**ವೃತ್ತಿ ಮತ್ತು ಆರ್ಥಿಕ ಸ್ಥಿತಿ :**

ಸ್ವಾತಂತ್ರ್ಯೋತ್ತರ ಭಾರತದಲ್ಲಿ ಎಸ್.ಟಿ.ಗಳ ಆರ್ಥಿಕ ಅಭಿವೃದ್ಧಿಗಾಗಿ ಅನೇಕ ಸಾಂವಿಧಾನಿಕ ಕ್ರಮಗಳನ್ನು ಕೈಗೊಳ್ಳಲಾಗಿದೆ. ಆದರೆ ಇಲ್ಲಿ ಮುಖ್ಯವಾದ ದೋಷವೆಂದರೆ, ಯೋಜನೆಯನ್ನು ಅತಿ ನಿಧಾನವಾಗಿ ಕಾರ್ಯಗತಗೊಳಿಸುವುದು. ಅಧಿಕಾರಿಗಳ ಆಲಸ್ಯ, ಜೊತೆಗೆ ಬುಡಕಟ್ಟು ಜನರ ಅಜ್ಞಾನ ಮತ್ತು ಸ್ವಂತದ ಆಸ್ತಿಯೆಂಬ ಕಲ್ಪನೆಯೇ ಇಲ್ಲದುದು ಇವು ಕಾರಣವಾಗಿವೆ. ಹೆ.ದೇ.ಕೋಟೆ ತಾಲ್ಲೂಕಿನ ಬುಡಕಟ್ಟುಗಳನ್ನು ಕುರಿತ ತಮ್ಮ ವರದಿಯಲ್ಲಿ ಎಲ್. ನಂಜುಂಡರಾವ್ ಅವರು ಇದನ್ನು ಸ್ಪಷ್ಟವಾಗಿ ನಿರೂಪಿಸಿದ್ದಾರೆ. ಒಂದು ವಿಶೇಷ ಯೋಜನೆಯ ಅಂಗವಾಗಿಯೇ ಅಥವಾ ಬೇರೆ ಯಾವುದಾದರೂ ರೀತಿಯಲ್ಲಿಯೋ ಬುಡಕಟ್ಟು ಜನರಿಗೆ ಸ್ವಲ್ಪ ಜಮೀನನ್ನು ಮಂಜೂರು ಮಾಡಿದ್ದರೆ, ಅದು ಎಲ್ಲಿದೆ ಎಂದು ತಿಳಿದುಕೊಳ್ಳಲು ಕೂಡ ಅವರು ತಲೆಕೆಡಿಸಿಕೊಳ್ಳುವುದಿಲ್ಲ. ಹಾಗೆಯೇ ರೆವಿನ್ಯೂ ಇಲಾಖೆಯ ಅಧಿಕಾರಿಗಳಾಗಲಿ, ಇನ್ಸ್‌ಪೆಕ್ಟರುಗಳಾಗಲಿ, ಬ್ಲಾಕ್ ಡೆವಲಪ್‌ಮೆಂಟ್ ಆಫೀಸರರಾಗಲಿ (ಬಿ.ಡಿ.ಓ) ಆಸಕ್ತಿ ವಹಿಸಿ, ಅವರಿಗೆ ಭೂಮಿ ಮಂಜೂರಾಗಿರುವುದನ್ನು ತಿಳಿಸಲು ಅಥವಾ ವಾಸ್ತವವಾಗಿ ಅವರನ್ನು ಕರೆದೊಯ್ದು ತೋರಿಸಲು ಮುಂದಾಗುವುದಿಲ್ಲ. ಬುಡಕಟ್ಟು ಜನರು ಕಚೇರಿಗಳಿಗೆ ಅಲೆದು ಅಧಿಕಾರಿಗಳ ಮನಸ್ಸಿಗೆ ಅಭಿಪ್ರಾಯ ಮೂಡಿಸುವುದಿಲ್ಲ. ಇದೆಲ್ಲದರ ಒಟ್ಟು ಫಲಿತಾಂಶ, ಬುಡಕಟ್ಟು ಜನರಿಗೆ ಮಂಜೂರಾಗಿರುವ ಭೂಮಿಯನ್ನು ಪಕ್ಕದ ರೈತರು ಒತ್ತುವರಿ ಮಾಡಿಕೊಂಡಿರುತ್ತಾರೆ. ಎಷ್ಟೋ ಸಂದರ್ಭಗಳಲ್ಲಿ ಜಮೀನಿಗೆ ಕಾನೂನುಬದ್ಧ ಒಡೆಯನಾಗಿರುವ ಬುಡಕಟ್ಟು ವ್ಯಕ್ತಿಯು ಅದೇ ಜಮೀನಿನಲ್ಲಿ ಕೂಲಿಗೆ ಕೆಲಸ ಮಾಡುತ್ತಿರುತ್ತಾನೆ.

ಕೆಲವು ಬುಡಕಟ್ಟು ಜನರು ಅಲ್ಪಾವಧಿಗೆ ಹಣ ಸಾಲ ಕೊಡುವವರಿಗೆ ಬಲಿಯಾಗುತ್ತಾರೆ. ಕಾಲ ಕ್ರಮದಲ್ಲಿ ಅವರ ಹೊಲವನ್ನು ಹಣ ಸಾಲ ಕೊಟ್ಟವನು ವಶಪಡಿಸಿಕೊಂಡುಬಿಡುತ್ತಾನೆ. ಬುಡಕಟ್ಟಿಲ್ಲದವರು ಅವರಿಂದ ಹೊಲವನ್ನು ಕೊಳ್ಳಕೂಡದು ಎಂದು ಸರಕಾರವು ಮಾಡಿರುವ ಕಾನೂನು ಪರಿಣಾಮ ಶೂನ್ಯವಾಗಿ ಉಳಿದು ಹೋಗುತ್ತದೆ.

ನಿಜವಾದ ವಸ್ತುಸ್ಥಿತಿಯನ್ನು, ಪ್ರಚಲಿತ ಪರಿಸ್ಥಿತಿಯನ್ನು ಕೇವಲ ಕಾನೂನಿನಿಂದ ಸರಿಪಡಿಸುವುದು ಸಾಧ್ಯವೇ ಇಲ್ಲ. ಇಲ್ಲಿ ಬುಡಕಟ್ಟು ಜನರ ಒಡೆತನದಲ್ಲಿರುವ ಬಹುಮಟ್ಟಿನ ಹೊಲವು ಸರಕಾರವು ಅವರಿಗೆ ಮಂಜೂರು ಮಾಡಿರುವ ನೆಲ. ಇಲ್ಲಿ ಕಾರ್ಯೋನ್ಮುಖವಾಗಿರುವ ಎನ್.ಜಿ.ಓ ಸಂಘಗಳು ಪ್ರಯತ್ನ ಮಾಡಿ ಅವರಿಗೆ ದೊರಕಿಸಿ ಕೊಟ್ಟಿರುವಂಥದು.

ಬುಡಕಟ್ಟು ಜನರ ವೃತ್ತಿ ವೈವಿಧ್ಯವನ್ನು ಪರಿಶೀಲಿಸಿದರೆ, ಅದು ಬಡಸ್ಥಿತಿ ಎಂದೇ ಹೇಳಬೇಕಾಗುತ್ತದೆ. ಸಾಂಪ್ರದಾಯಿಕವಾಗಿ ಬೆಟ್ಟ ಕುರುಬರು ಬುಟ್ಟಿ ಹೆಣೆಯುತ್ತಾರೆ. ಆದರೆ ಕಾಡುಗಳಿಂದ ಬಿದಿರು ತರುವುದು ಕಷ್ಟ. ಅವರಿಗೆ ಧಾರಾಳವಾಗಿ ಸಿಕ್ಕುವುದಿಲ್ಲ. ಸರಕಾರೀ ಏಜೆನ್ಸಿಗಳು ಒದಗಿಸುವುದನ್ನೇ ಅವರು ಅವಲಂಬಿಸಬೇಕು. ಹೆ.ದೇ. ಕೋಟೆ ಪ್ರದೇಶದಲ್ಲಿ, ಹೆಚ್ಚಾಗಿ ಬ್ರಹ್ಮಗಿರಿ ಮತ್ತು ಸುತ್ತುಮುತ್ತಣ ಹಳ್ಳಿಗಳಲ್ಲಿ ಸುಮಾರು 60 ಕುಟುಂಬಗಳು ಬುಟ್ಟಿ ಹೆಣಿಕೆಯಲ್ಲಿ ತೊಡಗಿವೆ. ಹುಣಸೂರು ತಾಲ್ಲೂಕಿನಲ್ಲಿ ಎರಡು ಕುಟುಂಬಗಳು ಮಾತ್ರ ಈ ಕೆಲಸ ಮಾಡುತ್ತವೆ. ಬಿದಿರು ಉತ್ಪಾದನೆಗಳನ್ನು ಮಾರಾಟ ಮಾಡುವುದೂ ಬುಡಕಟ್ಟು ಜನರಿಗೆ ಒಂದು ಸಮಸ್ಯೆಯೇ. ವಾರಕ್ಕೊಮ್ಮೆ ಸಂತೆ ನಡೆಯುವ ಸಮೀಪದ ಹಳ್ಳಿಗಳಿಗೆ ತಲೆ ಹೊರೆಯಲ್ಲಿ ಅವುಗಳನ್ನು ಕೊಂಡೊಯ್ಯುತ್ತಾರೆ. ವಸ್ತುಗಳು ತುಂಬಾ ನಾಜೂಕಾಗಿರುವುದಿಲ್ಲ. ಸ್ವಲ್ಪ ಒರಟಾಗಿರುತ್ತವೆ. ಹಾಗಾಗಿ ಅವಕ್ಕೆ ಬೆಲೆ ಸಿಕ್ಕುವುದು ಸಹಜವಾಗಿಯೇ ಕಡಿಮೆ. ಬುಟ್ಟಿಗಳು, ಮೊರಗಳು ಮೊದಲಾದ ಬಿದಿರು ವಸ್ತುಗಳು ತುಂಬ ನಯವಾಗಿ ಮಾಡಿರುವಂಥವು ಈಗ ನಗರ - ಪಟ್ಟಣಗಳಲ್ಲಿ ಸುಲಭವಾಗಿ ದೊರೆಯುತ್ತವೆ. ಬುಡಕಟ್ಟು ಉತ್ಪಾದನೆಗಳು ಅವುಗಳೊಂದಿಗೆ ಸ್ಪರ್ಧಿಸಿ ನಿಲ್ಲಲಾರವು.

ಹೆಚ್ಚು ಸಂಖ್ಯೆಯ ಕುಟುಂಬಗಳು ಕೃಷಿಯಲ್ಲಿ ತೊಡಗಿವೆ, ಬಹುಮಟ್ಟಿಗೆ ಕೂಲಿಯಾಳುಗಳಾಗಿ, ಹೆ. ದೇ. ಕೋಟೆ ತಾಲ್ಲೂಕಿನ 300 ಕುಟುಂಬಗಳಲ್ಲಿ ಸುಮಾರು 255, ಹುಣಸೂರು ಪ್ರದೇಶದ 301 ಕುಟುಂಬಗಳಲ್ಲಿ 299 ತಾವು ಕೃಷಿ ಕೂಲಿಯಾಳುಗಳೆಂದು ಹೇಳಿದ್ದಾರೆ. ಜೊತೆಗೆ, ಈ ಕುಟುಂಬಗಳಲ್ಲಿ ಕೆಲವು ತಮ್ಮದೇ ಜಮೀನಲ್ಲಿ ಬೇಸಾಯ ಮಾಡುತ್ತಿರಬಹುದು. ಆದರೆ ಅದು ಗಮನಾರ್ಹವಾದುದಾಗಿಲ್ಲ. ಅವರ ಹಸಿವೆಯನ್ನು ಇಂಗಿಸುವಷ್ಟು ಪ್ರಮಾಣದ ಉತ್ಪಾದನೆಯೂ ಅದರಿಂದ ಬರುವುದಿಲ್ಲ.

ಹೆ. ದೇ ಕೋಟೆ ಮತ್ತು ಹುಣಸೂರು ತಾಲ್ಲೂಕುಗಳ ಕಾಡು ಕುರುಬ ಬುಡಕಟ್ಟು ಜನರು ಬೇಸಾಯಕ್ಕೆ ಯೋಗ್ಯವಾಗಿರುವ ಹೊಲಗಳನ್ನು ಗದ್ದೆಗಳನ್ನು ಹೊಂದಿದ್ದಾರೆ. ಒಟ್ಟು 38 ಕುಟುಂಬಗಳಿಗೆ, ಹೆ. ದೇ. ಕೋಟೆ ಪ್ರದೇಶದಲ್ಲಿ 434 ಎಕರೆ ಹೊಲದ ಒಡೆತನವಿದೆ. ಅದು ಕುಟುಂಬಕ್ಕೆ 1 ರಿಂದ 5 ಎಕರೆಗಳವರೆಗೆ ಬೇರೆ ಬೇರೆಯಾಗಿದೆ. ಬಹು ಮಟ್ಟಿನ ಕುಟುಂಬಗಳು ಎರಡು ಎಕರೆ, 3 ಎಕರೆಗಳನ್ನು ಪಡೆದಿದ್ದಾರೆ. ಅಂದರೆ 98 ಕುಟುಂಬಗಳಿಗೆ ಒಟ್ಟು 349 ಎಕರೆ ಜಮೀನುಗಳಿವೆ. ಹುಣಸೂರಿನಲ್ಲಿ 184 ಕುಟುಂಬಗಳಿಗೆ ಒಟ್ಟು 523 ಎಕರೆ ಹೊಲದ ಒಡೆತನವಿದೆ. 159 ಕುಟುಂಬಗಳು ತಲಾ 2, 3, 4 ಎಕರೆಗಳಂತೆ ಒಟ್ಟು

462 ಎಕರೆಗಳನ್ನು ಹೊಂದಿವೆ. ಸಾಮಾನ್ಯವಾಗಿ ರಾಗಿ, ಜೋಳ, ಹುರುಳಿ ಮತ್ತು ಕೆಲವು ಬೇಳೆ ಕಾಳುಗಳನ್ನು ಹತ್ತಿ ಮತ್ತು ಹೊಗೆ ಸೊಪ್ಪುಗಳನ್ನು ಬೆಳೆಯಲಾಗುತ್ತದೆ. ವನ್ಯಮೃಗಗಳ ಧಾಳಿಯ ಭೀತಿಯಿರುವುದರಿಂದ ಕೊಯಿಲು ಮುಗಿದು ಫಸಲು ಮನೆಗೆ ಬರುವವರೆಗೂ ಬೆಳೆಯ ಭರವಸೆಯಿರುವುದಿಲ್ಲ. ಕೃಷಿಗೆ ವೆಚ್ಚ ಮಾಡುವುದು ಸಾಲದು, ಉಳಲು ಎತ್ತುಗಳು, ಸುಧಾರಿತ ಬಿತ್ತನೆಯಾಗಲಿ, ಕೃತಕ ಗೊಬ್ಬರವಾಗಲಿ, ಇತರ ಸಂಪನ್ಮೂಲಗಳಾಗಲಿ ಸಾಕಷ್ಟು ದೊರಕುವುದಿಲ್ಲ, ಇರುವುದು ಅತ್ಯಲ್ಪ. ಹಾಗಾಗಿ ಜಮೀನಿನ ಒಡೆತನವಿರುವ ಬೇಸಾಯ ಮಾಡುವ ಕುಟುಂಬಗಳೂ, ವರಮಾನವನ್ನು ಕೂಡಿಸಿಕೊಳ್ಳಲು ಬೇರೆ ಜಮೀನುಗಳಲ್ಲಿ ಕೂಲಿಯಾಳುಗಳಾಗಿ ಕೆಲಸ ಮಾಡಬೇಕಾಗಿದೆ; ಹಾಗೆಯೇ ಬುಟ್ಟಿ ತಯಾರಿಕೆ, ಜೇನು ಸಂಗ್ರಹ, ಕಟ್ಟಿಗೆ, ಬೇರುಗಳು, ಗೆಡ್ಡೆ ಗೆಣಸುಗಳು ಮತ್ತು ಸೊಪ್ಪುಗಳೇ ಮೊದಲಾದ ಸಣ್ಣಪುಟ್ಟ ಅರಣ್ಯ ವಸ್ತುಗಳನ್ನು ಹೆಕ್ಕಿ ತರುವುದು ಇಂತಹ ಸಾಂಪ್ರದಾಯಿಕ ವೃತ್ತಿಗಳನ್ನು ಮುಂದುವರಿಸಬೇಕಾಗಿದೆ.

ಹೊಲದ ಜೊತೆಗೆ ಕಾಡು ಕುರುಬರು ಸ್ವಲ್ಪ ಗದ್ದೆಗಳನ್ನು ಹೊಂದಿದ್ದಾರೆ. ಹೆ. ದೇ. ಕೋಟೆ ಪ್ರದೇಶದ 149 ಕುಟುಂಬಗಳು 169 ಎಕರೆಗಳನ್ನು ಪಡೆದಿವೆ. 139 ಕುಟುಂಬಗಳಿಗೆ ತಲಾ ಒಂದು ಎಕರೆ ಗದ್ದೆಯಿದೆ; ಹತ್ತು ಕುಟುಂಬಗಳಿಗೆ ತಲಾ ಮೂರು ಎಕರೆಗಳಿವೆ. ಹುಣಸೂರು ತಾಲೂಕಿನಲ್ಲಿ 26 ಕುಟುಂಬಗಳು ಒಟ್ಟು 52 ಎಕರೆ ಗದ್ದೆಗಳನ್ನು ಪಡೆದಿದ್ದಾರೆ. 8 ಕುಟುಂಬಗಳು ತಲಾ ಒಂದು ಎಕರೆ, 13 ಕುಟುಂಬಗಳು ತಲಾ 2 ಎಕರೆ, ಎರಡು ಕುಟುಂಬಗಳಿಗೆ ತಲಾ 3 ಎಕರೆ, ಮೂರು ಕುಟುಂಬಗಳು ತಲಾ 4 ಎಕರೆಗಳನ್ನು ಪಡೆದಿವೆ. ಈ ಜಮೀನುಗಳಲ್ಲಿ ಮುಖ್ಯವಾಗಿ ಬತ್ತವನ್ನು ಬೆಳೆಯಲಾಗುತ್ತದೆ. ಹೊಲ ಬೇಸಾಯದಲ್ಲಿ ಎದುರಾಗುವ ಸಮಸ್ಯೆಗಳೇ ಗದ್ದೆ ಬೇಸಾಯದಲ್ಲೂ ಮತ್ತೆ ಕಾಣಿಸಿಕೊಳ್ಳುವಂತೆ ತೋರುತ್ತದೆ. ಹುಣಸೂರು ಪ್ರದೇಶದ ಸುಮಾರು 4 ಕುಟುಂಬಗಳು 7 ಎಕರೆ ಸರಕಾರಿ ಬಂಜರು ಭೂಮಿಯನ್ನು ಪಡೆದಿದ್ದು ಅವನ್ನು ದನ ಮೇಯಿಸುವ ಹುಲ್ಲು ಮೇವಿಗಾಗಿ ಹಾಗೂ ಇತರ ಉದ್ದೇಶಗಳಿಗಾಗಿ ಉಪಯೋಗಿಸಲಾಗುತ್ತದೆ.

ಕಾಡು ಕುರುಬರ ಆರ್ಥಿಕ ಚಟುವಟಿಕೆಗಳ ಬಗೆಗೆ ಬಿಡಿಯಾಗಿ ನೋಡಬಹುದಾದ ಒಂದು ಅಂಶ, ಸಾಂವಿಧಾನಿಕ ಸುರಕ್ಷಣಾ ಕ್ರಮಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಅವರಿಗೆ ನೀಡಬೇಕೆಂದು ಕೆಲವು ಸರಕಾರೀ ಅಧಿಕಾರಿಗಳು ಉದ್ದೇಶಿಸಿದ್ದರೂ, ಎನ್ ಜಿ ಓ ಗಳು ಆ ಸೌಲಭ್ಯಗಳನ್ನು ಕಾಡು ಕುರುಬರಿಗೆ ದೊರಕಿಸಿಕೊಡಲು ಶಕ್ತಿಮೀರಿ ಪ್ರಯತ್ನಿಸಿದ್ದರೂ ಪ್ರಗತಿಯಾಗಿಲ್ಲದುದು ಕಂಡು ಬಂದಿದೆ. ಅವರು ಇನ್ನೂ ಆಹಾರವನ್ನು ಉತ್ಪಾದಿಸುವ ಬದಲು ಅಷ್ಟೇಮಟ್ಟಿಗೆ ಆಹಾರವನ್ನು ಸಂಗ್ರಹಿಸುವುದರಲ್ಲಿಯೂ ತೊಡಗಿದ್ದಾರೆ. ಪರಿಸ್ಥಿತಿಯು ಹೀಗಿರುವಾಗ ಕುರುಬರು ಒಡೆತನದಲ್ಲಾಗಲಿ, ಬೇಸಾಯ, ಆಹಾರೋತ್ಪಾದನೆಗಳಲ್ಲಿಯಾಗಲಿ ಬಹಳ ಮುಂದಿದ್ದಾರೆ. ಆರ್ಥಿಕ ವೈವಿಧ್ಯ ಬೇಕಾದಷ್ಟಿದೆ, ಸಾಂಪ್ರದಾಯಿಕವಾದ ಕುರಿ ಸಾಕಾಣಿಕೆ ವೃತ್ತಿಯು ಅಲಕ್ಷ್ಯದ ಅಂಚಿಗೆ ಬಂದಿದೆ, ಮುಂದಿನ ಶತಮಾನದ ಪ್ರಾರಂಭದ ವೇಳೆಗೆ ಕಣ್ಮರೆಯೇ ಆಗಿಬಿಡಬಹುದು.

ಇನ್ನು ಶೈಕ್ಷಣಿಕ ಸೌಲಭ್ಯಗಳನ್ನು ಕುರಿತು ವಿಚಾರ ಮಾಡುವುದಾದರೆ, ಎಲ್ಲವೂ ಸರಕಾರೀ ಸಂಸ್ಥೆಗಳು, ಕಾಡು ಕುರುಬರು ಯಾವುದೇ ಹಂತದಲ್ಲಿ ತಮ್ಮದೇ ಆದ ಸಂಸ್ಥೆಯನ್ನು ಹೊಂದಿರುವ ಒಂದೇ ಒಂದು ನಿದರ್ಶನವೂ ಇಲ್ಲ. ಇದಕ್ಕೆ ವ್ಯತಿರಿಕ್ತವಾಗಿ ಕುರುಬರು ಅಧ್ಯಯನದ ವ್ಯಾಪ್ತಿಗೆ ಬಂದಿರುವ ನಾಲ್ಕು ಜಿಲ್ಲೆಗಳಲ್ಲಿ ಅನೇಕ ಶಿಕ್ಷಣ ಸಂಸ್ಥೆಗಳನ್ನು ನಿರ್ಮಿಸಿದ್ದಾರೆ. ಹೆ. ದೇ. ಕೋಟೆ ಮತ್ತು ಹುಣಸೂರು ತಾಲೂಕುಗಳೆರಡರಲ್ಲೂ ನರ್ಸರಿ ಶಾಲೆಗಳು ಮತ್ತು ಆಶ್ರಮ ಶಾಲೆಗಳು ಬಹು ಮಟ್ಟಿಗೆ ಎನ್.ಜಿ.ಒಗಳ ಬೆಂಬಲದಿಂದ ನಡೆಯುತ್ತಿವೆ. ಹೆ. ದೇ. ಕೋಟೆಯ 226 ಕುಟುಂಬಗಳು ಹಾಗೂ ಹುಣಸೂರು ತಾಲೂಕಿನ 211 ಕುಟುಂಬಗಳು ಒಂದು ಕಿಲೋಮೀಟರ್ (ಕಿ. ಮೀ) ಪರಿಧಿಯಲ್ಲಿ ನರ್ಸರಿ ಶಾಲೆಯನ್ನು ಪಡೆದಿವೆ. 43 ಕುಟುಂಬಗಳಿಗೆ ಸೇರಿದ ಮಕ್ಕಳು 2 ರಿಂದ 5 ಕಿ. ಮೀ. ವರೆಗೆ ನಡೆದು ನರ್ಸರಿ ಶಾಲೆಗಳಿಗೆ ಹೋಗಬೇಕು. ಹೆ. ದೇ ಕೋಟೆ ಪ್ರದೇಶದಲ್ಲಿ 31 ಕುಟುಂಬಗಳಿವೆ ಆ ಸೌಲಭ್ಯ ಇಲ್ಲವೇ ಇಲ್ಲ. ಹುಣಸೂರಿನಲ್ಲಿ, ಒಂದು ಕಿ. ಮೀ ದೂರದಲ್ಲಿ ನರ್ಸರಿ ಶಾಲೆಗೆ ಹೋಗುವ ಮಕ್ಕಳಿರುವ 211 ಕುಟುಂಬಗಳಿವೆ; 58 ಕುಟುಂಬಗಳು ನರ್ಸರಿ ಶಾಲೆಯನ್ನು ಸೇರಲು 2 ರಿಂದ 5 ಕಿ. ಮೀ. ವರೆಗೆ ನಡೆಯಬೇಕು. 32 ಕುಟುಂಬಗಳಿಗೆ ಈ ಸೌಲಭ್ಯ ಇಲ್ಲವೇ ಇಲ್ಲ.

ಅದೇ ರೀತಿ, ಹೆ. ದೇ ಕೋಟೆ ಪ್ರದೇಶದಲ್ಲಿ 95 ಕುಟುಂಬಗಳಿಗೆ ಸೇರಿದ ಮಕ್ಕಳು ಒಂದು ಕಿಲೋಮೀಟರ್ ಅಂತರದೊಳಗೆ ಆಶ್ರಮ ಶಾಲೆಯನ್ನು ಪಡೆದಿದ್ದಾರೆ; 83 ಕುಟುಂಬಗಳಿಗೆ ಸೇರಿದ ಮಕ್ಕಳಿಗೆ ಆಶ್ರಮ ಶಾಲೆಗಳ ಸೌಲಭ್ಯವೇ ಇಲ್ಲ. ಮಿಕ್ಕ 122 ಕುಟುಂಬಗಳ ಮಕ್ಕಳು 2-5 ಕಿ. ಮೀ. ದೂರದ ಆಶ್ರಮ ಶಾಲೆಗಳಿಗೆ ಹೋಗುತ್ತಾರೆ. ಹುಣಸೂರು ತಾಲೂಕಿನಲ್ಲಿ ಸರಕಾರಿಯೇತರ ಸಂಸ್ಥೆ (N.G.O) 'ಡೀಡ್', ಬುಡಕಟ್ಟು ಜನರ ವಿದ್ಯಾಭ್ಯಾಸದ ಮೇಲೆ ಗಮನವನ್ನು ಕೇಂದ್ರೀಕರಿಸುತ್ತಿದೆ. ಹಾಗಾಗಿ ಗರಿಷ್ಟ ಸಂಖ್ಯೆಯ ಮಕ್ಕಳು ಆಶ್ರಮ ಶಾಲೆಗಳಿಗೆ ಸೇರಿದ್ದಾರೆ. 139 ಕುಟುಂಬಗಳ ಮಕ್ಕಳು ತಮ್ಮ ಹಾಡಿಗಳಿಂದ ಒಂದೇ ಕಿ. ಮೀ. ಒಳಗೆ ಲಭ್ಯವಿರುವ ಆಶ್ರಮ ಶಾಲೆಗಳಿಗೆ ಹೋಗುತ್ತಾರೆ. ಮಿಕ್ಕವರು 2 ರಿಂದ 5 ಕಿ. ಮೀ. ವರೆಗಿನ ಶಾಲೆಗಳಿಗೆ ಹೋಗುತ್ತಾರೆ.

ಹೆ. ದೇ ಕೋಟೆ ಪ್ರದೇಶದಲ್ಲಿ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣಕ್ಕಾಗಿ 208 ಮತ್ತು 48 ಕುಟುಂಬಗಳು ಶಾಲೆಯಿಂದ ಒಂದು ಕಿ. ಮೀ. ದೂರದ ಒಳಗೆ ಇವೆ, ಮಕ್ಕಳು ನಡೆದು ಹೋಗಬಹುದು. 44 ಕುಟುಂಬಗಳೂ 236 ಕುಟುಂಬಗಳೂ 2-5 ಕಿ. ಮೀ ಹಾಗೂ 5 ಕಿ.ಮೀ ಗಿಂತ ಹೆಚ್ಚು ದೂರದಲ್ಲಿವೆ. 63 ಕುಟುಂಬಗಳಿಗೆ ಸೇರಿದ ಮಕ್ಕಳಿಗೆ ಮೇಲ್ಕಂಡ ರೀತಿಯ ಶಾಲಾ ಸೌಲಭ್ಯ ಸಿಕ್ಕುತ್ತಿಲ್ಲ. ಇನ್ನೂ ಮೇಲೆ ಹೈಸ್ಕೂಲು ಮತ್ತು ಕಾಲೇಜು ಹಂತಗಳಿಗೆ ಹೋದಂತೆ ಸಂಖ್ಯೆಯು ತೀವ್ರವಾಗಿ ಇಳಿಯುತ್ತದೆ. ಹೈಸ್ಕೂಲಿಗೆ ಮತ್ತು ಕಾಲೇಜಿಗೆ ಹೋಗುವ ವಿದ್ಯಾರ್ಥಿ ತಲಾ ಒಬ್ಬೊಬ್ಬನು ಒಂದು ಕಿ. ಮೀ. ದೂರದ ಒಳಗೆ ಇದ್ದಾರೆ. ಆದರೆ 16 ಜನ ಪ್ರೌಢಶಾಲೆಯ ಹಾಗೂ 27 ಜನ ಕಾಲೇಜಿನ ವಿದ್ಯಾರ್ಥಿಗಳಿಗೆ

ಈ ಸೌಲಭ್ಯ ಇಲ್ಲ. ಮಿಕ್ಕ ಮಕ್ಕಳು 2-5 ಕಿ. ಮೀ. ಅಂತರದಲ್ಲಿರುವ ಹಾಡಿಗಳಲ್ಲಿದ್ದಾರೆ, ಹೈಸ್ಕೂಲು ಮತ್ತು ಕಾಲೇಜುಗಳಿಗಿಂತ ಬೇಕಾದಷ್ಟು ಜನರು 5 ಕಿ. ಮೀ. ಗಿಂತ ಹೆಚ್ಚು ದೂರದಲ್ಲಿದ್ದಾರೆ. ಹುಣಸೂರು ಪ್ರದೇಶದಲ್ಲಿ ಹೈಸ್ಕೂಲಿಗೆ 3, ಕಾಲೇಜಿಗೆ 12 ಜನರು ಒಂದು ಕಿ. ಮೀ. ಒಳಗೆ ಇದ್ದಾರೆ. 12 ಜನ ಶಾಲೆಯ ಮಕ್ಕಳು ಮತ್ತು 8 ಕಾಲೇಜು ಮಕ್ಕಳು 2-5 ಕಿ. ಮೀ. ದೂರದಲ್ಲಿದ್ದಾರೆ. ಮಿಕ್ಕವರು ಶಾಲಾ - ಕಾಲೇಜುಗಳಿಂದ 5 ಕಿ. ಮೀ. ದೂರದಲ್ಲಿದ್ದು ನಡೆದು ಹೋಗುತ್ತಾರೆ. ಆಶ್ರಮ, ನರ್ಸರಿ, ಪ್ರೈಮರಿ ಮತ್ತು ಮಾಧ್ಯಮಿಕ ಶಾಲೆಗಳಿಗೆ ಸೇರುವಿಕೆ ತೃಪ್ತಿಕರವಾಗಿದೆ. ಅದಕ್ಕೆ ಕಾರಣ ವಸತಿ ಸೌಲಭ್ಯ, ವಿದ್ಯಾರ್ಥಿ ವೇತನ, ಶುಲ್ಕ ವಿನಾಯಿತಿ, ಬಟ್ಟೆ ಬರೆ- ಸಮವಸ್ತ್ರ, ಪುಸ್ತಕ ಹೀಗೆ ಹಲವು ಸೌಲಭ್ಯಗಳನ್ನು ಸಮಾಜ ಕಲ್ಯಾಣ ಇಲಾಖೆಯು ಎಸ್ ಟಿ ವಿದ್ಯಾರ್ಥಿಗಳಿಗೆ ಪೂರೈಸುತ್ತಿರುವುದು. ಹೈಸ್ಕೂಲು ಮತ್ತು ಕಾಲೇಜು ಮಟ್ಟಕ್ಕೆ ಏರಿದಂತೆ ಸಂಖ್ಯೆಯು ಕಡಿಮೆಯಾಗುತ್ತದೆ. ಕೆಲವೇ ಜನ ಮೆಟ್ರಿಕ್ಯುಲೇಷನ್ ತರಗತಿಯಲ್ಲಿದ್ದಾರೆ, ಅರ್ಧ ಡಜನ್ನಿಗಿಂತಲೂ ಕಡಿಮೆ ಸಾಮಾನ್ಯ ಪದವೀಧರರಿದ್ದಾರೆ.

ಎಸ್.ಟಿ ಮೀಸಲು ಸೀಟುಗಳನ್ನು ಅನೇಕ ವರ್ಷಗಳಿಂದ ಪರಿವಾರ ಜಾತಿಯ ವಿದ್ಯಾರ್ಥಿಗಳು ಉಪಯೋಗಿಸಿಕೊಳ್ಳುತ್ತಿದ್ದಾರೆ. ಇದು ಎಲ್ಲಾ ವೃತ್ತಿಪರ ಮತ್ತು ತಾಂತ್ರಿಕ ಅಧ್ಯಯನಗಳಿಗೆ ಅನ್ವಯವಾಗುವ ಮಾತು. 1987-88ನೆಯ ವರ್ಷದಲ್ಲಿ ಮೈಸೂರಿನ ಮೆಡಿಕಲ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳಲ್ಲಿರುವ ಎಸ್. ಸಿ ಮತ್ತು ಎಸ್. ಟಿ. ವಿದ್ಯಾರ್ಥಿಗಳನ್ನು ಕುರಿತ ಅಧ್ಯಯನವೊಂದನ್ನು ಕೈಗೊಳ್ಳಲಾಯಿತು.[1] ಪರಿವಾರ ಜಾತಿಗೆ ಸೇರಿದ ವಿದ್ಯಾರ್ಥಿಗಳು ಯಾವುದೇ ಅಡ್ಡಿ ಆತಂಕವಿಲ್ಲದೆ ವೈದ್ಯಕೀಯ ಮತ್ತುಇಂಜಿನಿಯರಿಂಗ್ ಮೀಸಲು ಸ್ಥಾನಗಳನ್ನು ಕಬಳಿಸಿಕೊಂಡಿದ್ದರು. ಪರಿಸ್ಥಿತಿಯು ಹೀಗೆಯೇ ಇದ್ದರೆ, ಒಂದಿಲ್ಲೊಂದು ದಿನ ಕಾಡು ಕುರುಬ ಬುಡಕಟ್ಟಿಗೆ ಸೇರಿದ ಒಬ್ಬನೇ ಒಬ್ಬ ಅರ್ಹತೆ ಪಡೆದ ವೈದ್ಯನಾಗಲಿ ಇಂಜಿನಿಯರ್ ಆಗಲಿ ಇರುತ್ತಾನೆ ಎಂದು ಆಸೆಯಿಂದ ಯೋಚಿಸುವುದೂ ಕಷ್ಟವಾಗುತ್ತದೆ. ಇದಕ್ಕೆ ಸಂಪೂರ್ಣ ವಿರುದ್ಧವಾಗಿ ಕುರುಬರು ಶಿಕ್ಷಣ ಕ್ಷೇತ್ರದಲ್ಲಿ ನಿಜವಾಗಿಯೂ ದಾಪುಗಾಲಿಟ್ಟಿದ್ದಾರೆ. ಬಹು ಸಂಖ್ಯೆಯ ಸಾಮಾನ್ಯ ಪದವೀಧರರು ಮತ್ತು ಅಧಿಕಾರಿಗಳಲ್ಲದೆ, ಅನೇಕ ಅರ್ಹತೆ ಪಡೆದ ವೈದ್ಯರು, ವಕೀಲರು, ಎಂಜಿನಿಯರರು ಕುರುಬ ಜಾತಿಯಲ್ಲಿ ಕಂಡು ಬರುತ್ತಾರೆ.

ಶಿಕ್ಷಣ ಮತ್ತು ಇತರ ಕ್ಷೇತ್ರಗಳಲ್ಲಿ ಕಾಡು ಕುರುಬರ ಅಭಿವೃದ್ಧಿಯನ್ನು ಸಾಧಿಸಲು ಸರಕಾರವು ರಾಜಕೀಯವಾಗಿ ದೃಢ ನಿರ್ಧಾರ ತೋರಿಸಬೇಕು. ಸಮಾನವಾದ ಹೆಸರಿದೆ ಎಂಬ ಕಾರಣದಿಂದ ಎರಡು ಪಂಗಡಗಳನ್ನು ವಿಲೀನಗೊಳಿಸಲು ಕೈಗೊಳ್ಳುವ ಯಾವುದೇ ಕ್ರಮವು ಕಾಡು ಕುರುಬರ ಅಭಿವೃದ್ಧಿಗೆ ಮತ್ತು ಪ್ರಗತಿಗೆ ಮಾರಕವಾಗುತ್ತದೆ. ಈ ಜನರ ಜೀವನ ಸ್ಥಿತಿಗತಿಯ ನಿಜವಾದ ವಸ್ತುನಿಷ್ಠ ಚಿತ್ರವನ್ನು ಅವರ ನಡುವೆಯೇ ಇದ್ದು ಕೆಲಸ ಮಾಡುತ್ತಿರುವ ಸರಕಾರಿಯೇತರ ಸಂಘಗಳಿಂದ (ಎನ್.ಜಿ.ಓ) ಪಡೆಯಬೇಕು. ಈಚಿನ

ವರ್ಷಗಳಲ್ಲಿ ಈ ಜನರ ಅಭಿವೃದ್ಧಿಗಾಗಿ ಶ್ರಮಿಸುತ್ತಿರುವವರು ಎನ್.ಜಿ.ಓ ಗಳೇ ಸರಕಾರದ ನೀತಿಗಳು ಮತ್ತು ಕಾರ್ಯಕ್ರಮಗಳು ಕಾಗದದ ಮೇಲೆ ಉಳಿದಿವೆ. ನಂಜುಂಡರಾವ್ ಅವರು ತೋರಿಸಿಕೊಟ್ಟಿರುವಂತೆ ಈ ಜನರ ಕಲ್ಯಾಣ ಹಾಗೂ ಅಭಿವೃದ್ಧಿಗಳಿಗೆ ಸಂಬಂಧಪಟ್ಟ ಅಧಿಕಾರಿಗಳು ತಾವು ಅಸಮರ್ಥರೆಂದು ಸಾಬೀತು ಪಡಿಸಿದ್ದಾರೆ ಇಲ್ಲವೆ, ಉದಾಸೀನರಾಗಿದ್ದಾರೆ.

ಮುಂದಿನ ಅಧ್ಯಾಯದಲ್ಲಿ ಕುರುಬರು ಮತ್ತು ಕಾಡು ಕುರುಬರಲ್ಲಿ ಸಮಾಜ ರಚನೆಯ ಭಾಗವಾಗಿ ವಿವಾಹ ಮತ್ತು ಕುಟುಂಬ ವ್ಯವಸ್ಥೆ ಹೇಗಿದೆ ಎಂಬುದನ್ನು ತಿಳಿಸಲಾಗುತ್ತದೆ. ಕೆಲವು ಮಹತ್ವದ ವ್ಯತ್ಯಾಸಗಳು ಕಂಡು ಬಂದರೆ, ಅವುಗಳನ್ನು ಜಾತಿ ಮತ್ತು ಬುಡಕಟ್ಟು ನಡುವೆ ಅದನ್ನು ಮುಖ್ಯ ವ್ಯತ್ಯಾಸವೆಂದು ತೋರಿಸಲಾಗುವುದು. ಬುಡಕಟ್ಟುಗಳ ಮೇಲೆ ಹಿಂದೂ ಧರ್ಮದ ಪ್ರಭಾವವು ಹೆಚ್ಚು ಹೆಚ್ಚಾಗಿ ಬೀಳುತ್ತಿದೆ, ಜಾತಿ ಪದ್ಧತಿಯು ಬುಡಕಟ್ಟು ರಚನೆಯಲ್ಲಿ ಆಗಾಗ ನುಗ್ಗಿ ಸಂಪರ್ಕ ಪಡೆಯುತ್ತಿದೆ. ಆದರೂ ಬುಡಕಟ್ಟು ಜನರು ಇನ್ನೂ ತಮ್ಮ ಮೂಲ ರೂಢಿ ಮತ್ತು ಆಚರಣೆಗಳನ್ನು ಹಾಗೆಯೇ ಉಳಿಸಿಕೊಳ್ಳಲು ಸಾಧ್ಯವಾಗಿದೆ. ಅಸಾಮಾನ್ಯತ್ವ ಮತ್ತು ಅಧೀನತ್ವಗಳ ಅನುಕ್ರಮಿಕ ಶ್ರೇಣಿಯು ಇಲ್ಲಿ ಇನ್ನೂ ಕಾಣಿಸಿಕೊಂಡಿಲ್ಲ. ಆಚರಣೆಯ ಶುದ್ಧಿ ಮತ್ತು ಮಾಲಿನ್ಯಗಳ ಪರಿಗಣನೆ ಇದ್ದರೂ ಅದು ಬುಡಕಟ್ಟು ಮಹಿಳೆಯರ ಸ್ಥಾನಮಾನವನ್ನು ಬದಿಗೆ ಸರಿಸಿಲ್ಲ. ಪಿತೃವಾಂಶಿಕ ಕ್ರಮವನ್ನು ಅವರು ಆಚರಿಸುತ್ತಾರಾದರೂ ಈ ಮಹಿಳೆಯರು ಹಿಂದೂ ಧರ್ಮದಲ್ಲಿಯ ತಮ್ಮ ಸೋದರಿಯರಿಗಿಂತ ಹೆಚ್ಚಿನ ಸ್ವಾತಂತ್ರ್ಯವನ್ನು ಪಡೆದಿದ್ದಾರೆ. ಈ ಎಲ್ಲಾ ಅಂಶಗಳನ್ನು ಆರನೆಯ ಅಧ್ಯಾಯದಲ್ಲಿ ಚರ್ಚಿಸಲಾಗುತ್ತದೆ.

---

1. ಶಿವಣ್ಣ ಕೆ. ಟಿ.(1990) - ಮೈಸೂರು ವಿಶ್ವ ವಿದ್ಯಾನಿಲಯಕ್ಕೆ ಒಪ್ಪಿಸಿರುವ ಅಪ್ರಕಟಿತ ಪಿ.ಎಚ್.ಡಿ. ಪ್ರಬಂಧ.

* * *

ಅಧ್ಯಾಯ : ಆರು

# ಕುರುಬರು ಮತ್ತು ಕಾಡು ಕುರುಬರಲ್ಲಿ ವಿವಾಹ ಮತ್ತು ಕುಟುಂಬ

ಜಗತ್ತಿನಾದ್ಯಂತ ತಿಳಿದು ಬಂದಿರುವ ಮಾನವ ಸಮಾಜಗಳಲ್ಲಿ ವಿವಾಹ ಮತ್ತು ಕುಟುಂಬ ಎರಡೂ ಸಾರ್ವತ್ರಿಕವಾದ ಪದ್ಧತಿಗಳಾಗಿವೆ. ಮಾನವನ ಇತಿಹಾಸವನ್ನು ಗುರುತಿಸಿರುವಷ್ಟು ಕಾಲದಿಂದಲೂ, ಬಹುಶಃ ಇತಿಹಾಸ - ಪೂರ್ವಕಾಲದಿಂದಲೂ ಈ ಪದ್ಧತಿಗಳು ನಡೆದು ಬಂದಿವೆ. ಈ ಎರಡು ಸಾಮಾಜಿಕ ಪದ್ಧತಿಗಳು ಕೇವಲ ಜೈವಿಕ ಸ್ತರವನ್ನು ಮೀರಿ, ವಿಶಿಷ್ಟ ಮಾನವೀಯ ಸ್ಪರ್ಶವನ್ನು ಆಕರ್ಷಿಸುವಂತಹ ಉದ್ದೇಶಗಳಿಂದ ಕೂಡಿ ಹೆಚ್ಚು ತಾಳಿಕೆಯುಳ್ಳ ಪದ್ಧತಿಗಳಾಗಿವೆ.

ಈ ಎರಡೂ ಪದ್ಧತಿಗಳಲ್ಲಿ ಬೇಕಾದಷ್ಟು ರೂಪ ವೈವಿಧ್ಯ ಕಂಡು ಬಂದಿದೆ, ಕಾಲದಿಂದ ಕಾಲಕ್ಕೆ ಅವುಗಳಲ್ಲಿ ರೂಪಾಂತರಗಳಾಗಿವೆ, ಮದುವೆಯೆನ್ನುವುದು ಒಂದು ಜೈವಿಕ ಉದ್ದೇಶವನ್ನು ಪೂರೈಸುವುದು ಮಾತ್ರವಲ್ಲದೆ, ಹಲವು ಜನರ ನಡುವೆ ಸ್ಥಿರವಾದ ಸಂಬಂಧಗಳನ್ನು ಅನುಮೋದಿಸುತ್ತದೆ. ಒಬ್ಬ ಗಂಡಸು - ಒಬ್ಬ ಹೆಂಗಸು ಗಂಡ - ಹೆಂಡತಿ ಸಂಬಂಧವನ್ನು ಪಡೆದುಕೊಳ್ಳುವುದರಲ್ಲಿ ಅದು ಕೊನೆಗೊಳ್ಳುವುದಿಲ್ಲ. ಇಲ್ಲಿ ವೈವಿಧ್ಯ ಪೂರ್ಣವಾದ ಪಾತ್ರಗಳು, ಕರ್ತವ್ಯಗಳು, ಹೊಣೆಗಾರಿಕೆಗಳು ಇವೆ. ಇದು ಸಹಜವಾಗಿಯೇ ಜನರನ್ನು ಒಟ್ಟಾಗಿ ಬಂಧಿಸುವಂತಹ ಚಟುವಟಿಕೆಗಳ ಒಂದು ಜಾಲವನ್ನು ಪ್ರೋತ್ಸಾಹಿಸುತ್ತದೆ. ಮದುವೆಯಿಲ್ಲದೆ ಒಂದು ಕುಟುಂಬವಾಗಲಿ, ಕುಟುಂಬವಿಲ್ಲದೆ ಮದುವೆಯಾಗಲಿ ಇರಲು ಸಾಧ್ಯವಿಲ್ಲ. ಇದು ಈ ಭೂಮಿಯ ಮೇಲೆ ಮಾನವನು ನೆಲೆಗೊಂಡಂದಿನಿಂದಲೂ ಕಂಡು ಬಂದಿರುವ ಸಂಗತಿಯಾಗಿದೆ.

ವಿವಾಹ ಮತ್ತು ಕುಟುಂಬಗಳ ವಿಷಯವಾಗಿ ವಿಪುಲ ಮಾಹಿತಿಯನ್ನು ಸಂಗ್ರಹಿಸಿದ ಕೀರ್ತಿ ಸಹಜವಾಗಿಯೇ ಮಾನವಶಾಸ್ತ್ರಜ್ಞರಿಗೆ ಸಲ್ಲುತ್ತದೆ. ಮೊದಲು ಕುತೂಹಲಿ ಪ್ರವಾಸಿಗರಂತೆ, ಸಾಹಸಿಗಳಂತೆ, ಕೆಲವರು ಇತರ ಸಮಾಜಗಳನ್ನು ಕುರಿತು ಅಲ್ಪ ಸ್ವಲ್ಪ ಮಾಹಿತಿಯನ್ನು ಪಡೆದಿದ್ದವರೂ ವಿಷಯ ಸಂಗ್ರಹ ಮಾಡಿದರು. ಅನೇಕ ವೇಳೆ ಒಂದು

ಸಮಾಜದ ಬೇರೆ ಬೇರೆ ಜನರ ಜೀವನ ಶೈಲಿಗಳು ಮತ್ತು ಸಾಮಾಜಿಕ ಸಂಬಂಧಗಳ ಬಗೆಗೆ ವಿವರವಾದ ಮಾಹಿತಿಯನ್ನು ಸಂಗ್ರಹಿಸಿದರು. ಇಂಗ್ಲೆಂಡ್, ಅಮೇರಿಕಾ ಮತ್ತು ಯೂರೋಪುಗಳಲ್ಲಿನ ವಿಶ್ವವಿದ್ಯಾನಿಲಯಗಳಲ್ಲಿ ಮಾನವ ಶಾಸ್ತ್ರವು ಒಂದು ಅಧ್ಯಯನ ವಿಷಯವಾಗಿ ಬೆಳೆದಂತೆ, ಅದರಲ್ಲಿ ಪರಿಣತಿ ಪಡೆದ ವಿದ್ವಾಂಸರು ತಮ್ಮದನ್ನು ಬಿಟ್ಟು ಬೇರೆ ದೇಶಗಳಿಗೆ ಹೋದರು. ಅಲ್ಲಿನ ಜನರು ಮತ್ತು ಪದ್ಧತಿಗಳ ಮೇಲೆ ಬೆಳಕು ಚೆಲ್ಲಲು ಪ್ರಯತ್ನಿಸಿದರು. ಆಕ್ಸ್‌ಫರ್ಡ್, ಕೇಂಬ್ರಿಡ್ಜ್, ಲಂಡನ್, ಈ ಬ್ರಿಟಿಷ್ ವಿಶ್ವ ವಿದ್ಯಾಲಯಗಳಲ್ಲಿ ತರಬೇತಿ ಪಡೆದ ಮಾನವ ಶಾಸ್ತ್ರಜ್ಞರು ವಸಾಹತುಗಳಲ್ಲಿನ ಜನರನ್ನು ಕುರಿತ ಅಧ್ಯಯನಕ್ಕೆ ಕೈ ಹಾಕಿದರು. ಅದು ವಸಾಹತುಗಳ ಆಡಳಿತ ನಡೆಸಲು ಆಳುವ ವರ್ಗಕ್ಕೆ ನೆರವಾಗುತ್ತದೆಂಬ ಉದ್ದೇಶದಿಂದ. ಭಾರತ, ಸಿಲೋನ್ (ಶ್ರೀಲಂಕಾ) ತೊರ್ಕೆ ಜಲಸಂಧಿಗಳಿಗೆ ಹಾಗೆ ಸಂಶೋಧನ ಪ್ರವಾಸ ಕೈಗೊಂಡವರು ಸೆಲಿಗ್ಮನ್ ಮತ್ತು ಡಬ್ಲ್ಯು ಎಚ್. ಆರ್ ರಿವರ್ಸ್. ಆಫ್ರಿಕಾ, ಆಸ್ಟ್ರೇಲಿಯ, ಅಸಂಖ್ಯಾತ ಬುಡಕಟ್ಟು ಪಂಗಡಗಳು, ಆದಿವಾಸಿಗಳು, ಪ್ರಾಚೀನರು, ಸಾಕ್ಷರ- ಪೂರ್ವಜನರು - ಇವರೆಲ್ಲರೂ ವಿಭಿನ್ನ ಮಾನವ ಸಮಾಜಗಳ ಅಧ್ಯಯನ ಮಾಡಲು ಅಭೂತಪೂರ್ವವಾದ ಅವಕಾಶವನ್ನು ಒದಗಿಸಿದವು.

1914-18 ರಲ್ಲಿ ಜಾಗತಿಕ ಯುದ್ಧದ ಸಮಯದಲ್ಲಿ ಮ್ಯಾಲಿನೌಸ್ಕಿ ಮಾನವ ಶಾಸ್ತ್ರೀಯ ಅಧ್ಯಯನ ಮಾಡುವ ಕೆಲಸವನ್ನು ಕೈಗೆತ್ತಿಕೊಂಡರು. ಪಾಲಿನೀಸಿಯನ್ (ಮೆಲಾನೀಸಿಯ) ಬುಡಕಟ್ಟನ್ನು ಅಧ್ಯಯನ ಮಾಡಲೆಂದು ಅವರು ಆಸ್ಟ್ರೇಲಿಯಕ್ಕೆ ಬಂದಿಳಿದಾಗ ಅತ್ತ ಮಹಾಯುದ್ಧವು ಪ್ರಾರಂಭವಾಯಿತು, ಇದರಿಂದ ಮ್ಯಾಲಿನೌಸ್ಕಿಯವರು ಇಂಗ್ಲೆಂಡಿಗೆ ಹಿಂದಿರುಗುವುದು ಸಾಧ್ಯವಾಗಲಿಲ್ಲ. ಹೀಗೆ ಬಲಾತ್ಕಾರವಾಗಿ ತಂಗಬೇಕಾಗಿ ಬಂದುದು ಇನ್ನೂ ಹೆಚ್ಚಿನ ವ್ಯವಸ್ಥಿತ ರೀತಿಯಲ್ಲಿ ಅಂಕಿ ಅಂಶಗಳ ಸಂಗ್ರಹ ಮತ್ತು ಕ್ಷೇತ್ರ ಕಾರ್ಯಗಳು ರೂಪುಗೊಳ್ಳಲು ಅವಕಾಶ ಕಲ್ಪಿಸಿದವು. ಯಾರ ಬಗೆಗೆ ಅಧ್ಯಯನ ಮಾಡಬೇಕಾಗಿದೆಯೋ ಆ ಜನರ ನಡುವೆಯೇ ವಾಸ ಮಾಡುವುದು, ಕ್ಷೇತ್ರ ಕಾರ್ಯದ ಅವಧಿಯಲ್ಲಿ ಆ ಸಮಾಜದಲ್ಲಿ ಸಂಭವಿಸುವ ಘಟನೆಗಳನ್ನು, ವಿವಿಧ ಸಂಗತಿಗಳನ್ನು ಸೂಕ್ಷ್ಮವಾಗಿ ಗಮನಿಸುವುದು, ವಿವಿಧ ವಿಷಯಗಳನ್ನು ಕುರಿತು ಜನರನ್ನು ಭೇಟಿ ಮಾಡಿ ಅವರಿಂದ ಅಗತ್ಯ ಮಾಹಿತಿಯನ್ನು ಪಡೆಯುವುದು, ಆಮೇಲೆ ಆ ಮಾಹಿತಿಯನ್ನು ಅಂತಿಮವಾಗಿ ವಿಶ್ಲೇಷಿಸುವುದು - ಈ ಸಂಪ್ರದಾಯವು ಇಂದಿಗೂ ಮುಂದುವರಿದು ಬಂದಿದೆ. ಹೆಚ್ಚು ಸೂಕ್ಷ್ಮತರ ಅಧ್ಯಯನ ಸಲುವಾಗಿ ಹಲವು ಸುಧಾರಣೆಗಳನ್ನು ಮಾಡಲಾಗಿದೆ.

ಮಾನವ ಶಾಸ್ತ್ರಜ್ಞರ ಜೊತೆಜೊತೆಗೇ ಸಮಾಜ ಶಾಸ್ತ್ರಜ್ಞರೂ ಕೂಡ, ಸರಳವೂ ಜಟಿಲವೂ ಆದ ಸಮಾಜದಲ್ಲಿ, ಸಮಾಜ ಹಾಗೂ ಅದರ ಹಲವು ಪದ್ಧತಿಗಳ ಅಧ್ಯಯನಕ್ಕೆ ತೊಡಗಿದರು. ಅಧ್ಯಯನ ವಿಧಾನಗಳಲ್ಲಿ ಮಾನವ ಶಾಸ್ತ್ರಜ್ಞರಿಗೂ ಹಾಗೂ ಸಮಾಜ ಶಾಸ್ತ್ರಜ್ಞರಿಗೂ ನಡುವೆ ಹಲವು ಸಮಾನಾಂಶಗಳಿವೆಯಾದರೂ ಕೆಲವು ಮುಖ್ಯವಾದ ವ್ಯತ್ಯಾಸಗಳೂ ಇವೆ. ಕ್ಷೇತ್ರಕಾರ್ಯ, ಜೊತೆಗೆ ಸಹಭಾಗಿಯನ್ನು ಗಮನವಿಟ್ಟು ವೀಕ್ಷಿಸುವುದು,

ಗುಣಾತ್ಮಕ ಅಂಶಗಳ ಮೇಲೆ ಒತ್ತು ಕೊಡುವುದು ಇಂದಿಗೂ ಮಾನವ ಶಾಸ್ತ್ರದ ಕೇಂದ್ರ ಅಂಶ; ಸರ್ವೆ ಮಾಡುವುದು, ಮಾದರಿ ಸಂಗ್ರಹಣ, ಪರಿಮಾಣಾತ್ಮಕ ಅಧ್ಯಯನ ಸಮಾಜ ಶಾಸ್ತ್ರೀಯ ಸಂಶೋಧನೆಗಳ ಲಕ್ಷಣ.

ಅನೇಕ ಭಾರತೀಯ ವಿದ್ವಾಂಸರು - ಮಾನವ ಶಾಸ್ತ್ರಜ್ಞರು ಮತ್ತು ಸಮಾಜ ಶಾಸ್ತ್ರಜ್ಞರು ಹೀಗೆ ಎರಡು ಬಗೆಯವರು - ,ಜೊತೆಗೆ ಇಂಗ್ಲೆಂಡ್, ಅಮೆರಿಕ ಮತ್ತು ಯೂರೋಪುಗಳ ಹಲವು ವಿದೇಶೀಯ ವಿದ್ವಾಂಸರು ಭಾರತೀಯ ಸಮಾಜ, ಅವರ ಸಾಮಾಜಿಕ ಸ್ತರೀಕರಣ, ಜಾತಿ ಪದ್ಧತಿ, ವಿವಾಹ, ಕುಟುಂಬ, ನಂಟುತನ, ಆರ್ಥಿಕ ವ್ಯವಸ್ಥೆ ಮೊದಲಾದ ವಿಷಯಗಳನ್ನು ಕುರಿತು ಕೆಲಸ ಮಾಡಿದ್ದಾರೆ. ದಿವಂಗತ ಕೆ. ಎಂ. ಕಪಾಡಿಯ, ಇರಾವತಿ ಕರ್ವೆ, ಐ. ಪಿ. ದೇಸಾಯಿ, ಜಿ. ಎಸ್. ಘುರ್ಯೆ, ಎಂ. ಎನ್. ಶ್ರೀನಿವಾಸ್, ಲೀಲಾದುಬೇ, ಎ. ಎಂ. ಶಹಾ, ಟಿ. ಎನ್. ಮದನ್ - ಇವು ಈ ಕ್ಷೇತ್ರದಲ್ಲಿ ತಮ್ಮ ಅಮೋಘ ಕೊಡುಗೆಗಳಿಂದ ಕೀರ್ತಿ ಪಡೆದ ಕೆಲವು ಹೆಸರುಗಳು. ಕ್ಯಾಥಲೀನ್ ಗಾಫ್, ಎಲ್. ಡ್ಯೂಮಾಂಟ್, ಎಫ್. ಜಿ. ಬೈಲಿ, ಎ. ಸಿ. ಮೇಯೆರ್ ಮತ್ತು ಇತರ ಹಲವರು ವಿದೇಶೀಯ ವಿದ್ವಾಂಸರು ನಂಟುತನ, ವಿವಾಹ, ಕುಟುಂಬ, ಜಾತಿ ಮತ್ತು ಇತರ ಸಂಬಂಧಿತ ವಿಷಯಗಳನ್ನು ಕುರಿತು ಕೆಲಸ ಮಾಡಿದ್ದಾರೆ. ವಿಷಯವನ್ನು ಕುರಿತ ಕೊಡುಗೆಗಳು ಸಾಕಷ್ಟು ಹೆಚ್ಚು ಪ್ರಮಾಣದಲ್ಲಿವೆ. ಈ ಅಧ್ಯಯನಗಳು ವಿವಾಹ, ಕುಟುಂಬ ಮತ್ತು ಸಂಬಂಧಗಳೊಂದಿಗೆ ಇತರ ಹಲವು ಸಾಮಾಜಿಕ ಪದ್ಧತಿಗಳೊಂದಿಗೆ ಬೆಸೆದುಕೊಂಡಿರುವುದನ್ನು ಅರ್ಥಮಾಡಿಕೊಳ್ಳಲು ನಮಗೆ ನೆರವಾಗುತ್ತವೆ.

ಮಾನವ ಶಾಸ್ತ್ರಜ್ಞರೂ ಸಮಾಜ ಶಾಸ್ತ್ರಜ್ಞರೂ ವಿವಾಹವನ್ನು ಕುಟುಂಬವನ್ನು ರಚನೆ ಮತ್ತು ಒಳಗೊಂಡಿರುವ ಕೆಲಸಗಳ ದೃಷ್ಟಿಯಿಂದ ವರ್ಗೀಕರಿಸಿದ್ದಾರೆ. ಅದರಂತೆ ಒಬ್ಬ ಪುರುಷ - ಒಬ್ಬ ಮಹಿಳೆ ವಿವಾಹ ಭಾಗೀದಾರರಾಗಿರುವ ಏಕಪತ್ನಿತ್ವ (Monogamy) ಒಂದು ಬಗೆ. ಆದರೆ ಎರಡೂ ಕಡೆ ಬೇಕಾದಷ್ಟು ಜನ ಬಂಧುಗಳು ಇದರಲ್ಲಿ ತೊಡಗಿ ಕೊಂಡಿರುತ್ತಾರೆ.

ಇನ್ನೊಂದು ಬಗೆ ಬಹು ಪತ್ನಿ ವಿವಾಹ (Polygamy). ಇದರಲ್ಲಿ ಒಬ್ಬ ಗಂಡಸು ಹಲವು ಪತ್ನಿಯರನ್ನು ಹೊಂದಿರಬಹುದು. ಇದಕ್ಕೆ ಹಲವು ಕಾರಣಗಳಿರಬಹುದು. ಮೊದಲನೆಯ ಹೆಂಡತಿಗೆ ಮಕ್ಕಳಾಗದಿದ್ದರೆ, ಗಂಡನು ಅವಳ ತಂಗಿಯನ್ನು ಮದುವೆಯಾಗುತ್ತಾನೆ. ಅದು ಸೋದರೀ ಬಹು ಪತ್ನಿತ್ವ (Sorroral Polygyny) ವೆನಿಸುತ್ತದೆ. ಆರ್ಥಿಕ ಕಾರಣಗಳಿಗಾಗಿಯೂ ಬಹು ವಿವಾಹ ಸಂಬಂಧಗಳುಂಟಾಗಬಹುದು. ಬಹು ಪತಿತ್ವ (Polyandry) ವು ಹೆಚ್ಚುಕಡಿಮೆ ಬಹು ಪತ್ನಿತ್ವಕ್ಕೆ ಎದುರಾದದ್ದು. ಒಬ್ಬ ಹೆಣ್ಣು ಹಲವು ಸೋದರರಿಗೆ ಪತ್ನಿಯಾಗಿರುವುದು. ಇದು ಸೋದರ ಬಹುಪತಿತ್ವ (Fraternal Polyandry). ಅಥವಾ ವಿವಾಹವು ಮೊದಲು ಯಾರೊಂದಿಗೂ ಸಂಬಂಧ ಪಡದಿದ್ದವರೊಂದಿಗೆ ಆಗಬಹುದು. ಅಥವಾ ಆರ್ಥಿಕ ಕಾರಣಗಳಿಗಾಗಿ ಆಗಬಹುದು. ಇದು ನೀಲಗಿರಿಯ ತೋಡರಲ್ಲಿ ಮತ್ತು ಭಾರತದ ಇತರ ಕೆಲವು ಬುಡಕಟ್ಟು ಪಂಗಡಗಳಲ್ಲಿ ಪ್ರಚಲಿತವಾಗಿತ್ತು.

ಈಗ ಸರಕಾರವು ಏಕ ಪತ್ನಿತ್ವ ವಿವಾಹವನ್ನು ಅನುಮೋದಿಸಿದೆ, ಒಟ್ಟಾರೆ ಅದೇ ಒಂದು ಸಾರ್ವತ್ರಿಕ ರೂಢಿಯಾಗಿದೆ. ಬಹು ಪತ್ನಿತ್ವ ಅಥವಾ ದ್ವಿ ಪತ್ನಿ ವಿವಾಹಕ್ಕೆ (Bigamy) ಸರಕಾರದ ಕಾನೂನಿವ ಪ್ರಕಾರ ಅನುಮತಿಯಿಲ್ಲ. ಸರಕಾರೀ ನೌಕರಿಗಳಲ್ಲಿರುವವರು ಸರಕಾರದ ಕಾನೂನುಗಳಿಗೆ ಕಟ್ಟುನಿಟ್ಟಾಗಿ ಬದ್ದರಾಗಿರುತ್ತಾರೆ. ಈ ವರ್ಗದಿಂದ ಹೊರಗೆ ಬರುವವರು, ಅಪರೂಪ ಸಂದರ್ಭಗಳಲ್ಲಿ ಸರಕಾರೀ ನೌಕರರು ಕೂಡ, ಬೇರೆ ಯಾವ ತೊಡಕುಗಳು ಉಂಟಾಗದೆ ಹೋದ ಪಕ್ಷದಲ್ಲಿ ಬಹುಪತ್ನಿತ್ವ ಸಂಬಂಧಗಳನ್ನು ರೂಢಿಸಿಕೊಂಡಿರುತ್ತಾರೆ. ಹಳ್ಳಿಗಳಲ್ಲಿ ಕೆಲವು ವೇಳೆ ವಿಶೇಷವಾಗಿ ಆಸ್ತಿಯಿರುವ ಜಮೀನುದಾರ ವರ್ಗದಲ್ಲಿ ಇಂತಹ ಸಂಬಂಧಗಳು ಕಣ್ಣಿಗೆ ಬೀಳುತ್ತವೆ. ಬಹುಪತ್ನಿತ್ವ ವಿವಾಹಗಳು ಈಗ ಬಹು ಮಟ್ಟಿಗೆ ಕಣ್ಮರೆಯಾಗಿವೆ, ಬುಡಕಟ್ಟುಗಳಲ್ಲೂ ಕೂಡ. ಈಗ ಅದೇ ಬಗೆಯ ಪ್ರತ್ಯೇಕತೆ ಬುಡಕಟ್ಟು ಪ್ರದೇಶಗಳಲ್ಲೂ ಉಳಿದಿಲ್ಲ. ಹೊರಗಿನ ಸಂಪರ್ಕ ಹಾಗೂ ಆಧುನೀಕರಣ ಪ್ರಕ್ರಿಯೆ ಅಧಿಕವಾಗುತ್ತಾ ಹೋದಂತೆ, ಬುಡಕಟ್ಟು ಜನರೂ ಏಕ ಪತ್ನಿ ವಿವಾಹವನ್ನು ಅನುಸರಿಸುತ್ತಿದ್ದಾರೆ. ವಿಚ್ಛೇದನ, ಪುನರ್ವಿವಾಹಗಳಿಂದಾಗಿ ವಿಧವೆಯರೂ ವಿಧುರರೂ ಈ ಪದ್ಧತಿಯನ್ನು ಯಾವುದೇ ಕಳಂಕವಿಲ್ಲದೆ ಉಪಯೋಗಿಸಿಕೊಳ್ಳಬಹುದು.

ಕುಟುಂಬ ಪದ್ಧತಿಯಲ್ಲೂ ವೈವಿಧ್ಯವಿದೆ. ಸರಳ ಅಥವಾ ವಿಭಕ್ತ ಕುಟುಂಬ (Nuclear Family), ಗಂಡ - ಹೆಂಡತಿ, ಅವಿವಾಹಿತ ಮಕ್ಕಳು ಇರುವಂಥದು ಸಾಮಾನ್ಯವಾಗಿ ರೂಢಿಯಲ್ಲಿರುವ ಮತ್ತು ಬಹುವ್ಯಾಪಕವಾದ ರೂಪವಾಗಿದೆ. ಆಮೇಲೆ ಅವಿಭಕ್ತ ಕುಟುಂಬ (Joint Family) ವಿದೆ. ಇಲ್ಲಿ ಅನೇಕ ಜನ ವಿವಾಹಿತ ಪುತ್ರರು ತಮ್ಮ ತಂದೆ-ತಾಯಿಗಳೊಂದಿಗೆ ವಾಸಮಾಡುತ್ತಿರುವ; ಅಥವಾ 3-4 ಜನ ವಿವಾಹಿತ ಸೋದರರು ಒಂದೇ ಮನೆಯಲ್ಲಿ ಒಂದೇ ಅಡಿಗೆಯನ್ನು ಹಂಚಿಕೊಂಡು ಊಟಮಾಡುತ್ತಾ ವಾಸಮಾಡುತ್ತಿರುವ ಪದ್ಧತಿ. ಸಮಾಜ ಅಥವಾ ವಿಸ್ತೃತ ಕುಟುಂಬಗಳಲ್ಲಿ ಹಲವು ಬಗೆಯ ಜೋಡಣೆಗಳಿವೆ, ವ್ಯತ್ಯಾಸಗಳಿವೆ. ವಿಧವೆಯಾದ ತಾಯಿ ಅಥವಾ ವಿಧುರನಾದ ತಂದೆ, ತನ್ನ ವಿವಾಹಿತ ಪುತ್ರರೊಂದಿಗೆ ಇರಲು ಇಷ್ಟಪಡಬಹುದು, ಈ ದಿನಗಳಲ್ಲಿ ವಿವಾಹಿತ ಪುತ್ರಿಯೊಂದಿಗೆ ಇರಲು ಕೂಡ ಬಯಸಬಹುದು. ಕೆಲವು ವೇಳೆ ಸಮೀಪದ ಅಥವಾ ದೂರದ ಬಂಧುಗಳೂ ಹಿರಿಯರು ವಿವಾಹಿತ ವ್ಯಕ್ತಿಗಳೊಂದಿಗೆ ವಾಸಮಾಡಬಹುದು.

ಒಟ್ಟಿನಲ್ಲಿ ಹೀಗೆ ಹೇಳಬಹುದು. ನಗರ ಮತ್ತು ಗ್ರಾಮಾಂತರ ಪ್ರದೇಶದ ಬಡಜನರಲ್ಲಿ ವಿಭಕ್ತ ಕುಟುಂಬ ರೂಪವು ಅಧಿಕವಾಗಿ ಕಂಡುಬರುತ್ತದೆ. ಕುಟುಂಬದ ಸದಸ್ಯರು ಜೀವನೋಪಾಯಕ್ಕಾಗಿ ಸಾಮಾನ್ಯವಾಗಿ ದುಡಿಯುತ್ತಾರೆ, ಕುಟುಂಬವನ್ನು ನಡೆಸುತ್ತಾರೆ. ಒಂದು ಕಾಲದಲ್ಲಿ ಅವಿಭಕ್ತ ಕುಟುಂಬವು ಭಾರತದಲ್ಲಿ ತುಂಬಾ ಜನಪ್ರಿಯವಾಗಿತ್ತು. ಜಾತಿಪದ್ಧತಿ, ಅವಿಭಕ್ತ ಕುಟುಂಬ ಮತ್ತು ಭಾರತೀಯ ಗ್ರಾಮ ಇವು ಮೂರು ತ್ರಿವಳಿಯಾಗಿ ಪರಸ್ಪರ ನೆರವಾಗುತ್ತಾ ಪೋಷಿಸುತ್ತಿದ್ದುವು. ಕೃಷಿ ಅರ್ಥ ವ್ಯವಸ್ಥೆಯು ನಿರ್ದಿಷ್ಟವಾಗಿ ದೊಡ್ಡ ದೊಡ್ಡ ಜಮೀನುಗಳ ಒಡೆತನವಿದ್ದಾಗ ಅವಿಭಕ್ತ ಕುಟುಂಬ

ಪದ್ಧತಿಯು ಮುಂದುವರಿಯಲು ಪ್ರೋತ್ಸಾಹ ನೀಡಿತ್ತು. ಅದರಲ್ಲಿ ಅನೇಕ ಅನಾನುಕೂಲಗಳಿದ್ದರೂ ಅನುಕೂಲಗಳೂ ಇದ್ದುವು. ಇಂದು ಅವಿಭಕ್ತ ಕುಟುಂಬವು ಸಂಪೂರ್ಣವಾಗಿ ನಶಿಸಿಹೋಗಿಲ್ಲ. ಆದರೆ ಅದರ ರಚನೆಯಲ್ಲಿ ಬದಲಾವಣೆಯಾಗಿದೆ, ಅದರ ಕೆಲಸಗಳು ಬದಲಾಗಿವೆ. ಈಗ ಅಲ್ಲಿ 4-5 ತಲೆಮಾರುಗಳು ಒಟ್ಟಿಗೆ ಒಂದೇ ಸೂರಿನಡಿ ವಾಸಮಾಡುತ್ತಿಲ್ಲ. ಅವಿಭಕ್ತ ಕುಟುಂಬದ ಅಸ್ತಿತ್ವದ ಲಕ್ಷಣ ಬೆಸುಗೆಯ ಪ್ರಮಾಣಗಳು ಎಂಬುದಾಗಿ ಐ.ಪಿ. ದೇಸಾಯಿ ಎತ್ತಿ ತೋರಿಸಿದ್ದಾರೆ. ಕೆಲವು ಉದ್ಯಮ ಮತ್ತು ಕೈಗಾರಿಕಾ ಕುಟುಂಬಗಳು ಹೀಗೆ ಕೂಡುತನವನ್ನು ಪ್ರದರ್ಶಿಸುತ್ತಿರುವುದು ಸ್ವಾರಸ್ಯವಾಗಿದೆ. ಕುಟುಂಬಗಳು ಬಿಡಿಬಿಡಿಯಾಗಿ ಸರಳ ಕುಟುಂಬಗಳಾಗಿದ್ದರೂ ವ್ಯವಹಾರೋದ್ಯಮದ ಅಥವಾ ಕೈಗಾರಿಕೆಯ ಒಡೆತನ ಅವುಗಳ ಒಟ್ಟು ಹೆಸರಿನಲ್ಲಿ ಇರಬಹುದು. ಸಂಪತ್ತು ಮತ್ತು ಆಸ್ತಿ ಅವಿಭಕ್ತ ಕುಟುಂಬ ಜೀವನದ ವಿಚಾರವನ್ನು ಪ್ರೋತ್ಸಾಹಿಸಿವೆ. ಆದರಿಂದ ಬದುಕಿನ ವೆಚ್ಚ ಕಡಿಮೆಯಾಗುತ್ತದೆ. ಸಂಪಾದನೆಯನ್ನು ಒಟ್ಟು ಆಸ್ತಿಗೆ ಸೇರಿಸಬಹುದು. ಮೂಲ ಕುಟುಂಬದಲ್ಲಾದರೆ ಆಸ್ತಿ ಅಥವಾ ಐಶ್ವರ್ಯ ಅಲ್ಪವಾಗಿದ್ದು ಅಥವಾ ಏನೂ ಇಲ್ಲದೆ, ಬಹುತೇಕ ಕುಟುಂಬ ಪೋಷಣೆಯೇ ಮುಖ್ಯವಾಗುತ್ತದೆ. ಪುತ್ರರು/ಸೋದರರು ಮದುವೆ ಮಾಡಿಕೊಂಡು ಒಟ್ಟಾಗಿ ವಾಸಮಾಡುವುದಕ್ಕೆ ಬದಲಾಗಿ ಬೇರೆ ಬೇರೆ ದಿಕ್ಕುಗಳಲ್ಲಿ ಚದುರಿ ಹೋಗುತ್ತಾರೆ.

ವಿವಾಹ ಮತ್ತು ಕುಟುಂಬಗಳನ್ನು ಕುರಿತ ಈ ಕೆಲವು ಸಾಮಾನ್ಯ ಪರಿಚಯವನ್ನಿಟ್ಟುಕೊಂಡು, ಈಗ ನಿರ್ದಿಷ್ಟವಾಗಿ ಕುರುಬ ಮತ್ತು ಕಾಡು ಕುರುಬರ ವಿಷಯವನ್ನು ಅಡಕವಾಗಿ ಪರಿಶೀಲಿಸೋಣ. ಸ್ಥೂಲವಾಗಿ ಹೇಳುವುದಾದರೆ, ಈ ಎರಡು ಸಾಮಾಜಿಕ ಸಂಸ್ಥೆಗಳು ಜಾತಿ ಹಾಗೂ ಬುಡಕಟ್ಟು ಸಮಾಜಗಳೆರಡರಲ್ಲೂ ತುಂಬಾ ಮಹತ್ವಯುತವಾದ ಪಾತ್ರವನ್ನು ನಿರ್ವಹಿಸುತ್ತವೆ. ಅವುಗಳಲ್ಲಿ ಹಲವಾರು ಹೋಲಿಕೆಗಳಿರುವ ಸಾಧ್ಯತೆಯಿದೆ. ಆದರೆ ಮದುವೆ ಮತ್ತು ಕುಟುಂಬಗಳ ನಡುವೆ ರಾಚನಿಕ ಮತ್ತು ಕ್ರಿಯಾತ್ಮಕ ವ್ಯತ್ಯಾಸಗಳು ಇವೆಯೆ ಎಂದು ಗಮನಿಸಬಹುದು ಅಷ್ಟೇ ಮುಖ್ಯವಾದದ್ದು.

ವಿವಾಹದಲ್ಲಿರುವ ಒಂದು ಮುಖ್ಯವಾದ ಅಂಶ ವಧು/ವರರನ್ನು ಜೋಡಿಸುವ ವಿಧಾನಗಳು. ಮದುವೆಯು ಮುಖ್ಯವಾಗಿ ಜಾತಿಯೊಳಗೆ ನಡೆಯಬೇಕು, ಆದರೆ ಗೋತ್ರದಿಂದ ಆಚೆಗೆ (ಬೆಡಗು, ಬಣ). ಜಾತಿಗೆ ಸಂಬಂಧಿಸಿದಂತೆ ಒಳಬಾಂಧವ್ಯ ವಿವಾಹ (Endogamy) ಮತ್ತು ಬೆಡಗು ಹೊರ ಬಾಂಧವ್ಯ ವಿವಾಹ (exogamy)ಗಳು ನಿಯಮವಾಗಿವೆ. ಒಂದು ಗೋತ್ರ ಅಥವಾ ಬೆಡಗಿಗೆ ಸೇರಿದ ಸದಸ್ಯರು ತಮ್ಮ ಪೂರ್ವಜರನ್ನು ಸಮಾನ ಮೂಲವೊಂದಕ್ಕೆ ಗುರುತಿಸುವುದರಿಂದ ಅವರನ್ನು ಸೋದರರು ಮತ್ತು ಸೋದರಿಯರೆಂದು ಪರಿಗಣಿಸಲಾಗುತ್ತದೆ. ಆದ್ದರಿಂದ ಅವರ ನಡುವೆ ವಿವಾಹ ನಿಷಿದ್ಧ. ಆದರೆ ಜಾತಿಯೆನ್ನುವುದು ಹೊರಗಿನ ಗಡಿರೇಖೆ. ಜನರು ಜಾತಿ ನಿಯಮಗಳನ್ನು

ಪಾಲಿಸಬೇಕು. ಆದ್ದರಿಂದ ಸಹಜ ಸ್ಥಿತಿಯಲ್ಲಿ, ಎಲ್ಲಾ ಮದುವೆಗಳೂ ಜಾತಿಯ ಚೌಕಟ್ಟಿನೊಳಗೇ ನಡೆಯಬೇಕು. ತಮ್ಮ ಸಹವರ್ತಿಯನ್ನು ಆರಿಸಿಕೊಳ್ಳುವ ಕೆಲಸ ವಧು-ವರರದಲ್ಲ. ಎರಡೂ ಪಕ್ಷದ ಹಿರಿಯರು ಈ ವಿಚಾರದಲ್ಲಿ ಮುಂದಾಗಿ, ಮಾತುಕತೆ ನಡೆಸುತ್ತಾರೆ. ಆದ್ದರಿಂದ ಜಾತಿ ರಚನೆಯಲ್ಲಿ ವಿವಾಹಗಳು ಪರಿಣಾಮಕಾರಿಯಾಗಿ 'ವ್ಯವಸ್ಥೆ ಮಾಡಿದವು' ಅದು ಗಂಡು-ಹೆಣ್ಣು ಪರಸ್ಪರ ಮಾಡಿಕೊಂಡ ಆಯ್ಕೆಯಲ್ಲ. ಈ ಅರ್ಥದಲ್ಲಿ ಒಂದು ಮದುವೆಯು ರಕ್ತ ಸಂಬಂಧಿಗಳ ಒಂದು ದೊಡ್ಡ ಜಾಲದ ನಿರ್ಮಾಣಕ್ಕೆ ದಾರಿ ಮಾಡುತ್ತದೆ. ಆದ್ದರಿಂದ ಇದರಲ್ಲಿ ತೊಡಗಿಕೊಳ್ಳುವವರು ಕುಟುಂಬಗಳೇ ಹೊರತು ವ್ಯಕ್ತಿಗಳಲ್ಲ.

ಬುಡಕಟ್ಟು ಸಮಾಜದಲ್ಲಿ, ಸಾಮಾನ್ಯವಾಗಿ ವ್ಯಕ್ತಿಗತವಾಗಿ ತನ್ನ ಬಾಳಸಂಗಾತಿಯನ್ನು ಆಯ್ಕೆ ಮಾಡಿಕೊಳ್ಳುವ ಪದ್ಧತಿ ಪ್ರಚಲಿತವಾಗಿದೆ. ಕುಟುಂಬದ ಹಿರಿಯರು ಮತ್ತು ಬುಡಕಟ್ಟಿನ ಹಿರಿಯರು (ಯಜಮಾನರು) ಕೊನೆಯದಾಗಿ ತಮ್ಮ ಸಮ್ಮತಿಯ ಮುದ್ರೆಯನ್ನು ಒತ್ತುವುದರಲ್ಲಿ ಕಾಣಿಸಿಕೊಳ್ಳುತ್ತಾರೆ. ಇಲ್ಲಿ ಕರ್ತವ್ಯಗಳ ವಿಸ್ತರಣೆಗಾಗಿ ರಕ್ತಸಂಬಂಧಿಗಳ ವಲಯವು ದೊಡ್ಡದಾಗಬೇಕಾದ ಅಗತ್ಯವಿಲ್ಲ. ಅದು ಕನಿಷ್ಠ ಹಂತದಲ್ಲೇ ಇದ್ದು, ಬುಡಕಟ್ಟು ಒಳಬಾಂಧವ್ಯ ವಿವಾಹ ಮತ್ತು ಬಣ ಹೊರಬಾಂಧವ್ಯ ವಿವಾಹಗಳೂ ವರ್ತಿಸುವುದು ಕಂಡು ಬರುತ್ತದೆ. ಈಚೆಗೆ, ಜಾತಿ ಸಮಾಜದ ಮೌಲ್ಯಗಳ ಪ್ರಭಾವದಿಂದಾಗಿ 'ವ್ಯವಸ್ಥೆಗೊಳಿಸಿದ ವಿವಾಹ'ಗಳು ಬುಡಕಟ್ಟು ಸಮಾಜದಲ್ಲಿ ಕಂಡುಬರುತ್ತಿವೆ. ಆದರೆ ಇನ್ನೂ ಸಾಂಪ್ರದಾಯಿಕ ಮಾದರಿಯಾದ 'ಪಲಾಯನ ಮಾಡಿ ಮದುವೆ ಮಾಡಿಕೊಳ್ಳುವುದು' ಹೆಚ್ಚು ಪ್ರಿಯವಾಗಿದೆ. ಅದರಲ್ಲಿ ಯಾವ ಕಳಂಕವೂ ಅಂಟಿಕೊಳ್ಳುವುದಿಲ್ಲ. ವಿವಾಹಯೋಗ್ಯ ವಯಸ್ಕರಾದ ಹುಡುಗ-ಹುಡುಗಿಯರು ತಾವೇ ಜೋಡಿಯಾಗಿ ಕೆಲವು ದಿನಗಳ ಕಾಲ ಮನೆಯಿಂದ ಓಡಿಹೋಗಿಬಿಡುತ್ತಾರೆ, ಕಾಡುಗಳಲ್ಲಿ ದೂರವಾಗಿದ್ದು ಬಿಡುತ್ತಾರೆ. ಅವರು ಹಾಡಿಗೆ ಹಿಂದಿರುಗಿದಾಗ ಬುಡಕಟ್ಟಿನ ಯಜಮಾನರೂ, ತಂದೆ ತಾಯಿಯರೂ ಒಂದು ಭೋಜನ ಕೂಟವನ್ನು ಏರ್ಪಡಿಸುತ್ತಾರೆ. ತುಂಬ ಸರಳವಾದ ಸಮಾರಂಭವೊಂದರಲ್ಲಿ, ಅತ್ಯಂತ ಕಡಿಮೆ ವೆಚ್ಚದಲ್ಲಿ ಅವರು ಪತಿ-ಪತ್ನಿಯರಾಗುತ್ತಾರೆ. ನೂತನ ವಿವಾಹಿತ ದಂಪತಿಗಳು ಸ್ವತಂತ್ರವಾದ ಕುಟುಂಬವನ್ನು ಹೂಡುತ್ತಾರೆ, ಎರಡೂ ಕಡೆಯ ತಂದೆ-ತಾಯಿ ಆಗಾಗ ಅವರಲ್ಲಿಗೆ ಭೇಟಿ ಕೊಡುತ್ತಾರೆ. ಯಾವ ಕಡೆಗೂ ಹೆಚ್ಚಿನ ಬದ್ಧತೆ, ಕರ್ತವ್ಯ ಏನೂ ಇಲ್ಲ. ಔಪಚಾರಿಕ ಭೇಟಿಗಳು, ಉಡುಗೊರೆಗಳು ಮತ್ತು ಮನರಂಜನೆ ಇವೆಲ್ಲ ಏನೂ ಇಲ್ಲ.

ಒಟ್ಟಿನಲ್ಲಿ ಜಾತಿ ಸಮಾಜದಲ್ಲಿನ ವಿವಾಹ, ಕುಟುಂಬ, ರಕ್ತಸಂಬಂಧ ವ್ಯವಸ್ಥೆ ಹಾಗೂ ಬುಡಕಟ್ಟು ಸಮಾಜದಲ್ಲಿ ವರ್ತಿಸುವ ಪದ್ಧತಿ ಇವು ಎದ್ದು ಕಾಣುತ್ತವೆ. ಒಂದರಿಂದೊಂದು ಸ್ಪಷ್ಟವಾಗಿ ಬೇರೆಯಾಗುತ್ತವೆ, ಒಂದು ಇನ್ನೊಂದಕ್ಕೆ ಬೆರೆಸಿಕೊಳ್ಳುವುದಿಲ್ಲ. ಜಾತಿ ಪಂಗಡವಾದ ಕುರುಬರಲ್ಲಿ ವಿಸ್ತಾರವಾದ ರೂಢಿಗಳು,

ಆಚರಣೆಗಳು, ಸಂಪ್ರದಾಯಗಳು ವಿವಾಹಕ್ಕೆ ಸಂಬಂಧಿಸಿದಂತೆ ಕಂಡುಬರುತ್ತವೆ. ಇವುಗಳನ್ನು ಒಟ್ಟಾಗಿ ನೈಮಿತ್ತಿಕ ಕರ್ಮವೆಂದು ಹೇಳಬಹುದು. ವಿವಾಹ ಸಮಾರಂಭವು 1 ರಿಂದ 3 ದಿನಗಳ ವರೆಗೆ ನಡೆಯುತ್ತದೆ, ಹಿಂದೆ ಅದು ಒಂದು ವಾರದ ಕಾರ್ಯಕ್ರಮವಾಗಿತ್ತು. ಬೇರೆ ಬೇರೆ ಜಾತಿಯವರ ಸೇವೆಯು ಸಮಾರಂಭದಲ್ಲಿ ಬಳಕೆಗೆ ಬರುತ್ತವೆ. ವಿವಾಹವನ್ನು ವಿಧಿ ವಿಹಿತವಾಗಿ ನೆರವೇರಿಸಲು ಒಬ್ಬ ಪುರೋಹಿತನು ಬೇಕು. ಅವನು ಬ್ರಾಹ್ಮಣನಾಗಿರಬಹುದು, ಜಂಗಮ ಅಥವಾ ಒಡೆಯರ್ ಉಪಜಾತಿಗೆ ಸೇರಿದ ಕುರುಬ ಗುರುವಾಗಬಹುದು. ಕುರುಬರು ಶೈವರು, ಶಿವನ ಒಂದು ರೂಪವಾದ ಬೀರದೇವರನ್ನು ಪೂಜಿಸುತ್ತಾರೆ. ವೀರಶೈವ/ಲಿಂಗಾಯಿತರ ಪುರೋಹಿತ ವರ್ಗದವರು ಲಿಂಗಾಯಿತೇತರರಲ್ಲಿ ಮತ್ತು ಅನೇಕ ವೇಳೆ ಹಿಂದಿನ ಅಸ್ಪೃಶ್ಯರಲ್ಲಿ ನಡೆಯುವ ಎಲ್ಲಾ ಆಚರಣೆಗಳನ್ನೂ ನಡೆಸುವುದು ಕಂಡುಬರುತ್ತದೆ. ವೀರಶೈವರು ಪ್ರಧಾನವಾಗಿರುವ, ರಾಜ್ಯದ ಉತ್ತರದ ಜಿಲ್ಲೆಗಳಲ್ಲಿ ಇದು ಇನ್ನೂ ವಿಶೇಷವಾಗಿದೆ ನಿಜ. ಧಾರವಾಡ, ಬಳ್ಳಾರಿ ಮತ್ತು ಚಿತ್ರದುರ್ಗ ಜಿಲ್ಲೆಗಳು ಇದಕ್ಕೆ ಸಮರ್ಥನೆಕೊಡುತ್ತವೆ. 12ನೆಯ ಶತಮಾನದಿಂದ ಬಸವ ಮತ್ತು ಅವರ ಅನುಯಾಯಿಗಳ ಬೋಧನೆಯ ಪ್ರಭಾವದಿಂದಾಗಿ ಧಾರ್ಮಿಕ ಮಡಿ-ಮೈಲಿಗೆ, ಶುದ್ಧಿ ಅಶುದ್ಧಿಗಳ ಕಲ್ಪನೆಗಳು ವೀರಶೈವ ಧರ್ಮದಲ್ಲಿ, ಅದು ಹರಡುತ್ತಿದ್ದಂತೆ ಗಣನೀಯವಾಗಿ ತಗ್ಗಿದುವು. ಕುರುಬರು ಮಾಂಸಾಹಾರಿಗಳು. ಆದರೆ ಕೆಲವು ವಿಧ್ಯುಕ್ತ ಆಚರಣೆಗಳನ್ನು ಜನನ-ವಿವಾಹ-ಮರಣ ಇತ್ಯಾದಿ ನಡೆಸಬೇಕಾದಾಗ ಜಂಗಮ ಪುರೋಹಿತನು ಸಂದರ್ಭಕ್ಕೆ ಹೊಂದಿಕೊಳ್ಳುತ್ತಾನೆ. ಆದರೆ ಪುರೋಹಿತನು ಬ್ರಾಹ್ಮಣನಾದರೆ ಪರಿಸ್ಥಿತಿ ಬೇರೆಯಾಗುತ್ತದೆ. ಮಡಿ-ಮೈಲಿಗೆಗಳ ವಿಸ್ತಾರವಾದ ನಿಯಮಗಳು ಸಹಜವಾಗಿಯೇ ಬೇಕಾದಷ್ಟು ತಡೆಗಳನ್ನು ಒಡ್ಡುತ್ತವೆ. ಅನೇಕ ಬ್ರಾಹ್ಮಣೇತರರು, ಒಕ್ಕಲಿಗರು ಕೂಡ ಬ್ರಾಹ್ಮಣ ಪುರೋಹಿತರ ಸೇವೆಯನ್ನು ಬಯಸುವ ಸಂಪ್ರದಾಯವಿರುವ ಮೈಸೂರು ಜಿಲ್ಲೆಯಲ್ಲಿ ಈ ಪರಿಸ್ಥಿತಿಯಿದೆ. ಅನೇಕ ಹಳ್ಳಿಗಳಲ್ಲಿ ಕುರುಬ-ಒಡೆಯರ್ ಉಪ ಪಂಗಡವು ಕಂಡು ಬರುವುದಿಲ್ಲ. ಮೈಸೂರು ಜಿಲ್ಲೆಯಲ್ಲಿ ಒಂದು ಕಡೆ ಮಾತ್ರ ಒಡೆಯರ್ ಉಪಜಾತಿಯನ್ನು ಸಂಧಿಸಿದೆವು. ವಾಸ್ತವತೆ ಹೀಗಿರುವುದರಿಂದ ಕುರುಬರು ಸಾಮಾನ್ಯವಾಗಿ ಧಾರ್ಮಿಕ ಆಚರಣೆಗಳಿಗೆ ಬ್ರಾಹ್ಮಣ ಪುರೋಹಿತನನ್ನು ಅವಲಂಬಿಸುತ್ತಾರೆ. ಜಂಗಮ ಪುರೋಹಿತರೂ ಅವರಿಗೆ ಸುಲಭವಾಗಿ ಸಿಕ್ಕುವುದಿಲ್ಲ.

ಕರ್ಮಾಚರಣೆಗಳನ್ನು ನಿರ್ವಹಿಸುವ ಪುರೋಹಿತನ ಜೊತೆಗೆ, ಮದುವೆಗಳಲ್ಲಿ ಆಚರಣೆಯ ದೃಷ್ಟಿಯಿಂದ ಸಂಬಂಧಿಸುವ ಇತರ ಅನೇಕರಿರುತ್ತಾರೆ. ಕ್ಷೌರಿಕ, ಬಡಗಿ, ಕುಂಬಾರ, ಅಗಸ ಮತ್ತು ಗ್ರಾಮದಲ್ಲಿ ಹಿಂದೆ ಅಸ್ಪೃಶ್ಯರೆನಿಸಿದ್ದ ಜಾತಿಗಳು ಇವರೆಲ್ಲರೂ ನಿರ್ದಿಷ್ಟ ಪಾತ್ರಗಳನ್ನು ನಿರ್ವಹಿಸುತ್ತಾರೆ. ಹಾಗಾಗಿ ಒಂದು ಮದುವೆಯು ವಿವಿಧ ಸೇವೆಗಳನ್ನು ಒದಗಿಸುವ ಜಾತಿಗಳ ನಡುವೆ ಕುಟುಂಬ-ಜಾತಿ ಬೆಸುಗೆಯನ್ನು ಹೊಸದುಗೊಳಿಸುವ ಸಂದರ್ಭವಾಗುತ್ತದೆ. ಅವರು ತಮ್ಮ ವಿಧ್ಯುಕ್ತ ಕರ್ತವ್ಯಗಳನ್ನು

ನೆರವೇರಿಸಿ, ಅದಕ್ಕೆ ಪ್ರತಿಯಾಗಿ ವಸ್ತುರೂಪದಲ್ಲಿ ಉಡುಗೊರೆಗಳನ್ನು ಪಡೆಯುತ್ತಾರೆ. ಇದಕ್ಕೆ ವ್ಯತಿರಿಕ್ತವಾಗಿ ಬುಡಕಟ್ಟು ವಿವಾಹಗಳಲ್ಲಿ ಹೀಗೆ ವಿಸ್ತಾರವಾದ ಆಚರಣೆಗಳೂ ಇಲ್ಲ, ಆಚರಣಾತ್ಮಕ ಪಾರಸ್ಪರಿಕ ಅವಲಂಬನವೂ ಇಲ್ಲ. ಅಂತಹ ಸಂದರ್ಭಗಳಲ್ಲಿ ವ್ಯಕ್ತವಾಗುವ ಪೋಷಕ-ಗ್ರಾಹಕ ಸಂಬಂಧವಿರುವುದಿಲ್ಲ ಎಂದೇ ಅಸಾಧರಣತೆ ಮತ್ತು ಅಧೀನತೆಗಳಿಗೆ ಅಲ್ಲಿ ಎಡೆಯಿಲ್ಲ.

601 ಕುರುಬ ಮಾದರಿ ಕುಟುಂಬಗಳಲ್ಲಿ ಕೇವಲ 3 ವಿಭಕ್ತ ಕುಟುಂಬಗಳು. ವಿಧವೆಯರು, ವಿಧುರರು, ಪ್ರತ್ಯೇಕಿತರು/ವಿಚ್ಛೇದಿತರು ಬಹಳ ಕಡಿಮೆ, ಅಲಕ್ಷಿಸ ಬಹುದಾದಷ್ಟು. 2,3,4 ವಿವಾಹಿತ ದಂಪತಿಗಳು ಒಟ್ಟಿಗೆ ವಾಸ ಮಾಡುತ್ತಿರುವ ಬಹುತೇಕ ಕುಟುಂಬಗಳು ಪ್ರಧಾನವಾಗಿವೆ. ಮೈಸೂರು ಜಿಲ್ಲೆಯಲ್ಲಿ ಅಂತಹ 121 ಕುಟುಂಬಗಳಿವೆ. ಬಳ್ಳಾರಿಯಲ್ಲಿ 108, ಧಾರವಾಡದಲ್ಲಿ 120, ಚಿತ್ರದುರ್ಗದಲ್ಲಿ 122 ಕುಟುಂಬಗಳಿವೆ. ಮಿಕ್ಕವೂ ಕೂಡ ಅವಿಭಕ್ತ ಕುಟುಂಬಗಳೇಯೆ. ಸಾರಾಂಶವಾಗಿ ಹೀಗೆ ಹೇಳಬಹುದು: ಅವಿಭಕ್ತ ಕುಟುಂಬ ಜೀವನವನ್ನು ಹೆಚ್ಚಾಗಿ ಅಪೇಕ್ಷಿಸಲಾಗುತ್ತದೆ. ಸ್ವಲ್ಪ ಮುಂದೆ ಇದು ಇನ್ನೂ ಸ್ಪಷ್ಟವಾಗುತ್ತದೆ. ಹಾಗೆಯೇ ಅವಿವಾಹಿತರ ಸಂಖ್ಯೆ ಮೊದಲ ನಾಲ್ಕು ವರ್ಗಗಳಲ್ಲಿ ಹೆಚ್ಚು. ಮಾದರಿಯಲ್ಲಿ ವಿವಾಹಿತ ದಂಪತಿಗಳು ಪ್ರಧಾನವಾಗಿರುವುದು, ಮದುವೆಯನ್ನು ಹೆಚ್ಚಾಗಿ ಅಪೇಕ್ಷಿಸಲಾಗುತ್ತದೆ ಎಂಬುದಕ್ಕೆ ಸೂಚಕ ಹಾಗೆಯೇ ವಿವಾಹಿತರು ವಿಸ್ತಾರವಾದ ಸಂಬಂಧಿಗಳ ಜಾಲವನ್ನು ಹೊಂದಿರುವ ಅವಿಭಕ್ತ ಕುಟುಂಬಗಳಲ್ಲಿ ವಾಸಮಾಡಲು ಬಯಸುತ್ತಾರೆ. ಕೃಷಿಯು ಒಂದು ಮುಖ್ಯವಾದ ಕುಟುಂಬ ಚಟುವಟಿಕೆಯಾಗಿದ್ದು ಕುಟುಂಬದ ರಚನೆಯ ಮೇಲೆ ಪ್ರಭಾವ ಬೀರಿರುವಂತೆ ತೋರುತ್ತದೆ. ಸುಮಾರು 40% ಕುರುಬ ಕುಟುಂಬಗಳಿಗೆ ಕೃಷಿಭೂಮಿಯಿದೆ, ಅದರಲ್ಲಿ ಹೊಲ, ಗದ್ದೆ, ತೋಟ ಮೂರೂ ಇವೆ. ಕೃಷಿಯೆಂದ ಮೇಲೆ ಬೇಸಾಯ ಮಾಡಲು, ವಿವಿಧ ಹಂತಗಳಲ್ಲಿ ಉಸ್ತುವಾರಿ ನೋಡಿಕೊಳ್ಳಲು ಹೆಚ್ಚು ಸಂಖ್ಯೆಯಲ್ಲಿ ಗಂಡಸರು - ಹೆಂಗಸರು ಬೇಕು. ಇದಕ್ಕೆ ವಿಭಕ್ತ ಕುಟುಂಬಕ್ಕಿಂತ ಅವಿಭಕ್ತ ಕುಟುಂಬವೇ ಹೆಚ್ಚು ಸಹಕಾರಿಯಾಗಿದೆ. ಸುಮಾರು 57 ಕುಟುಂಬಗಳಲ್ಲಿ ಪಂಪ್‌ಸೆಟ್‌ಗಳಿವೆ. 37 ಕುಟುಂಬಗಳು ಟ್ರ್ಯಾಕ್ಟರ್ ಹೊಂದಿದ್ದಾರೆ. ಇದು ಕೃಷಿ ಮತ್ತು ಇತರ ಸಂಬಂಧಿತ ಚಟುವಟಿಕೆಗಳು ಮುಖ್ಯವಾಗಿವೆ ಎಂಬುದನ್ನು, ಈ ಕಾರಣದಿಂದ ಅವಿಭಕ್ತ ಕುಟುಂಬಗಳು ಪ್ರಾಧಾನ್ಯಗಳಿಸಿವೆ ಎಂಬುದನ್ನು ಸೂಚಿಸುತ್ತದೆ.

ಕೃಷಿ ಚಟುವಟಿಕೆಗಳಿಗೆ ಲಾಭದಾಯಕವಾಗಿರುವಂತೆಯೇ, ಕುಟುಂಬದ ಆರ್ಥಿಕ ಪೋಷಣೆಯ ದೃಷ್ಟಿಯಿಂದಲೂ ಅವಿಭಕ್ತ ಕುಟುಂಬಕ್ಕೇ ಆದ್ಯತೆ ನೀಡಲಾಗಿದೆ. ಮಾದರಿಯ ಸುಮಾರು 46% ಇತ್ಯಾತ್ಮಕ ಅಭಿಮತವುಳ್ಳವಾಗಿದ್ದಾರೆ, 33% ಕುಟುಂಬಗಳು ಯಾವ ಅಭಿಪ್ರಾಯವನ್ನೂ ಕೊಡುವುದಿಲ್ಲ, ಮಿಕ್ಕವು ಇತರ ಚಟುವಟಿಕೆಗಳಲ್ಲಿ, ಕುರಿಸಾಕಾಣಿಕೆ, ರಾಜಕಾರಣ ಮತ್ತು ಮುಂದಾಳತ್ವ ಪಾತ್ರಗಳು ಮತ್ತು ಧಾರ್ಮಿಕ ಪ್ರಾಮಾಣ್ಯಗಳಲ್ಲಿ ಸಂಘರ್ಷ ಮತ್ತು ತಪ್ಪು ತಿಳುವಳಿಕೆಗಳು ಜೊತೆಜೊತೆಗೇ ಇರುತ್ತವೆ ಎಂದು ಮಾದರಿಯ

67% ಜನರು ಒಪ್ಪಿಕೊಳ್ಳುತ್ತಾರೆ. ಯಾವುದೇ ಅಭಿಪ್ರಾಯಕೊಡದ 19% ಜನರನ್ನು ಬಿಟ್ಟರೆ ಮಿಕ್ಕವರು ಶಿಕ್ಷಣ, ಸರಕಾರೀ ಉದ್ಯೋಗ, ನಗರದಲ್ಲಿವಾಸ ಮತ್ತು ಆಧುನೀಕರಣಗಳನ್ನು ಇಷ್ಟಪಡುತ್ತಾರೆ. ಅವಿಭಕ್ತ ಕುಟುಂಬವು ಒಂದು ತಡೆಯಾಗಿ ವರ್ತಿಸಿ ವಿದ್ಯಾಭ್ಯಾಸ ಮತ್ತು ಆಧುನೀಕರಣಗಳಿಗೆ ಸುಲಭವಾಗಿ ಅವಕಾಶ ಕೊಡುವುದಿಲ್ಲ. ಇವು ಸ್ವರೂಪದಿಂದಲೇ ವ್ಯಕ್ತಿಗತತ್ವವನ್ನು ಪ್ರೋತ್ಸಾಹಿಸುತ್ತವೆ, ಅದರಿಂದಾಗಿ ಸಂಪ್ರದಾಯವನ್ನು ತೊರೆದು ಹೋಗುವ ಬಯಕೆಯುಂಟಾಗುತ್ತದೆ. ಆದರೆ ಗ್ರಾಮ ಜೀವನಕ್ಕೆ ಸಂಬಂಧಿಸಿದ ವಾಸ್ತವತೆ ಹಾಗಿಲ್ಲ. ಜಮೀನಿನ ಒಡೆತನವಿರುವ ಅವಿಭಕ್ತ ಕುಟುಂಬಗಳು ಒಟ್ಟು ಸಂಸಾರ ಜೀವನವನ್ನು ಬಯಸುತ್ತವೆ. ಆದರೂ ನೀವು ಅವಿಭಕ್ತ ಕುಟುಂಬದಲ್ಲಿ ವಾಸವಾಗಿದ್ದೀರಾ ಎಂದು ಕೇಳಿದ ಪ್ರಶ್ನೆಗೆ 601 ಮಾದರಿ ಕುಟುಂಬಗಳಲ್ಲಿ 140 ಜನರು ಹೌದು ಎಂದು ಉತ್ತರಕೊಟ್ಟಿದ್ದಾರೆ. ಮಿಕ್ಕ 461 ಜನರು ತಾವು ಅವಿಭಕ್ತ ಕುಟುಂಬಗಳಲ್ಲಿ ವಾಸ ಮಾಡುತ್ತಿಲ್ಲ ಎಂದು ಹೇಳಿದ್ದಾರೆ. ಇದು ಅವಿಭಕ್ತ ಕುಟುಂಬದಿಂದ ಬರಬಹುದಾದ ಅನುಕೂಲಗಳಿಗೋಸ್ಕರವಾಗಿ "ನಾನು ಅವಿಭಕ್ತ ಕುಟುಂಬದ ಸದಸ್ಯನಾಗಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು" ಎಂದು ಆಶಿಸುವುದನ್ನು ಸೂಚಿಸುತ್ತದೆ.

ಮಾಹಿತಿದಾರರಲ್ಲಿ ಬಹುತೇಕ ಜನರು ಜಾತಿ ಒಳಬಾಂಧವ್ಯ ವಿವಾಹವನ್ನು ಇಷ್ಟಪಡುತ್ತಾರೆ ಎಂಬುದನ್ನು ನೆನಪು ಮಾಡಿಕೊಳ್ಳಬಹುದು. 601 ಜನರಲ್ಲಿ 495 ಜನರು ಜಾತಿಯೊಳಗಿನ ವಿವಾಹದ ಪರವಾಗಿದ್ದಾರೆ; ಇನ್ನೊಂದು 58 ಜನರು ಬೇರೆ ಬೇರೆ ಕುರುಬ ಉಪ-ಜಾತಿಗಳೊಂದಿಗೆ ವಿವಾಹ ಸಂಬಂಧ ಆಗಬಹುದು ಎನ್ನುತ್ತಾರೆ. ಇವು ಮೂಲತಃ "ಹಿರಿಯರು ನಿಶ್ಚಯಿಸಿದ" ವರದಕ್ಷಿಣೆ ಹಾಗೂ ಇತರ ಸಾಂಪ್ರದಾಯಿಕ ರೂಢಿ - ಆಚರಣೆಗಳಿರುವ ವಿವಾಹಗಳು. ಇದರಿಂದ ಯಾವುದೇ ಅಂತರ್ಜಾತಿಯ ವಿವಾಹ ಇಲ್ಲಿ ನಡೆಯುವುದಿಲ್ಲ ಎಂಬುದು ಸೂಚಿತವಾಗುತ್ತದೆ.

ಈ ವೀರಾಭಿಮಾನದ ಬೇರಿನಲ್ಲಿ ಅಧಿಕವಾಗುತ್ತಿರುವ ಜಾತಿ ಪ್ರಜ್ಞೆ ಹಾಗೂ ಉದಿಸುತ್ತಿರುವ ಜಾತಿ ಸಂಘ ಸಂಸ್ಥೆಗಳು ಇವೆ. ಅಪರೂಪವಾಗಿ ನಗರ ಪ್ರದೇಶದಲ್ಲಿ ಯಾವುದಾದರೂ ಅಂತರ್ಜಾತೀಯ ವಿವಾಹವು ನಡೆದ ಪಕ್ಷದಲ್ಲಿ, ಪಿತೃವಾಂಶಿಕ ಕ್ರಮದಿಂದಾಗಿ, ಕೊನೆಯ ಪಕ್ಷ ತತ್ವತಃ ಪುರುಷ ಪ್ರಧಾನ್ಯ ಕಂಡು ಬರುತ್ತದೆ. ಮೇಲುಜಾತಿಯ ಕನ್ಯೆಯನ್ನು ಒಳಗೊಂಡ ಮಿಶ್ರವಿವಾಹವೇನಾದರೂ ನಡೆದರೆ, ಅದರಲ್ಲಿ ದಾಖಲು ಮಾಡುವುದಿಲ್ಲ, ಖಾಸಗಿಯಾದ ಸಂಭಾಷಣೆಗಳಲ್ಲಿ ಅದು ಹೆಮ್ಮೆಪಟ್ಟುಕೊಳ್ಳುವ ವಿಷಯವಾಗುತ್ತದೆ. ಹುಡುಗಿಯು ಕೆಳ ಜಾತಿಗೆ ಸೇರಿದವಳಾದರೆ, ಅಂತಹ ಸಂಬಂಧದಿಂದ ಜನಿಸುವ ಮಕ್ಕಳು ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ, ವಿಶೇಷವಾಗಿ ಎಂಜಿನಿಯರಿಂಗ್ ಮತ್ತು ಮೆಡಿಕಲ್ ಅಂತಹ ವೃತ್ತಿಪರ ಸಂಸ್ಥೆಗಳಲ್ಲಿ ಪ್ರವೇಶ ಪಡೆಯುವ ಸಂದರ್ಭ ಬರುವವರೆಗೆ ರಹಸ್ಯವಾಗಿಡಲಾಗುತ್ತದೆ. ಆಗ ಮೀಸಲಾತಿ ಪ್ರಯೋಜನವನ್ನು ಪಡೆಯುವ ಸಲುವಾಗಿ ತಾಯಿಯ ಜಾತಿ ಸ್ಥಾನಮಾನವನ್ನು ಹೇಳಿಕೊಳ್ಳಲಾಗುತ್ತದೆ. ಅಂತಹ ಸಂದರ್ಭಗಳು ತುಂಬಾ

ವಿರಳ. ಬಹುದೂರ ದೂರವಾದುದರಿಂದ, ಪ್ರಚಾರ ಕೊಟ್ಟ ಹೊರತು ಗುರುತಿಸುವುದು ಕಷ್ಟ.

ಕುರುಬರದು ಉತ್ತಮವಾಗಿ ಸಂಘಟಿತವಾದ, ರಾಜಕೀಯ ಪ್ರಜ್ಞೆಯಿರುವ ಜಾತಿ ಪಂಗಡ. ತಮಗೆ ಬೇಕಾದುದನ್ನು, ಅಂದರೆ ಬುಡಕಟ್ಟು ಎಂಬ ಹಣೆಪಟ್ಟಿಯನ್ನು ಪಡೆಯುವ ಸಲುವಾಗಿ ಶ್ರೇಣಿಯಲ್ಲಿ ಕೆಳಗಿಳಿದು ಬರಲು ಅದು ಅನುಕೂಲವಾಗಿರಬಹುದು. ಸಂಸ್ಕೃತೀಕರಣ ಪ್ರಕ್ರಿಯೆಯ ಮೂಲಕವಾಗಿ ಶ್ರೇಣಿ ಅನುಕ್ರಮ ವ್ಯವಸ್ಥೆಯಲ್ಲಿ ಮೇಲಕ್ಕೆ ಏರುವ ನಿದರ್ಶನಗಳೇನೋ ಇವೆ. ಕುರುಬರ ವಿಷಯದಲ್ಲಿ ಅದು ಅಪೇಕ್ಷಿತ ಗುರಿಯನ್ನು ಮುಟ್ಟಲು ಹಲವು ಮಾರ್ಗೋಪಾಯಗಳ ಆಯ್ಕೆಯನ್ನು ತೆರೆದಿಟ್ಟುಕೊಳ್ಳುವುದಕ್ಕೆ ಸಮನಾಗುತ್ತದೆ. 19ನೆಯ ಶತಮಾನದಲ್ಲಿ ತಮಿಳುನಾಡಿನ ನಾಡಾರರು ತಾರತಮ್ಯ ಹಾಗೂ ಕೆಳಜಾತಿ ಸ್ಥಾನಮಾನಗಳ ವಿರುದ್ಧ ಹೋರಾಡಲು ಏನು ಮಾಡಿದರೋ ಅದೇ ಇದೂ ಕೂಡ. ಆದರೆ ಕುರುಬರು ಕೆಳಜಾತಿಗೆ ಸೇರಿದವರಲ್ಲ. ತಾರತಮ್ಯ ವರ್ತನೆಯೇನೂ ಅವರಿಗೆ ಸಂದಿಲ್ಲ. ಆದ್ದರಿಂದ ಸಂವಿಧಾನಿಕವಾದ ಲಾಭಗಳನ್ನು ಪಡೆಯುವ ಸಲುವಾಗಿ ಅವರು ಹೋರಾಡುತ್ತಿರುವಂತೆ ತೋರುತ್ತದೆ. ವಾಸ್ತವವಾಗಿ ಹೇಗೆ ಹಲವು ಶೂದ್ರಜಾತಿಗಳು ಶ್ರೇಣಿಯಲ್ಲಿ ತಮಗಿಂತ ಕೆಳಮಟ್ಟದಲ್ಲಿದ್ದಾರೆ ಎಂಬುದನ್ನು ಕುರುಬರೇ ಸೂಚಿಸಿದ್ದಾರೆ.

ಈಗ ನಾವು ಕಾಡು ಕುರುಬರಲ್ಲಿ ಚಾಲ್ತಿಯಲ್ಲಿರುವ ಕುಟುಂಬ ಮತ್ತು ವಿವಾಹ ವಿನ್ಯಾಸವನ್ನು ಪರಿಶೀಲಿಸಬಹುದು. ಕುರುಬರಂತಲ್ಲದೆ, ಕಾಡು ಕುರುಬರಲ್ಲಿ ಅವಿಭಕ್ತ ಕುಟುಂಬವು ನಮಗೆ ಕಂಡು ಬರುವುದಿಲ್ಲ. ಒಟ್ಟು 594 ವಿಭಕ್ತ ಕುಟುಂಬ (Nuclear families)ಗಳಿವೆ. 149 ಅಂತರಸಂತೆ ಪ್ರದೇಶದಲ್ಲಿ, 149 ಎನ್. ಬೇಗೂರಿನಲ್ಲಿ, 296 ಹುಣಸೂರು ಪ್ರದೇಶದಲ್ಲಿ ಇವೆ. ಅಂತರಸಂತೆಯಲ್ಲಿ ಒಂದು, ಎನ್. ಬೇಗೂರಿನಲ್ಲೊಂದು, ಹುಣಸೂರು ಪ್ರದೇಶದಲ್ಲಿ 3, ತಾವು ಅವಿಭಕ್ತ ಕುಟುಂಬಗಳೆಂದು ಹೇಳಿದ್ದಾರೆ. ಒಂದು ಕುಟುಂಬವು ಸ್ವಲ್ಪಮಟ್ಟಿಗೆ ಅವಿಭಕ್ತತ್ವವನ್ನು ತೋರಿಸಿದೆ. ಹಾಗಾಗಿ ಇವು ಒಟ್ಟು 7 ಕುಟುಂಬಗಳು. ಇಲ್ಲೂ ಕೂಡ ಇವು ತಾತ್ಕಾಲಿಕ ಕ್ರಮ. ಏಕೆಂದರೆ, ಸಾಕಷ್ಟು ಪ್ರಮಾಣದ ಕೃಷಿ ಚಟುವಟಿಕೆಗಳಾಗಲಿ ಭೂಮಿ ಒಡೆತನವಾಗಲಿ ಇಲ್ಲವಾದ್ದರಿಂದ ಕುಟುಂಬಗಳನ್ನು ಒಟ್ಟಿಗೆ ವಾಸಮಾಡುವಂತೆ ಬೆಸೆಯುವ ಚಿತ್ರ ಇಲ್ಲಿ ಕಂಡುಬರುವುದಿಲ್ಲ.

ಮೊದಲೇ ತೋರಿಸಿರುವಂತೆ ಹೆ.ದೇ.ಕೋಟೆ ಪ್ರದೇಶದಲ್ಲಿ, 138 ಕುಟುಂಬಗಳು 434 ಎಕರೆ ಹೊಲ (ಒಣನೆಲ)ವನ್ನು ಪಡೆದಿವೆ. ತಾವೇ ಅಲ್ಲಿ ಬೇಸಾಯ ಮಾಡಿದರೆ ಅದು ಕುಟುಂಬಕ್ಕೆ ತಲಾ ಸರಾಸರಿ 3 ಎಕರೆ ಬರುತ್ತದೆ. ಬುಡಕಟ್ಟು ಜನರು ಪಡೆದಿರುವ ಭೂಮಿಯು ಸರಕಾರವು ಅವರನ್ನು ಅರಣ್ಯ ನೆಲೆಗಳಿಂದ ಹೊರಕ್ಕೆ ತಂದು ಅವರಿಗೆ ಮಂಜೂರು ಮಾಡಿರುವ ನೆಲ. ಹುಣಸೂರು ಪ್ರದೇಶದಲ್ಲಿ ಅದು ಕುಟುಂಬಕ್ಕೆ 3 ಎಕರೆಗಿಂತ ಕಡಿಮೆಯಾಗಿದೆ. ಇನ್ನು ಗದ್ದೆಯ ವಿಚಾರ ಹೀಗಿದೆ: ಹೆ.ದೇ.ಕೋಟೆ ಪ್ರದೇಶದಲ್ಲಿ ಅದು ಪ್ರತಿ ಕುಟುಂಬಕ್ಕೆ ಸುಮಾರು ಒಂದು ಎಕರೆ ಮತ್ತು ಕೆಲವು ಸೆಂಟುಗಳು 149

ಕುಟುಂಬಗಳಿವೆ. ಒಟ್ಟಾಗಿ 169 ಎಕರೆಗಳಿವೆ. ಹುಣಸೂರು ಪ್ರದೇಶದಲ್ಲಾದರೆ ಅದು ತೀರಾ ನಗಣ್ಯ. 52 ಎಕರೆ ಮಾತ್ರ ಇದ್ದು, ಅದನ್ನು 26 ಕುಟುಂಬಗಳು ಬೇಸಾಯ ಮಾಡುತ್ತಿವೆ. ಕುಟುಂಬಕ್ಕೆ ಸರಾಸರಿ 2 ಎಕರೆಗಳಷ್ಟಾದರೂ ವಾಸ್ತವವಾಗಿ ಫಲಾನುಭವಿಗಳು ಗಣನೆಗೇ ಬಾರದಷ್ಟು ಸ್ವಲ್ಪ ಜನ.

ಮೇಲ್ಕಂಡ ಅಂಶಗಳಿಂದ, ಬಡ ಆರ್ಥಿಕ ಪರಿಸ್ಥಿತಿಯಲ್ಲಿ ಅವಿಭಕ್ತ ಕುಟುಂಬವು ಉಳಿದುಕೊಳ್ಳಲಾರದು, ತನ್ನನ್ನು ಪೋಷಿಸಿಕೊಳ್ಳಲಾರದು ಎಂಬುದು ಸ್ಪಷ್ಟವಾಗುತ್ತದೆ. ಇರುವ ಭೂಮಿ ಪೂರ್ತಿಯಾಗಿ ಸರಕಾರವು ಮಂಜೂರು ಮಾಡಿದ ನೆಲವಾದುದರಿಂದ ಅದು ಫಲವತ್ತಾಗಿರುತ್ತದೆಂದಾಗಲಿ, ಬೇಸಾಯದಿಂದ ಉತ್ತಮ ಫಸಲು ಬರುತ್ತದೆಂದಾಗಲಿ ಭಾವಿಸಲು ಸಾಧ್ಯವಿಲ್ಲ. ಅದರಿಂದ ವರ್ಷದ ಬಹುಭಾಗ ಕೃಷಿ ಅವಲಂಬಿಸಿ ಕುಟುಂಬವು ಜೀವಿಸಿರುವುದು ಕಷ್ಟ. ಆದ್ದರಿಂದ ಬುಡಕಟ್ಟುಗಳು ತಮ್ಮ ಕುಟುಂಬ ವರಮಾನವನ್ನು ಹೆಚ್ಚಿಸಿಕೊಳ್ಳುವ ಸಲುವಾಗಿ ಲೋಕೋಪಯೋಗಿ ಇಲಾಖೆಗಾಗಿ ಕೆಲಸ ಮಾಡುತ್ತಾರೆ, ಸಮೀಪದ ಹಳ್ಳಿಗಳಲ್ಲಿ ಕೃಷಿ ಕಾರ್ಮಿಕರಾಗಿ ಕೂಲಿ ಪಡೆದು ದುಡಿಯುತ್ತಾರೆ. ಅನೇಕ ವೇಳೆ, ಗೊತ್ತಾದ ಅವಧಿಯಲ್ಲಿ, ಸಮೀಪದ ಕೊಡಗು ಜಿಲ್ಲೆಯ ಕಾಫಿ ತೋಟಗಳಲ್ಲಿ ಕೆಲಸ ಮಾಡಲು ಹೋಗುತ್ತಾರೆ. ತಮ್ಮ ಹೊಲವನ್ನು ತಾವೇ ಉತ್ತು ಬೇಸಾಯ ಮಾಡಲು ಪ್ರಯತ್ನಿಸಿದರೂ, ಅದರ ಪ್ರತಿಫಲವಾಗಿ ಬೆಳೆಯು ಅವರ ಕೈಗೆ ಸಿಕ್ಕುತ್ತದೆಂಬ ಭರವಸೆಯಿಲ್ಲ. ಏಕೆಂದರೆ, ಕಾಡು ಪ್ರಾಣಿಗಳು, ಕಾಡು ಹಂದಿಗಳು, ಆನೆಗಳು ಬೆಳೆಯನ್ನು ಅನೇಕ ವೇಳೆ ನಾಶ ಮಾಡುತ್ತವೆ. ಈ ಎಲ್ಲಾ ಕಾರಣಗಳಿಂದ ವಿಭಕ್ತ ಕುಟುಂಬವೇ ಸೂಕ್ತ ಘಟಕವಾಗುವಂತೆ ತೋರುತ್ತದೆಯೇ ಹೊರತು ಅವಿಭಕ್ತ ಕುಟುಂಬವಲ್ಲ.

ಕಾಡು ಕುರುಬರಲ್ಲಿನ ವಿವಾಹದ ಮಾದರಿಯು ಕುರುಬ ಜಾತಿಯದಕ್ಕಿಂತ ಬೇರೆಯೇ ಆದ ಚಿತ್ರವನ್ನು ಕೊಡುತ್ತದೆ. ವಿಶೇಷವಾಗಿ ದಕ್ಷಿಣ ಭಾರತದಲ್ಲಿ ಸಂಬಂಧಿಗಳಲ್ಲಿಯೇ ಮದುವೆ ಮಾಡುವುದು ರೂಢಿ. ಅನೇಕ ಲೇಖಕರು - ಮಾನವ ಶಾಸ್ತ್ರಜ್ಞರು ಮತ್ತು ಸಮಾಜ ಶಾಸ್ತ್ರಜ್ಞರು ಅದನ್ನು ಎತ್ತಿ ತೋರಿಸಿದ್ದಾರೆ. ಡ್ಯೂಮಾಂಟ್ ಮತ್ತು ಗಾಫ್, ಕೆಲವು ತಮಿಳು ಪಂಗಡಗಳಲ್ಲಿರುವ ಈ ಪದ್ಧತಿಯನ್ನು ಹೇಳಿದ್ದಾರೆ. ಇದೇ ರೂಢಿಯು ಆಂಧ್ರ ಮತ್ತು ಕರ್ನಾಟಕಗಳಲ್ಲೂ ಕಂಡು ಬರುತ್ತದೆ. ಆದರೆ ಕಾಡು ಕುರುಬರಲ್ಲಿ ಈ ಪದ್ಧತಿ ಗಣನೆಗೆ ಬಾರದಷ್ಟು ಅಲ್ಪ. ಏಕಪತ್ನಿ ವಿವಾಹ (Monogamous marriage) ಜನಪ್ರಿಯವಾಗಿದ್ದರೂ, ಬಹು ಪತ್ನಿತ್ವವೂ (Polygyny) ಉಂಟು. ವಿಧವಾ / ವಿಧುರ ಪುನರ್ವಿವಾಹ ಚಾಲ್ತಿಯಲ್ಲಿದೆ, ಅದಕ್ಕೆ ಯಾವ ದೋಷವೂ ಹತ್ತಿಲ್ಲ. ವಿವಾಹ ವಿಚ್ಛೇದನಕ್ಕೆ ಅನುಮತಿಯಿದೆ, ಅದು ಸರಳವಾದ ಪ್ರಕ್ರಿಯೆಯಾಗಿದೆ.

ಮೇಲ್ಕಂಡ ಎಲ್ಲಾ ಬಗೆಯ ಮದುವೆಗಳ ಬೆರಕೆಯನ್ನು ಕಾಡು ಕುರುಬರಲ್ಲಿ ನೋಡುತ್ತೇವೆ. ಬೆಟ್ಟ ಕುರುಬರಲ್ಲಿ ಅದು ಅಂತರಸಂತೆಯಲ್ಲಿ 19 (3.1%); ಎನ್. ಬೇಗೂರು ಪ್ರದೇಶದಲ್ಲಿ (ಹೆ.ದೇ.ಕೋಟೆ) 99 (16.47%); ಮತ್ತು ಹುಣಸೂರು

ಪ್ರದೇಶದಲ್ಲಿ ಅದು 06 (0.99%) ಆಗಿದೆ. ಜೇನು ಕುರುಬರಲ್ಲಿ, ಅದೇ ಕ್ರಮದಲ್ಲಿ, ಅಂತರಸಂತೆಯಲ್ಲಿ 131 (21.79%); ಎನ್. ಬೇಗೂರು (ಹೆ.ದೇ.ಕೋಟೆ) ಪ್ರದೇಶದಲ್ಲಿ 51 (8.48%); ಮತ್ತು ಹುಣಸೂರು ಪ್ರದೇಶದಲ್ಲಿ 295 (49.08%). ಬೆಟ್ಟಕುರುಬ ಮತ್ತು ಜೇನು ಕುರುಬರಲ್ಲಿ ಮದುವೆಯ ಮಾದರಿಯು ಮೂಲತಃ ಒಂದೇ ಆಗಿದೆ. ಆದರೂ ಈ ಎರಡೂ ಉಪವಿಭಾಗಗಳಲ್ಲಿ ಅಂತರ್ವಿವಾಹವಿಲ್ಲ. "ಅಂತರ - ಬುಡಕಟ್ಟು ವಿವಾಹವನ್ನು ಒಪ್ಪುವಿರಾ?" ಎಂಬ ಪ್ರಶ್ನೆಗೆ ಪ್ರತಿಕ್ರಿಯೆ ಚೆನ್ನಾಗಿದೆ. ಬಹು ಪಕ್ಷಕ್ಕೆ ಅದು ಖಚಿತವಾಗಿ "ಇಲ್ಲ" ಎಂದು. ಪ್ರತಿಯೊಂದು ಪ್ರದೇಶದಲ್ಲೂ ಗಣನೆಗೇ ಬರದಷ್ಟು ಕಡಿಮೆ ಸಂಖ್ಯೆಯವರು ಪ್ರಶ್ನೆಗೆ ಇತ್ಯಾತ್ಮಕವಾಗಿ ಉತ್ತರಿಸಿದ್ದಾರೆ.

ಇಪ್ಪತ್ತೊಂದು ಜನ ಮಾಹಿತಿದಾರರಲ್ಲಿ ಅಂತರ - ಬುಡಕಟ್ಟು ವಿವಾಹಕ್ಕೆ 'ಆಗಬಹುದು' ಎಂದು ಉತ್ತರ ನೀಡಿದವರು ಅಂತರಸಂತೆ ಮತ್ತು ಹುಣಸೂರುಗಳಿಂದ ತಲಾ ಒಬ್ಬೊಬ್ಬರು ಮತ್ತು ಎನ್. ಬೇಗೂರಿನಿಂದ 19 ಜನ. ಅದೇ ಪ್ರದೇಶಗಳಲ್ಲಿ ಜೇನು ಕುರುಬರ 50 ಜನ ಮಾಹಿತಿದಾರರು ಇತ್ಯಾತ್ಮಕ ಉತ್ತರ ಕೊಡುತ್ತಾರೆ. ಹುಣಸೂರಿನಿಂದ 44 ಜನ ಮತ್ತು ಹೆ.ದೇ. ಕೋಟೆ (ಅಂತರಸಂತೆ)ಯಿಂದ 6 ಜನ. ಇದರಿಂದಾಗಿ ಅಪಾರ ಸಂಖ್ಯೆಯ ಬಹುಪಕ್ಷೀಯರು ಅಂತರ - ಬುಡಕಟ್ಟು ವೈವಾಹಿಕ ಸಂಬಂಧವನ್ನು ಸಮ್ಮತಿಸುವುದಿಲ್ಲವೆಂದು ತಿಳಿಯುತ್ತದೆ. ಬೆಟ್ಟ ಕುರುಬರಲ್ಲಿ ಅದು ಅಂತರಸಂತೆ, ಎನ್. ಬೇಗೂರು (ಹೆ.ದೇ.ಕೋಟೆ) ಮತ್ತು ಹುಣಸೂರು ಪ್ರದೇಶಗಳಿಗೆ 18,80 ಮತ್ತು 05 ಅದೇ ಕ್ರಮದಲ್ಲಿ ಜೇನು ಕುರುಬರ ಪ್ರತಿಕ್ರಿಯೆ, 'ಮಿಶ್ರ' ವಿವಾಹಗಳನ್ನು ಒಲ್ಲದವರು 125,51 ಮತ್ತು 250 ಜನರು.

ಹೀಗೆ ಜಾತಿ ಮತ್ತು ಬುಡಕಟ್ಟು ಪ್ರತಿಕ್ರಿಯೆಗಳಲ್ಲಿ, ನಿಕಟವಾದ ಸಮಾಂತರತೆಯಿದೆ. ಅವರು ಸಾಮಾನ್ಯವಾಗಿ ಒಳಜಾತಿ ವಿವಾಹ ಸಂಬಂಧವನ್ನು ಒಪ್ಪುತ್ತಾರೆ, ಆದರೆ ಸ್ವಜಾತಿಯಿಂದ ಹೊರಗೆ ಅಥವಾ ಬುಡಕಟ್ಟು ಉಪ ಪಂಗಡಗಳ ನಡುವೆ ವಿವಾಹವನ್ನು ನಿರಾಕರಿಸುತ್ತಾರೆ. ವಾಸ್ತವವಾಗಿ ಜಾತಿ ಮತ್ತು ಬುಡಕಟ್ಟುಗಳ ನಡುವೆ ವ್ಯತ್ಯಾಸವನ್ನು ಗುರುತಿಸುವುದು ಮದುವೆಯ ಮಾದರಿ. ಏಕಪತ್ನಿ ವಿವಾಹ, ಬಹುಮೂಲ ಸಿದ್ಧಾಂತ, ವಿಧವಾ / ವಿಧುರ ಪುನರ್ವಿವಾಹ ಇವೆಲ್ಲ ಕಾಡು ಕುರುಬರಲ್ಲಿ ಚಾಲ್ತಿಯಲ್ಲಿವೆ. ಜಾತಿ ಸಮಾಜದಲ್ಲಿ ಏಕಪತ್ನೀತ್ವ ಮತ್ತು ಘಿಧುರ ಮರು ವಿವಾಹಗಳು ರೂಢಿಯಲ್ಲಿವೆ. ಬಹು ಮೂಲ ಸಿದ್ಧಾಂತ (Polygyny) ಮತ್ತು ವಿಧವಾ ಪುನರ್ವಿವಾಹಗಳು ವಿರಳ. ಅಧಿಕವಾಗುತ್ತಿರುವ ವರದಕ್ಷಿಣೆಯಿಂದ,.ನಿಷ್ಕರ್ಷಿತವಿವಾಹಗಳ ಜಗತ್ತಿನಲ್ಲಿ ವಿಧವೆಗೆ ಮತ್ತೆ ಮದುವೆಗೆ ಅವಕಾಶ ಇಲ್ಲವೇ ಇಲ್ಲ. ಬಹು ಮೂಲ ವ್ಯಕ್ತಿಗಳ ಸಂಬಂಧದಲ್ಲಿ ಒಂದುಗೂಡಲು ಬಹಳ ಕಡಿಮೆ ಜನರು ಅಪೇಕ್ಷಿಸಬಹುದು.

ಕಾಡು ಕುರುಬರಲ್ಲಿ ವಿವಾಹ ವಿಚ್ಛೇದನವನ್ನು ಪಡೆಯುವುದು ತುಂಬಾ ಕಷ್ಟವಲ್ಲ. ಹಿಂದೂ ಧರ್ಮದಲ್ಲಾಗಲಿ ಕುರುಬ ಜಾತಿ ಪದ್ಧತಿಯಲ್ಲಾಗಲಿ ಇರುವಂತೆ ಮದುವೆಯನ್ನು

ಒಂದು ಪವಿತ್ರ ಪದ್ಧತಿ ಎಂದು ಕಾಡು ಕುರುಬರು ಭಾವಿಸುವುದಿಲ್ಲ. ಹಾಗೆಯೇ ಕುರುಬರಲ್ಲಿರುವ ಹಾಗೆ ಹಿರಿಯರು ಮದುವೆಗಳನ್ನು ನಿಷ್ಕರ್ಷಿಸುವ ಸಾರ್ವತ್ರಿಕವಾದ ಪದ್ಧತಿಯು ಬುಡಕಟ್ಟಿನಲ್ಲಿ ಇಲ್ಲ. ಪತಿ - ಪತ್ನಿಯರು ಪರಸ್ಪರ ತಾವೇ ಆರಿಸಿಕೊಳ್ಳುತ್ತಾರೆ, ಮದುವೆಗೆ ಮುಂಚೆ ಕಾಡಿಗೆ ಓಡಿ ಹೋಗುತ್ತಾರೆ, ಕೆಲ ದಿನಗಳ ನಂತರ ಹಿಂದಿರುಗಿ ಹಾಡಿಗೆ ಬಂದ ನಂತರ ಎರಡೂ ಕಡೆಯ ತಂದೆ ತಾಯಂದಿರು ಮತ್ತು ಬುಡಕಟ್ಟಿನ ಹಿರಿಯರು ಅದನ್ನು ಅನುಮೋದಿಸುತ್ತಾರೆ. ಕುರುಬರಲ್ಲಿ ಯಾವಾಗಲೂ ಸಾಮಾನ್ಯವಾಗಿ ಜಾತಿ ಸಮಾಜದಲ್ಲಿಯಾಗಲಿ ಓಡಿ ಹೋಗುವುದರ ಮೂಲಕ ಮದುವೆ ಮಾಡಿಕೊಳ್ಳುವುದು ಇಲ್ಲವೇ ಇಲ್ಲ. ಎಲ್ಲೋ ಅಪರೂಪಕ್ಕೆ 'ಪ್ರೇಮ ವಿವಾಹ'ಗಳಲ್ಲಿ, ತಂದೆ ತಾಯಿಗಳು ಅಂತಹ ಸಂಬಂಧಕ್ಕೆ ವಿರೋಧವನ್ನು ವ್ಯಕ್ತಪಡಿಸುತ್ತಿದ್ದಾಗ ಮಾತ್ರ ಬುಡಕಟ್ಟು ಪದ್ಧತಿಯ ಕುರುಹುಗಳನ್ನು ಅಲ್ಲಿ ಗುರುತಿಸಬಹುದು.

ವಿವಾಹ ವಿಚ್ಛೇದನ ಮತ್ತು ಪುನರ್ವಿವಾಹಗಳನ್ನು ಕುರಿತ ಪ್ರಶ್ನೆಗೆ ಬುಡಕಟ್ಟು ಜನರ ಪ್ರತಿಕ್ರಿಯೆ ತುಂಬಾ ಸ್ವಾರಸ್ಯವಾಗಿದೆ. ಹೆ.ದೇ. ಕೋಟೆ ಮತ್ತು ಹುಣಸೂರು ಪ್ರದೇಶಗಳಿಗೆ ಸೇರಿದ 79 ಬೆಟ್ಟ ಕುರುಬರು 'ಸರಿ' ಎಂದು ಉತ್ತರ ಕೊಟ್ಟಿದ್ದಾರೆ, 39 ಜನರು ಮಾತ್ರ 'ಅಲ್ಲ' ಎಂದು ಉತ್ತರಿಸಿದ್ದಾರೆ. ಇದರಿಂದ ವಿಚ್ಛೇದನವು ಸಾಮಾನ್ಯವಾದ ಸಂಗತಿ. ಹಾಗೆಯೇ ವಿಚ್ಛೇದಿತರ ಪುನರ್ವಿವಾಹಗಳೂ ಸಾಮಾನ್ಯ ಎಂದು ಸೂಚಿತವಾಗುತ್ತದೆ. ಅದರಲ್ಲಿ ದೋಷವೇನೂ ಕಂಡು ಬರುವುದಿಲ್ಲ. ವಿವಾಹವನ್ನು ಪವಿತ್ರ ಬಂಧನ ಎಂದು ನೋಡುವ ಪದ್ಧತಿಯೂ ಇಲ್ಲ. ಅದೇ ಪ್ರದೇಶದ ಜೇನು ಕುರುಬರಲ್ಲಿ 368 ಜನ ಮಾಹಿತಿದಾರರು ವಿಚ್ಛೇದನ ಮತ್ತು ಪುನರ್ವಿವಾಹಗಳನ್ನು ಮಾಡಿಕೊಂಡಿರುವುದಾಗಿ ಹೇಳಿದ್ದಾರೆ. 112 ಜನರು ಮಾತ್ರ ಅದನ್ನು ನಿರಾಕರಿಸುತ್ತಾರೆ. ಅಂತರಸಂತೆಯಲ್ಲಿ 287, ಎನ್. ಬೇಗೂರಿನಲ್ಲಿ 30, ಹುಣಸೂರಿನಲ್ಲಿ 48 ಜನರು ಇತ್ಯಾತ್ಮಕ ಉತ್ತರ ಕೊಟ್ಟಿದ್ದಾರೆ. ಅದೇ ಕ್ರಮದಲ್ಲಿ 86.21 ಮತ್ತು 5 ಜನರು ನೇತ್ಯಾತ್ಮಕ ಪ್ರತಿಕ್ರಿಯೆ ತೋರಿಸಿದ್ದಾರೆ. ಇದರಿಂದ ಪತಿ-ಪತ್ನಿಯರು ಎಷ್ಟೋ ಮಟ್ಟಿನ ವ್ಯಕ್ತಿಗತ ಸ್ವಾತಂತ್ರ್ಯವನ್ನು ಪಡೆದಿದ್ದಾರೆ ಎಂಬುದು ಸೂಚಿತವಾಗುತ್ತದೆ. ತಮ್ಮ ಜೀವನದಲ್ಲಿ ಬುಡಕಟ್ಟು, ಹಿರಿಯರ, ತಂದೆ ತಾಯಿಯರ ಮತ್ತು ಸಂಬಂಧಿಗಳ ಅತ್ಯಂತ ಕಡಿಮೆ ಮಧ್ಯಪ್ರವೇಶದಿಂದ, ತಾವು ಸೂಕ್ತ ನಿರ್ಣಯ ಕೈಗೊಳ್ಳಲು ಅವರು ಸಮರ್ಥರಾಗುತ್ತಾರೆ. ಇದು ಜಾತಿ ಸಮಾಜಕ್ಕಿಂತ ಬೇರೆಯೇ ಆದ ಚಿತ್ರವಾಗಿದೆ.

ಜಾತಿ ಸಮಾಜದಲ್ಲಿ ಪತಿ ಅಥವಾ ಪತ್ನಿಯು, ತಮಗೆ ಸಂವಾದಿಯಾದ ಬುಡಕಟ್ಟು ಪತಿ ಪತ್ನಿಯರು ಸವಿಯುವಷ್ಟು ಪ್ರಮಾಣದ ಸ್ವಾತಂತ್ರ್ಯವನ್ನು ಆಯ್ಕೆಯ ಸ್ವಾತಂತ್ರ್ಯವನ್ನು ಪಡೆದಿಲ್ಲ. ಮದುವೆಯು ಕುಟುಂಬಗಳನ್ನು ಸಂಬಂಧಿಗಳ ಒಂದು ವಲಯವನ್ನು ಒಳಗೊಂಡಿರುತ್ತದೆ. ಆದ್ದರಿಂದ ಅಲ್ಲಿ ವಿವಾಹ ವಿಚ್ಛೇದನ ಅಷ್ಟು ಸುಲಭವಲ್ಲ. ವಾಸ್ತವಾಗಿ ಬೇರ್ಪಡುವುದಕ್ಕೆ ಅಥವಾ ವಿಚ್ಛೇದಿಸುವುದಕ್ಕೆ ಮುಂಚೆ ರಾಜಿ ಮಾಡಲು, ಕಿತ್ತು

ಹೋಗದಂತೆ ಸಂಬಂಧವನ್ನು ಕೂಡಿಸಲು ಹಲವು ಪ್ರಯತ್ನಗಳನ್ನು ಮಾಡಲಾಗುತ್ತದೆ. ಜೋಡಿಯ ನಡುವೆ ರಾಜಿ ಮಾಡಲು ಎಲ್ಲಾ ಪ್ರಯತ್ನಗಳೂ ವಿಫಲಗೊಂಡಾಗ ಕೊನೆಯದಾಗಿ ಉಳಿಯುವ ದಾರಿ ವಿಚ್ಛೇದನವಾಗಿರುತ್ತದೆ.

ಕಾಡು ಕುರುಬರಿಗೆ, "ಓಡಿಹೋಗಿ ಮದುವೆ ಮಾಡಿಕೊಳ್ಳುವುದು ಉತ್ತಮವೆಂದು ಭಾವಿಸುವಿರಾ?" ಎಂದು ಪ್ರಶ್ನೆ ಕೇಳಲಾಯಿತು. ಅದಕ್ಕೆ ಸಾಕಷ್ಟು ಹೆಚ್ಚು ಸಂಖ್ಯೆಯಲ್ಲಿ ಮಾಹಿತಿದಾರರು ಹೌದು ಎಂದು ಉತ್ತರಿಸುತ್ತಾರೆ, ಗಣನೀಯ ಪ್ರಮಾಣದವರು 'ಇಲ್ಲ' ಎನ್ನುತ್ತಾರೆ. ಬೆಟ್ಟ ಕುರುಬರಲ್ಲಿ ಹೆ.ದೇ.ಕೋಟೆ ಮತ್ತು ಹುಣಸೂರಿನ ಒಟ್ಟು 46 ಜನ 'ಹೌದು' ಎನ್ನುತ್ತಾರೆ. 77 ಜನರು 'ಇಲ್ಲ' ಎನ್ನುತ್ತಾರೆ. ಜೇನು ಕುರುಬರ ಪೈಕಿ ಹೆ.ದೇ.ಕೋಟೆ ಮತ್ತು ಹುಣಸೂರುಗಳ 173 ಜನ ಮಾಹಿತಿದಾರರು ಇತ್ಯಾತ್ಮಕವಾಗಿಯೂ, 304 ಜನರು ನೇತ್ಯಾತ್ಮಕವಾಗಿಯೂ ಪ್ರತಿಕ್ರಿಯೆ ವ್ಯಕ್ತಪಡಿಸಿದ್ದಾರೆ.

ಕಾಡು ಕುರುಬರು ಈಗ ಅರಣ್ಯ ಬುಡಕಟ್ಟು ಜನರಾಗಿ ಉಳಿದಿಲ್ಲ. ಅವರನ್ನು ಕಾಡುಗಳಿಂದ ಹೊರತಂದು ಅಂಚಿನಲ್ಲಿ, ಅನೇಕ ವೇಳೆ ಬಯಲು ನಾಡಿನಲ್ಲಿ ನೆಲೆಗೊಳಿಸಲಾಗಿದೆ. ಬುಡಕಟ್ಟು ಜನರಿಗೂ ಸಮೀಪದ ಹಳ್ಳಿಗಳ ಇತರರಿಗೂ ನಡುವೆ ಅಂತರ್ ಕ್ರಿಯೆ ನಡೆದಿದೆ. ಅಂತಹ ಪರಿಸ್ಥಿತಿಗಳಲ್ಲಿ ಅಭಿಪ್ರಾಯಗಳು, ಮೌಲ್ಯಗಳು, ರೂಢಿ, ಸಂಪ್ರದಾಯಗಳು, ಆಚರಣೆಗಳು ಇವುಗಳ ವಿನಿಮಯ ನಡೆಯುತ್ತದೆ. ಅದು ಸಾಮಾನ್ಯವಾಗಿ ನಡೆಯುವ ಪ್ರಕ್ರಿಯೆ. "ನಿಷ್ಕರ್ಷಿತ ವಿವಾಹ" ಪದ್ಧತಿಯನ್ನು ಒಪ್ಪಿಕೊಂಡಿರುವ ಹಿಂದೂ ಬಹುಪಕ್ಷೀಯರು ಓಡಿ ಹೋಗಿ ಮದುವೆಯಾಗುವ ಬುಡಕಟ್ಟು ಪದ್ಧತಿಯನ್ನೂ, ಅದರಲ್ಲಿರುವ ನೈತಿಕತೆಯನ್ನು ಅಪಹಾಸ್ಯ ಮಾಡಿ ಖಂಡಿಸಬಹುದು. ಜಾತಿ ಪಂಗಡದ ಆಚರಣೆಗಳು ಮೇಲು ಮಟ್ಟದವೆಂಬಂತೆ ತೋರುವುದರಿಂದ ಬುಡಕಟ್ಟು ಜನರೂ ಕ್ರಮೇಣ ಅವುಗಳ ಕಡೆಗೆ ವಾಲುತ್ತಿದ್ದಾರೆ.

ವಿವಾಹ ಮತ್ತು ಕುಟುಂಬ ಎರಡೂ ಮುಖ್ಯವಾದ ಸಾಮಾಜಿಕ ಪದ್ಧತಿಗಳಾಗಿದ್ದು, ಕುರುಬರು ಮತ್ತು ಕಾಡು ಕುರುಬರಲ್ಲಿ ಪ್ರವರ್ತಿಸುತ್ತಿವೆ. ಜಾತಿ ಮತ್ತು ಬುಡಕಟ್ಟುಗಳಲ್ಲಿ ಕೆಲವು ಹೋಲಿಕೆಗಳಿದ್ದರೂ ಕೆಲವು ಮಹತ್ವದ ವ್ಯತ್ಯಾಸಗಳನ್ನು ಅವು ಪ್ರದರ್ಶಿಸುತ್ತವೆ. ಜಾತಿಯು ಬುಡಕಟ್ಟೆಂದು ಹೇಳಿಕೊಂಡು ನಿಭಾಯಿಸಿಕೊಳ್ಳಲು ಹೋದರೂ ಜಾತಿ ಬುಡಕಟ್ಟು ವ್ಯತ್ಯಾಸಗಳನ್ನು ಅಷ್ಟು ಸುಲಭವಾಗಿ ಅಳಿಸಿಹಾಕಲು ಸಾಧ್ಯವಾಗುವುದಿಲ್ಲ. ಭೂ ಒಡೆತನ, ಸಾಮಾನ್ಯ ಆರ್ಥಿಕ ಸ್ಥಾನಮಾನ, ಅವಿಭಕ್ತ ಕುಟುಂಬ ವಿನ್ಯಾಸ, ನಿಷ್ಕರ್ಷಿತ ವಿವಾಹ, ರಕ್ತ ಸಂಬಂಧದ ನಂಟುಗಳು, ಪತಿ-ಪತ್ನಿಯರಿಗೆ ಸ್ವಾತಂತ್ರ್ಯದ ಕೊರತೆ, ಪರಸ್ಪರ ಅಗಲಲು ಅಥವಾ ವಿಚ್ಛೇದಿಸಿಕೊಳ್ಳಲು ಕೂಡ ಸ್ವಾತಂತ್ರ್ಯವಿಲ್ಲದಿರುವಿಕೆ, ಪವಿತ್ರ ಸಂಸ್ಕಾರವಾಗಿ ವಿವಾಹ - ಇವೆಲ್ಲವೂ ಜಾತಿ ಸಮಾಜದ ಅಂಗಗಳಾಗಿವೆ.

ಕುರುಬರು ಮತ್ತು ಕಾಡು ಕುರುಬರು ಇಬ್ಬರೂ ಪಿತೃವಂಶ ಪ್ರಧಾನರಾದವರು. ಆದರೆ ಕಾಡು ಕುರುಬರಲ್ಲಿ ಮಹಿಳೆಗಿರುವ ಸ್ಥಾನ, ಜಾತಿ ಹಿಂದೂ ಕುರುಬ ಮಹಿಳೆಯರಿಗಿಂತ

ತುಂಬಾ ಮೇಲು ಮಟ್ಟದ್ದು. ಇದು ಬುಡಕಟ್ಟು ಮಹಿಳೆಯರು ಸವಿಯುವ ಸ್ವಾತಂತ್ರ್ಯದ ರೀತಿಯಲ್ಲಿ ಮತ್ತು ಪ್ರಮಾಣದಲ್ಲಿ ಪ್ರತಿಬಿಂಬಿತವಾಗಿದೆ. ತಮ್ಮ ಮದುವೆಯ ಸಂಗಾತಿಯನ್ನು ಆರಿಸಿಕೊಳ್ಳಲು ಸ್ವಾತಂತ್ರ್ಯ, ವಿವಾಹ ವಿಚ್ಛೇದನಕ್ಕೆ, ವಿಚ್ಛೇದಿತರ ಹಾಗೂ ವಿಧವೆಯರ ಮರುವಿವಾಹಕ್ಕೆ ಅವರಿಗಿರುವ ಸ್ವಾತಂತ್ರ್ಯ ಕೆಲವು ಮುಖ್ಯವಾದ ವ್ಯತ್ಯಾಸಗಳನ್ನು ತೋರಿಸುತ್ತವೆ. ಬುಡಕಟ್ಟುಗಳಲ್ಲಿ ಅವಿಭಕ್ತ ಕುಟುಂಬವಾಗಲಿ, ರಕ್ತಸಂಬಂಧಿಗಳ ವಲಯವಾಗಲಿ, ಪೂರ್ತಿ ಇಲ್ಲವೇ ಇಲ್ಲವೆಂದು ಹೇಳಲಿಕ್ಕಾಗದಾದರೂ ಕಾರ್ಯ ರೂಪದಲ್ಲಿಲ್ಲವೆಂದೇ ಹೇಳಬಹುದು. ಭೂ ಒಡೆತನ ಮತ್ತು ಆರ್ಥಿಕ ಸ್ಥಾನಮಾನಗಳಿಂದಾಗಿ ಅವರು ಅಂಚಿಗೆ ತಳ್ಳಲ್ಪಟ್ಟ ಪಂಗಡವಾಗುತ್ತಾರೆ. ಅವರು ನೂತನ ಮೌಲ್ಯಗಳನ್ನು ಅಳವಡಿಸಿಕೊಳ್ಳಲು, ಮೂಲ ನೆಲೆಯಿಂದ ಅವರನ್ನು ಸ್ಥಾನಪಲ್ಲಟಗೊಳಿಸಿರುವುದು ಒಂದು ಮುಖ್ಯ ಕಾರಣವಾಗಿದೆ. ಹಾಗೆಯೇ ಅದು ಕಾಲಕ್ರಮದಲ್ಲಿ ಹೆಚ್ಚು ಹೆಚ್ಚಾಗಿ ಜಾತಿ ಲಕ್ಷಣಗಳನ್ನು ಪಡೆದುಕೊಳ್ಳಲು ದಾರಿಯಾಗಬಹುದು. ಇದು ಪ್ರಕ್ರಿಯೆಯ ಪ್ರಾರಂಭ ಅಷ್ಟೆ.

* * *

ಅಧ್ಯಾಯ : ಏಳು

# ರಾಜಕೀಯ - ಧಾರ್ಮಿಕ ಸಂಘಟನೆ

ಈ ಅಧ್ಯಾಯದಲ್ಲಿ ಕುರುಬರು ಮತ್ತು ಕಾಡು ಕುರುಬರ ರಾಜಕೀಯ ಚಟುವಟಿಕೆಗಳನ್ನೂ ಸಂಘಟನೆಯನ್ನೂ ವಿಶ್ಲೇಷಿಸಲು ಪ್ರಯತ್ನಿಸಿದೆ. ಒಬ್ಬ ಜಗದ್ಗುರುವಿರುವ ಕುರುಬರ ರಾಜ್ಯವ್ಯಾಪೀ ಧಾರ್ಮಿಕ ಸಂಘಟನೆ ಹೇಗೆ ಸಾಧಿತವಾಗುತ್ತಿದೆಯೆಂಬುದನ್ನೂ ಅರಿಯಲು ಪ್ರಯತ್ನಿಸುತ್ತೇನೆ. ರಾಜ್ಯಮಟ್ಟದ ಒಂದು ಧಾರ್ಮಿಕ ಕೇಂದ್ರವೂ ಒಂದು ಮಠವೂ ಅಸ್ತಿತ್ವಕ್ಕೆ ಬಂದಿವೆ. ರಾಜಕಾರಣ ಮತ್ತು ಧರ್ಮ ಎರಡೂ ಒಂದರಿಂದೊಂದು ಸ್ವತಂತ್ರವಾಗಿರುವುದು ಆದರ್ಶ ಸ್ಥಿತಿಯಾದರೂ ವಸ್ತುತಃ ಅವು ಹಲವು ಶತಮಾನಗಳಿಂದ ಜಗತ್ತಿನಾದ್ಯಂತ ಒಂದಕ್ಕೊಂದು ಪೂರಕವಾಗಿವೆ.

ಭಾರತೀಯ ಸಂದರ್ಭದಲ್ಲಿ ವಿಶೇಷವಾಗಿ ಭಾರತವು ಸ್ವಾತಂತ್ರ್ಯವನ್ನು ಗಳಿಸಿದ ಮೇಲೆ ರಾಜಕಾರಣ, ಧರ್ಮ ಮತ್ತು ಜಾತಿಗಳ ನಡುವಣ ಸಂಬಂಧಗಳು ಬಲವತ್ತರವಾದ ಮತ್ತು ಹೆಚ್ಚು ಕಾಲ ನಿಲ್ಲುವಂತಹ ಸಂಘಟನೆಗಳನ್ನು ಹುಟ್ಟು ಹಾಕುತ್ತಿವೆ. ಸ್ವತಂತ್ರ್ಯಪೂರ್ವ ಕಾಲದಲ್ಲಿ ಚಿತ್ರ ಇಷ್ಟು ಗಂಭೀರವಾಗಿರಲಿಲ್ಲ. ಹಿಂದೂ - ಮುಸ್ಲಿಂ ವಿರೋಧವಿದ್ದಿತು. ಅದನ್ನು ಅನೇಕ ವೇಳೆ, ದೇಶವನ್ನು ಆಳುತ್ತಿದ್ದ ಬ್ರಿಟಿಷರ "ಒಡೆದು ಆಳುವ" ನೀತಿಗೆ ಆರೋಪಿಸಲಾಗಿದೆ. ಈಗಲಾದರೂ ಪ್ರತಿಯೊಂದು ರಾಜಕೀಯ ಪಕ್ಷವೂ ತತ್ವತಃ 'ಜಾತ್ಯತೀತತೆ'ಯನ್ನು ಘಂಟಾಘೋಷವಾಗಿ ಹೇಳಿಕೊಳ್ಳುತ್ತದೆ. ಆದರೆ ಆಚರಣೆಯಲ್ಲಿ ನೋಡಿದರೆ ಸಮುದಾಯ - ಜಾತಿ ಪರಿಗಣನೆಗಳು ತಡೆಯೇ ಇಲ್ಲದೆ ಹರಡುತ್ತಿವೆ. ಜಾತಿಗಳು ಮತ್ತು ಉಪಜಾತಿಗಳು ಬೇರೆ ಬೇರೆ ಹಂತಗಳಲ್ಲಿ ಸಂಘಟಿತರಾಗಿ ಕೊನೆಗೆ "ಅಖಿಲ ಭಾರತ ... ಮಹಾಸಭಾ", ಆಗುತ್ತವೆ. ಅತ್ಯಂತ ಸೂಕ್ಷ್ಮವಾದ ಧಾರ್ಮಿಕ ವ್ಯತ್ಯಾಸಗಳನ್ನು ದೊಡ್ಡದು ಮಾಡಲಾಗುತ್ತದೆ. ಮೂಲಭೂತವಾದವೂ ಧರ್ಮಾಂಧತೆಯೂ ಬೇರು ಬಿಟ್ಟಿರುವಂತೆ ತೋರುತ್ತದೆ.

ಈ ಪರಿಸ್ಥಿತಿಗೆ ಯಾವುದೇ ಒಂದು ನಿರ್ದಿಷ್ಟ ರಾಜಕೀಯ ಪಕ್ಷವಾಗಲಿ, ಅವರ ಸಿದ್ಧಾಂತವಾಗಲಿ ಹೊಣೆಯಲ್ಲ. ಎಲ್ಲಾ ಪ್ರಧಾನ ಮತ್ತು ಸಣ್ಣ, ರಾಷ್ಟ್ರೀಯ ಮತ್ತು

ಪ್ರಾದೇಶಿಕ ರಾಜಕೀಯ ಪಕ್ಷಗಳು ಹಲವು ದಶಕಗಳಿಂದ ಜನರಿಗೆ ಭಾವನಾತ್ಮಕವಾಗಿ ಮನವಿ ಮಾಡಿಕೊಂಡು ಓಟು ಪಡೆದು ಅಧಿಕಾರವನ್ನು ಸೆಳೆದುಕೊಳ್ಳಲು ಪ್ರಯತ್ನಿಸುತ್ತಾ ಇದಕ್ಕೆ ತಮ್ಮ ಕೊಡುಗೆಯನ್ನು ನೀಡಿವೆ. ಅಲ್ಲದೆ, ಅಧಿಕಾರದಲ್ಲಿರುವ ಪಕ್ಷಗಳು ಜನರನ್ನು ಮರುಳು ಮಾಡಲು ಜನಪ್ರಿಯ ಯೋಜನೆಗಳನ್ನು ಜಾರಿಗೆ ತರಲು ಕೊನೆಯೇ ಇಲ್ಲದೆ ಪ್ರಯತ್ನಗಳನ್ನು ನಡೆಸಿವೆ; ಅಧಿಕಾರಕ್ಕೆ ಬರಬೇಕೆಂದು ಆಶಿಸುತ್ತಿರುವ ಪಕ್ಷಗಳು ಕೂಡ ಅಂಥವೇ ವ್ಯೂಹಗಳನ್ನು ರಚಿಸಿವೆ. ದೇಶದ ಐಕ್ಯತೆ ಅಖಂಡತೆಗಳು ಬರಿ ಬಾಯಿ ಮಾತುಗಳಾಗಿವೆ; ಹಲವು ಹತ್ತು ಶಕ್ತಿಗಳು ಅದೇ ಸಮಯದಲ್ಲಿ ಜನರನ್ನು ಒಡೆಯುತ್ತಲೇ ಹೋಗುತ್ತಿವೆ. ಈ ವಿಶಾಲ ಉಪಖಂಡದಲ್ಲಿ ಜನರು ಜಾತಿ / ಸಮುದಾಯ, ಧರ್ಮಗಳ ಆಧಾರದಿಂದ ಒಡೆದಿಲ್ಲದ ಒಂದೇ ಒಂದು ರಾಜ್ಯವೂ ಕಾಣಿಸುವುದಿಲ್ಲ. ಅವರಲ್ಲಿ ಬಹುಜನರು ವಸತಿ, ಆಹಾರ, ಶಿಕ್ಷಣಗಳಲ್ಲಿ ಅದೇ ಬಗೆಯ ಸಮಸ್ಯೆಗಳನ್ನು ಕಿತ್ತು ತಿನ್ನುತ್ತಿರುವ ಬಡತನವನ್ನು ಎದುರಿಸುತ್ತಿದ್ದಾರೆ. ಈ ಸಮಸ್ಯೆಗಳನ್ನು ಸಾಮಾನ್ಯವಾಗಿ ಒಂದು ನಿರ್ದಿಷ್ಟ ಜಾತಿ, ಸಮುದಾಯ ಅಥವಾ ಧರ್ಮಕ್ಕೆ ಸಂಬಂಧಿಸಿದ ಅಂಶಗಳೆಂದು ಹೇಳಲಾಗುತ್ತದೆಯೇ ಹೊರತು ಭಾರತೀಯ ಸಮಾಜದ ವಿಸ್ತಾರವಾದ ಭಾಗಕ್ಕೆ ಹಾನಿಯನ್ನುಂಟು ಮಾಡುತ್ತಿರುವ ಸಾಮಾನ್ಯ ವಿಚಾರಗಳೆಂದು ಹೇಳುವುದಿಲ್ಲ. ಕುರುಬರು ಮತ್ತು ಕಾಡು ಕುರುಬರು ಸಂಘಟಿತವಾಗಿ, ಅಧಿಕಾರದಲ್ಲಿರುವ ಶಕ್ತಿಗಳನ್ನು ತಮಗೆ ಸೌಲಭ್ಯಗಳನ್ನು ನೀಡಬೇಕೆಂದು ಒತ್ತಾಯ ಪಡಿಸುತ್ತಿರುವುದರಲ್ಲಿ ಹೊಸದೇನೂ ಇಲ್ಲ, ಅದು ವಿಚಿತ್ರವೂ ಅಲ್ಲ.

ಈಗ ಪರಿಶೀಲನೆಯಲ್ಲಿರುವ ತಂಡಗಳ ರಾಜಕೀಯ - ಧಾರ್ಮಿಕ ಸಂಘಟನೆಯ ವಿವೇಚನೆಗೆ ತೊಡಗುವುದಕ್ಕೆ ಮುಂಚೆ ಸ್ವಲ್ಪ ತಡೆದು 19 ಮತ್ತು 20ನೆಯ ಶತಮಾನಗಳ ಕೆಲವು ಮುಖ್ಯ ಸಾಮಾಜಿಕ - ರಾಜಕೀಯ ಹಾಗೂ ಆರ್ಥಿಕ ಚಿಂತಕರ ತತ್ವ ಸಿದ್ಧಾಂತಗಳನ್ನು ನೋಡೋಣ. ಅವರ ಬರವಣಿಗೆಗಳು ಮತ್ತು ಅಭಿಪ್ರಾಯಗಳು ಈಚಿನವರೆಗೂ ಜಾಗತಿಕ ವ್ಯವಸ್ಥೆಯ ಮೇಲೆ ಅಪಾರವಾದ ಪ್ರಭಾವವನ್ನು ಬೀರಿವೆ. ಈಗಲೂ ಕಾಲಕಾಲಕ್ಕೆ ಅವುಗಳನ್ನು ಉದ್ಧರಿಸಲಾಗುತ್ತದೆ. ಕಾರ್ಲ್ ಮಾರ್ಕ್ಸ್, ಮ್ಯಾಕ್ಸ್ ವೆಬರ್, ಗಾಂಧೀಜಿ ಹಾಗೂ ಅಂಬೇಡ್ಕರ್, ಕೆಲವು ಮುಖ್ಯ ವಿಚಾರಗಳಲ್ಲಿ ಭಿನ್ನಮತ ಹೊಂದಿದ್ದರೂ, ಅನೇಕ ಅಂಶಗಳಲ್ಲಿ ಸಮಾನತೆಯನ್ನು ತೋರಿಸಿದ್ದಾರೆ.

ಕಾರ್ಲ್ ಮಾರ್ಕ್ಸ್ ಒಬ್ಬ ಜರ್ಮನ್ ಯೆಹೂದಿ. ಇಂಗ್ಲೆಂಡ್ ಮತ್ತು ಪಶ್ಚಿಮದ ಇತರ ದೇಶಗಳಲ್ಲಿನ ಕೈಗಾರಿಕಾ ಕ್ರಾಂತಿ, ಅವನಿಗೆ ಆರ್ಥಿಕ ವಿಶ್ಲೇಷಣೆ ನಡೆಸಲು ಮುಖ್ಯವಾದ ಆಧಾರವನ್ನು ಒದಗಿಸಿತು. ಧರ್ಮವನ್ನು ಕುರಿತು ಪ್ರಾಸಂಗಿಕವಾಗಿ ಎರಡು ಮಾತುಗಳನ್ನು ಹೇಳಿ, ಅದು ಜನರನ್ನು ಜಡಗೊಳಿಸುವ ಮತ್ತು ಬರಿಸುವ ವಸ್ತು ಎಂದು ಪಟ್ಟಿ ಹಾಕುತ್ತಾನೆ. ಬಂಡವಾಳಶಾಹೀ ಕೈಗಾರಿಕಾ ಸಮಾಜದಲ್ಲಿ ಸುಖಲೋಲುಪರಾದ ಬಂಡವಾಳ ಶಾಹಿಗಳಿಗೂ ಶ್ರಮಿಕ ವರ್ಗದವರಿಗೂ ನಡುವೆ ಇರುವ ಸಂಬಂಧವನ್ನು ಕುರಿತು

ಅವನಿಗೆ ಮುಖ್ಯವಾಗಿ ಕಾಳಜಿಯಿತ್ತು. ಏಷಿಯಾಟಿಕ್ ಸಮಾಜದ ವಿಚಾರವಾಗಿ ಮಾರ್ಕ್ಸ್‌ನಿಗೆ ತಿಳಿದಿದ್ದುದು ಅತ್ಯಲ್ಪ. ಕೃಷಿ ಆರ್ಥಿಕತೆಯನ್ನಾಗಲಿ, ಪ್ರಧಾನವಾಗಿ ಕೃಷಿಕವಾದ ಸಮಾಜವನ್ನಾಗಲಿ ತೆಗೆದುಕೊಂಡು ಅದರ ಕೆಡುಕುಗಳನ್ನು ಅವನು ವಿಶ್ಲೇಷಿಸಿಲ್ಲ. ಮುಖ್ಯವಾಗಿ ಒಡೆತನ ತಪ್ಪಿದ ವರ್ಗಗಳ, ಕೈಗಾರಿಕಾ ಸಮಾಜಗಳಲ್ಲಿನ ಶ್ರಮಿಕ ವರ್ಗದ ಶೋಷಣೆಯ ಸೈದ್ಧಾಂತಿಕತೆಗೆ ಕಾರ್ಲ್‌ಮಾರ್ಕ್ಸ್ ಬದ್ಧನಾಗಿದ್ದನು. ಆದ್ದರಿಂದ ಅವನು ಬಂಡವಾಳಶಾಹಿಗೆ ಸಮಾನಾಂತರವಾಗಿ ಸಾಗುವ ಕಮ್ಯೂನಿಸ್ಟ್ ಸಿದ್ಧಾಂತವನ್ನು ಅಧ್ಯಯನ ಮಾಡುವುದು, ಅದನ್ನು ರೂಪಿಸಿ, ಅದನ್ನು ಕುರಿತು ಬರೆಯುವುದು ಇವಿಷ್ಟಕ್ಕೆ ತನ್ನೆಲ್ಲಾ ಸಮಯ ಮತ್ತು ಶಕ್ತಿಗಳನ್ನು ಮೀಸಲಾಗಿಟ್ಟನು.

ಉಚ್ಛ್ರಾಯ ಕಾಲದಲ್ಲಿ ಮಾರ್ಕ್ಸ್‌ವಾದವು (ಮಾರ್ಕ್ಸಿಸಂ) ಜಗತ್ತಿನ ಬೇರೆ ಬೇರೆ ಭಾಗಗಳಲ್ಲಿ, ಕೈಗಾರಿಕಾ ಮತ್ತು ಪ್ರಧಾನವಾಗಿ ಕೃಷಿ ಆಧಾರಿತ ಸಮಾಜಗಳಲ್ಲಿ ಕಾಡುಗಿಚ್ಚಿನಂತೆ ಹರಡಿತು. ಬೇರೆ ಬೇರೆ ಸಮಾಜಗಳಲ್ಲಿ ಕಮ್ಯೂನಿಸ್ಟ್ ಸಿದ್ಧಾಂತದಲ್ಲಿ ವ್ಯತ್ಯಾಸಗಳು ಕಾಣಿಸಿಕೊಂಡವು. ಕೊನೆಗೆ, ಪೂರ್ವ ಯೂರೋಪಿಯನ್ ದೇಶಗಳಲ್ಲಿ ಮತ್ತು ಸಮಾಜಗಳಲ್ಲಿ ಅದನ್ನು ತೊರೆಯಲಾಗಿದೆ. ಕ್ಯೂಬಾ, ಚೈನಾ ದೇಶಗಳು ಈಗಲೂ ಕಮ್ಯೂನಿಸ್ಟ್ ಸಿದ್ಧಾಂತವನ್ನು ಹೇಳಿಕೊಳ್ಳುತ್ತವೆ, ಆದರೆ ಚೈನಾದೇಶದಲ್ಲಿ ಕೈಗಾರಿಕೋದ್ಯಮೀಕರಣ ಮತ್ತು ಮಾರುಕಟ್ಟೆಯ ಅರ್ಥ ವ್ಯವಸ್ಥೆಗಳು ಕಾಲಿಡುತ್ತಿರುವುದರಿಂದ ಬಂಡವಾಳಶಾಹಿಯ ಅತಿಕ್ರಮಣವು ಕಂಡು ಬರುತ್ತಿದೆ. ಭಾರತದಲ್ಲೂ ಮಾರ್ಕ್ಸ್ - ಲೆನಿನ್ - ಮಾವೋ ಅವರ ಸಿದ್ಧಾಂತಗಳಿಂದಲೂ ರಷ್ಯ ಮತ್ತು ಚೈನಾಗಳಿಂದಲೂ ಸ್ಫೂರ್ತಿ ಪಡೆಯುತ್ತಿರುವ ಕಮ್ಯೂನಿಸ್ಟರಿದ್ದಾರೆ. ಭಾರತದ ಸಾಮಾಜಿಕ ರಚನೆಯಲ್ಲೇ ಕಮ್ಯೂನಿಸ್ಟ್ ಸಿದ್ಧಾಂತವನ್ನು ನಿತ್ರಾಣಗೊಳಿಸುವ ಪರಿಣಾಮವಿದೆ. "ನಕ್ಸಲೈಟ್" ಮತ್ತು "ಪೀಪಲ್ಸ್‌ವಾರ್‌ಗ್ರೂಪ್" ಅಂತಹ ತೀವ್ರಗಾಮೀ ತಂಡಗಳಲ್ಲಿ ಮಾತ್ರವೇ ಅದು ಉಳಿದುಕೊಳ್ಳಬಹುದು. ಅದು ಆರ್ಥಿಕ ಶಕ್ತಿಯಲ್ಲ, ರಾಜಕೀಯ ಶಕ್ತಿಯಂತೂ ಅಲ್ಲವೇ ಅಲ್ಲ.

ಹತ್ತೊಂಬತ್ತನೆಯ ಶತಮಾನದ ಕೊನೆಯ ಭಾಗಕ್ಕೆ ಸೇರುವ ಇನ್ನೊಬ್ಬ ಚಿಂತಕ ಮ್ಯಾಕ್ಸ್‌ವೆಬರ್, ಅಧಿಕಾರಶಾಹಿಯ ಶಕ್ತಿ ರಚನೆ ಮತ್ತು ಪಾತ್ರಗಳ ಕೌಶಲಯುಕ್ತ ವಿಶ್ಲೇಷಣೆಯಿಂದ ಬೌದ್ಧಿಕ ಮತ್ತು ಶೈಕ್ಷಣಿಕ ವಲಯಗಳಲ್ಲಿ ಪ್ರಭಾವ ಬೀರಿದ್ದಾನೆ. ಆರ್ಥಿಕ ಸ್ಥಿತಿಗತಿ ಕುರಿತ ವಿಶ್ಲೇಷಣೆ, ಅದಕ್ಕಿಂತ ಮುಖ್ಯವಾಗಿ ಆರ್ಥಿಕ ಚಟುವಟಿಕೆಗಳನ್ನು ಪ್ರೋತ್ಸಾಹಿಸುವುದರಲ್ಲಿ ಧರ್ಮದ ಇತ್ಯಾತ್ಮಕ ಪಾತ್ರಗಳನ್ನು ಅವನು ಪರಿಶೀಲಿಸಿದ್ದಾನೆ. ಮಾರ್ಕ್ಸ್‌ನು ಧರ್ಮವನ್ನು ಜಡಗೊಳಿಸುವ ವಸ್ತುವೆಂದು ತಳ್ಳಿಹಾಕಿದ್ದರೆ, ವೆಬರ್, ಪಶ್ಚಿಮ ದೇಶಗಳಲ್ಲಿ 'ಆಧುನಿಕ ಬಂಡವಾಳ ಶಾಹಿ'ಯ ಬೆಳವಣಿಗೆಯಲ್ಲಿ ಧರ್ಮದ ಪಾತ್ರವನ್ನು ವಿಶ್ಲೇಷಿಸುತ್ತಾನೆ. ವಿವಿಧ ಪ್ರಾಟೆಸ್ಟೆಂಟ್ ಪಂಗಡಗಳ ಧಾರ್ಮಿಕ ಬೋಧನೆಗಳನ್ನು ವಿವೇಚಿಸಿ, ಹೇಗೆ 'ಕ್ಯಾಲ್ವಿನ್ ತತ್ವ'ವು ಆಧುನಿಕ ಬಂಡವಾಳಗಾರಿಕೆಯನ್ನು ಪ್ರೋತ್ಸಾಹಿಸುತ್ತದೆ

ಎಂಬುದನ್ನು ತೋರಿಸಿದ್ದಾನೆ. 'ಅಧಿಕಾರ' ರಚನೆಯನ್ನು, ವಿಶೇಷವಾಗಿ ಆಕರ್ಷಕ ನಾಯಕತ್ವವನ್ನು ಕುರಿತ ಆತನ ವಿಶ್ಲೇಷಣೆಯನ್ನು ಒಬ್ಬ ಯಶಸ್ವೀ ರಾಜಕಾರಣ ನಾಯಕನ ಬಹು ಮುಖ್ಯವಾದ ಗುಣ ಎಂದು ಅನೇಕರು ಹೇಳುತ್ತಾರೆ. ವೆಬರನ ಚಿಂತನೆಗಳು ಇನ್ನು ಸೈದ್ಧಾಂತಿಕವಾಗಿ ಬೆಳೆಯಬೇಕಾಗಿದೆ.

ಗಾಂಧಿ ಮತ್ತು ಅಂಬೇಡ್ಕರ್ ಸಮಕಾಲೀನರಾಗಿದ್ದರು. ಆದರೆ ಸಮಕಾಲೀನ ಹಾಗೂ ಇಪ್ಪತ್ತನೆಯ ಶತಮಾನದ ಭಾರತದ ಇತರ ಸಾಮಾಜಿಕ ಸಮಸ್ಯೆಗಳನ್ನು ಕುರಿತು ಭಿನ್ನ ರೀತಿಗಳಲ್ಲಿ ಪ್ರತಿಕ್ರಿಯೆ ವ್ಯಕ್ತಪಡಿಸಿದರು. ಗಾಂಧೀ ಚಿಂತನೆ ಮತ್ತು ಕಾರ್ಯಗಳಲ್ಲಿ ರಾಜಕಾರಣ ಮತ್ತು ಧರ್ಮ ಇವುಗಳ ಬೆಸುಗೆಯನ್ನು ನೋಡಬಹುದು. ಆದರೆ ಅಂಬೇಡ್ಕರರು ಬ್ರಿಟಿಷ್ ಸಾಮ್ರಾಜ್ಯದ ಆಳಿಕೆಯಿಂದ ಸ್ವಾತಂತ್ರ್ಯವನ್ನು ಗಳಿಸಿಕೊಳ್ಳುವ ರಾಜಕೀಯದ ಪ್ರಧಾನವಾಹಿನಿಯೊಂದಿಗೆ ಹೊಂದಿಕೊಳ್ಳಲಿಲ್ಲ. ಸ್ವಾತಂತ್ರ್ಯ ಹೋರಾಟದಲ್ಲಿ ಗಾಂಧಿ ಮತ್ತು ಕಾಂಗ್ರೆಸ್ ಮಧ್ಯರಂಗವನ್ನು ಹಿಡಿದಿದ್ದರು. ಗಾಂಧಿಯವರು ರೂಪಿಸಿದ ಸತ್ಯಾಗ್ರಹ, ಅಹಿಂಸೆ, ಸ್ವದೇಶಿ ಮೊದಲಾದ ಅನೇಕ ಪ್ರಯೋಗ ತಂತ್ರಗಳು ಆಳುವ ಬ್ರಿಟಿಷರಿಗೆ ಅಡ್ಡಿಯನ್ನುಂಟು ಮಾಡುವ ಉದ್ದೇಶ ಹೊಂದಿದ್ದುವು. ಈ ಕಾರ್ಯತಂತ್ರಗಳು ಇಂದಿಗೂ ಭಾರತದಲ್ಲಿ ಮಾತ್ರವಲ್ಲ, ಪ್ರಪಂಚದ ಇತರ ಭಾಗಗಳಲ್ಲೂ ಪ್ರಚಲಿತವಾಗಿವೆ. ಈ ಅರ್ಥದಲ್ಲಿ ಗಾಂಧೀವಾದವು (Gandhism) ತುಂಬಾ ಜೀವಂತವಾಗಿರುವ ಸಿದ್ಧಾಂತ. ಅದು ಒಂದು ಶಕ್ತಿಯಾಗಬಲ್ಲದೆ ಎಂಬುದನ್ನು ವೇಗವಾಗಿ ಬದಲಾಗುತ್ತಿರುವ ಭೌಗೋಳಿಕ ದೃಶ್ಯದ ಭವಿಷ್ಯತ್ತು ಹೇಳಬೇಕು.

ಅಂಬೇಡ್ಕರ್ ಚಿಂತನೆಯು (Ambedkarism) ಇಂದು ಹೆಚ್ಚು ಕಡಿಮೆ ಗಾಂಧೀವಾದಕ್ಕೆ ಸಮಾನಾಂತರ ಸಿದ್ಧಾಂತವಾಗಿ ರೂಪುಗೊಳ್ಳುತ್ತಿದೆ. ಭಾರತದ ಈ ಇಬ್ಬರು ಮಹಾನ್ ಪುತ್ರರ ಸಾಮಾಜಿಕ ಆಧಾರಗಳು ಬೇರೆ ಬೇರೆ. ಇಬ್ಬರೂ ಪಾಶ್ಚಿಮಾತ್ಯ ಶಿಕ್ಷಣ ಪಡೆದವರೇ. ಆದರೆ ಗಾಂಧಿ ಹಿಂದೂ ಪರಂಪರೆಗಳೊಂದಿಗೆ ಬಹುವಾಗಿ ಹೊಂದಿಕೊಂಡರು; ಅಂಬೇಡ್ಕರ್, ಚತುರ್ವರ್ಣ, ಅನುಕ್ರಮಿಕ ಶ್ರೇಣಿಯಿಂದ ಕೂಡಿದ ಜಾತಿ ಪದ್ಧತಿ, ಅಸ್ಪೃಶ್ಯತೆಯ ಆಚರಣೆ ಇವುಗಳನ್ನು ಎತ್ತಿ ಹಿಡಿದ ಸಂಪ್ರದಾಯಗಳ ವಿರುದ್ಧವಾಗಿ ಬಂಡೆದ್ದರು. ತಾವು ಹಿಂದುವಾಗಿ ಆದರೆ ಅಸ್ಪೃಶ್ಯನಾಗಿ ಹುಟ್ಟಿದ್ದರೂ ಎಂದಿಗೂ ಹಿಂದುವಾಗಿ ಸಾಯುವುದಿಲ್ಲ ಎಂದು ಅಂಬೇಡ್ಕರ್ 1930ರಲ್ಲಿಯೇ ಘೋಷಿಸಿದರು. ಹಿಂದೂ ಧರ್ಮವನ್ನು ಕುರಿತು ಅವರು ಮಾಡಿದ ವಿಮರ್ಶೆ ಅವರನ್ನು ಅಧಾರ್ಮಿಕರನ್ನಾಗಿ ಮಾಡಲಿಲ್ಲ, ಅಥವಾ ಮಾರ್ಕ್ಸ್ ಮಾಡಿದಂತೆ ಜನರನ್ನು ನಿರ್ವೀರ್ಣ್ಣಗೊಳಿಸುತ್ತದೆ ಎಂದು ಧರ್ಮವನ್ನು ತಿರಸ್ಕರಿಸಲಿಲ್ಲ. ಅದಕ್ಕೆ ಬದಲಾಗಿ ಹಿಂದೂ ಧರ್ಮಕ್ಕೆ ಒಂದು ಬದಲಿಯನ್ನು ಹುಡುಕಲು ಅವರನ್ನು ಅದು ತೊಡಗಿಸಿತು. ಬೌದ್ಧ ಧರ್ಮವು ಅತ್ಯಂತ ವಿಚಾರಯುತವಾದ ದಯಾಭರಿತವಾದ ಧಾರ್ಮಿಕ ಸಿದ್ಧಾಂತ ಎಂಬುದು ಅವರಿಗೆ ಮನವರಿಕೆಯಾಯಿತು. ಭಾರತದ ಅಸ್ಪೃಶ್ಯರು ಹಿಂದೆ ಬೌದ್ಧರಾಗಿದ್ದರು ಆದ್ದರಿಂದ ಇಂದು ಅವರು ಬೌದ್ಧ

ಧರ್ಮವನ್ನು ಅಂಗೀಕರಿಸಿ, ಹಿಂದೂ ಧರ್ಮವು ಅವರ ಮೇಲೆ ಹೇರಿರುವ ಅಸ್ಪೃಶ್ಯತೆಯ ಅಪಮಾನದಿಂದ ವಿಮುಕ್ತರಾಗಬೇಕು ಎಂದು ಪ್ರತಿಪಾದಿಸಿದರು.

ಭಾರತೀಯ ಜನ ಕೋಟಿಯ ಒಂದು ವರ್ಗವು ಅನುಭವಿಸುತ್ತಿರುವ ಹಾನಿಗಳನ್ನು ಕುರಿತು ವಾದವನ್ನು ಏಕಾಗ್ರಗೊಳಿಸಿ, ಅಂಬೇಡ್ಕರ್ ಅದನ್ನು ಬ್ರಿಟಿಷರೊಂದಿಗೆ ನಡೆಸಿದ "ದುಂಡು ಮೇಜಿನ ಪರಿಷತ್ತಿ"ನಲ್ಲಿ ಒಂದು ಮುಖ್ಯವಾದ ವಿಚಾರವನ್ನಾಗಿ ಮಾಡಿದರು; ಹಿಂದೂ ಧರ್ಮದ ನೇತ್ಯಾತ್ಮಕ ಪಾತ್ರವನ್ನು ಒತ್ತಿಹೇಳಿ, ಅಸ್ಪೃಶ್ಯರನ್ನು ಪ್ರತ್ಯೇಕವಾದ ಹಿಂದೂಯೇತರವರ್ಗವನ್ನಾಗಿ (ಅ-ಹಿಂದೂ) ಪರಿಗಣಿಸಬೇಕೆಂದು ವಾದಿಸಿದರು. ರಾಜಕೀಯ ಪ್ರಜಾಪ್ರಭುತ್ವವನ್ನು ಸಾಮಾಜಿಕ ಪ್ರಜಾಪ್ರಭುತ್ವವು ಅನುಮೋದಿಸಬೇಕು. ಹಿಂದೂ ಧರ್ಮದಲ್ಲಿ ಅದು ಸಂಭವಿಸುವುದು ಸಾಧ್ಯವಿಲ್ಲ ಎಂದು ಅವರು ನಂಬಿದರು. ಬದುಕಿನ ಕೊನೆಯ ದಿನಗಳಲ್ಲಿ ಅಂಬೇಡ್ಕರ್ ತಮ್ಮ ಕೆಲವು ಅನುಚರರೊಂದಿಗೆ ಬೌದ್ಧಧರ್ಮ ದೀಕ್ಷೆ ಪಡೆದರು. ಈಗ ಬೌದ್ಧ ಧರ್ಮವು ಒಂದು ಸಾಮಾಜಿಕ ಶಕ್ತಿಯಾಗಿಲ್ಲ. ರಾಜಕೀಯ ಶಕ್ತಿಯೂ ಆಗಿಲ್ಲ. ಹಿಂದಿನ ಅಸ್ಪೃಶ್ಯ ಜಾತಿಗಳಿಗೆ ಸೇರಿದ್ದ ಕೆಲವರು ಬೌದ್ಧರಾಗಿ ಮತಾಂತರಗೊಂಡಿರುವುದರಿಂದ ಸ್ವಲ್ಪ ಮಟ್ಟಿಗೆ ಉಳಿದುಕೊಂಡಿದೆ.

ನುರಿತ ಮಾನವ ಶಾಸ್ತ್ರಜ್ಞರೂ ಸಮಾಜ ಶಾಸ್ತ್ರಜ್ಞರೂ ಆಗಿದ್ದ ಅಂಬೇಡ್ಕರ್, ವಕೀಲರಾಗಿ ಅರ್ಹತೆ ಪಡೆದರು. ಮಹಾರಾಷ್ಟ್ರದ ಅಸ್ಪೃಶ್ಯ ಜಾತಿಯೊಂದರಲ್ಲಿ ಜನಿಸಿದ ಅವರು ಭಾರತದ ಮಹಾ ಮೇಧಾವಿಗಳಲ್ಲಿ ಒಬ್ಬರು. ಭಾರತದ ಸಾಮಾಜಿಕ ಸಮಸ್ಯೆಗಳನ್ನು ಕುರಿತು ಗಾಂಧಿ ಮತ್ತು ಅಂಬೇಡ್ಕರ್ ಅವರ ನಡುವೆ ಕಾರ್ಯ ನೀತಿಗಳಲ್ಲಿ ಏನೇ ವ್ಯತ್ಯಾಸಗಳಿರಲಿ, ಭಾರತ ಸಂವಿಧಾನದ ಕರಡು ರಚನಾ ಸಮಿತಿಯ ಅಧ್ಯಕ್ಷರಾಗಿ, ಆಮೇಲೆ ಜವಹರಲಾಲ್ ನೆಹರೂ ಅವರ ಸಚಿವ ಸಂಪುಟದಲ್ಲಿ ಕೇಂದ್ರದ ಕಾನೂನು ಸಚಿವರಾಗಿ ಅಂಬೇಡ್ಕರ್, ದೇಶಕ್ಕೆ ಸಲ್ಲಿಸಿರುವ ಸೇವೆ ಸ್ಮರಣೀಯವಾದುದು. ಹಿಂದೂ ಸ್ತ್ರೀಯರ ಹಕ್ಕುಗಳನ್ನು ಸ್ಥಾನಮಾನವನ್ನು ರಕ್ಷಿಸಿ ಭರವಸೆ ಕೊಡುವ ಉದ್ದೇಶದಿಂದ ಅವರು ಮಂಡಿಸಿದ ಹಿಂದೂ ಕೋಡ್ ಮಸೂದೆಯು ಪಾರ್ಲಿಮೆಂಟಿನಲ್ಲಿ ಬಿದ್ದುಹೋದಾಗ, ಅವರು ಸಚಿವ ಸಂಪುಟದಿಂದ ಹೊರಬಂದರು.

ಅಂಬೇಡ್ಕರ್ ಅವರು ನೀಡಿದ ಹೆಚ್ಚು ಸ್ಥಿರವಾದ ಕೊಡುಗೆಗಳೆಂದರೆ ಬಹುಶಃ, ಸಂವಿಧಾನದಲ್ಲಿ ಎಸ್.ಸಿ ಮತ್ತು ಎಸ್.ಟಿ ಗಳಿಗಾಗಿ ಮೀಸಲಾತಿ ನೀತಿಯ ಅವಕಾಶಗಳನ್ನು ಕಲ್ಪಿಸಿದುದು. ಅವರು ಬಹುಶಃ ಅದು ಖಾಯಂ ಆಗುವಂಥದೆಂದು ಮುಂಗಂಡಿರಲಾರರು. ಅವರ ದೃಷ್ಟಿಯಲ್ಲಿ ಅದು ಕಾಲಕಾಲಕ್ಕೆ ಮೌಲ್ಯಮಾಪನ ಮಾಡಬೇಕಾದ ತಾತ್ಕಾಲಿಕ ಕ್ರಮವಾಗಿತ್ತು. ಶಿಕ್ಷಣ, ಸರಕಾರೀ ನೌಕರಿ, ರಾಜಕೀಯ ಪ್ರಾತಿನಿಧ್ಯ ಈ ಕ್ಷೇತ್ರಗಳಲ್ಲಿ ಸ್ಥಾನಗಳನ್ನು ಕಾದಿರಿಸುವುದರ ಪರಿಣಾಮ ಏನಾಗುತ್ತದೆಂದು ತಿಳಿದುಕೊಳ್ಳಲು ಮೊದಲು ಹತ್ತು ವರ್ಷಗಳ ಕಾಲಾವಧಿಯನ್ನು ನಿಗದಿಗೊಳಿಸಲಾಯಿತು. ರಾಜ್ಯದ ವಿಧಾನ ಸಭೆಗಳಲ್ಲಿಯೂ ಪಾರ್ಲಿಮೆಂಟಿನಲ್ಲಿಯೂ ಸ್ಥಾನಗಳನ್ನು ಕಾದಿರಿಸುವುದಲ್ಲದೆ, ಸಾಮಾನ್ಯವಾದ ಆರ್ಥಿಕ ಉತ್ತಮತೆಯನ್ನು ಲಕ್ಷ್ಯವಾಗಿರಿಸಿಕೊಳ್ಳಲಾಯಿತು.

ಅಂಬೇಡ್ಕರಿಸಂ ಹಲವು ವಿಧದಲ್ಲಿ ಈಗ ಎಲ್ಲವನ್ನು ಹಾಳು ಮಾಡುತ್ತಿರುವ ಸಿದ್ಧಾಂತವಾಗಿದೆ. ಇಂದು ಮೀಸಲಾತಿ ಪ್ರಯೋಜನಗಳನ್ನು ಕೇಳುತ್ತಿರುವವರು ಕೇವಲ ಎಸ್.ಸಿ ಮತ್ತು ಎಸ್.ಟಿಗಳಲ್ಲ. ಕೆಲವೇ ಅಪವಾದಗಳನ್ನು ಹೊರತು ಪಡಿಸಿದರೆ ಪ್ರತಿಯೊಂದು ಜಾತಿ, ಉಪ-ಜಾತಿ, ಧಾರ್ಮಿಕ ಪಂಗಡಗಳು 'ಮೀಸಲಾತಿ ರೊಟ್ಟಿ'ಯ ಒಂದು ತುಂಡಿಗೂ ಒತ್ತಾಯ ಪಡಿಸುತ್ತಿದ್ದಾರೆ. ಇದಕ್ಕಿರುವ ಒಂದೇ ಒಂದು ತಡೆ, ಮೀಸಲಾತಿಯು 50%ನ್ನು ಮೀರಕೂಡದು ಎಂಬ ಸುಪ್ರೀಂಕೋರ್ಟಿನ ಆದೇಶ ಎಂದು ತೋರುತ್ತದೆ. ಆದರೆ ವಸ್ತುತಃ ಕರ್ನಾಟಕ ಮತ್ತು ತಮಿಳುನಾಡುಗಳು, ಕೆಲವು ಪಂಗಡಗಳಿಗೆ ಹಲವು ಬಗೆಗಳಿಂದ ಈ ಮಿತಿಯನ್ನು ದಾಟಿ ಮೀಸಲಾತಿ ನೀಡಿವೆ. ಶೋಷಿತ ವರ್ಗಗಳ ಹಿತಕ್ಕಾಗಿ ಹೋರಾಡಿದರು ಎಂಬುದಷ್ಟರಿಂದ ಅಂಬೇಡ್ಕರ್ ಮತ್ತು ಮಾರ್ಕ್ಸ್ ಹೋಲಿಕೆಗೆ ನಿಲ್ಲುತ್ತಾರೆ. ಕೈಗಾರಿಕಾ ಸಮಾಜದಲ್ಲಿ ವಂಚಿತ ಶ್ರಮಿಕ ವರ್ಗಕ್ಕೆ ನೆರವು ನೀಡುವ ನೀತಿಯಾಗಿ ಮಾರ್ಕ್ಸ್ "ಸಂರಕ್ಷಕ ತಾರತಮ್ಯ" (Protective discrimination)ವನ್ನು ಕಲ್ಪಿಸಲಿಲ್ಲ, ಆದರೆ ಅಂಬೇಡ್ಕರ್ ಅವರು ಮಿಶ್ರ ಅರ್ಥವ್ಯವಸ್ಥೆಯಲ್ಲಿ ಭಾರತೀಯ ಸಮಾಜದ ವಂಚಿತ ವರ್ಗಗಳಿಗೆ ಅಲ್ಪಸ್ವಲ್ಪ ಪ್ರಯೋಜನ ದೊರೆಯುವಂತೆ ಮಾಡಿದರು.

ಈಗ ದೇಶವು ಮೀಸಲಾತಿಯ ಪ್ರಯೋಜನಗಳನ್ನು ಒಂದು ರಾಜಕೀಯ ಪೋಷಣೆಯಾಗಿ ವಿಸ್ತರಿಸಲು ಸಿದ್ಧವಾಗಿದೆ. ಷೆಡ್ಯೂಲಿನಲ್ಲಿ ಸೇರಿಸುತ್ತಿರುವ ಪಂಗಡಗಳಿಗೆ ನೀಡಿರುವ ಮೀಸಲಾತಿ ಸೌಲಭ್ಯಗಳು ಹೆಚ್ಚು ಕಡಿಮೆ ಖಾಯಂ ಆಗಿ ಉಳಿಯುತ್ತಿವೆ. ಒಂದು ಪಂಗಡವು ಬೇಡಿಕೆಯನ್ನು ಮುಂದಿಡುವುದೆಂಬುದೊಂದಲ್ಲದೆ ಇಲ್ಲಿ ಬೇರೆ ನ್ಯಾಯ - ನೀತಿ ಯಾವುದೂ ಇಲ್ಲ. ಒತ್ತಡ ರಾಜಕೀಯವು ಅಂತಿಮವಾಗಿ ಯಶಸ್ಸುಗಳಿಸುತ್ತದೆ. ಷೆಡ್ಯೂಲಿಗೆ ಬೇರೆ ಬೇರೆ ಹಲವು ಪಂಗಡಗಳನ್ನು ಸೇರಿಸಬೇಕೆಂದು ವಿವಿಧ ರಾಜ್ಯ ಸರಕಾರಗಳು ಬೇಡಿಕೆಯನ್ನು ಮುಂದಿಡುತ್ತಿವೆ. ಕೇಂದ್ರದಲ್ಲಿ ಪಾರ್ಲಿಮೆಂಟು ಅದನ್ನು ಅನುಮೋದಿಸುತ್ತದೆ. ಭಾರತದ ರಾಷ್ಟ್ರಪತಿಗಳು 'ತಮ್ಮ ಸಮ್ಮತಿಯನ್ನು' ನೀಡುತ್ತಾರೆ. ಈ ರೀತಿಯಲ್ಲಿ ಭಾರತಾದ್ಯಂತ ಬೇಕಾದಷ್ಟು ಹೊಸ ಪಂಗಡಗಳು ಮೀಸಲಾತಿ ಪ್ರಯೋಜನಗಳನ್ನು ಪಡೆದಿವೆ.

ಎಸ್.ಸಿ/ ಎಸ್.ಟಿ ವರ್ಗವಿರುವುದರ ಜೊತೆಗೆ, ಅಖಿಲ ಭಾರತ ಮಟ್ಟದಲ್ಲಿ ಮಂಡಲ್ ಆಯೋಗ, ರಾಜ್ಯ ಮಟ್ಟದಲ್ಲಿ ವಿವಿಧ ಹಿಂದುಳಿದ ವರ್ಗಗಳ ಆಯೋಗಗಳು, ಶೂದ್ರ ವರ್ಣಕ್ಕೆ ಸೇರಿದ ಜಾತಿಗಳನ್ನು ಪಟ್ಟಿಗೆ ಹಿಂದುಳಿದವರ್ಗಗಳೆಂದು ಸೇರಿಸುತ್ತಲೇ ಇವೆ. ಬಿ.ಸಿ.ಗಳಲ್ಲದೆ ಇತರ ಹಿಂದುಳಿದ ವರ್ಗಗಳು (ಒ.ಬಿ.ಸಿ.), ಸಾಮಾಜಿಕವಾಗಿಯೂ ಶೈಕ್ಷಣಿಕವಾಗಿಯೂ ಹಿಂದುಳಿದ ವರ್ಗಗಳು (ಎಸ್.ಇ.ಬಿಸಿ) ಮತ್ತು ಇತರ ಅನೇಕ ಬಗೆಗಳನ್ನು ಪಟ್ಟಿ ಮಾಡಿ, ಬೇರೆ ಬೇರೆ ಬಗೆಯ ಮೀಸಲಾತಿಗಳನ್ನು ಪಡೆಯಲು ಅವರಿಗೆ ಅರ್ಹತೆ ನೀಡಿವೆ. ಆದರೆ ಇಲ್ಲಿ ತುಂಬಾ ಕಳವಳಕಾರಿಯಾದ ಅಂಶವು ಎಸ್.ಸಿ / ಎಸ್.ಟಿ ವರ್ಗಕ್ಕೆ ಸಂಬಂಧಿಸಿದೆ. ಅನೇಕ ಎಸ್‌ಸಿಯೇತರ ಎಸ್‌ಟಿಯೇತರ ಪಂಗಡಗಳು ಹಾಗೆಯೇ

ದಾಟಿಕೊಂಡು ಹೋಗಿದ್ದಾರೆ, ಇಲ್ಲವೆ ಪರಿಶಿಷ್ಟಕ್ಕೆ ತಮ್ಮನ್ನು ಸೇರ್ಪಡೆ ಮಾಡಿಸಿಕೊಳ್ಳುವುದರಲ್ಲಿ ಯಶಸ್ವಿಯಾಗಿದ್ದಾರೆ. ವಡ್ಡರು (ಭೋವಿಗಳೆಂದೂ ಇವರಿಗೆ ಹೆಸರು) ಮತ್ತು ಲಂಬಾಣಿಗಳು ಹೀಗೆ ಎಸ್‌ಸಿ ವರ್ಗಕ್ಕೆ ಸೇರಿಕೊಂಡದ್ದಾಗಿದೆ. ಅವರು ಎಂದೂ ಅಸ್ಪೃಶ್ಯತೆಯ ಸಮಸ್ಯೆಗಳನ್ನು ಅನುಭವಿಸಿದವರಲ್ಲ. ಹಾಗೆಯೇ ಕೆಲವು ಪಂಗಡಗಳು ಈಗ ಎಸ್‌ಟಿ ವರ್ಗದೊಳಕ್ಕೆ ಅತಿಕ್ರಮಿಸುತ್ತಿವೆ. ನಾಯಕ, ತಳವಾರ, ಬೇಡ, ವಾಲ್ಮೀಕಿ (ಎರಡೂ ಸಮಾನಾರ್ಥಕಗಳು)ಗಳು ಈಗಾಗಲೇ ಎಸ್‌ಟಿ ಪಟ್ಟಿಯನ್ನು ಪಡೆದಾಗಿದೆ. ಮೇಲಿನ ವರ್ಗಗಳಿಗೆ ಸಮನೆಂದು ಹೇಳಿಕೊಳ್ಳುವ ಪರಿವಾರ ಮತ್ತು ರಾಜಪರಿವಾರ ಪಂಗಡವು ಈಗ ಎಸ್‌ಟಿ ಮೀಸಲಾತಿಯಲ್ಲಿ ಪಾಲು ಪಡೆಯಲು ಹವಣಿಸುತ್ತಿದೆ. ಕತೆಯ ವಿಷಾದದ ಭಾಗವೆಂದರೆ, 1980ರಲ್ಲಿ ಮೈಸೂರು ಜಿಲ್ಲೆಯಲ್ಲಿ ನಡೆಸಿದ ಒಂದು ಸಂಶೋಧನೆಯ ಪ್ರಕಾರ ವೈದ್ಯಕೀಯ, ಇಂಜಿನಿಯರಿಂಗ್ ಮೊದಲಾದ ವೃತ್ತಿಪರ ಶಿಕ್ಷಣ ಸಂಸ್ಥೆಗಳಲ್ಲಿ ಪರಿವಾರ ಜಾತಿ ಪಂಗಡವು ಮೀಸಲು ಸ್ಥಾನಗಳೆಲ್ಲವನ್ನು ಕಬಳಿಸಿದೆ, ಒಬ್ಬನೇ ಒಬ್ಬ ಬುಡಕಟ್ಟು ವಿದ್ಯಾರ್ಥಿಗೂ ಅಲ್ಲಿ ಕಾಲಿಡಲು ಅವಕಾಶವಾಗಿಲ್ಲ. ಈಗ ಕುರುಬರು ಇದೇ ತಂತ್ರವನ್ನು ಅಳವಡಿಸಿಕೊಂಡಿದ್ದಾರೆ. ಕಾಡು ಕುರುಬರೂ (ಬುಡಕಟ್ಟು) ಕುರುಬರೂ (ಜಾತಿ) ಒಂದೇ ಎಂದು ವಾದಿಸುತ್ತಿದ್ದಾರೆ. ಸಂಘಟಿತರಾಗಿ ಸರಕಾರದ ಮೇಲೆ ಒತ್ತಡ ಹೇರುತ್ತಿದ್ದಾರೆ. ಕುರುಬ ಮತ್ತು ಪರಿವಾರ ಜಾತಿ ಪಂಗಡಗಳು ತಮ್ಮನ್ನು ಎಸ್‌ಟಿ ವರ್ಗಕ್ಕೆ ಸೇರಿಸಿಕೊಳ್ಳುವುದರಲ್ಲಿ ಯಶಸ್ವಿಯಾದ ಪಕ್ಷದಲ್ಲಿ, ಜಾತಿ ಮತ್ತು ಬುಡಕಟ್ಟುಗಳಿಗಿರುವ ವ್ಯತ್ಯಾಸವನ್ನು ಕಡೆಗಣಿಸಿ ಅವರು ಒಂದೇ, ಸಮಾನಾರ್ಥಕಗಳು ಎಂದು ಘೋಷಿಸಿದ ಪಕ್ಷದಲ್ಲಿ ಅದು ಬುಡಕಟ್ಟುಗಳಿಗೆ ಮರಣವನ್ನು ಸಾರುವ ಘೋಷಣೆಯಾಗುತ್ತದೆ. ಇನ್ನು ಬಹುಶಃ ಎಂದೆಂದಿಗೂ ಅವರು ಚೇತರಿಸಿಕೊಳ್ಳುವುದು ಸಾಧ್ಯವಾಗುವುದೇ ಇಲ್ಲ.

ಇಂದು ಅಂಬೇಡ್ಕರ್ ಅವರನ್ನು 'ಮೀಸಲಾತಿಯ ಪವಾಡ' ಮಾಡಿದ ಪ್ರವಾದಿಯಾಗಿ ಪರಿಗಣಿಸಿದ್ದಾರೆ. ಹಲವು ಹತ್ತು ಜಾತಿ ಪಂಗಡಗಳು ಅವರನ್ನು ಆರಾಧಿಸುತ್ತವೆ. ಹಿಂದುಳಿದ ವರ್ಗಗಳ ಪ್ರಗತಿಗಾಗಿ ಮೀಸಲಾತಿಯನ್ನು ಮಂತ್ರದಂಡವಾಗಿ ಆಡಿಸುತ್ತಿರುವ 'ಸಣ್ಣಪುಟ್ಟ ಪ್ರವಾದಿ'ಗಳೂ ಇದ್ದಾರೆ. ಇದು ಜಾತಿ - ಬುಡಕಟ್ಟು ಆಧಾರವನ್ನು ಹೊಂದಿರುವ 'ಶುದ್ಧಾಂಗವಾದ' ಮತ್ತು 'ಸರಳವಾದ' ಮೀಸಲಾತಿ. ಒಂದು ಸಾರಿ ಒಂದು ಜಾತಿಯು ಮೀಸಲಾತಿ ವಲಯಕ್ಕೆ ಸೇರಿತೆಂದ ಮೇಲೆ ಅದನ್ನು ಅಲ್ಲಿಂದ ಕದಲಿಸುವ ಪ್ರಶ್ನೆಯೇ ಇಲ್ಲ. ಮೀಸಲಾತಿ ರದ್ದುಪಡಿಸುವ ಯೋಜನೆಯಾಗಲಿ, ಯೋಜನೆಯ ಪರಿಣಾಮವನ್ನು ಮೌಲ್ಯಮಾಪನ ಮಾಡುವ ಕ್ರಮಗಳಾಗಲಿ ಇಲ್ಲವೇ ಇಲ್ಲ. ಮೀಸಲು ವರ್ಗಗಳಿಗೆ ಸೇರಿದ ಮತದಾರರು ಮತ್ತು ರಾಜಕೀಯ ಮುಖಂಡರು ಈ ನೀತಿಯು ಮುಂದುವರಿಯಬೇಕೆಂದು ಒತ್ತಾಯಪಡಿಸುತ್ತಾರೆ. ಈಗಾಗಲೇ ಅದು ಎಸ್.ಸಿ ಮತ್ತು ಎಸ್.ಟಿಗಳಿಗೆ ಸಂಬಂಧಿಸಿದಂತೆ ಸುಮಾರು ಐದು ದಶಕಗಳಿಂದ ಬಿ.ಸಿ.ಗಳಿಗೆ ಸೇರಿದಂತೆ ಇನ್ನೆರಡು ದಶಕ ಆಮೇಲಿನಿಂದ

ನಡೆದು ಬರುತ್ತಿದೆ. ಇಪ್ಪತ್ತನೆಯ ಶತಮಾನದ ತಿರುವಿನಲ್ಲಿ ಮದರಾಸು ಪ್ರೆಸಿಡೆನ್ಸಿಯಲ್ಲಿ ತೊಡಗಿದ ಹಿಂದುಳಿದ ವರ್ಗಗಳ ಚಟುವಟಿಕೆ, ಮುಂಬಯಿ ಪ್ರಸಿಡೆನ್ಸಿ ಹಾಗೂ ಹಿಂದಿನ ಮೈಸೂರು ಸಂಸ್ಥಾನದಲ್ಲಿ ಎದ್ದ ಚಳುವಳಿಗಳನ್ನು ಪರಿಗಣಿಸಿದ್ದೇ ಆದರೆ ಅದು "ಅಂಬೇಡ್ಕರ್ ಸೂತ್ರ"ಕ್ಕಿಂತಲೂ ಹಲವು ದಶಕಗಳಷ್ಟು ಹಿಂದಿನದೆನ್ನುವುದು ವೇದ್ಯವಾಗುತ್ತದೆ. ಆದರೂ ನಿಜವಾಗಿ ಇದರ ಫಲಾನುಭವಿಗಳು ಯಾರು, ನೀತಿಯು ರಾಷ್ಟ್ರವನ್ನು ಯಾವಕಡೆಗೆ ಒಯ್ದಿದೆ ಎನ್ನುವುದನ್ನು ಮಾತ್ರ ಯಾರೂ ಅರಿಯರು. ಜಾತೀಯತೆ, ಭ್ರಷ್ಟಚಾರ ಮತ್ತು ಸ್ವಜನ ಪಕ್ಷಪಾತ ಇವು ಜನ ಬೆಂಬಲವನ್ನು ಪಡೆಯಲೆತ್ನಿಸುವ ಜಾಡ್ಯವಾಗಿವೆ.

'ಅಂಬೇಡ್ಕರಿಸಂ' ಇನ್ನು ಎಷ್ಟು ಕಾಲ ಹೀಗೆ ಉಬ್ಬರದ ಅಲೆಯನ್ನು ಏರಬಹುದು? ಅಂಬೇಡ್ಕರ್ ಅವರು ಕಲ್ಪಿಸಿಕೊಂಡಿದ್ದ ಉದ್ದೇಶಗಳನ್ನು ಅದು ಈಡೇರಿಸಬಲ್ಲದೆ? ಉದ್ದೇಶಿಸಿರದ ಪರಿಣಾಮಗಳನ್ನು ಪ್ರೋತ್ಸಾಹಿಸಲು ಯೋಜನೆಯು ಎಡೆಗೊಟ್ಟಿಲ್ಲವೆ? ಇವು ಮತ್ತು ಇಂತಹ ಪ್ರಶ್ನೆಗಳು ಮುಂದೊಂದು ದಿನ ವಿಚಾರ ಮಾಡಬೇಕಾದ ಪ್ರಶ್ನೆಗಳಾಗಿವೆ. ಮಾರ್ಕ್ಸ್‌ವಾದವು ಹೇಗೆ ಕಾರ್ಲ್‌ಮಾರ್ಕ್ಸ್ ಕಣಿ ನುಡಿದ ಗುರಿಗಳನ್ನು ಸಾಧಿಸಲು ಸಮರ್ಥವಾಗಲಿಲ್ಲನೋ, ಹಾಗೆಯೇ ಬಹುಶಃ ಈ "ಸಂರಕ್ಷಕ ತಾರತಮ್ಯ"ವೂ ಕೂಡ ಸಾಧನೆಯ ಒಲವುಳ್ಳ ಚೈತನ್ಯದ ಉದಯವನ್ನು ವಿಳಂಬಗೊಳಿಸಬಹುದು. ಆದಿಕಾಲದ ನಿಷ್ಠೆಗಳು ಮತ್ತು ವಿಭಜಕ ಪ್ರವೃತ್ತಿಗಳು ಮತ್ತೆ ತಲೆಯೆತ್ತಿ ಇದನ್ನು ಶಾಂತಿ - ಪ್ರೇಮಿ ರಾಷ್ಟ್ರವಾಗದ ಹಾಗೆ ಮಾಡಬಹುದು.

ಈಗ ನಾವು ಕುರುಬರ ಜೀವನದ ಧಾರ್ಮಿಕ ಮುಖವನ್ನು ಸ್ವಲ್ಪ ಪರಿಶೀಲಿಸಬಹುದು. ಕುರುಬರು ಹಿಂದುಗಳೆಂದು ಈಗಾಗಲೇ ತೋರಿಸಿಕೊಡಲಾಗಿದೆ. ಹಿಂದೂಧರ್ಮದ ಪದ್ಧತಿಗಳು, ನಂಬಿಕೆಗಳು, ರೂಢಿಗಳು ಮತ್ತು ಸಂಪ್ರಾದಾಯಗಳು ಸಾಮಾನ್ಯವಾಗಿ ಕುರುಬರಲ್ಲಿ ಕಂಡುಬರುತ್ತವೆ. ಜಾತಿಪದ್ಧತಿ ಮತ್ತು ಹಿಂದೂಧರ್ಮ ಎಷ್ಟುಮಟ್ಟಿಗೆ ಹೆಣೆದುಕೊಂಡಿವೆಯೆಂದರೆ ಯಾವ ಬಿಂದುವಿನಲ್ಲಿ ಜಾತಿ ಪದ್ಧತಿ ಪ್ರಾರಂಭವಾಗಿ ಧರ್ಮ ಕೊನೆಗೊಳ್ಳುತ್ತದೆ ಅಥವಾ ಎಲ್ಲಿ ಜಾತಿ ಮುಗಿದು ಧರ್ಮವು ಪ್ರಾರಂಭವಾಗುತ್ತದೆ ಎಂಬುದನ್ನು ಬೊಟ್ಟು ಮಾಡಿ ತೋರಿಸುವುದು ತುಂಬಾ ಕಷ್ಟ. ಲಕ್ಷಣದಿಂದಲೇ ಎಲ್ಲಾ ಹಿಂದುಗಳೂ ಒಂದಲ್ಲಾ ಒಂದು ಜಾತಿಯಲ್ಲಿ ಜನಿಸುತ್ತಾರೆ. ತಮ್ಮ ಅನುದಿನದ ಜೀವನದಲ್ಲಿ ಅದನ್ನು ಹೇಳಿಕೊಳ್ಳುತ್ತಾರೆ. ತತ್ವತಃ ಹಾಗೂ ಆಚರಣೆಯಲ್ಲಿ ಹಿಂದೂ ಧರ್ಮವು ಜಾತಿ ಪದ್ಧತಿಯನ್ನು ಅನುಮೋದಿಸುತ್ತದೆ. ಜನನವು ಜಾತಿ ಉತ್ಕೃಷ್ಟತೆಯ ಕುರುಹಾದುದರಿಂದ ಆರೋಪಿತ ಗುಣಗಳನ್ನು ಮೌಲ್ಯಗಳನ್ನು ಹೊಂದಿದೆ. ಕ್ರೈಸ್ತಧರ್ಮ ಮತ್ತು ಇಸ್ಲಾಂ ಧರ್ಮಗಳಂತೆ ಹಿಂದೂ ಧರ್ಮಕ್ಕೆ ಮತಾಂತರ ಎನ್ನುವುದಿಲ್ಲ.

ಜಾತಿಯ ಸದಸ್ಯತ್ವದಂತೆಯೇ ಧಾರ್ಮಿಕ ವಿಶಿಷ್ಟತೆಯೂ ಜನನವನ್ನು ಆಧರಿಸಿರುತ್ತದೆ ಹಾಗೂ ಹಿಂದುಗಳೆಲ್ಲರೂ ಹುಟ್ಟಿನಿಂದಲೇ ಹಿಂದೂಗಳು. ಅದನ್ನು ಅವರು

ಸಂಪಾದಿಸಿಕೊಂಡಿರುವುದಿಲ್ಲ. ಹುಟ್ಟಿನಿಂದ ತಾನಾಗಿ ಬಂದಿರುತ್ತದೆ. ಹಿಂದೂ ಧರ್ಮದಲ್ಲಿ ಪ್ರಬಲವಾದ ಕೇಂದ್ರ ಪ್ರಮಾಣಕ ಶಕ್ತಿಯೊಂದು ಇಲ್ಲವಾದುದರಿಂದ ಬೇರೆ ಬೇರೆ ಜಾತಿ ಪಂಗಡಗಳು ತಮ್ಮ ಜಾತಿ ಸದಸ್ಯರನ್ನೇ ಧಾರ್ಮಿಕ ಮುಖ್ಯರನ್ನಾಗಿ ಹೊಂದಿರುತ್ತಾರೆ. ಜೊತೆಗೆ ಮೇಲು ಜಾತಿಯ ಧಾರ್ಮಿಕ ವ್ಯಕ್ತಿಗಳ ಅನುಯಾಯಿಗಳೂ ಆಗಿರುವುದುಂಟು. ಉದಾಹರಣೆಗೆ ಬಹುತೇಕ ಅ-ಬ್ರಾಹ್ಮಣರು ಬ್ರಾಹ್ಮಣ ಮಠಗಳ ಅನುಯಾಯಿಗಳಾಗಿರಬಹುದು. ಆ ಮಠದ ಅಧಿಪತಿಯನ್ನು ತಮ್ಮ ಕುಟುಂಬದ ಗುರುವಾಗಿ ಸ್ವೀಕರಿಸಿರಬಹುದು. ಅದೇ ಸಮಯಕ್ಕೆ ಬ್ರಾಹ್ಮಣೇತರ ಧಾರ್ಮಿಕ ಸಂಸ್ಥೆಗಳನ್ನಾಗಲಿ ಮಠಾಧಿಪತಿಗಳನ್ನಾಗಲಿ ಬ್ರಾಹ್ಮಣರು ಒಪ್ಪಿಕೊಳ್ಳುವುದಿಲ್ಲ. ವೀರಶೈವರೆಂದೂ ಕರೆಸಿಕೊಳ್ಳುವ ಲಿಂಗಾಯಿತರು 12ನೆಯ ಶತಮಾನದ ಬ್ರಾಹ್ಮಣ - ವಿರೋಧೀ ಸಾಮಾಜಿಕ ಚಟುವಟಿಕೆಯ ಫಲವಾಗಿ ರೂಪುಗೊಂಡವರು. ಇವರಲ್ಲಿ ಅನೇಕ ಸಂಖ್ಯೆಯ ಧಾರ್ಮಿಕ ಸಂಸ್ಥೆಗಳು ಧಾರ್ಮಿಕ ಮುಖಂಡರೂ ಇರುವುದು ಮಾತ್ರವಲ್ಲ. ಅವರು ಸಂಖ್ಯಾತ್ಮಕವಾಗಿ ವಿಫುಲವಾಗಿರುವ, ರಾಜಕೀಯವಾಗಿ ಅತ್ಯಂತ ಪ್ರಬಲವಾದ ಪಂಗಡವೂ ಆಗಿದ್ದಾರೆ. ಬ್ರಾಹ್ಮಣರನ್ನು ಹೊರತು ಪಡಿಸಿದರೆ, ಮಿಕ್ಕ ಅನೇಕ ಲಿಂಗಾಯಿತೇತರ ಜಾತಿ ಪಂಗಡಗಳು ಕರ್ನಾಟಕದ ವೀರಶೈವ ಮಠಗಳಿಗೆ ನಿಷ್ಠೆಯಿಂದಿದ್ದಾರೆ.

ಹಾಗಾಗಿ ಧಾರ್ಮಿಕ ಚಿತ್ರದ ಲಕ್ಷಣ ನಿರೂಪಣೆ ಸರಿಯಾಗಿ ಆಗಿಲ್ಲ. ಒಬ್ಬನು ಹಿಂದೂ ಆಗಿರಬಹುದು, ಆದರೆ ದೇವಸ್ಥಾನಕ್ಕೆ ಹೋಗಬೇಕೆಂದಾಗಲಿ, ಧಾರ್ಮಿಕ ಸಂತರನ್ನು ಮನೆಗೆ ಆಹ್ವಾನಿಸಬೇಕೆಂದಾಗಲಿ ಕಡ್ಡಾಯವಿಲ್ಲ. ಇದರ ಜೊತೆಗೆ ಹಿಂದೂ ಧರ್ಮದ ಅಸಂಖ್ಯಾತ ದೇವ ದೇವಿಯರೂ ಕುಟುಂಬದ ದೇವರ ಜೊತೆಗೆ ಸ್ಥಾನ ಪಡೆದಿರುತ್ತಾರೆ. ಅನಾರೋಗ್ಯ ಅಥವಾ ಏನೋ ಸಂಕಷ್ಟ ಬಂದ ಸಮಯದಲ್ಲಿ ಕುಟುಂಬದ ವ್ಯಕ್ತಿಯು ಬೇರೆ ಬೇರೆ ದೇವರುಗಳಿಗೆ ಹರಸಿಕೊಳ್ಳುತ್ತಾನೆ. ಶಿವ ಮತ್ತು ವಿಷ್ಣು ಪೂಜಕರ ನಡುವೆ ಇರುವ ಸೂಕ್ಷ್ಮವಾದ ವ್ಯತ್ಯಾಸ ಆಚರಣೆಯಲ್ಲಿ ಕಂಡು ಬರುವುದಿಲ್ಲ. ಪವಿತ್ರ ತ್ರಿಮೂರ್ತಿಗಳಾದ ಬ್ರಹ್ಮ - ಸೃಷ್ಟಿಕರ್ತ, ವಿಷ್ಣು - ಸ್ಥಿತಿ ಕರ್ತ ಮತ್ತು ಮಹೇಶ್ವರ - ಲಯಕರ್ತ ಈ ವ್ಯತ್ಯಾಸ ಕೇವಲ ತಾತ್ವಿಕವಾದದ್ದು. ಆದ್ದರಿಂದ ಧಾರ್ಮಿಕ ಅಂಶಗಳನ್ನು ಕುರಿತು ಚರ್ಚಿಸುವಾಗ, ಅದನ್ನು ಸರ್ವ ದೇವತಾರಾಧನೆಯ ಕಡೆಗೆ ಒಲವುಳ್ಳ ಜನಪ್ರಿಯ ಹಿಂದೂಧರ್ಮ ಎಂದು ವರ್ಣಿಸಬಹುದು. ಹಿಂದೂಗಳಲ್ಲಿ ಬಹುತೇಕ ಜನರಿಗೆ ಧರ್ಮಶಾಸ್ತ್ರಗಳು ತಿಳಿದಿರುವುದಿಲ್ಲ. ಹೆಚ್ಚೆಂದರೆ ಪುರಾಣ ಕತೆಗಳು, ನಂಬಿಕೆಗಳು ಮತ್ತು ಆಚರಣೆಗಳ ಬಗೆಗೆ ಮೇಲು ಮೇಲಿನ ತಿಳುವಳಿಕೆ ಇರುತ್ತದೆ. ಅವರಲ್ಲಿ ಬಹು ಜನರು ಕರ್ಮಾಚರಣೆಗಳ ಅಗತ್ಯವನ್ನು ಪೂರೈಸಿಕೊಡುವ ಪುರೋಹಿತರನ್ನು ಅವಲಂಬಿಸುತ್ತಾರೆ. ಹಾಗಾಗಿ, ಪುರೋಹಿತನಿಗೂ ಕುಟುಂಬಗಳಿಗೂ ನಡುವೆ ಪೋಷಕ - ಗ್ರಾಹಕ ಜಾಜಮಾನ ಸಂಬಂಧ ಇರುತ್ತದೆ. ಪುರೋಹಿತರು ವಿವಾಹ ಮೊದಲಾದ ಶುಭ ಕಾರ್ಯಗಳನ್ನು, ಮರಣ ಸಂದರ್ಭದ ಅಪರ ಕರ್ಮಗಳನ್ನು ನಿರ್ವಹಿಸುತ್ತಾನೆ. ಅವನ ಆ ಸೇವೆಗೆ ಪ್ರತಿಫಲವನ್ನು

ನಗದಾಗಿಯೂ ವಸ್ತುರೂಪದಲ್ಲೂ ಕೊಡಲಾಗುತ್ತದೆ. ಪೌರೋಹಿತ್ಯ ಮಾಡುವವರು ಬ್ರಾಹ್ಮಣ ಜಾತಿಯಿಂದ, ಆ ಕುಟುಂಬಗಳಿಂದ ಬಂದವರಾಗಿದ್ದು ಹಳ್ಳಿ, ಪಟ್ಟಣ, ನಗರ ಹೀಗೆ ಎಲ್ಲಾ ಹಂತಗಳಲ್ಲೂ ಲಭ್ಯವಿರುತ್ತಾರೆ. ಮಠಾಧಿಪತಿಗಳಾದರೋ ಆಗಾಗ ಔಪಚಾರಿಕ ಭೇಟಿ ನೀಡಿ ತಮ್ಮ ಶಿಷ್ಯರಿಂದ / ಅನುಯಾಯಿಗಳಿಂದ ಕಾಣಿಕೆಗಳನ್ನು ಸಂಗ್ರಹಿಸಿಕೊಳ್ಳುತ್ತಾರೆ.

ಮನೆ ದೇವರನ್ನು ಕುರಿತು ಕುರುಬರ ಪ್ರತಿಕ್ರಿಯೆಗಳನ್ನು ನೋಡಿದಾಗ, ಅವರಲ್ಲಿ ಶೈವಧರ್ಮ ಮತ್ತು ವೈಷ್ಣವ ಧರ್ಮ ಎರಡರ ಮಿಶ್ರಣವಿರುವುದು ವ್ಯಕ್ತವಾಗುತ್ತದೆ. ನಾಲ್ಕೂ ಜಿಲ್ಲೆಗಳಿಂದ ನೂರಾರು ಮನೆ ದೇವರುಗಳ ಹೆಸರುಗಳು ಪಟ್ಟಿಯಾಗಿವೆ. ಕುರುಬರು ಶೈವರು, ಅವರ ಇಷ್ಟದೇವರು ಬೀರಪ್ಪ, ಶಿವನ ಹಲವು ಹೆಸರುಗಳಲ್ಲಿ ಒಂದು. ಬೇರೆ ಬೇರೆ ಹೆಸರುಗಳಲ್ಲಿ ಶಿವನ ರೂಪಗಳನ್ನು ಅವರು ಪೂಜಿಸುತ್ತಾರೆ. ಜೊತೆಗೆ ಪ್ರತಿಯೊಂದು ಜಿಲ್ಲೆಯಲ್ಲೂ ಹಲವು ಸ್ಥಳೀಯ ದೇವತೆಗಳ ಪೂಜೆ ನಡೆಯುತ್ತದೆ. ಸಾಮಾನ್ಯವಾಗಿ ಪವಿತ್ರ ಯಾತ್ರಾಕ್ಷೇತ್ರಗಳಲ್ಲಿ ನೆಲೆಸಿರುವ ದೇವರುಗಳು ಕುಟುಂಬದ ದೇವರಾಗಿದ್ದರೂ, ಅನೇಕ ವೇಳೆ ದೇವಿಯರೂ ಮನೆ ದೇವತೆಗಳಾಗಿ ಕಾಣಿಸಿಕೊಳ್ಳುವುದುಂಟು.

ಹನುಮಂತ - ಮಾರುತಿ, ಲಕ್ಷ್ಮಿ, ರಂಗಸ್ವಾಮಿ, ತಿಮ್ಮಪ್ಪ, ಕೇಶವ - ಇವರು ವೈಷ್ಣವ ಧರ್ಮಕ್ಕೆ ಸೇರಿದ್ದು ಮನೆ ದೇವರುಗಳಾಗಿರುವ ನಿದರ್ಶನಗಳು. ಕೆಲವು ಮಾಹಿತಿದಾರರು ನಾಲ್ಕೂ ಜಿಲ್ಲೆಗಳಲ್ಲಿ ಈ ದೇವರುಗಳ ಹೆಸರುಗಳನ್ನು ಹೇಳಿದ್ದಾರೆ. ಮೈಸೂರು ಜಿಲ್ಲೆಯಲ್ಲಿ 20 ಕುಟುಂಬಗಳು ಬ್ರಹ್ಮದೇವನ ಹೆಸರನ್ನು ಈ ಪಟ್ಟಿಗೆ ಸೇರಿಸಿದ್ದಾರೆ, ಬ್ರಹ್ಮದೇವನು ಹಿಂದುಗಳಿಂದ ಪೂಜಿತನಾಗಲು ಅರ್ಹನಲ್ಲ ಎಂದು ಯಾರು ಹೇಳಬಲ್ಲರು? ನಮ್ಮ ಕ್ಷೇತ್ರ ಕಾರ್ಯದ ಮಾಹಿತಿಯ ಆಧಾರವೇ ಇದೆ. ಸೃಷ್ಟಿಕರ್ತನಾದ ಬ್ರಹ್ಮನು ತಾನೇ ಸೃಷ್ಟಿಸಿದ, ಆದ್ದರಿಂದ ತನ್ನ ಮಗಳಾದ ಸರಸ್ವತಿಯನ್ನು ತಾನೇ ಮದುವೆಯಾದನು ಎಂಬ ಜನಪ್ರಿಯ ನಂಬಿಕೆಯಿದೆ. ಆಗಮ್ಯ ಗಮನದ ಈ ಅಪರಾಧದಿಂದಾಗಿ ಅವನು ಪೂಜೆಗೆ ಅರ್ಹನಲ್ಲ ಎಂಬ ಭಾವನೆಯಿದ್ದಿತು. ಆದರೆ ದತ್ತ ಮಾಹಿತಿಯು ಅದನ್ನು ಸುಳ್ಳು ಮಾಡಿದೆ.

ಅಧ್ಯಯನದಲ್ಲಿರುವ ನಾಲ್ಕೂ ಜಿಲ್ಲೆಗಳಲ್ಲಿ ಕುರುಬರು ಪೂಜಿಸುವ ಮನೆದೇವರೆಂದರೆ, ಬೀರದೇವರು. ಮೈಸೂರು ಜಿಲ್ಲೆಯಲ್ಲಿ 16 ಕುಟುಂಬಗಳು, ಧಾರವಾಡದಲ್ಲಿ 33, ಬಳ್ಳಾರಿಯಲ್ಲಿ 16 ಮತ್ತು ಚಿತ್ರದುರ್ಗದ 63 ಕುಟುಂಬಗಳು ಬೀರದೇವರನ್ನು ಮನೆ ದೇವರಾಗಿ ಪೂಜಿಸುತ್ತಾರೆ. ಜೊತೆಗೆ ಬೀರಪ್ಪನ ಬೇರೆ ಬೇರೆ ರೂಪಾಂತರಗಳಾದ ಮಲೆಮಹದೇಶ್ವರ, ಕಲ್ಲೇಶ, ಮಲ್ಲಪ್ಪ ಮೊದಲಾದ ದೇವರುಗಳನ್ನು ಪೂಜಿಸುವುದು ತಿಳಿಯುತ್ತದೆ. ಕುರುಬರು ಪ್ರಧಾನವಾಗಿ ಶೈವರು, ಅಲ್ಲಲ್ಲಿ ವೈಷ್ಣವ ಹಾಗೂ ಸ್ಥಳೀಯ ದೇವತೆಗಳ ಪೂಜೆ ಬೆರೆತಿರುವುದುಂಟು. ಅವು ಸ್ಥಳೀಯ ಅಥವಾ ಪ್ರಾದೇಶಿಕ ಪಂಥದ ಕೇಂದ್ರಗಳಾಗಿವೆ.

ಬಳ್ಳಾರಿ, ಧಾರವಾಡ ಮತ್ತು ಚಿತ್ರದುರ್ಗ ಜಿಲ್ಲೆಗಳಿಂದ ಕ್ರಮವಾಗಿ 43, 27 ಮತ್ತು 25 ಕುಟುಂಬಗಳು ಮೈಲಾರಲಿಂಗನನ್ನು ಮನೆ ದೇವರಾಗಿ ಪೂಜಿಸುತ್ತಾರೆ. ಬಳ್ಳಾರಿ ಜಿಲ್ಲೆಯ ಮೈಲಾರ ಪ್ರಾದೇಶಿಕವಾದ ಒಂದು ಯಾತ್ರಾಸ್ಥಳ. ಅಲ್ಲಿ ನೆಲೆಸಿರುವ ದೇವರು ಮೈಲಾರಲಿಂಗನನ್ನು ಕುರಿತು ಕುರುಬರಿಗೆ ವಿಶೇಷವಾದ ಭಕ್ತಿ. ಕುರುಬ ಪುರುಷರು ಮತ್ತು ಮಹಿಳೆಯರು ತಮ್ಮನ್ನು ಗೊರವರನ್ನಾಗಿ (ಧಾರ್ಮಿಕ ಸೇವೆ ಸಲ್ಲಿಸುವವರು) ಅರ್ಪಿಸಿಕೊಳ್ಳುತ್ತಾರೆ, ಇಲ್ಲವೆ ಬರಲಿರುವ ವರ್ಷದ ಬಗೆಗೆ ಕಣಿ ಹೇಳುವ (ಕಾರ್ಣಿಕ)ವರಾಗಿ ಸೇವೆ ಸಲ್ಲಿಸುತ್ತಾರೆ. ಧಾರವಾಡ ಜಿಲ್ಲೆಯಲ್ಲಿ 67 ಕುಟುಂಬಗಳು ಸೌಂದತ್ತಿ ಎಲ್ಲಮ್ಮ ತಮ್ಮ ಕುಟುಂಬ ದೇವತೆಯೆಂದು ಹೇಳಿದ್ದಾರೆ. ಈ ದೇವತೆ ಈಚಿನ ವರ್ಷಗಳಲ್ಲಿ ಬಹುವಾಗಿ ಗಮನಸೆಳೆದಿರುವ ದೇವತೆ. ಬಹುಸಂಖ್ಯೆಯ ಹುಡುಗಿಯರನ್ನು ತರುಣಿಯರನ್ನು ದೇವದಾಸಿಯರನ್ನಾಗಿ ಅರ್ಪಿಸಲಾಗುತ್ತದೆ. ಕೊನೆಗೆ ಅವರು ವೇಶ್ಯಾವೃತ್ತಿಗಿಳಿಯುತ್ತಾರೆ. ಆದರೆ ದೇವದಾಸಿಯರನ್ನು ಬಿಡುವ ಪದ್ಧತಿಯು ಕುರುಬರಲ್ಲಿ ಪ್ರಚಲಿತವಾಗಿದೆಯೆ ಎಂಬ ವಿಚಾರವಾಗಿ ಈ ಅಧ್ಯಯನವು ಬೆಳಕು ಚೆಲ್ಲುವುದಿಲ್ಲ. ಸವದತ್ತಿ ಒಂದು ಪ್ರಾದೇಶಿಕ ಯಾತ್ರಾಸ್ಥಳ. ಭಕ್ತರು ವರ್ಷದಲ್ಲಿ 3-4 ಸಾರಿ ಅಲ್ಲಿಗೆ ಹೋಗುತ್ತಾರೆ. ಆ ಸಂದರ್ಭಗಳಲ್ಲಿ ಹುಡುಗಿಯರನ್ನು ದೇವದಾಸಿಯರನ್ನಾಗಿ ಅರ್ಪಿಸುವುದು ಒಂದು ವಿದ್ಯುಕ್ತ ಆಚರಣೆಯಾಗಿದೆ.

ಬಳ್ಳಾರಿ ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲೂ ಯಲ್ಲಮ್ಮ, ಕುಟುಂಬ ದೇವತೆಯಾಗಿ ಕಾಣಿಸಿಕೊಳ್ಳುತ್ತಾಳೆ. ಬಳ್ಳಾರಿಯಲ್ಲಿ 7 ಕುಟುಂಬಗಳು, ಚಿತ್ರದುರ್ಗದಲ್ಲಿ 19 ಕುಟುಂಬಗಳು ಅದನ್ನು ಹೇಳಿದ್ದಾರೆ. ಜೊತೆಗೆ ಪಾರ್ವತಿಯ ಇನ್ನೊಂದು ಹೆಸರಾದ, ಬಳ್ಳಾರಿ ಜಿಲ್ಲೆಯ ಉಚ್ಚಂಗಿ ದುರ್ಗದಿಂದ ಹೆಸರುಪಡೆದ ಉಚ್ಚಂಗಮ್ಮನನ್ನು ಮನೆದೇವತೆಯನ್ನಾಗಿ ಹೊಂದಿರುವ 19 ಕುಟುಂಬಗಳು ಚಿತ್ರದುರ್ಗ ಜಿಲ್ಲೆಯಲ್ಲೂ, 9 ಕುಟುಂಬಗಳು ಬಳ್ಳಾರಿಯಲ್ಲೂ ಕಂಡು ಬರುತ್ತವೆ. 20ನೆಯ ಶತಮಾನದ ತಿರುವಿನಲ್ಲಿ ಹೆಣ್ಣು ಮಕ್ಕಳನ್ನು ತರುಣಿಯರನ್ನು ಹುಚ್ಚಂಗಮ್ಮನಿಗೆ ದೇವದಾಸಿಯರನ್ನಾಗಿ ಅರ್ಪಿಸುವ ಪದ್ಧತಿಯಿತ್ತು. ಆದರೆ ಸರಕಾರವು ಈಗ ಕೆಲವು ದಶಕಗಳ ಹಿಂದೆಯೇ ಈ ಪದ್ಧತಿಯನ್ನು ನಿಷೇಧಿಸಿತು. ಬಳ್ಳಾರಿ ಜಿಲ್ಲೆ ಆಗ ಮದರಾಸು ಪ್ರೆಸಿಡೆನ್ಸಿಗೆ ಸೇರಿತ್ತು. ಈಗ ಈ ಪದ್ಧತಿ ಅಲ್ಲಿ ಆಚರಣೆಯಲ್ಲಿಲ್ಲ, ಆ ಸ್ಥಳವನ್ನು ಕುರಿತ ಟೀಕೆಯೂ ಈಗ ಬರುತ್ತಿಲ್ಲ. ಅಪರೂಪಕ್ಕೆ ಒಮ್ಮೊಮ್ಮೆ, ಕಳ್ಳತನದಿಂದ ಹೆಣ್ಣು ಮಕ್ಕಳನ್ನು ಅರ್ಪಿಸುವುದುಂಟು. ಆದರೆ ನಿಜವಾಗಿ ಕಳವಳಕಾರಿಯಾದ ಸಂಗತಿಯೆಂದರೆ, ಚಿತ್ರದುರ್ಗ ಜಿಲ್ಲೆಯ 14 ಕುಟುಂಬಗಳು ಚಂದ್ರಗುತ್ತೆಮ್ಮ ತಮ್ಮ ಕುಟುಂಬದ ಅಧಿದೇವತೆ ಎಂದು ಹೇಳಿರುವುದು. ಚಂದ್ರಗುತ್ತಿ ಶಿವಮೊಗ್ಗ ಜಿಲ್ಲೆಯಲ್ಲಿರುವ ಒಂದು ಯಾತ್ರಾಸ್ಥಳವಾಗಿದೆ. ಆದರೆ ಭಕ್ತರು ಸಲ್ಲಿಸುವ 'ಬೆತ್ತಲೆ ಸೇವೆ'ಯಿಂದಾಗಿ ಅದು ಕುಖ್ಯಾತವಾಗಿದೆ. ವಾರ್ಷಿಕ ಜಾತ್ರೆಗಾಗಿ ಅಲ್ಲಿ ನೆರೆಯುವ ಸ್ತ್ರೀ - ಪುರುಷರು ವಿದ್ಯುಕ್ತವಾಗಿ ಸ್ನಾನ ಮಾಡಿ, ದೇವಾಲಯಕ್ಕೆ ಅತ್ಯಲ್ಪ ವಸ್ತ್ರ ಧರಿಸಿ

ಅಥವಾ ಪೂರ್ತಿ ನಗ್ನರಾಗಿ ನಡೆದು ಹೋಗುತ್ತಾರೆ. ದಲಿತ ಸಂಘರ್ಷ ಸಮಿತಿಯ ಕಾರ್ಯಕರ್ತರು ಮತ್ತು ಇತರ ಸಮಾಜ ಕಾರ್ಯಕರ್ತರು ಈ 'ಬೆತ್ತಲೆ ಸೇವೆ' ಪದ್ಧತಿಯ ವಿರುದ್ಧವಾಗಿ ಯಶಸ್ವೀ ಪ್ರಚಾರ ನಡೆಸಿದ್ದಾರೆ. ಈಗ ಸರಕಾರವು ವಾರ್ಷಿಕ ಜಾತ್ರೆಯನ್ನೇ ನಿಷೇಧಿಸಿದೆ. ಜಾತ್ರೆಯ ಸಂದರ್ಭದಲ್ಲಿ ಪೊಲೀಸರ ಒಂದು ತುಕಡಿಯು ಅಲ್ಲಿ ಶಿಬಿರವನ್ನು ಹೂಡಿದ್ದರೂ ಕೆಲವು ಪಟ್ಟಭದ್ರ ಹಿತಗಳು ಈ ಕ್ರೂರ ಆಚರಣೆಯನ್ನು ಪ್ರೋತ್ಸಾಹಿಸುವುದರಲ್ಲಿ ನಿರತವಾಗಿವೆ.

ಈ ಮೇಲಿನ ಅಂಶಗಳಿಂದ ಊಹಿಸಬಹುದಾದುದೇನೆಂದರೆ, ಕುರುಬರು ಸಂಸ್ಕೃತೀಕರಣ ಪ್ರಕ್ರಿಯೆಯಿಂದ ತುಂಬಾ ದೂರುಳಿದಿದ್ದಾರೆ. ಶೂದ್ರವರ್ಣಕ್ಕೆ ಸೇರಿದ್ದು ಅನುಕ್ರಮ ಶ್ರೇಣಿಗೆ ಒಳಪಟ್ಟಿರುವ ಅನೇಕ ಜಾತಿ ಪಂಗಡಗಳು, ತಮಗೆ ಇನ್ನು ಎತ್ತರದ ಸ್ಥಾನಬೇಕೆಂದು ಕೇಳುತ್ತಾರೆ. ಅಧಿಕವಾಗುತ್ತಿರುವ ರಾಜಕೀಯದಿಂದ, ಶಿಕ್ಷಣ ಮತ್ತು ಸಂಘಟಿತ ಪ್ರಯತ್ನಗಳಿಂದ ಒತ್ತಡ ಹಾಕುತ್ತಾರೆ. ಅದೇ ರೀತಿಯಲ್ಲಿ ಕುರುಬರೂ ತಮಗೆ ಇನ್ನು ಮೇಲಿನ ಸ್ಥಾನವಿರಬೇಕೆಂದೂ ಶೂದ್ರರ ಹಲವು ಜಾತಿ ಪಂಗಡಗಳು ಶ್ರೇಣಿಯಲ್ಲಿ ತಮಗಿಂತ ಕೆಳಗಿನ ಸ್ಥಾನದಲ್ಲಿದ್ದಾರೆಂದೂ ಹೇಳುತ್ತಾರೆ. ಆದರೆ ಕುರುಬರ ಮತಾಚರಣೆಗಳ ಸ್ಥಾನಮಾನವೂ ತುಂಬಾ ಮೇಲಿನದೇನಲ್ಲ. ಕುಟುಂಬ ದೇವತೆಗಳ ಕೆಲವು ಹೆಸರುಗಳು ಪ್ರೊ|| ಶ್ರೀನಿವಾಸ ಹೇಳವಂತೆ ಸಂಸ್ಕೃತೀಕರಣದ ದೆಸೆಯಿಂದ ಬೇರೆ ರೂಪಗಳನ್ನು ಹೊಂದಿ ಬಂದಿವೆ. ಉದಾಹರಣೆಗೆ, ಯೆಲ್ಲಮ್ಮನನ್ನು ಕೆಲವು ಮಾಹಿತಿದಾರರು ರೇಣುಕಾ ಎಂದು ಹೇಳಿದ್ದಾರೆ. ಹಾಗೆಯೇ ಆಂಜನೇಯನಿಗೆ ಮಾರುತಿ ಎಂಬ ಹೆಸರು ನೀಡಿದ್ದಾರೆ. ಧಾರವಾಡ ಜಿಲ್ಲೆಯ ಕಾಗೆನೆಲೆಯಲ್ಲಿ ಒಂದು ಮಠವನ್ನು ಸ್ಥಾಪಿಸಿ, ಕುರುಬರ ಒಬ್ಬ ಜಗದ್ಗುರುವನ್ನು ಸ್ಥಾಪಿಸಿದ ಮೇಲೆ ಕುರುಬರ ಸಂಘಟನೆಗೆ ಮತ್ತಷ್ಟು ಚಾಲನೆ ದೊರೆತಂತಾಗಿದೆ, ಅದಕ್ಕೆ ರಂಗವು ಸಜ್ಜಾಗಿದೆ. ಕ್ರಮ ಶಿಕ್ಷಣದ ಪ್ರಸಾರ, ಸಂಪತ್ತಿನ ಗಳಿಕೆ, ಆಸ್ತಿಯ ಸಂಪಾದನೆ ಮತ್ತು ಎಲ್ಲಕ್ಕಿಂತ ಮಿಗಿಲಾಗಿ ರಾಜಕೀಯ ಪ್ರಭಾವ ಅಧಿಕವಾಗಲಿದೆ. ಹೀಗೆ ಸಂಘಟಿತರಾಗಿ, ಇತರ ವಿಧಾನಗಳ ಜೊತೆಗೆ ಸಂಸ್ಕೃತೀಕರಣ ಕಾರ್ಯವನ್ನು ಅವರು ಹಿಡಿಯಬಹುದು. ಅದಕ್ಕೆ ಅವರು ಸಿದ್ಧವಾಗುತ್ತಿದ್ದಾರೆ. ಹಲವು ದಶಕಗಳಿಂದ ರಾಜ್ಯ ವಿಧಾನಸಭೆಗೂ ಪಾರ್ಲಿಮೆಂಟಿಗೂ ಕುರುಬ ಸಮುದಾಯದಿಂದ ರಾಜಕಾರಣಿಗಳು ಪ್ರವೇಶಿಸಿದ್ದಾರೆ. ಕೆಲವರು ಸಚಿವರೂ ಆಗಿದ್ದಾರೆ.

ಮನೆ ದೇವರಿಂದ ಜಾತಿ / ಕುಟುಂಬ ಗುರುವಿನ ಕಡೆಗೆ ಸಾಗುವುದು ಒಂದು ಒಳ್ಳೆಯ ಪರಿವರ್ತನೆ. ನಾಲ್ಕು ಜಿಲ್ಲೆಗಳಿಗೆ ಸೇರಿದ ಬಹುಜನ ಮಾಹಿತಿದಾರರು ತಮಗೆ ಅದೇನೂ ಗೊತ್ತಿಲ್ಲ ಎಂದು ಉತ್ತರ ಕೊಟ್ಟಿದ್ದಾರೆ. ಮೈಸೂರು ಜಿಲ್ಲೆಯ 81 ಕುಟುಂಬಗಳು, ಧಾರವಾಡದ 80, ಬಳ್ಳಾರಿಯ 70 ಮತ್ತು ಚಿತ್ರದುರ್ಗದ 62 ಕುಟುಂಬಗಳು ಹಾಗೆ ಹೇಳಿದ್ದಾರೆ. ಒಟ್ಟಿನಲ್ಲಿ 601 ಕುಟುಂಬಗಳ ಪೈಕಿ 302, ಜಾತಿ / ಕುಟುಂಬ ಗುರುವಿನ ವಿಚಾರ ತಿಳಿಯದು ಎನ್ನುತ್ತಾರೆ. ಇದು ನಮ್ಮ ಮಾದರಿಯ ಶೇ 50 ಇನ್ನು ಸಾಕಷ್ಟು ಹಿಂದುಳಿದಿದ್ದಾರೆ. ಒಂದು ಧಾರ್ಮಿಕ ಸಂಸ್ಥೆಯನ್ನು ಸ್ಥಾಪಿಸಿ, ಕಾಗಿನೆಲೆಯಲ್ಲಿ ಒಬ್ಬ

ಸ್ವಾಮಿಜೀ - ಗುರುವನ್ನು ಸ್ಥಾಪಿಸಿರುವ ಇತ್ತೀಚಿನ ಪ್ರಯತ್ನಗಳನ್ನು ವ್ಯಕ್ತಪಡಿಸಲು ಅವರು ಅಸಮರ್ಥರಾಗಿದ್ದಾರೆ. ಮುಂದೆ ಒಂದು ದಿನ ಈ ಧಾರ್ಮಿಕ ಸಂಸ್ಥೆಯು ಕೇಂದ್ರ ರಂಗವನ್ನು ಆಕ್ರಮಿಸಿಕೊಂಡು, ಕರ್ನಾಟಕದಾದ್ಯಂತ ಇರುವ ಕುರುಬರನ್ನು ಒತ್ತಟ್ಟಿಗೆ ತಂದು, ಅವರ ಪ್ರಗತಿಗೆ ಸಂಗತವೆಂದು ಭಾವಿಸಲಾದ ಜಾತಿ ಪಂಗಡದ ಅಭಿಪ್ರಾಯಕ್ಕೆ ದನಿಗೂಡಬಹುದು.

ಮಿಕ್ಕ ಮಾಹಿತಿದಾರರು ಬೇರೆ ಬೇರೆ ವ್ಯಕ್ತಿಗಳನ್ನು ತಮ್ಮ ಜಾತಿ/ಕುಟುಂಬ ಗುರುವೆಂದು ಹೆಸರಿಸಿದ್ದಾರೆ. ಕುರುಬರ ರಾಜ್ಯವ್ಯಾಪೀ ಏಕೀಕರಣಕ್ಕೆ ಉಪಯೋಗವಾಗುವ ದೃಷ್ಟಿಯಿಂದ ಎರಡು ಹೆಸರುಗಳು ತುಂಬಾ ಮಹತ್ವದ್ದಾಗಿರುವಂತೆ ತೋರುತ್ತದೆ. ಆ ಇಬ್ಬರೂ, ಈಗಿರುವಂತೆ ಪರಸ್ಪರ ವಿರೋಧಿಗಳೇನಲ್ಲ. ಆದ್ದರಿಂದ ಸಮುದಾಯವು ಒಡೆದು ಹೋಳಾಗಲಾರದು. ಚಿತ್ರದುರ್ಗ ಜಿಲ್ಲೆಯಿಂದ ಬಂದಿರುವ ಚನ್ನಯ್ಯ ಒಡೆಯರ್, ಒಡೆಯರ್ ಉಪ-ಜಾತಿಗೆ ಸೇರಿದವರು. ಅದು ಸಾಂಪ್ರದಾಯಿಕವಾಗಿ ಕುರುಬರಲ್ಲಿ ಬಂದಿರುವ ಪುರೋಹಿತ ವರ್ಗ. ಈಚಿನವರೆಗೂ ಅವರು ಕಾಂಗ್ರೆಸ್ ಪಕ್ಷಕ್ಕೆ ಸೇರಿದ ಒಬ್ಬ ಪಾರ್ಲಿಮೆಂಟ್ ಸದಸ್ಯರಾಗಿದ್ದರು. ಅವರ ಕಾರ್ಯಕ್ಷೇತ್ರ ಬಳ್ಳಾರಿ ಮತ್ತು ಚಿತ್ರದುರ್ಗ ಜಿಲ್ಲೆಗಳಿಗೆ ಸೀಮಿತಗೊಂಡಿದೆ. ಬಳ್ಳಾರಿಯ ಎಂಟು ಕುಟುಂಬಗಳೂ ಚಿತ್ರದುರ್ಗ ಜಿಲ್ಲೆಯ 48 ಮಾಹಿತಿದಾರರೂ ಚನ್ನಯ್ಯ ಒಡೆಯರ್ ತಮ್ಮ ಗುರುಗಳೆಂದು ಹೇಳಿದ್ದಾರೆ. ಧಾರ್ಮಿಕ ಗುರುವಿನ ಸಾಂಪ್ರದಾಯಿಕ ಪಾತ್ರಕ್ಕೂ ಪ್ರಜಾಪ್ರಭುತ್ವದ ಆಧುನಿಕ ರಾಜಕೀಯ ನಾಯಕನಾದ ಸಂಸತ್ ಸದಸ್ಯನ ಪಾತ್ರಕ್ಕೂ ನಡುವೆ ಯಾವುದೇ ವಿರೋಧವಿದ್ದಂತೆ ತೋರುವುದಿಲ್ಲ. ರಾಜಕಾರಣವೂ ಧರ್ಮವೂ ಬೇರೆ ಬೇರೆ ಸ್ವತಂತ್ರವಾದವೆಂದು ಯಾರು ಹೇಳಬಹುದು? ರಾಷ್ಟ್ರಮಟ್ಟದಲ್ಲಿ, ಊಹಿಸಿಕೊಂಡಿರುವುದಕ್ಕಿಂತಲೂ ಅನೇಕ ಸಾರಿ ಅವೆರಡೂ ಪರಸ್ಪರ ಹೊಂದಾಣಿಕೆ ಮಾಡಿಕೊಂಡಂತೆ ತೋರುತ್ತದೆ.

ಮೈಸೂರು ಜಿಲ್ಲೆಯ 24, ಧಾರವಾಡ ಜಿಲ್ಲೆಯ 15, ಚಿತ್ರದುರ್ಗದ 7 ಕುಟುಂಬಗಳು ಸ್ವಾಮಿ ಬೀರೇಂದ್ರ ಕೇಶವ ಅವರನ್ನು ತಮ್ಮ ಜಾತಿ / ಕುಟುಂಬ ಗುರುವೆಂದು ಹೇಳಿದ್ದಾರೆ. ಧಾರವಾಡ ಜಿಲ್ಲೆಯ ಹಾವೇರಿ ತಾಲ್ಲೂಕಿನ ಕಾಗಿನೆಲೆಯಲ್ಲಿ ಕನಕಪೀಠವನ್ನು ಆರೋಹಿಸಲು ಶ್ರೀ ಬೀರೇಂದ್ರ ಕೇಶವ ತಾರಕಾನಂದರನ್ನು 9.2.1992ರಂದು ಜಗದ್ಗುರುಗಳಾಗಿ ಪ್ರತಿಷ್ಠಿಸಲಾಯಿತು. ಅವರು ಮೈಸೂರು ಜಿಲ್ಲೆಯ ಶೈವಕೇಂದ್ರವೂ ಯಾತ್ರಾ ಸ್ಥಳವೂ ಆದ ನಂಜನಗೂಡಿನವರು. ಮೈಸೂರು ನಗರದಿಂದ ನಂಜನಗೂಡು 25 ಕಿ.ಮೀ. ದೂರದಲ್ಲಿದೆ. ಪೂರ್ವಾಶ್ರಮದಲ್ಲಿ ಅವರ ಹೆಸರು ಪುಟ್ಟವೀರ ತಾರಕ. ಮೈಸೂರಿನಲ್ಲಿ ಕಾಲೇಜು ಶಿಕ್ಷಣ ಪಡೆದ ಅವರು ಮೈಸೂರು ವಿಶ್ವವಿದ್ಯಾನಿಲಯದಿಂದ ರಾಜ್ಯಶಾಸ್ತ್ರದಲ್ಲಿ ಎಂ.ಎ. ಪದವಿಯನ್ನು ಪಡೆದರು. ಯಾವುದೇ ಉದ್ಯೋಗಕ್ಕೆ ಸೇರಲು ಅವರಿಗೆ ಇಚ್ಛೆಯಿರಲಿಲ್ಲ. ಮದುವೆಯನ್ನು ಮಾಡಿಕೊಳ್ಳಲಿಲ್ಲ. ವಿವೇಕಾನಂದ ಮತ್ತು ಅರವಿಂದ ಸಾಹಿತ್ಯಗಳನ್ನು ಇತರ ಧಾರ್ಮಿಕ ಕೃತಿಗಳನ್ನು ಓದುವುದರಲ್ಲಿ ಮಗ್ನರಾದರು. ಕೆಲವು ಕಾಲ ಸಮಾಜ ಸೇವೆ ಮಾಡುತ್ತಾ ಜನರನ್ನು ಸಂಘಟಿಸುವುದರಲ್ಲಿ ತೊಡಗಿದ್ದರು.

ರಾಜ್ಯ ವಿಧಾನ ಸಭೆಯ ಚುನಾವಣೆಯಲ್ಲೂ ಸ್ಪರ್ಧಿಸಿದರು. ಆದರೆ ಫಲಿತಾಂಶ ಅವರಿಗೆ ನಿರಾಶೆಯನ್ನುಂಟು ಮಾಡಿತು.

ಕುರುಬ ಸಮುದಾಯವು 'ಧರ್ಮಗುರು'ವಾಗಲು ಸಮ್ಮತಿಸಿ ತಮಗೆ ಧಾರ್ಮಿಕ ನಾಯಕತ್ವವನ್ನು ಕೊಡಬಲ್ಲ ಒಬ್ಬ ವ್ಯಕ್ತಿಗಾಗಿ ಅನ್ವೇಷಣೆ ನಡೆಸಿತ್ತು. ಪುಟ್ಟವೀರ ತಾರಕರಲ್ಲಿ ಅವರು ಸರಿಯಾದ ವ್ಯಕ್ತಿಯನ್ನು ಕಂಡುಕೊಂಡರು, ಅವರ ಬೆನ್ನು ಹತ್ತಿದರು. ಕೊನೆಗೆ ಅವರು ಆಹ್ವಾನವನ್ನು ಅಂಗೀಕರಿಸಿ 1990 ಜೂನ್ ತಿಂಗಳಲ್ಲಿ ಮನೆ ಬಿಟ್ಟು ಕಾಗಿನೆಲೆಗೆ ಹೊರಟರು. ಆಮೇಲೆ ಅಲ್ಲಿಂದ ಉತ್ತರ ಭಾರತದ ಹಲವು ಧಾರ್ಮಿಕ ಕೇಂದ್ರಗಳಿಗೆ ಹೋದರು, ಸಂಸ್ಕೃತವನ್ನು ಕಲಿತು ಶಾಸ್ತ್ರ ಗ್ರಂಥಗಳನ್ನು ಅಧ್ಯಯನ ಮಾಡಿದರು. ಸನ್ಯಾಸ ಸ್ವೀಕರಿಸಬೇಕೆಂಬ ಅವರ ಅಪೇಕ್ಷೆಯನ್ನು ಹೃಷಿಕೇಶದ ಶಿವಾನಂದಾಶ್ರಮದ ಸ್ವಾಮೀಜಿ ಬೆಂಬಲಿಸಲಿಲ್ಲ. ಏಕೆಂದರೆ ಇವರು ಹುಟ್ಟಿನಿಂದ ಶೂದ್ರರಾಗಿದ್ದು ಈ ಅಪಮಾನವನ್ನು ನುಂಗಬೇಕಾಯಿತು. ಆದರೆ ಯೋಗಿನಿಕೇತನ ಆಶ್ರಮದ ಮುಕ್ತಾನಂದ ಸ್ವಾಮಿಗಳು ಸಹಕರಿಸಿ ಬೀರೇಂದ್ರರಿಗೆ ಸನ್ಯಾಸ ದೀಕ್ಷೆಯನ್ನು ನೀಡಿದರು. ಕೆಲವು ಕಾಲ ಕಳೆದ ಮೇಲೆ ಕರ್ನಾಟಕಕ್ಕೆ ಹಿಂದಿರುಗಿ, ಬೆಂಗಳೂರಿನ ಬಳಿಯ ಕೈಲಾಸ ಆಶ್ರಮದ ತಿರುಚಿ ಮಹಾಸ್ವಾಮಿಯವರ ಬಳಿ ಶಿಷ್ಯತ್ವದ ಅನುಭವ ಪಡೆದರು. ಸಿದ್ಧತೆಯ ಈ ಎಲ್ಲಾ ಹಂತಗಳು ಮುಗಿದ ಮೇಲೆ ಅವರು 1992 ಫೆಬ್ರವರಿ 9ರಂದು ಮೊದಲನೆಯ ಕುರುಬ ಜಗದ್ಗುರುಗಳಾದರು. ಶ್ರೀ ಬೀರೇಂದ್ರ ಕೇಶವ ತಾರಕಾನಂದ ಮಹಾಸ್ವಾಮಿಗಳು ಎಂಬ ಹೊಸ ನಾಮಧೇಯದಿಂದ ಕಾಗಿನೆಲೆಯ ಕನಕಗುರು ಪೀಠವನ್ನು ಅಲಂಕರಿಸಿದರು.[1*]

ಕುರುಬರನ್ನು ಒಬ್ಬ ಧಾರ್ಮಿಕ ನಾಯಕರ ನೇತೃತ್ವದಲ್ಲಿ ಒಂದುಗೂಡಿಸಲು ಹೀಗೆ ರಂಗವನ್ನು ಸಜ್ಜುಗೊಳಿಸಲಾಗಿದೆ. 1992ವರೆಗೆ ಕುರುಬರಲ್ಲಿ ಕೇಂದ್ರೀಕೃತ ಧಾರ್ಮಿಕ ಪ್ರಾಧಿಕಾರವಾಗಲಿ, ಸಂಘಟನೆಯಾಗಲಿ ಇರಲಿಲ್ಲ. ಸಮುದಾಯದ ಮುಖಂಡರ ಅವಿರತವಾದ ಪರಿಶ್ರಮದಿಂದ ಕನಸು ಇಂದು ನಿಜವಾಗಿದೆ. ಏಕೆಂದರೆ, ಇಂದು ಇರುವ ರಾಜಕೀಯ ಪ್ರಜಾಪ್ರಭುತ್ವದಲ್ಲಿ ಕುರುಬ ಮುಖಂಡರು ಎಲ್ಲಾ ಹಂತಗಳಲ್ಲೂ ಹಲವು ರಾಜಕೀಯ ಪಕ್ಷಗಳಲ್ಲಿ ಹಂಚಿಹೋಗಿದ್ದಾರೆ. ರಾಜಕೀಯ ಆಶೋತ್ತರವು ಬಹುಶಃ ಬೇರೆ ಬೇರೆ ಕುರುಬ ನಾಯಕರನ್ನು ಒಂದುಗೂಡಿಸುವ ಸಾಧ್ಯತೆಯಿಲ್ಲ. ಏಕೆಂದರೆ ಅದು ಬಹುಮಟ್ಟಿಗೆ ಒಂದು ವಿಭೇದಕ ಶಕ್ತಿ. ಆದರೆ ಒಂದು ಧಾರ್ಮಿಕ ಪ್ರಾಧಿಕಾರದ ನೇತೃತ್ವದಲ್ಲಿ ಸೇರುವ ಬೇರೆ ಬೇರೆ ನಾಯಕರು ಒಟ್ಟಾಗಿ ಕೆಲಸ ಮಾಡಿ, ಉದ್ದೇಶದ ಐಕ್ಯವನ್ನು ಸಾಧಿಸಬಲ್ಲರು. ಕುರುಬ ರಾಜಕಾರಣಿಗಳು ಹಲವು ದಶಕಗಳಿಂದ ಏನನ್ನು ಮಾಡಲು ಸಾಧ್ಯವಾಗಲಿಲ್ಲವೋ ಅದು ಹೀಗೆ ಸಾಧ್ಯವಾಗುವಂತೆ ಮಾಡಲಾಗಿದೆ. ಪಕ್ಷ ನಿಷ್ಠೆ ಯಾವುದೇ ಇರಲಿ, ಸಾಮಾಜಿಕ ಕೆಲಸಗಾರರು, ಕಾರ್ಯಕರ್ತರು, ಬುದ್ಧಿ ಜೀವಿಗಳು, ಜನಸಾಮಾನ್ಯರು ಧಾರ್ಮಿಕ ನಾಯಕತ್ವದ ಕೈಕೆಳಗೆ ಒಂದಾಗಿ, ಸಮುದಾಯದ ಏಳಿಗೆಯನ್ನು

ಸಾಧಿಸಲು ಒಂದು ಸಂಯುಕ್ತರಂಗವನ್ನು ಮುಂದಿಟ್ಟಿದೆ. ಹೀಗೆ ರಾಜಕೀಯ ಮತ್ತು ಧರ್ಮಗಳೆರಡೂ ಸಮಕಾಲೀನ ಭಾರತದಲ್ಲಿ ವಿವೇಕಯುತವಾಗಿ ಬೆರೆತಿವೆ. ನಾಯಕರು ತಮ್ಮನ್ನು ಧರ್ಮನಿರಪೇಕ್ಷ ಶಕ್ತಿಗಳೆಂದು ಎಷ್ಟು ವರ್ಣಿಸಿಕೊಂಡರೂ ಮೇಲು ನೋಟಕ್ಕೆ ಧರ್ಮ ಮತ್ತು ರಾಜಕೀಯದ ಹದವಾದ ಮಿಶ್ರಣವು ಸಾಮರಸ್ಯದಿಂದ ಕೆಲಸ ಮಾಡುತ್ತಿವೆ.

ಈಗ ನಾವು ಸ್ವಾತಂತ್ರ್ಯೋತ್ತರ ಭಾರತದಲ್ಲಿ ಕುರುಬ ಮುಖಂಡರು ನಿರ್ವಹಿಸುವ ರಾಜಕೀಯ ಪಾತ್ರವನ್ನು ಸ್ವಲ್ಪ ವಿಶ್ಲೇಷಣೆ ಮಾಡಬಹುದು. ಇಲ್ಲಿಯೂ ಕೂಡ ಕುರುಬರು ಎಲ್ಲಾ ಅನುಕೂಲಗಳನ್ನು ಪಡೆದುಕೊಂಡು, ಎಲ್ಲಾ ಹಂತಗಳಲ್ಲೂ ರಾಜಕೀಯ ಸ್ಥಾನಗಳಲ್ಲಿ ಕುಳಿತು ಬುಡಕಟ್ಟು ಜನರಾದ ಕಾಡು ಕುರುಬರನ್ನು ಪಕ್ಕಕ್ಕೆ ತಳ್ಳಿರುವುದು ಕಂಡು ಬರುತ್ತದೆ. ರಾಜಕಾರಣದಲ್ಲಿ ಪಾಲುಗೊಂಡಿರುವುದನ್ನು ಪರಿಶೀಲಿಸುವುದಕ್ಕೆ ಮುಂಚೆ ಎಂ.ಪಿ., ಎಂ.ಎಲ್.ಎ. ಮತ್ತು ಸಚಿವರಾಗಿ ಕಾರ್ಯ ನಿರ್ವಹಿಸಿದ ಕುರುಬ ಮುಖಂಡರ ಪಟ್ಟಿಯನ್ನು ಕೊಡಲಾಗಿದೆ. 1989-1994ರ ನಡುವೆ ಒಬ್ಬರು ಲೋಕಸಭಾ ಸದಸ್ಯರೂ, ಹನ್ನೊಂದು ಜನ ವಿಧಾನಸಭಾ ಸದಸ್ಯರೂ (ರಾಜ್ಯಮಟ್ಟದಲ್ಲಿ - ಇಬ್ಬರು ಸಚಿವರೊಂದಿಗೆ) ಮತ್ತು ಇಬ್ಬರು ವಿಧಾನ ಪರಿಷತ್ ಸದಸ್ಯರೂ ಇದ್ದಾರೆ.

## (ಹಾಲಿ) ಲೋಕಸಭಾ ಸದಸ್ಯರು (1989-1994)

| ಹೆಸರು | ಮತಕ್ಷೇತ್ರ | ಜಿಲ್ಲೆ |
|---|---|---|
| ಚನ್ನಯ್ಯ ಒಡೆಯರ್ | ದಾವಣಗೆರೆ | ಚಿತ್ರದುರ್ಗ ಜಿಲ್ಲೆ |
| ಡಿ.ಕೆ. ನಾಯ್ಕರ್ | ಧಾರವಾಡ | ಧಾರವಾಡ (ಉತ್ತರ) |

## (ಹಾಲಿ) ವಿಧಾನಸಭಾ ಸದಸ್ಯರು (1989-1994)

| | | |
|---|---|---|
| ಎಚ್. ವಿಶ್ವನಾಥ್ | ಕೃಷ್ಣರಾಜಪೇಟೆ | ಮೈಸೂರು |
| ಡಾ. ವೈ. ನಾಗಪ್ಪ | ಹರಿಹರ | ಚಿತ್ರದುರ್ಗ |
| ಇ.ಟಿ. ಶಂಭುನಾಥ | ಹಡಗಲಿ | ಬಳ್ಳಾರಿ |
| ಎಚ್.ಎಂ. ರೇವಣ್ಣ | ಮಾಗಡಿ | ಬೆಂಗಳೂರು |
| ಎಚ್.ಕೆ. ದಾಸಪ್ಪ | ಶಿರಾ | ತುಮಕೂರು |
| ಹನುಮಗೌಡ | ಕುಷ್ಟಗಿ | ರಾಯಚೂರು |
| ಕೆ. ಭೀಮಣ್ಣ | ಕಲ್ಮಲ | ರಾಯಚೂರು |
| ಎಸ್.ಎಸ್. ಪಾಟೀಲ | ಶಿರಹಟ್ಟಿ | ಧಾರವಾಡ |
| ಹುಲ್ಲಪ್ಪ ಯಮುನಪ್ಪ | ಗುಳೇದಗುಡ್ಡ | ಬಿಜಾಪುರ |
| ಕೆ.ಎಸ್. ಈಶ್ವರಪ್ಪ | ಶಿವಮೊಗ್ಗ | ಶಿವಮೊಗ್ಗ |
| ಕೆ.ಎಚ್. ಕುರುಡಗಿ | ಮುಂಡರಗಿ | ಧಾರವಾಡ |

## (ಹಾಲಿ) ವಿಧಾನಪರಿಷತ್ ಸದಸ್ಯರು (1989-1994)

ಎ. ದೊಡ್ಡೇಗೌಡ

ಟಿ.ಎನ್. ನಾರಾಯಣಸ್ವಾಮಿ

## ಅನೇಕ ಸಾರಿ ಸ್ಥಾನಗಳನ್ನಲಂಕರಿಸಿದ್ದ ವಿಧಾನಸಭಾ, ವಿಧಾನ ಪರಿಷತ್ತು, ಲೋಕಸಭಾ ಮತ್ತು ರಾಜ್ಯಸಭಾ ಸದಸ್ಯರು (ಸಚಿವರು)

| | |
|---|---|
| ದಿವಂಗತ ಟಿ. ಮರಿಯಪ್ಪ | ಮೈಸೂರು ಜಿಲ್ಲೆ |
| ದಿವಂಗತ ಆರ್. ನಾಗನಗೌಡ | ಬಳ್ಳಾರಿ |
| ಡಿ.ಕೆ. ನಾಯ್ಕರ್ | ಧಾರವಾಡ |
| ವಿ.ಎಚ್. ಪಾಟೀಲ್ | ಬೆಳಗಾವಿ |

## ವಿಧಾನ ಸಭಾ ಸದಸ್ಯರು

**1. ಮಂಡ್ಯ**

| | |
|---|---|
| ದಿವಂಗತ ಟಿ. ಮರಿಯಪ್ಪ | ನಾಗಮಂಗಲ - ಮೈಸೂರು |
| ದಿವಂಗತ ಎನ್. ಚಿಗರಿಗೌಡ | ನಾಗಮಂಗಲ |

**2. ಮೈಸೂರು**

| | |
|---|---|
| ಎಸ್.ಎಂ. ಮರಿಯಪ್ಪ | ಪಿರಿಯಾಪಟ್ಟಣ |
| ದಿವಂಗತ ಎನ್. ರಾಚಯ್ಯ | ನಂಜನಗೂಡು |
| ರಾಜುಗೌಡ | ಹನೂರು |
| ಎಂ. ಬಸವರಾಜು | ಕೆ.ಆರ್.ನಗರ |
| ಎಚ್. ವಿಶ್ವನಾಥ್ | ಕೆ.ಆರ್.ನಗರ |
| ಸಿದ್ಧರಾಮಯ್ಯ | ಚಾಮುಂಡೇಶ್ವರಿ |

**3. ಚಿಕ್ಕಮಗಳೂರು**

| | |
|---|---|
| ಟಿ. ನಾಗಪ್ಪ | ತರೀಕೆರೆ |
| ಟಿ.ಆರ್. ಪರಮಶಿವಯ್ಯ | ತರೀಕೆರೆ |
| ದಿವಂಗತ ಕೆ.ಎನ್. ಮುದಿಯಪ್ಪ | ಕಡೂರು |
| ಕೆ.ಎಂ. ತಮ್ಮಯ್ಯ | ಕಡೂರು |
| ಎನ್.ಕೆ. ಹುಚ್ಚಪ್ಪ | ಕಡೂರು |

| | |
|---|---|
| **4. ಬಳ್ಳಾರಿ** | |
| ದಿ. ಆರ್. ನಾಗನಗೌಡ | ಹೊಸಪೇಟೆ |
| ಶಂಕರಗೌಡ | ಹೊಸಪೇಟೆ |
| ಇ.ಟಿ. ಶಂಭುನಾಥ | ಹಡಗಲಿ |
| **5. ಧಾರವಾಡ** | |
| ದಿವಂಗತ ಟಿ.ಕೆ. ಕಂಬಳಿ | ಕುಂದಗೋಳ |
| ಡಿ.ಕೆ. ನಾಯ್ಕರ್ | ಧಾರವಾಡ (ಗ್ರಾಮಾಂತರ) |
| ಕೆ.ಎಚ್. ಕುರುಡಗಿ | ಮುಂಡರಗಿ |
| ಎಸ್.ಎನ್. ಶಂಕರೇಗೌಡ ಪಾಟೀಲ | ಶಿರಹಟ್ಟಿ |
| **6. ಬೆಂಗಳೂರು** | |
| ದಿ. ಶ್ರೀಮತಿ ಲಕ್ಷ್ಮೀದೇವಮ್ಮ | ಚಾಮರಾಜಪೇಟೆ, ಹೊಸಕೋಟೆ, ಮಾಲೂರು |
| ವೈ. ರಾಮಚಂದ್ರ | ಬಿನ್ನಿಪೇಟೆ, ಚಿಕ್ಕಪೇಟೆ |
| ಎಚ್.ಎಂ. ರೇವಣ್ಣ | ಮಾಗಡಿ |
| **7. ಶಿವಮೊಗ್ಗ** | |
| ಎಚ್.ಬಿ. ಕಾಡಸಿದ್ದಪ್ಪ | ಹೊನ್ನಾಳಿ |
| ಕೆ.ಎಸ್. ಈಶ್ವರಪ್ಪ | ಶಿವಮೊಗ್ಗ |
| **8. ಚಿತ್ರದುರ್ಗ** | |
| ಎಂ. ರಾಮಪ್ಪ | ಹರಿಹರ, ಹೊಸದುರ್ಗ |
| ದಿ. ಬಿ.ಟಿ. ರಂಗಪ್ಪ | ಹೊಸದುರ್ಗ |
| ದಿ. ಪಿ. ವೆಂಕಟರಾಮಯ್ಯ | ಹೊಸದುರ್ಗ |
| ದಿ. ಎಂ.ವಿ. ರುದ್ರಪ್ಪ | ಹೊಸದುರ್ಗ |
| ಕೆ. ಮಲ್ಲಪ್ಪ | ಹರಿಹರ, ಮಾಯಕೊಂಡ |
| ಡಾ. ವೈ. ನಾಗಪ್ಪ | ಹರಿಹರ |
| **9. ತುಮಕೂರು** | |
| ಎನ್. ಬಸವಯ್ಯ | ಚಿಕ್ಕನಾಯಕನಹಳ್ಳಿ |
| ಬಿ. ಲಕ್ಕಪ್ಪ | ಚಿಕ್ಕನಾಯಕನಹಳ್ಳಿ |
| ಸಿ.ಎನ್. ಭಾಸ್ಕರಪ್ಪ | ಬೆಳ್ಳಾವಿ |
| ದಿ. ಎಸ್.ಕೆ. ದಾಸಪ್ಪ | ಸಿರಾ |

**10.** ಬೆಳಗಾವಿ

| | |
|---|---|
| ವಿ.ಎಲ್. ಪಾಟೀಲ್ | ರಾಯಬಾಗ್; ಕಾಗವಾಡ |
| ದಿ. ಎನ್.ಬಿ. ದಳವಾಯಿ | ಅಥಣಿ : ಸವದತ್ತಿ |

**11.** ಬಿಜಾಪುರ

| | |
|---|---|
| ಬಿ.ಬಿ. ಚಿಮ್ಮನಕಟ್ಟಿ | ಬಾದಾಮಿ |
| ಹುಲ್ಲಪ್ಪ ಯಮುನಪ್ಪ ಮೇಟಿ | ಗುಳೇದಗುಡ್ಡ |

**12.** ಗುಲ್ಬರ್ಗಾ

| | |
|---|---|
| ಮಲ್ಲಪ್ಪ ಕೊಲ್ಲೂರು | ಯಾದಗೀರ್, ಸುರಪುರ |

**13.** ರಾಯಚೂರು

| | |
|---|---|
| ಎಂ. ಗಂಗಣ್ಣ | ಕುಷ್ಟಗಿ |
| ಹನುಮಗೌಡ ಪಾಟೀಲ | ಕುಷ್ಟಗಿ |
| ವಾರದ ಶಿವಣ್ಣ | ಕಲ್ಮಲ |
| ಕೆ. ಭೀಮಣ್ಣ | ಕಲ್ಮಲ |
| ಕೆ. ಭೀಮಣ್ಣ | ಮಾಸ್ತಿ |

**14.** ಬೀದರ್

| | |
|---|---|
| ಮಾಣಿಕರಾವ್ ಪುಳೇಕರ್ | ಬೀದರ್ |

**15.** ಕೊಡಗು

| | |
|---|---|
| ಜಿ.ಕೆ. ಸುಬ್ಬಯ್ಯ | ವಿರಾಜಪೇಟೆ |
| | ಏಕಮಾತ್ರ ಕಾಡು ಕುರುಬ ಸದಸ್ಯರು |

**ವಿಧಾನ ಪರಿಷತ್ ಸದಸ್ಯರು:**

| | |
|---|---|
| ದಿ. ಬೆಳವಾಡಿ ಗವಿಸಿದ್ದಪ್ಪ | ಬೆಳಗಾಂ |
| ಚನ್ನಯ್ಯ ಒಡೆಯರ್ | ಚಿತ್ರದುರ್ಗ |
| ದಿ. ಎಸ್.ಎನ್. ಕಲ್ಲಣ್ಣವರ್ | ಧಾರವಾಡ |
| ವೈ. ರಾಮಚಂದ್ರ | ಬೆಂಗಳೂರು |
| ದಿ. ಡಾ. ಎಂ.ಬಿ. ನಟರಾಜ್ | ಬೆಂಗಳೂರು |
| ಮಾಣಿಕರಾವ್ ಪುಳೇಕರ್ | ಬೀದರ್ |
| ಎ. ದೊಡ್ಡೇಗೌಡ | ಹಾಸನ |
| ಟಿ.ಎಚ್. ನಾರಾಯಣಸ್ವಾಮಿ | ತುಮಕೂರು |

## ಲೋಕಸಭಾ ಸದಸ್ಯರು

| | |
|---|---|
| ಡಿ.ಕೆ. ನಾಯ್ಕರ್ | ಧಾರವಾಡ ಉತ್ತರ |
| ಚನ್ನಯ್ಯ ಒಡೆಯರ್ | ದಾವಣಗೆರೆ |
| ರಾಜಶೇಖರ ಕೊಲ್ಲೂರು | ಗುಲ್ಬರ್ಗಾ |
| ವಿ.ಎಲ್. ಪಾಟೀಲ | ಬೆಳಗಾವಿ (1956ಕ್ಕೆ ಮುಂಚೆ) |

## ರಾಜ್ಯಸಭಾ ಸದಸ್ಯರು:

| | |
|---|---|
| ಕೊಲ್ಲೂರು ಮಲ್ಲಪ್ಪ | ಗುಲ್ಬರ್ಗಾ |
| ಎಂ. ಬಸವರಾಜ್ | ಮೈಸೂರು |

---

ಕುರುಬರು ನಗಣ್ಯರೆಂದಾಗಲಿ ರಾಜಕೀಯವಾಗಿ ಪ್ರಬಲರಲ್ಲ ಎಂದಾಗಲಿ ಯಾರು ತಾನೇ ಹೇಳಿಯಾರು? ಸದಸ್ಯರ ಈ ಉದ್ದನೆಯ ಪಟ್ಟಿಯು ಸ್ವಾತಂತ್ರ್ಯೋತ್ತರ ಕಾಲಾವಧಿಯುದ್ದಕ್ಕೂ ಅವರು ಅನುಭೋಗಿಸುತ್ತಾ ಬಂದಿರುವ ಅಧಿಕಾರವನ್ನು ಸೂಚಿಸುತ್ತದೆ. ರಾಷ್ಟ್ರ ಮತ್ತು ರಾಜ್ಯ ಮಟ್ಟದಲ್ಲೇ ಚಿತ್ರವು ಹೀಗಿದ್ದರೆ, ಕುರುಬರು ಕೇಂದ್ರೀಕರಿಸಿರುವ ಪ್ರಾದೇಶಿಕ ಮತ್ತು ಸ್ಥಳೀಯ ಚಿತ್ರ ಹೇಗಿರುತ್ತದೆಂದು ಯಾರೂ ಊಹಿಸಬಹುದು. ಆದರೂ ರಾಜಕೀಯ ಸ್ಥಾನಮಾನಗಳು, ಅಧಿಕಾರ ಇವು ಅವರ ತೃಷೆಯನ್ನು ಹಿಂಗಿಸಿರುವಂತೆ ತೋರುವುದಿಲ್ಲ. ಹಲವು ಕ್ಷೇತ್ರಗಳಲ್ಲಿನ 'ಮೀಸಲಾತಿ' ಸೌಲಭ್ಯಗಳನ್ನು ಅವರು ಒತ್ತಾಯಪಡಿಸಲು ಹೊರಟಿದ್ದಾರೆ. ಅವರಿಗೆ ಕೇವಲ ಹಿಂದುಳಿದವರೆಂದು ವರ್ಗೀಕರಣ ಬೇಕಾಗಿಲ್ಲ. ಇದು ಮತ್ತು ಇನ್ನೂ ಹೆಚ್ಚಿನ ವಿಚಾರಗಳು ನಮ್ಮ ಬಳಿಯಿರುವ ಮಾಹಿತಿಯಿಂದ ವೇದ್ಯವಾಗುತ್ತದೆ. ಅವುಗಳನ್ನೀಗ ನೋಡೋಣ.

ನೀವಾಗಲಿ ನಿಮ್ಮ ಕುಟುಂಬದ ಸದಸ್ಯರಾಗಲಿ ಯಾವುದೇ ರಾಜಕೀಯ ಪಕ್ಷಕ್ಕೆ, ಉಪ-ವಿಭಾಗಕ್ಕೆ, ಸದಸ್ಯರಾಗಿಯೋ, ಕಾರ್ಯಕಾರೀ ಸದಸ್ಯರಾಗಿಯೋ, ಬೆಂಬಲಿಗರಾಗಿಯೋ, ಸಹಾನುಭೂತಿಯುಳ್ಳವರಾಗಿಯೋ ಸಂಬಂಧಪಟ್ಟಿದ್ದೀರಾ ಎಂಬ ಪ್ರಶ್ನೆಗೆ 601 ಮಾದರಿ ಕುಟುಂಬಗಳಲ್ಲಿ ಕೇವಲ 69 (12.50%) ಜನ ಇತ್ಯಾತ್ಮಕ ಪ್ರತಿಕ್ರಿಯೆ ತೋರಿಸಿದ್ದಾರೆ. ಮಿಕ್ಕ 532 (88.5%) ಕುಟುಂಬಗಳು ನಮಗೆ ಅನ್ವಯವಾಗುವುದಿಲ್ಲ ಎಂಬ ಗುಂಪಿಗೆ ಸೇರಿದ್ದಾರೆ.

ಹಾಗೆಯೇ ರಾಜಕೀಯ ಸಭೆಗಳಲ್ಲಿ, ರ್‍ಯಾಲಿಗಳಲ್ಲಿ, ಮೆರವಣಿಗೆ ಮೊದಲಾದವುಗಳಲ್ಲಿ ಮಾಹಿತಿದಾರರು ಭಾಗವಹಿಸಿದ್ದಾರೆಯೇ ಎಂಬ ಪ್ರಶ್ನೆಗೆ 601 ಕುಟುಂಬಗಳ ಪೈಕಿ ಕೇವಲ 136 (22.6%) 'ಹೌದು' ಎಂದಿದ್ದರೆ, ಉಳಿದ 465 (77.3%) ಅನ್ವಯವಾಗುವುದಿಲ್ಲ ಎಂದು ಉತ್ತರಿಸಿದ್ದಾರೆ.

ಅವರು ಬೆಂಬಲ ಕೊಡುವ ರಾಜಕೀಯ ಪಕ್ಷ ಯಾವುದು ಎಂಬ ಪ್ರಶ್ನೆಗೆ 38 ಕುಟುಂಬಗಳು (6.3%) ಕಾಂಗ್ರೆಸ್ (ಐ) ಪಕ್ಷಕ್ಕೆ ಬೆಂಬಲ ಕೊಡುವುದಾಗಿ ಹೇಳಿದ್ದಾರೆ. 13 (1.2%) ಕುಟುಂಬಗಳು ಜನತಾದಳವನ್ನು ಬೆಂಬಲಿಸಿದರೆ, ಕರ್ನಾಟಕ ಕಾಂಗ್ರೆಸ್ ಪಕ್ಷವು 9 (1.4%) ಕುಟುಂಬಗಳ ಬೆಂಬಲ ಪಡೆದಿದೆ; ಬಿ.ಜೆ.ಪಿ.ಗೆ 5 ಕುಟುಂಬಗಳ ಒತ್ತಾಸೆಯಿದೆ (0.8%), ಕಮ್ಯೂನಿಸ್ಟರನ್ನು ಒಂದೇ ಒಂದು ಕುಟುಂಬವು ಬೆಂಬಲಿಸುತ್ತದೆ (0.1%). ಎಂದಿನಂತೆ 535 (89.0%) ಕುಟುಂಬಗಳು ಅನ್ವಯವಾಗುವುದಿಲ್ಲ ಎಂಬ ವರ್ಗಕ್ಕೆ ಸೇರಿಕೊಳ್ಳುತ್ತಾರೆ.

ಕೊನೆಯದಾಗಿ ಯಾವ ರಾಜಕೀಯ ಪಕ್ಷಕ್ಕೆ ನೀವು ಮತ ನೀಡಿದಿರಿ? ಎಂಬ ಪ್ರಶ್ನೆಗೆ ಮಾಹಿತಿದಾರರು ಕೊಟ್ಟ ಉತ್ತರ ಹೀಗೆ: ಇದು 1994ರ ವಿಧಾನಸಭಾ ಚುನಾವಣೆಗಳಿಗೆ ಸೇರಿದ್ದು. ಅದರಲ್ಲಿ ಜನತಾದಳವು ಜಯಗಳಿಸಿ ಬಂದಿತು. ಆದರೆ ಕುರುಬರಲ್ಲಿ ಓಟು ನೀಡಿರುವ ಮಾದರಿಯು ಕಾಂಗ್ರೈ ಪಕ್ಷಕ್ಕೆ ಅವರು ಅಪಾರ ಬೆಂಬಲ ಕೊಟ್ಟಿರುವುದನ್ನು ತೋರಿಸುತ್ತದೆ. 254 ಕುಟುಂಬಗಳು (42.2%) ಕಾಂಗ್ರೈ ಪಕ್ಷಕ್ಕೆ ಓಟು ನೀಡಿವೆ. 96 ಕುಟುಂಬಗಳು (15.95%) ಮಾತ್ರ ಜನತಾದಳಕ್ಕೆ ಮತನೀಡಿವೆ. ಬಿ.ಜೆ.ಪಿಯೂ ಗಣನೀಯ ಪ್ರಗತಿ ತೋರಿಸಿದೆ. 42 ಕುರುಬ ಕುಟುಂಬಗಳು (6.90%) ಅದಕ್ಕೆ ಮತ ನೀಡಿವೆ. ಕರ್ನಾಟಕ ಕಾಂಗ್ರೆಸ್ ಪಕ್ಷವು 6 ಮನೆಗಳಿಂದ (0.9%)ಲೂ, ಕಮ್ಯೂನಿಸ್ಟ್ ಪಕ್ಷವು 4 ಮನೆಗಳಿಂದಲೂ (1.3%) ಬೆಂಬಲ ಪಡೆದಿವೆ. ಮಿಕ್ಕ 191 (31.7%) ಕುಟುಂಬಗಳು ತಮಗೆ ಅನ್ವಯವಾಗುವುದಿಲ್ಲ ಎಂಬ ವರ್ಗಕ್ಕೆ ಸೇರಿದ್ದಾರೆ.

ನಮ್ಮ ಮಾಹಿತಿದಾರರು ಒಂದು ನಿರ್ದಿಷ್ಟ ಪಕ್ಷಕ್ಕೆ ಅಥವಾ ಅಭ್ಯರ್ಥಿಗೆ ಏಕೆ ಓಟು ನೀಡಿದರು ಎಂಬುದಕ್ಕೆ ಅನೇಕ ಕಾರಣಗಳು ಬಂದಿವೆ. ಜಾತಿ ಭಾವನೆ, ಸ್ವಯಂ ಪ್ರೇರಣೆ, ಸೌಲಭ್ಯಗಳ ನಿರೀಕ್ಷೆ, ಪ್ರಿಯವಾದ ಪಕ್ಷ, ಬಲಾತ್ಕಾರ, ಅಭ್ಯರ್ಥಿಯೊಂದಿಗೆ ಬಾಂಧವ್ಯ ಅಥವಾ ಗೆಳೆತನ - ಇವು ಅಂತಹ ಕಾರಣಗಳಲ್ಲಿ ಕೆಲವು ಸೌಲಭ್ಯಗಳನ್ನು ಪಡೆಯುವ ನಿರೀಕ್ಷೆಯಿಂದ ಮತನೀಡಿದವರು, ಮೈಸೂರು - ಧಾರವಾಡ - ಬಳ್ಳಾರಿ ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಕ್ರಮವಾಗಿ 36, 21, 10, 11 ಕುಟುಂಬಗಳು. ಜಾತಿ ಭಾವನೆಯಿಂದ ಮತ ನೀಡಿದವರು ಅದೇ ಕ್ರಮದಲ್ಲಿ 11, 10, 27, 33 ಕುಟುಂಬಗಳು. ಸ್ವಯಂ ಪ್ರೇರಿತರಾಗಿ ಓಟು ಕೊಟ್ಟ ಕುಟುಂಬಗಳು ಮೈಸೂರು ಜಿಲ್ಲೆಯಲ್ಲಿ 22, ಬಳ್ಳಾರಿಯಲ್ಲಿ 17 ಮತ್ತು ಚಿತ್ರದುರ್ಗದಲ್ಲಿ 32. ಹಾಗೆಯೇ ತಮಗೆ ಪ್ರಿಯವಾದ ಪಕ್ಷವೆಂದು ಮತನೀಡಿದವರು ಮೈಸೂರಿನಲ್ಲಿ 21, ಬಳ್ಳಾರಿಯಲ್ಲಿ 8 ಮತ್ತು ಚಿತ್ರದುರ್ಗದಲ್ಲಿ 8 ಕುಟುಂಬಗಳು. ಗೆಳೆತನ / ಬಂಧುತ್ವ ಕಾರಣವಾಗಿರುವುದು ಮೈಸೂರಿನಲ್ಲಿ 3, ಧಾರವಾಡದಲ್ಲಿ 4 ಮತ್ತು ಬಳ್ಳಾರಿಯಲ್ಲಿ 6 ಕುಟುಂಬಗಳಿಗೆ. ತಮ್ಮನ್ನು ನಿರ್ದಿಷ್ಟ ಪಕ್ಷದ ಉಮೇದುವಾರರಿಗೇ ಓಟು ಕೊಡಬೇಕೆಂದು ಬಲಾತ್ಕರಿಸಲಾಯಿತು ಎಂದು ಕೆಲವರು ಹೇಳಿದರು. ಇಂಥವರು ಮೈಸೂರು ಜಿಲ್ಲೆಯಲ್ಲಿ 14, ಧಾರವಾಡದಲ್ಲಿ 17, ಬಳ್ಳಾರಿಯಲ್ಲಿ 13 ಮತ್ತು ಚಿತ್ರದುರ್ಗದಲ್ಲಿ 5 ಕುಟುಂಬಗಳು.

ಇತರ ಕಾರಣಗಳಿರಲಿ, 'ಜಾತಿ ಭಾವನೆ' ಮತ್ತು 'ಬಲಾತ್ಕಾರ'ಗಳು ಒಟ್ಟೊಟ್ಟಿಗೆ ಇರುವಂತೆ ತೋರಿದರೂ, ಮೊದಲಿನದು ಇನ್ನೂ ಸಾಂದ್ರಗೊಳ್ಳುವಂತೆ ತೋರುತ್ತದೆ. ಕಟ್ಟುನಿಟ್ಟಾದ ಕಾವಲು ಮತ್ತು ಚುನಾವಣಾ ಸುಧಾರಣೆಗಳಿಂದಾಗಿ ಎರಡನೆಯದು ಕ್ಷೀಣವಾಗುತ್ತಾ ಹೋಗಬಹುದು. ಮತದಾರರ ಪೈಕಿ ಅನಕ್ಷರಸ್ಥರಿರುವವರೆಗೂ ಮೇಲ್ಕಂಡ ಅಂಶಗಳು ಇದ್ದೇ ಇರುತ್ತವೆ. ಇವುಗಳನ್ನು ನಿರ್ಮೂಲಗೊಳಿಸಬಹುದೆ ಅಥವಾ ನಿಯಂತ್ರಿಸಬಹುದೆ ಎಂಬ ವಿಚಾರದಲ್ಲಿ ಭವಿಷ್ಯತ್ತು ಮಾತ್ರವೇ ಬೆಳಕು ಚೆಲ್ಲಿಸಬಲ್ಲದು.

"ನಿಮ್ಮ ಜಾತಿಯ ರಾಜಕೀಯ ಮುಖಂಡರ ಹೆಸರು ನಿಮಗೆ ಗೊತ್ತೆ?" ಎಂಬ ಪ್ರಶ್ನೆಗೆ ತುಂಬಾ ಜನರು ಗೊತ್ತು ಎಂದು ಉತ್ತರ ಕೊಟ್ಟಿದ್ದಾರೆ. ಮಾದರಿಯಾದ 601 ಕುಟುಂಬಗಳ ಪೈಕಿ 130 ಕುಟುಂಬಗಳ ಹೊರತಾಗಿ ಮಿಕ್ಕವರು ಹಾಲಿ ಮತ್ತು ಮಾಜಿ ಎಂ.ಎಲ್.ಎ.ಗಳು, ಎಂಪಿಗಳು, ಸಚಿವರು ಮತ್ತು ಇತರ ಪ್ರಭಾವೀ ವ್ಯಕ್ತಿಗಳು ತಮಗೆ ಗೊತ್ತು ಎಂದು ಉತ್ತರ ಕೊಟ್ಟಿದ್ದಾರೆ.

ಮುಖಂಡರು ಯಾವ ರೀತಿಯಲ್ಲಿ ಸಮುದಾಯಕ್ಕೆ ಅನುಕೂಲಗಳನ್ನು ಮಾಡಿಕೊಟ್ಟಿದ್ದಾರೆ ಎಂಬ ಇನ್ನೊಂದು ಪ್ರಶ್ನೆಗೆ ಮಾದರಿಯ ಅರ್ಧಕ್ಕಿಂತಲೂ ಸ್ವಲ್ಪ ಹೆಚ್ಚು ಜನರು, ಅವರು ಮಾಡಿರುವ ಕೆಲಸಗಳ ಪಟ್ಟಿಯನ್ನು ನೀಡಿದ್ದಾರೆ. 52.4% ಮಾಹಿತಿದಾರರು ಇತರ ಅಂಶಗಳ ಜೊತೆಗೆ, ಹೇಗೆ ಮುಖಂಡರು ಕುರುಬರನ್ನು ಸಂಘಟಿಸಲು ಶ್ರಮಿಸಿದ್ದಾರೆ. ರಾಜಕೀಯ ಪ್ರಜ್ಞೆಯನ್ನು ಮೂಡಿಸಿದ್ದಾರೆ. ಶೈಕ್ಷಣಿಕ ಸಂಸ್ಥೆಗಳನ್ನು ಹಾಸ್ಟೆಲುಗಳನ್ನು ನಡೆಸುತ್ತಿದ್ದಾರೆ. ಧಾರ್ಮಿಕ ಸಂಸ್ಥೆಗಳನ್ನು ಕಟ್ಟಿದ್ದಾರೆ. ಸಮುದಾಯಕ್ಕೆ ಹಲವು ಬಗೆಯ ರಿಯಾಯಿತಿಗಳನ್ನು ದೊರಕಿಸಿಕೊಟ್ಟಿದ್ದಾರೆ ಎಂದು ಹೇಳಿದ್ದಾರೆ. ನಾಲ್ಕೂ ಜಿಲ್ಲೆಗಳ ಒಟ್ಟು 59.4% ಮಾಹಿತಿದಾರರು, ಸಮುದಾಯಕ್ಕೆ ಮೀಸಲಾತಿ ಸೌಲಭ್ಯಗಳು ಬೇಕು ಎಂದು ಹೇಳುತ್ತಾರೆ. ಸರಕಾರವು ಶಿಕ್ಷಣ ಕ್ಷೇತ್ರದಲ್ಲಿ, ಉದ್ಯೋಗಗಳಲ್ಲಿ ಸೌಲಭ್ಯಗಳನ್ನು ನೀಡಬೇಕು, ಸಾಲ ನೀಡುವಿಕೆ, ಮನೆಗಳನ್ನು ಕಟ್ಟಿಕೊಡುವಿಕೆ, ವಿಶೇಷ ಸವಲತ್ತುಗಳನ್ನು ಒದಗಿಸಬೇಕೆಂದು ಕೇಳುತ್ತಾರೆ. ಮೈಸೂರು ಜಿಲ್ಲೆಯ 145 ಜನರ ಪೈಕಿ 122 ಜನರು ಬಿ.ಸಿ.ಗಳೆಂದು ಪರಿಗಣಿಸಲ್ಪಡಲು ಬಯಸುವುದಿಲ್ಲ. ಹಾಗೆಯೇ ಧಾರವಾಡ, ಬಳ್ಳಾರಿ ಮತ್ತು ಚಿತ್ರದುರ್ಗಗಳಲ್ಲಿನ 129, 93, 90 ಜನರು ಬಿ.ಸಿ. ಎಂದು ಪಟ್ಟಿಕೆಯನ್ನು ನಿರಾಕರಿಸಿದ್ದಾರೆ. ಕುರುಬರನ್ನು ಬಿ.ಸಿ.ಗಳೆಂದು ಪರಿಗಣಿಸಿದರೆ ಅದರಿಂದ ಸಮುದಾಯಕ್ಕೆ ಹೆಚ್ಚಿನ ಲಾಭವಿಲ್ಲ. ಏಕೆಂದರೆ ಆಗ ಅವರೂ ಇತರ ಹಿಂದುಳಿದ ಜಾತಿಗಳೊಂದಿಗೆ ಸೇರಿದಂತಾಗುತ್ತದೆ. ಆಗ ಅವರಿಗೆ ದೊರಕುವ ಪ್ರಯೋಜನ ನಿಗದಿಯಾದ ಪಾಲಿನ ಒಂದು ತುಣುಕು ಮಾತ್ರ. ಅದಕ್ಕೆ ಬದಲು, ಈಗ ಕಾಡು ಕುರುಬರಿಗೆ ಕೊಡಲಾಗಿರುವ ಮೀಸಲಾತಿ ಸೌಲಭ್ಯಗಳನ್ನು ಪಡೆಯುವಂತಾದರೆ ಗರಿಷ್ಠ ಪ್ರಯೋಜನ ದೊರಕುತ್ತದೆ, ನಿಜ, ಬುಡಕಟ್ಟು, ಕಾಡುಕುರುಬರ ಬೆಲೆಕೊಟ್ಟು ಪಡೆದಂತಾಗುತ್ತದೆ. ಅಖಿಲಭಾರತ ಕುರುಬ ಮಹಾಸಭಾ / ಸಂಘವನ್ನು ರಚಿಸಲು

ಜಾತಿಯನ್ನೂ ಬುಡಕಟ್ಟನ್ನೂ ಒಂದುಗೂಡಿಸಬಹುದು ಎಂಬ ಸೂಚನೆಗೆ ಬಂದ ಪ್ರತಿಕ್ರಿಯೆಗಳನ್ನು ವಿಶ್ಲೇಷಿಸಿದರೆ ಇದು ಸ್ಪಷ್ಟವಾಗಿ ತಿಳಿಯುತ್ತದೆ.

ಕುರುಬರಲ್ಲಿ ಬಹುಸಂಖ್ಯಾತರು, ಮಾದರಿಯ 601 ರಲ್ಲಿ 428 ಕುಟುಂಬಗಳು (71.2%) ಕಾಡು ಕುರುಬರಿಗೂ ಕುರುಬರಿಗೂ ಯಾವ ಸಂಬಂಧವೂ ಇಲ್ಲ ಎಂದು ಹೇಳಿದ್ದಾರೆ. ಕೇವಲ 130 ಜನರು (21.7%) ಇದೆ ಎಂದು ಉತ್ತರಿಸಿದ್ದಾರೆ. ಆದರೆ ಈ ನಿಲುವು ಬದಲಾಗಿ ಈ ಕೆಳಗಿನ ಪ್ರಶ್ನೆಗಳಿಗೆ ಅವರು ನೀಡಿರುವ ಉತ್ತರಗಳು ಅವರಲ್ಲಿರುವ ದುರುದ್ದೇಶಗಳನ್ನು ಬಯಲುಪಡಿಸುತ್ತವೆ. ಜಾತಿ ಮತ್ತು ಬುಡಕಟ್ಟು ಎರಡರ ವಿಲೀನವು ಹೆಚ್ಚು ಲಾಭದಾಯಕವಾಗುತ್ತದೆಯೆ? ಎಂದು ಕೇಳಲಾದ ಪ್ರಶ್ನೆಗೆ ಒಟ್ಟು 47 ಜನ ಮಾಹಿತಿದಾರರು, ಮೈಸೂರು ಜಿಲ್ಲೆಯಲ್ಲಿ 39, ಧಾರವಾಡದಲ್ಲಿ 4, ಬಳ್ಳಾರಿಯಲ್ಲಿ 3, ಚಿತ್ರದುರ್ಗದಲ್ಲಿ 1- ವಿಲೀನವನ್ನು ತಾವು ಇಷ್ಟಪಡುವುದಿಲ್ಲವೆಂದೂ, ಜಾತಿ ಮೈಲಿಗೆಯುಂಟಾಗುವುದು ಅದಕ್ಕೆ ಒಂದು ಕಾರಣವೆಂದೂ ಉತ್ತರ ನೀಡಿದ್ದಾರೆ. ಏಕತೆ ಮತ್ತು ಬೆಂಬಲಗಳ ಒಂದು ಕ್ರಮವಾಗಿ ವಿಲೀನವು ಸ್ವಾಗತಾರ್ಹವಾದ ಕ್ರಮವೆಂದು ಗಣನೀಯ ಸಂಖ್ಯೆಯ ಮಾಹಿತಿದಾರರು ಮೈಸೂರು, ಧಾರವಾಡ, ಬಳ್ಳಾರಿ ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಕ್ರಮವಾಗಿ 67, 116, 125, 127 ಜನ ಭಾವಿಸುತ್ತಾರೆ. ಇನ್ನೊಂದು 79 ಜನರು ಅದು ವಿಶಿಷ್ಟತೆಯ ಲಕ್ಷಣ, ಆರ್ಥಿಕ ಮತ್ತು ರಾಜಕೀಯ ಪ್ರಯೋಜನಗಳ ದೃಷ್ಟಿಯಿಂದ ಅಗತ್ಯವಾದದ್ದು ಎಂದು ಹೇಳುತ್ತಾರೆ. ಒಟ್ಟಿನಲ್ಲಿ 601 ಜನರಲ್ಲಿ 514 ಜನರು ಇತ್ಯಾತ್ಮಕ ಉತ್ತರ ಕೊಡುತ್ತಾರೆ. ಇದು ಕಾಡು ಕುರುಬರಿಗೂ ಕುರುಬರಿಗೂ ಯಾವ ಸಂಬಂಧವೂ ಇಲ್ಲ ಎಂದು ಮುಂಚೆ ನೀಡಿದ ಹೇಳಿಕೆಗೆ ವಿರುದ್ಧವಾದುದಾಗಿದೆ.

ಜಾತಿ ಮತ್ತು ಬುಡಕಟ್ಟುಗಳನ್ನು ವಿಲೀನಗೊಳಿಸಿ ಅಖಿಲ ಭಾರತ ಕುರುಬ ಮಹಾಸಭಾ ರಚಿಸಬಹುದೆ ಎಂಬ ಪ್ರಶ್ನೆಗೆ ಉತ್ತರ ನಿಸ್ಸಂದೇಹವಾಗಿ ಇತ್ಯಾತ್ಮಕವಾಗಿದೆ. 526 (87.5%) ಜನರು 'ಹೌದು' ಎನ್ನುತ್ತಾರೆ. ಕೇವಲ 48 (7.8%) ಜನರು 'ಕೂಡದು' ಎನ್ನುತ್ತಾರೆ. ಮಹಾಸಭೆಯ ರಚನೆಯು ಒಂದು ಪ್ರಬಲವಾದ ಒತ್ತಡ ಬೀರುವ ಶಕ್ತಿಯಾಗಬಹುದೆ ಎನ್ನುವ ಸೂಚನೆಯುನ್ನು 572 (95.1%) ಜನರು ಅನುಮೋದಿಸುತ್ತಾರೆ, ಕೇವಲ 10 ಜನರು ನಿರಾಕರಿಸಿದ್ದಾರೆ. ಇಂತಹ ಭಾವಾವೇಶದಿಂದ ತುಂಬಿದ ಉತ್ತರಗಳ ನಡುವೆ, ಜಾತಿ ಸಂಘದ ಸಂಗತತೆಯ ಬಗೆಗೆ ಪ್ರಶ್ನೆ ಮಾಡಿದಾಗ ಮಾಹಿತಿದಾರರು, ಮೈಸೂರು - ಧಾರವಾಡ - ಬಳ್ಳಾರಿ - ಚಿತ್ರದುರ್ಗ ಜಿಲ್ಲೆಗಳಿಗೆ ಸೇರಿದ ಕ್ರಮವಾಗಿ 134, 135, 148, 135 ಜನರು, ಜಾತಿ ಸಂಘವು ಅತ್ಯಂತ ಸಂಗತವಾದದ್ದು, ಇಂದಿನ ರಾಜಕೀಯ ಪರಿಸ್ಥಿತಿಯಲ್ಲಿ, ಒತ್ತಡದ ಕಾರ್ಯತಂತ್ರಗಳು ಮತ್ತು ಸಂಖ್ಯೆಯ ಆಟವು ಹೋರಾಟದಲ್ಲಿ ಬಹು ಉಪಯುಕ್ತ ಪಾತ್ರವನ್ನು ವಹಿಸಲಿರುವ ಸನ್ನಿವೇಶದಲ್ಲಿ ಇನ್ನೂ ಹೆಚ್ಚಾಗಿ ಉಚಿತವಾಗಿದೆ ಎಂದು ಅಭಿಪ್ರಾಯ ಪಡುತ್ತಾರೆ.

ಹಾಗಾಗಿ ಕುರುಬರು ಕೇವಲ ತಮ್ಮ ಸಂಖ್ಯಾಬಲವನ್ನು ಹೆಚ್ಚಿಸಿಕೊಳ್ಳುವ ಸಲುವಾಗಿ, ಅಧಿಕ ಸಂಖ್ಯೆಯ ಶಕ್ತಿಯ ಪ್ರಯೋಗದಿಂದ ಪ್ರಯೋಜನಗಳನ್ನು ಸೆಳೆದುಕೊಳ್ಳುವ ಸಲುವಾಗಿ ಮಾತ್ರವೇ ಕಾಡುಕುರುಬರನ್ನು ಸೇರಿಸಿಕೊಳ್ಳಲು ಬಯಸುತ್ತಾರೆ. ಅವರಿಗೆ ನಿಜವಾಗಿ ವಿಲೀನವಾಗಬೇಕೆಂಬುದರಲ್ಲಿ ಪ್ರಾಮಾಣಿಕವಾದ ಕಾಳಜಿಯಿಲ್ಲ ಎನ್ನುವುದು ಸ್ಪಷ್ಟವಾಗುತ್ತದೆ. ಏಕೆಂದರೆ ಅದರಿಂದ ಸಮಸ್ಯೆಗಳು ಉದ್ಭವಿಸಿ, ಜಾತಿ ಸಂಕರವೇ ಅಂತಿಮ ಫಲವಾಗಬಹುದು ಎಂದು ಅವರಿಗೆ ಗೊತ್ತು. ತಮ್ಮ ತಳಹದಿಯನ್ನು ಬಲಪಡಿಸಿಕೊಳ್ಳುವುದಕ್ಕಾಗಿ ಮಾತ್ರ ಅವರಿಗೆ ವಿಲೀನ ಅಗತ್ಯವಾಗಿದೆ. ಸಾಮೂಹಿಕ ಒತ್ತಡದ ತಂತ್ರವನ್ನು ಉಪಯೋಗಿಸಿ, ಸರಕಾರದೊಂದಿಗೆ ಚೌಕಾಶಿ ಮಾಡಿ, ತಾವು ಬುಡಕಟ್ಟು ಎಂಬ ಪಟ್ಟಿಯನ್ನೂ ಮೀಸಲಾತಿಯ ಇತರ ಸಕಲ ಪ್ರಯೋಜನಗಳನ್ನು ಕಬಳಿಸಲು ತಕ್ಕ ನೆಲೆಗೆ ಅವರು ಬಂದಂತಾಗುತ್ತದೆ. ಅಷ್ಟೇ ಹೊರತು ವಸ್ತು ಸ್ಥಿತಿಯ ಬಗೆಗೆ ಅವರಿಗೆ ಯಾವ ಕಳಕಳಿಯೂ ಇಲ್ಲ.

ಈಗ ನಾವು ಕಾಡು ಕುರುಬ ಬುಡಕಟ್ಟು ಜನರ ಕಡೆಗೆ, ಅವರ ಧಾರ್ಮಿಕ ಜೀವನದ ಕಡೆಗೆ ತಿರುಗೋಣ. ಆಮೇಲೆ ಅವರ ರಾಜಕೀಯ ಆಶೋತ್ತರಗಳನ್ನು ಪರಿಶೀಲಿಸಬಹುದು. ಅವರು ಪೂಜಿಸುವ ದೇವ ದೇವಿಯರ ಪಟ್ಟಿಯನ್ನು ನೋಡಿದರೆ, ಯಾರೊಬ್ಬರೂ ತಾವು ಬೀರ ದೇವರನ್ನು ಪೂಜಿಸುವುದಾಗಿ ಹೇಳಿಕೊಂಡಿಲ್ಲದುದು ಗೊತ್ತಾಗುತ್ತದೆ. ಕುರುಬರಿಗೆ ಬೀರದೇವರನ್ನು ಕುರಿತು ವಿಶೇಷವಾದ ಭಕ್ತಿ ಶ್ರದ್ಧೆಗಳಿರುವುದನ್ನು ನೆನಪು ಮಾಡಿಕೊಳ್ಳಬಹುದು. ಬೀರದೇವರಿಗಾಗಿ ದೇವಾಲಯಗಳನ್ನು ಕಟ್ಟುತ್ತಾರೆ. ವಿಶೇಷ ರೀತಿಯ ಡೊಳ್ಳು ಪೂಜೆಯೊಂದಿಗೆ ಸಂಬಂಧಿಸಿದೆ. ದೇವರ ಮೆರವಣಿಗೆಯಲ್ಲಿ ಡೊಳ್ಳು ಬಾರಿಸುವುದು ಪ್ರಧಾನವಾಗುತ್ತದೆ. ಈ ದಿನಗಳಲ್ಲಿ ಡೊಳ್ಳು - ಕುಣಿತವು ಒಂದು ಜಾನಪದ ಕಲೆಯ ಸ್ಥಾನವನ್ನು ಪಡೆದಿದೆ. ನವದೆಹಲಿಯಲ್ಲಿ ಪ್ರತಿವರ್ಷ ನಡೆಯುವ ಗಣರಾಜ್ಯ ದಿನಾಚರಣೆಯ ಪಥಸಂಚಲನದಲ್ಲಿ ಭಾಗವಹಿಸಲು ಕರ್ನಾಟಕದಿಂದ ಡೊಳ್ಳು ಕುಣಿತದ ತಂಡಗಳನ್ನು ಕಳುಹಿಸಲಾಗುತ್ತದೆ.

ಕಾಡುಕುರುಬರಲ್ಲಿ ಈ ಬಗೆಯ ಯಾವ ಚಟುವಟಿಕೆಯೂ ನಮಗೆ ಕಾಣಿಸುವುದಿಲ್ಲ. ಜಾತಿ ಮತ್ತು ಬುಡಕಟ್ಟುಗಳ ನಡುವಣ ಮುಖ್ಯವಾದ ವ್ಯತ್ಯಾಸಗಳಲ್ಲಿ ಇದೂ ಒಂದು. ಮೈಸೂರು ಜಿಲ್ಲೆಯಲ್ಲಿ ಕಾಡು ಕುರುಬರಿಗೂ ಕುರುಬರಿಗೂ ಧಾರ್ಮಿಕ ನಂಬಿಕೆಗಳು ಮತ್ತು ಆಚರಣೆಗಳಿಗೆ ಸಂಬಂಧಿಸಿದಂತೆ ಸ್ವಲ್ಪವಾದರೂ ಸಮಾನಾಂಶಗಳಿರಬಹುದೆಂದು ಯಾರಾದರೂ ನಿರೀಕ್ಷಿಸಬಹುದು. ಆದರೆ ವಸ್ತು ಸ್ಥಿತಿ ಹಾಗಿಲ್ಲ. ಇತರ ಕುರುಬರೊಂದಿಗೆ ಸಮಾನವಾಗಿರುವ ಧಾರ್ಮಿಕ ನಂಬಿಕೆಗಳು ಮತ್ತು ಆಚರಣೆಗಳಿರುವ ಕೆಲವು ಜನ ಕುರುಬ ಮಾಹಿತಿದಾರರು, ಹಾಗಿದ್ದರೂ ತಮ್ಮನ್ನು ಕಾಡುಕುರುಬರೆಂದು ಹೇಳಿಕೊಂಡಿದ್ದಾರೆ. ಕಾಡು ಕುರುಬರಲ್ಲಿರುವ ನಂಬಿಕೆಗಳನ್ನೂ ಆಚರಣೆಗಳನ್ನೂ ಹಂಚಿಕೊಳ್ಳದೆ ಹೋದರೂ, ಹಾಗೆ ಹೇಳಿಕೊಳ್ಳುವುದರಿಂದ ಅವರಿಗೆ ಗಣನೀಯವಾದ ಪ್ರಯೋಜನಗಳಿವೆ, ಒಮ್ಮೆ ತಮ್ಮನ್ನು

ಕಾಡು ಕುರುಬರೆಂದು ಒಪ್ಪಿ, ಬುಡಕಟ್ಟು ಪಟ್ಟಿಕೆಯನ್ನು ಕೊಟ್ಟರೆ ಸಾಕು ಎಂಬ ಸ್ವಾರ್ಥ ಅವರಲ್ಲಿರುವುದು ಸ್ಪಷ್ಟವಾಗಿದೆ.

ಕಾಡು ಕುರುಬರು ಅನೇಕ ದೇವ ದೇವಿಯರನ್ನು ಪೂಜಿಸುತ್ತಾರೆ. ಅವುಗಳಲ್ಲಿ ಹಲವು ಹಿಂದುಗಳು ಪೂಜಿಸುವ ದೇವರುಗಳೇ ಹೊರತು ಅಗತ್ಯವಾಗಿ ಕುರುಬರು ಪೂಜಿಸುವಂಥವೇ ಆಗಿರಬೇಕೆಂದಿಲ್ಲ. ಕೆಲವು ಮಾಹಿತಿದಾರರು ಮಾರಮ್ಮ, ಕಾಳಿ, ಚೌಡಮ್ಮ, ವೆಂಕಟರಮಣ, ಬಸವೇಶ್ವರ, ನಾರಾಯಣಸ್ವಾಮಿ ಈ ಕೆಲವು ದೇವರುಗಳ ಹೆಸರನ್ನು ಹೇಳುತ್ತಾರೆ. ಜೊತೆಗೆ ಬೇರೆ ಬೇರೆ ಸ್ಥಳಗಳಿಗೆ ಸೇರಿದ ಅನೇಕ ದೇವರುಗಳನ್ನೂ ಅವರು ಪೂಜಿಸುತ್ತಾರೆ. ಉದ್ಬೂರುಮಾರಿ, ಸೀಗೂರು ಒಡತಿ, ಅಯ್ಯಪ್ಪ, ಮುತ್ತಯ್ಯ, ಬೆಟ್ಟದ ದೇವರು, ಗೋಪಾಲಸ್ವಾಮಿ, ಚಿಕ್ಕಮ್ಮ, ದೊಡ್ಡಮ್ಮ, ದೊಡ್ಡಯ್ಯ, ಹೆಬ್ಬಾಲೆ ದೇವರು-ಇಂತಹ ಇನ್ನೂ ಅನೇಕ. ಈ ದೇವದೇವಿಯರನ್ನು ಶೈವ, ವೈಷ್ಣವ ಎಂದು ವರ್ಗೀಕರಿಸುವುದು ಕಷ್ಟ. ಕೆಲವರಿಗೆ ವಿಶಿಷ್ಟವಾದ ಬುಡಕಟ್ಟು ಹೆಸರುಗಳಿರುತ್ತವೆ, ನೂರಟ್‌ದೇವರು, ಹೈಗೊಲಿ, ಮಂಗೆ ಇತ್ಯಾದಿ. ಬುಡಕಟ್ಟು ಜನರು ಪೂಜಿಸುವ ವಿವಿಧ ದೇವ-ದೇವಿಯರ ಮಹತ್ವ ಮತ್ತು ಕಾರ್ಯವ್ಯಾಪ್ತಿ ಪ್ರಸ್ತುತ ಅಧ್ಯಯನಕ್ಕೆ ಸೇರಿದುದಲ್ಲ. ಆದ್ದರಿಂದ ಇಷ್ಟು ಹೇಳಿದರೆ ಸಾಕು- ಧಾರ್ಮಿಕ ನಂಬಿಕೆಗಳಲ್ಲಿ ಮತ್ತು ಆಚರಣೆಗಳಲ್ಲಿ ದೇವತೆಗಳ ಹೆಸರುಗಳೂ ಸೇರಿದಂತೆ ಬುಡಕಟ್ಟು ಜನರು ಮತ್ತು ಜಾತಿ ಕುರುಬರ ನಡುವೆ ವ್ಯತ್ಯಾಸಗಳಿವೆ.

ಒಳ್ಳೆಯದು ಮಾಡುವ ಮತ್ತು ಕೆಟ್ಟದು ಮಾಡುವ ದೇವತೆಗಳಿವೆಯೆ ಎಂಬ ಪ್ರಶ್ನೆಗೆ ಬಹು ಸಂಖ್ಯೆಯ ಕಾಡುಕುರುಬರು, ಬಹುತೇಕ ದೇವರುಗಳು ಒಳ್ಳೆಯದನ್ನು ಮಾಡುವವರು ಎಂದು ಉತ್ತರ ಕೊಟ್ಟಿದ್ದಾರೆ. ಅಂತರಸಂತೆಯಿಂದ 144, ಎನ್. ಬೇಗೂರಿನಿಂದ 104 (300 ರಲ್ಲಿ 248); ಹುಣಸೂರಿನಲ್ಲಿ 243, ಹೀಗೆ ಒಟ್ಟು 491 ಜನ ಮಾಹಿತಿದಾರರಿಗೆ ತಾವು ಪೂಜಿಸುವ ದೇವ ದೇವಿಯರ ಅನುಗ್ರಹ ಶೀಲತೆಯ ವಿಷಯದಲ್ಲಿ ಅಪಾರವಾದ ನಂಬುಗೆಯಿದೆ.

ಅರಣ್ಯ ಪ್ರದೇಶಕ್ಕೆ ಹತ್ತಿರದಲ್ಲಿ ಅಥವಾ ಅರಣ್ಯದ ಅಂಚಿನಲ್ಲಿ, ಕೆಲವೊಮ್ಮೆ ದಟ್ಟವಾದ ಅರಣ್ಯದೊಳಗೆ ಪ್ರತ್ಯೇಕವಾಗಿ ಜೀವಿಸುತ್ತಿರುವ ಬುಡಕಟ್ಟು ಜನರಿಗೆ ಸಹಜವಾಗಿಯೇ ಭೂತ-ಪ್ರೇತಗಳಲ್ಲಿ ನಂಬಿಕೆಯಿದೆ. ಅವರಲ್ಲಿ ಅನೇಕರು ಪ್ರೇತ-ಪಿಶಾಚಿಗಳ ಹೆದರಿಕೆಯಿಂದ ಗುಡಿಸಿಲಿನ ಒಳಗೆ ಮಲಗಿಕೊಳ್ಳದೆ, ಹೊರಗೆ ತೆರದ ಆಕಾಶದ ಕೆಳಗೆ ಮಲಗಲು ಇಷ್ಟಪಡುತ್ತಾರೆ. ಆಶ್ರಮ ಶಾಲೆಗಳಲ್ಲಿ ಕಲಿಯುತ್ತಿರುವ ಮಕ್ಕಳೂ ಕೂಡ ದೆವ್ವ ಭೂತಗಳ ಹೆದರಿಕೆಯುಳ್ಳವರಾಗಿರುವುದರಿಂದ ಹಾಸ್ಟೆಲ್ ಕಟ್ಟಡದ ಒಳಗೆ ಮಲಗದೆ ಹೊರಗೆ ಮಲಗಲು ಬಯಸುತ್ತಾರೆ. ಕಟ್ಟಡದೊಳಗೆ ರಾತ್ರಿ ಹೊತ್ತು ಅತಿ ಸಣ್ಣ ಸದ್ದಾದರೂ ಈ ವಿದ್ಯಾರ್ಥಿಗಳು ಹೆದರಿ ನಡುಗುತ್ತಾರೆ. ಭೂತ - ಪ್ರೇತಗಳು ಬುಡಕಟ್ಟು ಜನರಿಗೆ ಸಹಾಯಕವಾಗಿವೆಯೋ ಅನಿಷ್ಟಕರವೋ ಎಂದು ಕೇಳಿದ ಪ್ರಶ್ನೆಗೆ ಅವರಲ್ಲಿ ಬಹುತೇಖ ಜನರು ಅವು ಖಂಡಿತವಾಗಿಯೂ ಕೆಡಕು ಉಂಟು ಮಾಡುತ್ತವೆ ಎಂದು ಉತ್ತರ

ನೀಡಿದ್ದಾರೆ. ಅಂತರಸಂತೆಯಲ್ಲಿ 140 ಜನ ಎನ್. ಬೇಗೂರಿನಲ್ಲಿ 133, ಹುಣಸೂರು ಪ್ರದೇಶದಲ್ಲಿ 251 ಒಟ್ಟಿನಲ್ಲಿ 601 ಜನರಲ್ಲಿ 524 ಜನ ಮಾಹಿತಿದಾರರು ಹಾಗೆ ಹೇಳಿದ್ದಾರೆ. ಕೇವಲ 35 ಜನ ಮಾತ್ರ ಅವು ಸಹಾಯಕವಾಗಿವೆ ಎಂದು ಅಭಿಪ್ರಾಯಪಟ್ಟಿದ್ದಾರೆ. 20 ಜನರು ಪ್ರೇತ - ಪಿಶಾಚಿಗಳಿಂದ ಒಳ್ಳೆಯದೂ ಇದೆ ಕೆಟ್ಟದೂ ಇದೆ ಎನ್ನುತ್ತಾರೆ. 6 ಜನರು ಮಾತ್ರ ತಮಗೆ ಪ್ರೇತ - ಪಿಶಾಚಿಗಳ ಬಗೆಗೆ ನಂಬಿಯಿಲ್ಲ ಎಂದಿದ್ದಾರೆ. ಕಾಡಿನಲ್ಲಿ ವಾಸ ಮಾಡುವುದರಿಂದ ಮನುಷ್ಯನಿಗೆ ಬಹುಶಃ ಅನೇಕ ಸಹಜ ಘಟನೆಗಳೂ ದೆವ್ವ - ಭೂತಗಳ ಕೈವಾಡವೆಂಬಂತೆ ತೋರುತ್ತದೆ.

ರೋಗ ಮತ್ತು ಮರಣಗಳ ವಿಷಯದಲ್ಲಿಯೂ ಬುಡಕಟ್ಟು ಜನರ ದೃಷ್ಟಿ ಏನೆಂಬುದನ್ನು ಸ್ಥಿರಪಡಿಸಿಕೊಳ್ಳಲಾಯಿತು. ರೋಗಗಳು ಮತ್ತು ಸಾವಿನ ವಿಷಯದಲ್ಲಿ ನಿಮ್ಮ ಅಭಿಪ್ರಾಯ ಏನು ಎಂದು ಕೇಳಲಾದ ಪ್ರಶ್ನೆಗೆ ಸುಮಾರು 170 ಜನ ಉತ್ತರ ಕೊಟ್ಟಿಲ್ಲ. ಅವರು ಹುಣಸೂರಿನಿಂದ 64, ಎನ್. ಬೇಗೂರಿನಿಂದ 57 ಮತ್ತು ಅಂತರ ಸಂತೆಯಿಂದ 49. ಉಳಿದವರು ರೋಗಗಳಿಗಿಂತ ಮಿಗಿಲಾಗಿ ಸಾವನ್ನು ಕುರಿತು ಹೆಚ್ಚಾಗಿ ಹೇಳಿದ್ದಾರೆ. ಆಹಾರದಲ್ಲಿ ಆಗುವ ವ್ಯತ್ಯಾಸಗಳು ರೋಗವನ್ನುಂಟು ಮಾಡುತ್ತವೆಂದು ಕೆಲವರ ಅಭಿಪ್ರಾಯ. 35 ಜನ ಮಾಹಿತಿದಾರರು 'ಮಾಟ' ಮಾಡಿಸುವುದರಿಂದ ಒಂದು ಕುಟುಂಬವೋ ವ್ಯಕ್ತಿಯೋ ರೋಗಗ್ರಸ್ತನಾಗಬಹುದು. ಸತ್ತು ಹೋಗಬಹುದು ಎಂದು ಹೇಳುತ್ತಾರೆ. ಹುಣಸೂರು ಪ್ರದೇಶಕ್ಕೆ ಸೇರಿದ 39 ಜನ ಮಾಹಿತಿದಾರರು ಪ್ರೇತ - ಪಿಶಾಚಿಗಳು ಕೂಡ ರೋಗವನ್ನು, ಮರಣವನ್ನು ತರಬಲ್ಲವು ಎನ್ನುತ್ತಾರೆ. ಮಿಕ್ಕವರು ವಿಧಿ, ಅನಿವಾರ್ಯತೆ, ನೈಸರ್ಗಿಕ ಸನ್ನಿವೇಶಗಳು, ಕೊನೆಯದಾಗಿ ದೈವ ಕೃಪೆ ಇವುಗಳ ಪಾತ್ರವನ್ನು ವಿಶ್ಲೇಷಿಸಿದ್ದಾರೆ.

ಸಾರಾಂಶವಾಗಿ ಇಷ್ಟು ಹೇಳಬಹುದು : ನಮ್ಮ ಮಾದರಿಯಲ್ಲಿ ನೂರಕ್ಕೆ ನೂರು ಜನರು, ಮೂಢನಂಬಿಕೆ, ದೆವ್ವ - ಭೂತಗಳು ಮತ್ತು ಮಾಟ - ಮಂತ್ರಗಳಲ್ಲಿ ನಂಬಿಕೆ ಇದ್ದರೂ ದೇವರ ಅಸ್ತಿತ್ವದಲ್ಲಿ ಗಾಢವಾದ ನಂಬಿಕೆಯನ್ನುಟ್ಟುಕೊಂಡಿದ್ದಾರೆ. 390 ಜನ ಮಾಹಿತಿದಾರರು ಬುಡಕಟ್ಟು ಧರ್ಮವೂ ನಂಬಿಕೆಗಳೂ ಸಮಾನತೆಯಲ್ಲಿ ಒಲವುಳ್ಳವಾದ್ದರಿಂದ ಭಿನ್ನಾಭಿಪ್ರಾಯಗಳಿಗಿಂತ ಮಿಗಿಲಾಗಿ ಸಮಾನತಾಭಾವನೆಯನ್ನು ಪ್ರೋತ್ಸಾಹಿಸುತ್ತವೆ ಎಂಬುದಾಗಿ ಹೇಳಿದ್ದಾರೆ. ಉಳಿದವರು 'ಅಲ್ಲ' ಎಂದಿದ್ದಾರೆ. ಪುರೋಹಿತರ ಸೇವೆಗಳ ಬಗೆಗೆ ಮಾಹಿತಿದಾರರ ಅಭಿಪ್ರಾಯ ಸಮವಾಗಿಯೇ ಎರಡಾಗಿ ಒಡೆದಿದೆ. ಶೇ. 50 ಜನರು 'ಹೌದು' ಎಂದರೆ, ಮತ್ತೆ 50% ಜನರು ಪುರೋಹಿತರ ಸಹಾಯ ತಮಗೆ ಅಗತ್ಯವಿಲ್ಲ, ತೆಗೆದುಕೊಳ್ಳುವುದಿಲ್ಲ ಎಂದಿದ್ದಾರೆ. ಮಾದರಿಯ ಅರ್ಧಕ್ಕಿಂತ ಹೆಚ್ಚು ಜನರು ಮರಣವೂ ಸೇರಿದಂತೆ ಕರ್ಮಾಚರಣೆಯ ಸಂದರ್ಭಗಳಲ್ಲಿ ಪುರೋಹಿತರನ್ನು ಕರೆಸುವುದಿಲ್ಲ ಅವರ ಸೇವೆಗಳನ್ನು ಉಪಯೋಗಿಸಿಕೊಳ್ಳುವುದಿಲ್ಲ ಎನ್ನುತ್ತಾರೆ. ಉಳಿದ 253 ಜನರು ಜನನ, ವಿವಾಹ, ಮರಣ ಮತ್ತು ಇತರ

ಕರ್ಮಾಚರಣೆಗಳಿಗೆ, ಅವುಗಳನ್ನು ನಡೆಸಿಕೊಡಲು ಪುರೋಹಿತರನ್ನು ಆಹ್ವಾನಿಸುವುದಾಗಿ ಹೇಳಿದ್ದಾರೆ. ಕೆಲವೊಮ್ಮೆ ಈ ಪುರೋಹಿತರು ಬುಡಕಟ್ಟಿಲ್ಲದೆ ಜಾತಿಗಳಿಂದ ಆಹ್ವಾನಿತರಾಗಬಹುದು.

ಬುಡಕಟ್ಟು ಧರ್ಮವು ಹೇಗೆ ಇತರ ಧಾರ್ಮಿಕ ಪಂಗಡಗಳಿಂದ ಎಷ್ಟು ಮಟ್ಟಿಗೆ ಪ್ರಭಾವಿತವಾಗಿದೆ, ಅಥವಾ ಅದಕ್ಕೆ ಬದಲಾಗಿ ತನ್ನ ಮೂಲ ಪರಿಶುದ್ಧ ಸ್ವರೂಪವನ್ನು ಉಳಿಸಿಕೊಂಡಿದೆ ಎನ್ನುವುದು ಸ್ವಾರಸ್ಯವಾಗಿದೆ ಮತ್ತು ಅಷ್ಟೇ ಮಟ್ಟಿಗೆ ಮುಖ್ಯವಾದುದಾಗಿದೆ. 544 ಜನರು ಹಿಂದೂ ಧರ್ಮವು ಅತ್ಯಧಿಕವಾಗಿ ಬುಡಕಟ್ಟು ಧರ್ಮದ ಮೇಲೆ ಪ್ರಭಾವ ಬೀರಿದೆ ಎಂದು ಸಾರಿ ಹೇಳುತ್ತಾರೆ. ಒಬ್ಬರು ಮಾತ್ರ ಇಸ್ಲಾಂ ಪ್ರಭಾವವನ್ನು ಗುರುತಿಸಿದ್ದಾರೆ. ಇನ್ನೊಬ್ಬರು ಬೇರೆ ಯಾವುದೋ ಪ್ರಭಾವವನ್ನು ಹೇಳಿದ್ದಾರೆ. 55 ಜನ ಮಾಹಿತಿದಾರರು ಮಾತ್ರ ತಮಗೆ ಯಾರೊಂದಿಗೂ ಸಂಪರ್ಕವಿಲ್ಲವೆಂದೂ ತಮ್ಮ ಆಚರಣೆಗಳ ಮೇಲೆ ಬೇರೆ ಯಾರ ಪ್ರಭಾವವೂ ಇಲ್ಲವೆಂದೂ ಹೇಳುತ್ತಾರೆ. ಒಟ್ಟಾರೆ ಮೂಡುವ ಚಿತ್ರ ಹೀಗಿದೆ : ಸ್ವಾತಂತ್ರ್ಯೋತ್ತರ ಭಾರತದಲ್ಲಿ ನೆಲಾವೃತ ಬುಡಕಟ್ಟು ಪ್ರದೇಶದಲ್ಲಿ ಕ್ರೈಸ್ತ ಧರ್ಮವಾಗಲಿ ಇಸ್ಲಾಂ ಧರ್ಮವಾಗಲಿ ಯಾವುದೇ ಬಗೆಯಾಗಿ ಮುನ್ನಡೆ ಕಾಣುವುದು ಸಾಧ್ಯವಾಗಲಿಲ್ಲ. ಕಾಡು ಕುರುಬರ ಸಂಪರ್ಕ ಬಹುಮಟ್ಟಿಗೆ ಹಿಂದೂಗಳೊಂದಿಗೆ ಅವರು ಅರಣ್ಯಾಧಿಕಾರಿಗಳಾಗಿರಬಹುದು, ಗುತ್ತಿಗೆದಾರರಾಗಿರಬಹುದು, ಸರಕಾರಿ ನೌಕರರಾಗಿರಬಹುದು, ನೆರೆಹೊರೆಯ ಗ್ರಾಮಸ್ಥರಾಗಿರಬಹುದು, ಕೊಡಗಿನ ಕಾಫಿ ತೋಟಗಳಲ್ಲಿ ಕೆಲಸ ಮಾಡುವಾಗಲೋ, ರಸ್ತೆ ನಿರ್ಮಾಣದ ಪಿಡಬ್ಲ್ಯೂಡಿ ಕೆಲಸ ಮಾಡುವಲ್ಲಿಯೋ, ಕೂಲಿಯಾಳುಗಳಾಗಿ ಬೇರೆಯವರ ಜಮೀನುಗಳಲ್ಲಿ, ದುಡಿಯುವಾಗಲೋ ಆಗುವ ಸಂಪರ್ಕಗಳು ಅವು. ಇದರಿಂದ ಕಾಡುಕುರುಬರಿಗೆ ಎಲ್ಲಾ ಕ್ಷೇತ್ರಗಳಲ್ಲಿಯೂ ಬಹುಮಟ್ಟಿಗೆ ತಮ್ಮ ನೆರೆ ಹೊರೆಯ ಹಿಂದೂಗಳೊಂದಿಗೆ ಅನ್ಯೋನ್ಯ ಪರಿಣಾಮವುಂಟಾಗುತ್ತದೆ ಎಂಬುದು ಸೂಚಿತವಾಗುತ್ತದೆ. ಆದ್ದರಿಂದ ಬುಡಕಟ್ಟು ಧರ್ಮದ ಮೇಲೆ ಹಿಂದೂ ಧರ್ಮದ ಪ್ರಭಾವ ಅಸಹಜವಲ್ಲ. ಪ್ರಾಚೀನ ಕಾಲದಿಂದಲೂ ಹಿಂದೂ ಧರ್ಮವು ತನ್ನ ಸಂಪರ್ಕಕ್ಕೆ ಏನೇನು ಬಂದಿತೋ ಅದೆಲ್ಲವನ್ನು, ಕೊನೆಗೆ ವಿರುದ್ಧವಾದ ನಂಬಿಕೆಗಳು ಮತ್ತು ಆಚರಣೆಗಳನ್ನು ಅರಗಿಸಿಕೊಂಡು ಗಾತ್ರದಲ್ಲೂ ವಿವಿಧ ಆಯಾಮಗಳಲ್ಲೂ ಬೆಳೆಯುತ್ತಾ ಬಂದಿದೆ. ಆದ್ದರಿಂದ ಕಾಡು ಕುರುಬರು ತಮ್ಮ ಬುಡಕಟ್ಟು ನಂಬಿಕೆಗಳಲ್ಲಿ, ಆಚರಣೆಗಳಲ್ಲಿ, ಧಾರ್ಮಿಕ ದೃಷ್ಟಿಕೋನದಲ್ಲಿ ಹೊಸ ಅಂಶಗಳನ್ನು, ಬಹುಶಃ ಕೆಲವು ಬದಲಾವಣೆಗಳನ್ನು ತಂದಿರುವ 'ಅತ್ಯಂತ ಪ್ರಭಾವಶಾಲಿಯಾದ ಅಂಶ' ಎಂದು ಹಿಂದೂ ಧರ್ಮವನ್ನು ಕುರಿತು ಘೋಷಿಸಿದರೆ ಅದರಲ್ಲಿ ಸ್ವಲ್ಪವೂ ಆಶ್ಚರ್ಯವಿಲ್ಲ.

ಕ್ರೈಸ್ತಧರ್ಮವೂ ಮಿಶನರಿಗಳೂ ಆದಿವಾಸಿಗಳ ಮೇಲೆ ಪ್ರಭಾವ ಬೀರಿರುವುದು ಕಂಡು ಬರುವ ನಾಗಾಲ್ಯಾಂಡ್, ಛೋಟಾ ನಾಗಪುರ, ಮಧ್ಯ ಪ್ರದೇಶ, ಬಿಹಾರ, ಒರಿಸ್ಸಾ

ಹಾಗೂ ಸಾಮಾನ್ಯವಾಗಿ ಈಶಾನ್ಯ ಪ್ರದೇಶ ಇವುಗಳಂತಲ್ಲದೆ ಕರ್ನಾಟಕದಲ್ಲಿ ಕ್ರೈಸ್ತ ಮಿಶನರಿಗಳು ಸಕ್ರಿಯವಾಗಿರಲಿಲ್ಲ ಅಥವಾ ಅವರು ಜನಪ್ರಿಯತೆ ಪಡೆಯಲಿಲ್ಲ. ಹಿಂದೆ ಮದರಾಸು ಪ್ರೆಸಿಡೆನ್ಸಿಯ ಭಾಗವಾಗಿದ್ದು ಈಗ ಕರ್ನಾಟಕಕ್ಕೆ ಸೇರಿರುವ ಕೆಲವು ಭಾಗಗಳಲ್ಲಿನ ಮಟ್ಟಿಗೆ ಅದನ್ನು ನೋಡಬಹುದು. ನಿದರ್ಶನಕ್ಕೆ ದಕ್ಷಿಣ ಕನ್ನಡದಲ್ಲಿ ಬೇಕಾದಷ್ಟು ಜನ ಕ್ರಿಶ್ಚಿಯನ್ನರಿದ್ದಾರೆ. ಇವರಲ್ಲಿ ಬುಡಕಟ್ಟು ಹಿನ್ನೆಲೆ ಯಾವುದೂ ಇಲ್ಲ. ಅವರಲ್ಲಿ ಅನೇಕರು ಧಾರ್ಮಿಕವಾದ ಪದವಿಗಳಲ್ಲಿದ್ದಾರೆ. ಹಾಗೆಯೇ ಈಗ ಕರ್ನಾಟಕದಲ್ಲಿದ್ದು, ಹಿಂದೆ ಮದರಾಸು ಪ್ರೆಸಿಡೆನ್ಸಿಗೆ ಸೇರಿದ್ದ ಕೊಳ್ಳೇಗಾಲ ತಾಲ್ಲೂಕಿನಲ್ಲಿ ಕೆಲವು ಕ್ರಿಶ್ಚಿಯನ್ ಮತಾಂತರಿಗಳಿಗ್ದಾರೆ. ಆದರೆ ಇವರೂ ಬುಡಕಟ್ಟು ಜನರಲ್ಲ. ವಾಸ್ತವವಾಗಿ ಬೆಂಗಳೂರು ನಗರ ಮತ್ತು ಇತರ ಕೆಲವು ಸ್ಥಳಗಳಲ್ಲಿ ಕನ್ನಡಿಗರಲ್ಲದವರು, ವಿಶೇಷವಾಗಿ ತಮಿಳು ಕ್ರಿಶ್ಚಿಯನ್ನರು ಧಾರ್ಮಿಕವಾದ ಅನುಕ್ರಮ ಶ್ರೇಣಿಯನ್ನು ತುಂಬಿರುವುದು, ಕನ್ನಡ ಕ್ರಿಶ್ಚಿಯನ್ನರ ಚಟುವಟಿಕೆಗೆ ದಾರಿ ಮಾಡಿಕೊಟ್ಟಿದೆ. ಇದರಲ್ಲಿ ಸಂತೋಷದ ಸಂಗತಿಯೇನೆಂದರೆ, ಈ ವಿದ್ಯಮಾನಗಳು ಕಾಡು ಕುರುಬರಿಗೆ ಸಂಬಂಧಿಸಿಲ್ಲ.

"ಸರಕಾರದ ಮಧ್ಯ ಪ್ರವೇಶದಿಂದ ಬುಡಕಟ್ಟು ಧರ್ಮಕ್ಕೆ ಅಪಾಯವಿದೆಯೆಂದು ಭಾವಿಸುವಿರಾ?" ಎಂಬ ಪ್ರಶ್ನೆಗೆ 312 ಜನ ಮಾಹಿತಿದಾರರು, ಹುಣಸೂರಿನಿಂದ 165, ಎನ್. ಬೇಗೂರಿನಿಂದ 147 ಜನರು "ಇಲ್ಲ" ಎಂದು ಉತ್ತರ ಕೊಟ್ಟಿದ್ದಾರೆ. 259 ಜನರು "ಹೌದು" ಎಂದು ಉತ್ತರ ಕೊಟ್ಟು ಸ್ವಲ್ಪ ಭೀತಿಯನ್ನು ವ್ಯಕ್ತಪಡಿಸಿದ್ದಾರೆ. 30 ಜನರು ಈ ವಿಚಾರವಾಗಿ ಯಾವ ಅಭಿಪ್ರಾಯವನ್ನು ಹೊಂದಿಲ್ಲ. ಹೆ.ದೇ. ಕೋಟೆಯಿಂದ 153 ಜನರೂ, ಹುಣಸೂರು ಪ್ರದೇಶದಿಂದ 106 ಜನರೂ, ನೇರವಾಗಿ ಅಲ್ಲದಿದ್ದರೂ ಸ್ವಲ್ಪಮಟ್ಟಿನ ಮಧ್ಯ ಪ್ರದೇಶವಾಗಬಹುದು ಎಂದು ಹೆದರುತ್ತಾರೆ. ಆದರೆ ಬುಡಕಟ್ಟು ನಂಬಿಕೆಗಳು ಮತ್ತು ಆಚರಣೆಗಳ ಮೇಲೆ ಸರಕಾರೀ ಅಧಿಕಾರಿಗಳ ವರ್ತನೆಗಳಿಂದ ಸ್ವಲ್ಪಮಟ್ಟಿನ ಪ್ರಭಾವ ಬೀಳುವ ಅನೇಕ ಮಾರ್ಗಗಳಿವೆ.

ಕಾಡು ಕುರುಬರ ಧಾರ್ಮಿಕ ಜೀವನವನ್ನು ಪರಿಶೀಲಿಸಿದ್ದಾದ ಮೇಲೆ, ಈಚಿನ ವರ್ಷಗಳಲ್ಲಿ ಅವರ ರಾಜಕೀಯ ಜೀವನವು ಹೇಗಿದೆಯೆಂಬುದರ ಕಡೆಗೆ ನಮ್ಮ ಗಮನವನ್ನು ಹರಿಸುವುದು ಸೂಕ್ತವಾಗುತ್ತದೆ. ಹಿಂದೆ ಅವರು ಯಾವ ಬಗೆಯ ರಾಜಕೀಯ ಸಾಂಸ್ಥಿಕತೆಯನ್ನು ಹೊಂದಿದ್ದರು. ಅದರಲ್ಲಿ ಅವರ ಪಾತ್ರಗಳು, ಹಕ್ಕುಗಳು, ಕರ್ತವ್ಯಗಳು, ಹೊಣೆಗಾರಿಕೆಗಳು ಹೇಗಿದ್ದುವು ಎನ್ನುವುದು ಪ್ರಸ್ತುತ ಅಧ್ಯಯನಕ್ಕೆ ತುಂಬಾ ಮುಖ್ಯವಾದುವೇನಲ್ಲ. ಸಮಾನತಾ ಸಿದ್ಧಾಂತವು ಅವರ ಸಾಮಾಜಿಕ - ಆರ್ಥಿಕ ಜೀವನದ ಅವಿಭಾಜ್ಯ ಅಂಶವಾಗಿತ್ತು. ಆಫ್ರಿಕಾದ ಕೆಲವು ಬುಡಕಟ್ಟುಗಳಲ್ಲಿ ಇವೆಯೆಂದು ನಮಗೆ ತಿಳಿದಿರುವ ನಾಯಕರು - ಸಾಧಾರಣರು ಎಂಬ ಮಾದರಿಯು ಕಾಡು ಕುರುಬರಲ್ಲಿ ಇರಲಿಲ್ಲ. ಹಾಡಿಗಳಲ್ಲಿನ ಕೆಲವು ಬುಡಕಟ್ಟು ಹಿರಿಯರು ಯಜಮಾನರ ಪಾತ್ರವನ್ನು ವಹಿಸಿಕೊಂಡು, ಬುಡಕಟ್ಟುಗಳ ನಡುವೆ ಅಥವಾ ಬುಡಕಟ್ಟಿನೊಳಗೇ, ಜಾತಿ ಮತ್ತು ಬುಡಕಟ್ಟುಗಳ ನಡುವೆ

ಏಳುವ ವ್ಯಾಜ್ಯಗಳಲ್ಲಿ ಮಧ್ಯಸ್ಥಿಕೆ ವಹಿಸಿ ತೀರ್ಪುಕೊಡುತ್ತಿದ್ದರು. ಹಿರಿಯರ ಆರಾಧನೆ, ವಿವಾಹ, ವಿಚ್ಛೇದನ ಮೊದಲಾದ ಸಂದರ್ಭಗಳಲ್ಲಿ ಆಚರಣೆಗಳ ನಿರ್ವಹಣೆಯನ್ನು ಅವರು ನೋಡಿಕೊಳ್ಳುತ್ತಿದ್ದರು. ಅಷ್ಟೇ ಹೊರತು ಅವರು ತಮಗೆ ಎಂದೂ ತಾರತಮ್ಯವನ್ನಾಗಲಿ ಹಾಡಿಗಳಲ್ಲಿನ ಜನರ ಮುಂದಾಳತ್ವವನ್ನಾಗಲಿ ಹೇಳಿಕೊಳ್ಳಲಿಲ್ಲ.

ಪ್ರಜಾಪ್ರಭುತ್ವವು ಬಂದು, ಪರಿಶಿಷ್ಟ ಬುಡಕಟ್ಟುಗಳನ್ನು ಒಳಗೊಳ್ಳುವಂತೆ ಮೀಸಲಾತಿ ನೀತಿಯು ಜಾರಿಗೆ ಬಂದ ಮೇಲೆ, ನಿಧಾನವಾಗಿ ಬುಡಕಟ್ಟು ಜನರೂ ಸರಕಾರವೂ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳುತ್ತಿದ್ದಾರೆ. ಕೆಲವು ಎನ್.ಜಿ.ಓ (ಸರಕಾರಿಯೇತರ ಸಂಘ ಸಂಸ್ಥೆಗಳು) ಬುಡಕಟ್ಟು ಜನರ ನಡುವೆ ಕೆಲಸ ಮಾಡುತ್ತಾ, ಅವರಲ್ಲಿ ಜಾಗೃತಿಯನ್ನುಂಟು ಮಾಡಿ, ಸರಕಾರದ ಧ್ಯೇಯ ಧೋರಣೆಗಳನ್ನು ಕಾರ್ಯಕ್ರಮಗಳನ್ನು ಅವರಿಗೆ ತಿಳಿಯಪಡಿಸಿರುವುದರಿಂದ ಕೆಲವು ಮುಖ್ಯವಾದ ಕಾರ್ಯ ಚಟುವಟಿಕೆಗಳು ನಡೆದಿವೆ. ಅಂತಹ ಕೆಲವು ಎನ್.ಜಿ.ಓಗಳು ಈಗ ಕೆಲವು ದಶಕಗಳಿಂದ ಕಾಡು ಕುರುಬರ ನಡುವೆ ಕೆಲಸ ಮಾಡುತ್ತಿದ್ದಾರೆ. ಆದರೂ ಅದರ ಕಡೆಗೆ ಬುಡಕಟ್ಟು ಜನರ ಸ್ಪಂದನ ತುಂಬಾ ನಿಧಾನಗತಿಯದು. ಮೊದಲೇ ಸೂಚಿಸಿರುವಂತೆ ಡೀಡ್ (DEED- ಶಿಕ್ಷಣ ಮುಖೇನ ಪ್ರಗತಿ) ಸಂಸ್ಥೆಯು 1980ರಿಂದ ಹುಣಸೂರು ತಾಲ್ಲೂಕಿನಲ್ಲಿ ಕಾಡು ಕುರುಬ ಬುಡಕಟ್ಟು ಜನರ ನಡುವೆ ಕಾರ್ಯತತ್ಪರವಾಗಿದೆ. ಹುಣಸೂರು ಮತ್ತು ಹೆಗ್ಗಡದೇವನ ಕೋಟೆಗಳು ಪಕ್ಕಪಕ್ಕದ ತಾಲ್ಲೂಕುಗಳು. ನೆರೆಯ ಕೊಡುಗಿನಲ್ಲೂ ಕಾಡು ಕುರುಬರು ವಿಶೇಷವಾಗಿ ನೆಲೆಗೊಂಡಿದ್ದಾರೆ.

ಈಚಿನವರೆಗೂ, ಈಗಲೂ ಬುಡಕಟ್ಟು ಜನರು ಚಲನಶೀಲರಾಗಿದ್ದಾರೆ. ಅನೇಕ ಕಾರಣಗಳಿಂದಾಗಿ ಅವರು ಒಂದು ಹಾಡಿಯಿಂದ ಇನ್ನೊಂದು ಹಾಡಿಗೆ ಹೋಗಿ ನೆಲೆಸುತ್ತಾರೆ; ನಿರ್ದಿಷ್ಟ ಕಾಲಾವಧಿಯಲ್ಲಿ ಕಾಫಿ ತೋಟಗಳಲ್ಲಿ ಕೆಲಸ ಮಾಡುವ ಸಲುವಾಗಿ ಕೊಡಗಿಗೆ ಹೋಗುತ್ತಾರೆ. ಬೆಲೆಬಾಳುವಂತಹ ಗೃಹಕೃತ್ಯದ ವಸ್ತು ಯಾವುದೂ ಅವರ ಬಳಿ ಇರುವುದಿಲ್ಲ. ಹಾಗೆಯೇ ಭೂಮಿ ಮೋಹವೂ ಅವರಿಗಿಲ್ಲ. ಸಾಂಪ್ರದಾಯಕವಾಗಿ ಆಸ್ತಿಯ ಒಡೆತನವೆನ್ನುವುದು ಅವರಲ್ಲಿ ಇರಲಿಲ್ಲ. ಇವೆಲ್ಲ ಸೇರಿ ಅವರ ಚಲನಶೀಲತೆಗೆ ಸಹಕಾರಿಯಾಗಿವೆ. ಇಂದಿಗೂ ಕುಟುಂಬಗಳು ಹಾಡಿಯಿಂದ ತಿಂಗಳುಗಟ್ಟಲೆ ಹೊರಗೆ ಹೋಗಿರಬಹುದು. ಆದರೆ ಅವರ ಮನೆಗಳಿಗೆ ಬೀಗ ಹಾಕಿರುವುದಿಲ್ಲ. ಸುಮ್ಮನೆ ಬಾಗಿಲು ಮುಚ್ಚಿರುತ್ತಾರೆ. ಯಾರುಬೇಕಾದರೂ ತೆರೆದುಕೊಂಡು ಒಳಗೆ ಹೋಗಬಹುದು. ಮನೆಯ ಯಜಮಾನನಿಗೆ ಏನಾದರೂ ಕಳೆದು ಹೋಗಬಹುದೆಂಬ ಭೀತಿಯೇ ಇಲ್ಲ ಅಥವಾ ಇತರರಿಗೆ ಸೇರಿದ ವಸ್ತುವಿಗೆ ಕೈಹಾಕಿ ಸಂತೋಷಪಡುವ ಪ್ರಮೇಯವೇ ಇಲ್ಲ. ಸಹಜವಾಗಿ ಅವರು ನಡೆದುಕೊಳ್ಳುವ ಸಮಾನತಾ ರೀತಿಯು ರೂಸೋ ವರ್ಣಿಸುವ "ನೈಸರ್ಗಿಕ ಸ್ಥಿತಿ"ಯ ವರ್ಣನೆಯನ್ನು ಹೋಲುತ್ತದೆ. ಆದರೆ ಇಂದಿನ ಪ್ರಜಾಪ್ರಭುತ್ವ ಚಿತ್ರದಲ್ಲಿ ಈ ದೃಶ್ಯವು ಬದಲಾಗುತ್ತದೆ. ಎಸ್.ಟಿ.ಗಳಿಗೆ ಲಭ್ಯವಾಗಿರುವ ಮೀಸಲಾತಿ ಸೌಲಭ್ಯಗಳೇ ಅದಕ್ಕೆ ಕಾರಣ.

ಇಂದು ಕಾಡು ಕುರುಬರಲ್ಲಿ ಕಂಡು ಬರುವ ರಾಜಕೀಯ ಜಾಗೃತಿ ಬಂದಿರುವುದಾದರೂ ಅವರ ನಡುವೆಯೇ ಇದ್ದು ಕೆಲಸ ಮಾಡುತ್ತಿರುವ ಸರಕಾರಿಯೇತರ ಸಂಸ್ಥೆಗಳ ಕೆಲಸ. ಆಗಾಗ ಮಾನವೀಯತೆಯಿರುವ ಸರಕಾರಿ ನೌಕರರು ಅದನ್ನು ಬಲಪಡಿಸುತ್ತಾರೆ, ಪೋಷಿಸುತ್ತಾರೆ. ಆದ್ದರಿಂದ ಸರಕಾರದ ಪಾತ್ರ ಮತ್ತು ಬುಡಕಟ್ಟು ಜನರ ಅನುಭವಗಳನ್ನು ಕುರಿತು ಕೆಲವು ಪ್ರಶ್ನೆಗಳನ್ನು ಮಾಹಿತಿದಾರರಿಗೆ ಕೇಳಲಾಯಿತು. ಈ ಕೆಳಗೆ ಅವರು ನೀಡಿದ ಉತ್ತರಗಳಿವೆ. ಜೊತೆಗೆ ಬುಡಕಟ್ಟು ಅಭಿವೃದ್ಧಿ ಮತ್ತು ರಕ್ಷಣೆಗಳಲ್ಲಿ ಸರಕಾರದ ಪಾತ್ರವನ್ನು ಕುರಿತು ಒಂದು ಮೌಲ್ಯ ಮಾಪನವಿದೆ. ಹೆ.ದೇ.ಕೋಟೆ ಮತ್ತು ಹುಣಸೂರು ತಾಲ್ಲೂಕುಗಳಲ್ಲಿ ಗಣನೀಯ ಸಂಖ್ಯೆಯ ಬುಡಕಟ್ಟು ಜನರು, ಸರಕಾರದ ಮಧ್ಯೆಪ್ರವೇಶವು ಬುಡಕಟ್ಟು ಧರ್ಮಪಾಲನೆಗೆ ಅಪಾಯದ ಮೂಲವಾಗುತ್ತದೆ ಎಂಬ ಅಭಿಪ್ರಾಯ ಕೊಟ್ಟಿದ್ದಾರೆ ಎಂಬುದನ್ನು ಈ ಮೊದಲೇ ನೋಡಿದ್ದೇವೆ.

ರಾಜಕೀಯ ಸಂಸ್ಥೆಗಳಾದ ಗ್ರಾಮ ಪಂಚಾಯತಿ, ಜಿಲ್ಲಾ ಪರಿಷತ್ತು, ಎಂಎಲ್‌ಎ, ಎಂ.ಪಿ., ಸಚಿವರು ಮೊದಲಾದ ಸ್ಥಾನಗಳಲ್ಲಿ ಕಾಡು ಕುರುಬ ಸದಸ್ಯರಿದ್ದಾರೆಯೇ ಎಂಬ ಪ್ರಶ್ನೆಗೆ ಬಹುಮಟ್ಟಿನ ಮಾಹಿತಿದಾರರಿಗೆ ಗ್ರಾಮಪಂಚಾಯಿತಿ ಗೊತ್ತು. ಹೆ.ದೇ.ಕೋಟೆಯಲ್ಲಿ 215 ಮತ್ತು ಹುಣಸೂರು ಪ್ರದೇಶದಲ್ಲಿ 258 ಜನರು ಅದನ್ನು ಬಲ್ಲರು. ಜಿಲ್ಲಾ ಪರಿಷತ್ತಿನ ಬಗೆಗೆ ಹೆ.ದೇ.ಕೋಟೆಯಲ್ಲಿ ಮೂರು ಜನ ಮಾತ್ರ ಗೊತ್ತೆಂದು ಉತ್ತರ ಕೊಟ್ಟಿದ್ದಾರೆ. ಹುಣಸೂರು ತಾಲ್ಲೂಕಿನ ಇಬ್ಬರು ಮಾಹಿತಿದಾರರಿಗೆ ಬುಡಕಟ್ಟು ಸಚಿವರ ವಿಷಯ ತಿಳಿದಿದೆ. ಹೆ.ದೇ.ಕೋಟೆಯಿಂದ ಸುಮಾರು 82 ಹಾಗೂ ಹುಣಸೂರಿನಿಂದ 41 ಜನ ಮಾಹಿತಿದಾರರು ಮೇಲ್ಕಂಡ ಯಾವುದೇ ರಾಜಕೀಯ ಸಂಸ್ಥೆಗಳಲ್ಲಿ ಬುಡಕಟ್ಟು ಸದಸ್ಯರಿಲ್ಲ ಎಂದು ಹೇಳಿದ್ದಾರೆ.

ಬುಡಕಟ್ಟು ಜೀವನ ಶೈಲಿಯನ್ನು ಸಂರಕ್ಷಿಸಲು ಸರಕಾರವು ಹೇಗೆ ನೆರವಾಗಬಹುದು ಎಂದು ಕೇಳಲಾದ ಪ್ರಶ್ನೆಗೆ ಹಲವಾರು ಉತ್ತರಗಳು ಬಂದಿವೆ. ಅವು ಸ್ವಾರಸ್ಯವಾಗಿವೆ. ಕೆಲವು ಸಾಮಾನ್ಯ ಅಭಿಪ್ರಾಯಗಳನ್ನು ಇಲ್ಲಿ ನೋಡಬಹುದು. ಹೆ.ದೇ.ಕೋಟೆಯಿಂದ 107 ಮತ್ತು ಹುಣಸೂರಿನಿಂದ 53 ಜನ ಮಾಹಿತಿದಾರರು, ಸರಕಾರವು ಕೃಷಿ ಸೌಲಭ್ಯಗಳನ್ನು ಒದಗಿಸಬೇಕು ಎಂದು ಹೇಳಿದ್ದಾರೆ. ಹೆ.ದೇ.ಕೋಟೆಯಿಂದ 29 ಜನರು ಹುಣಸೂರಿನಿಂದ 61 ಜನರೂ ಸರಕಾರವು ಶಿಕ್ಷಣ ಸೌಲಭ್ಯಗಳನ್ನೂ ಉದ್ಯೋಗಾವಕಾಶಗಳನ್ನೂ, ಹಣಕಾಸು ನೆರವೂ ಕೂಡಿದಂತೆ, ಒದಗಿಸಬೇಕು ಎಂದು ಹೇಳಿದ್ದಾರೆ. ಸಾಮಾನ್ಯವಾಗಿರುವ ಒಂದು ಮುಖ್ಯವಾಗಿರುವ ಅಂಶ ತಾವು ಅರಣ್ಯ ಪ್ರದೇಶಕ್ಕೆ ಮತ್ತೆ ಹಿಂದಿರುಗಿ ಹೋಗಬೇಕು ಎನ್ನುವುದು. ಒಟ್ಟು 124 ಕಾಡು ಕುರುಬರು, ಹೆ.ದೇ.ಕೋಟೆಯಿಂದ 67 ಜನ ಹಾಗೂ ಹುಣಸೂರಿನಿಂದ 57 ಜನ, ಈ ಬೇಡಿಕೆಯನ್ನು ಮುಂದಿಟ್ಟಿದ್ದಾರೆ. ಅಕ್ರಮವಾಗಿ ಅರಣ್ಯ ಭೂಮಿಯಲ್ಲಿ ಬೇಸಾಯ ಮಾಡಲಾಗಿದೆ ಎಂದು ಆರೋಪ ಹೊರಿಸಿ ಅರಣ್ಯಾಧಿಕಾರಿಗಳು ಪೋಲೀಸರ ನೆರವಿನಿಂದ, ಬೆಳೆದು ನಿಂತ ಫಸಲಿಗೆ

ಬೆಂಕಿಯಿಡುವುದು, ಬುಡಕಟ್ಟು ಜನರು ತಮ್ಮ ಮೇಲೆ ನಡೆಯುತ್ತಿರುವ ಈ ದೌರ್ಜನ್ಯವನ್ನು ಪ್ರತಿಭಟಿಸಿ ಸಾಂವಿಧಾನಿಕ ಕ್ರಮಗಳಿಂದಲೂ, ಧರಣಿ ಹೂಡುವುದರಿಂದಲೂ ಹೋರಾಡುವುದು ಪತ್ರಿಕೆಗಳಲ್ಲಿ ವರದಿಯಾಗುತ್ತಲೇ ಇದೆ. ಎಷ್ಟೋ ತಿಂಗಳುಗಳಿಂದ ಕಾವೇರುತ್ತಿದ್ದ ಸಮಸ್ಯೆಗಳು ಈಗ ನಾಗರಹೊಳೆಯ ರಾಷ್ಟ್ರೀಯ ಉದ್ಯಾನ ಪ್ರದೇಶದಲ್ಲೂ ಬಂಡೀಪುರ ಕಾಡಿನ 'ಹುಲಿ ಸಂರಕ್ಷಣಾ' ಯೋಜನೆಯ ಪ್ರದೇಶದಲ್ಲೂ ಪ್ರಧಾನವಾಗಿ ಕಾಣಿಸಿಕೊಂಡಿವೆ. ಇಲ್ಲೆಲ್ಲಾ ಸರಕಾರದ ನಿರ್ದೇಶಿತ ಕ್ರಮದೆದುರಿಗೆ ಬುಡಕಟ್ಟುಗಳು ಅಸಹಾಯಕರಾಗಿದ್ದಾರೆ. ಆದರೆ ಇದುವರೆಗೂ ಹೆಸರು ಹೇಳಬಹುದಾದ ಒಬ್ಬನೇ ಒಬ್ಬ ಮುಖಂಡನೂ ಕಾಡುಕುರುಬರ ಪರವಾಗಿ ಒಂದು ಹೇಳಿಕೆಯನ್ನು ನೀಡಿಲ್ಲ. ಕುರುಬರ ಈ ಉದ್ದೇಶಪೂರ್ವಕ ಮೌನ ಸಂದೇಹಕ್ಕೆ ಅವಕಾಶ ಕೊಡುತ್ತದೆ. ಆದರೆ ಬುಡಕಟ್ಟು ಜನರ ಪ್ರದೇಶದಲ್ಲಿ ಕಾರ್ಯ ನಿರತವಾಗಿರುವ ಡೀಡ್ ಮತ್ತು ಫೆಡಿನಾ ವಿಕಾಸ ಸಂಸ್ಥೆಗಳು ಅವರ ಬೆಂಬಲಕ್ಕೆ ನಿಂತು ಅಸಹಾಯಕ ಬುಡಕಟ್ಟು ಜನರ ಮೇಲೆ ಅಧಿಕಾರಗಳು ಎಸಗುತ್ತಿರುವ ದೌರ್ಜನ್ಯವನ್ನು ಖಂಡಿಸಿವೆ.

ಸರಕಾರವು ಬುಡಕಟ್ಟು ಅಭಿವೃದ್ಧಿಗಾಗಿ ಕೆಲಸ ಮಾಡುತ್ತಿದೆಯೆ ಎಂದು ಕೇಳಲಾದ ಇನ್ನೊಂದು ಪ್ರಶ್ನೆಗೆ ಪ್ರತಿಕ್ರಿಯೆಗಳು ಹೀಗಿವೆ: ಅಂತರಸಂತೆ ಮತ್ತು ಎನ್. ಬೇಗೂರುಗಳನ್ನೊಳಗೊಂಡ ಹೆ.ದೇ. ಕೋಟೆಯಲ್ಲಿ ಶೇ. 20 ಬೆಟ್ಟ ಕುರುಬರು, 24 ಜನರನ್ನು ಹೊರತುಪಡಿಸಿ 118 ಜನರು ಅಧಿಕಾರಿಗಳ ನಿರ್ಲಕ್ಷ್ಯವನ್ನು ಎತ್ತಿ ತೋರಿಸಿದ್ದಾರೆ. ಇತರ ಜನರು ತಾವು ಬುಡಕಟ್ಟಿಗರೆಂದು ನಿಭಾಯಿಸಿಕೊಳ್ಳುವುದನ್ನು ತೋರಿಸಿದ್ದಾರೆ. 295 ಜನ ಜೇನು ಕುರುಬರೂ ಕೇವಲ 6 ಜನ ಬೆಟ್ಟ ಕುರುಬರೂ ಇರುವ ಹುಣಸೂರು ತಾಲ್ಲೂಕಿನಲ್ಲಿ 87 ಜನ ಮಾಹಿತಿದಾರರು ಮಾತ್ರ ಸರಕಾರವು ಬುಡಕಟ್ಟು ಅಭಿವೃದ್ಧಿಗಾಗಿ ಶ್ರಮಿಸುತ್ತಿದೆ ಎಂದು ಹೇಳಿದ್ದಾರೆ. ಮಿಕ್ಕ 214 ಜನರು ಅಧಿಕಾರಿಗಳ ನಿರ್ಲಕ್ಷ್ಯವನ್ನೂ ಹಾಗೂ ಇತರರು ಬುಡಕಟ್ಟು ಜನರಂತೆ ವಂಚಿಸಿ ತೂರಿಕೊಂಡು ಹೋಗುವುದನ್ನು ಬುಡಕಟ್ಟು ಅಭಿವೃದ್ಧಿಗೆ ಮುಖ್ಯವಾದ ತಡೆಯೆಂದು ಹೇಳಿದ್ದಾರೆ. ಇತರರು ಮಾಡುವ ವಂಚನೆಯನ್ನು ಒಟ್ಟು 144 ಜನರೂ, ಅಧಿಕಾರಿಗಳ ನಿರ್ಲಕ್ಷ್ಯ ಮತ್ತು ಬುಡಕಟ್ಟೇತರರು ಮಾಡುವ ವಂಚನೆಯನ್ನು 213 ಜನರೂ ಅಭಿವೃದ್ಧಿಗೆ ದಾಟಲಾಗದ ಅಡ್ಡಿ ಎಂದು ವ್ಯಕ್ತಪಡಿಸಿದ್ದಾರೆ. ಮೇಲಿನೆರಡೂ ಗುಂಪುಗಳು ಕೂಡಿ 357 ಆಗುತ್ತದೆ. ಇದು ಮಾದರಿಯ ಶೇ. 50ಕ್ಕಿಂತ ಹೆಚ್ಚು. ಆದ್ದರಿಂದ ಬುಡಕಟ್ಟಿಗರ ಅಭಿಪ್ರಾಯವು ಕಳವಳ ಪಡಬೇಕಾದ ವಿಷಯ ಎಂದು ಹೇಳಲು ಕಾರಣವಿದೆ. ಬುಡಕಟ್ಟುಗಳ ಕಲ್ಯಾಣ ಮತ್ತು ಅಭಿವೃದ್ಧಿಗಳ ಹೊಣೆಯನ್ನು ಹೊತ್ತಿರುವ ಸರಕಾರವು ಈ ಅಭಿಪ್ರಾಯಗಳಿಗೆ ಮನ್ನಣೆ ಕೊಡಬೇಕು. ಅಧಿಕಾರಿಗಳ ನಿರ್ಲಕ್ಷ್ಯವನ್ನು ಸರಿಪಡಿಸಲು ಕ್ರಮಗಳನ್ನು ಕೈಗೊಳ್ಳಬೇಕು. ಆದರ್ಶ ರೀತಿಯಲ್ಲಿ ಪ್ರಾಮಾಣಿಕವಾಗಿ ಕೆಲಸ ಮಾಡಿರುವ ಬುಡಕಟ್ಟು ಜನರ ಸಮಸ್ಯೆಗಳ ಕಡೆಗೆ ಸಹಾನುಭೂತಿ ತೋರಿಸಿ ಅವರನ್ನು ಸಹ - ಮಾನವ ಜೀವಿಗಳಂತೆ ವ್ಯವಹರಿಸುತ್ತಿರುವ ಅಧಿಕಾರಿಗಳನ್ನು ಪುರಸ್ಕರಿಸಿ ಪ್ರೋತ್ಸಾಹಿಸಬೇಕು.

ಬುಡಕಟ್ಟಿಗರಲ್ಲದ ಜನರು ಸೋಗುಹಾಕಿ ಬುಡಕಟ್ಟುಗಳೆಂದು ವಂಚಿಸುವುದು ಒಂದು ಗಂಭೀರವಾದ ಸಮಸ್ಯೆಯೇ ಆಗಿದೆ. ನಿಜವಾದ ಬುಡಕಟ್ಟುಗಳ ಹಿತವನ್ನು ಪ್ರತ್ಯೇಕಗೊಳಿಸಿ, ತಾವು ಬುಡಕಟ್ಟಿಗೆ ಸೇರಿದವರಲ್ಲವಾದರೂ ಮೀಸಲಾತಿ ಸೌಲಭ್ಯಗಳನ್ನು ಕಬಳಿಸುವುದಕ್ಕೋಸ್ಕರವಾಗಿ ಸಂವಿಧಾನಿಕವಾಗಿ ಎಸ್.ಟಿ ಸ್ಥಾನಮಾನವನ್ನು ಪಡೆಯಲು ಬುಡಕಟ್ಟಿನವರಂತೆ ಮೋಸಮಾಡಿ ದಾಟಿ ಕೊಳ್ಳುವವರೊಂದಿಗೆ ಅವರ ಸಮಸ್ಯೆಗಳನ್ನು ಬೆರೆಸಬಾರದು. ವ್ಯವಸ್ಥಿತ ಜಾತಿ ಪಂಗಡಗಳ ಒತ್ತಡ ತಂತ್ರಕ್ಕೆ ಸರಕಾರವು ಮಣಿಯಬಾರದು. ದೇಶದ ಅನೇಕ ರಾಜ್ಯಗಳಲ್ಲಿ ಇಷ್ಟು ವರ್ಷಗಳಲ್ಲಿ ಅನೇಕ ಜಾತಿ ಪಂಗಡಗಳು ಹೀಗೆ ಎಸ್.ಸಿ/ ಎಸ್.ಟಿ ಪಟ್ಟಿಗೆ ಮೋಸದಿಂದ ಸೇರಿಕೊಂಡಿದ್ದಾಗಿದೆ. ಇದರಿಂದ ಪಟ್ಟಭದ್ರ ಆಸಕ್ತಿಗಳು ಬೆಳೆಯುತ್ತವೆ. ಎಸ್.ಸಿ -ಯೇತರ, ಎಸ್.ಟಿ-ಯೇತರ ವರ್ಗಗಳಿಂದ ಹೆಚ್ಚು ಹೆಚ್ಚು ಪಂಗಡಗಳನ್ನು ಸೇರಿಸುವುದರಿಂದ ಎಸ್.ಸಿ/ಎಸ್.ಟಿ ಜನರ ಸ್ಥಿತಿಯನ್ನು ಎಂದಿಗೂ ಉತ್ತಮ ಪಡಿಸಿದಂತಾಗುವುದಿಲ್ಲ. ಕರ್ನಾಟಕದಲ್ಲೇ ಹೇಗೆ ಇದು ಸಂಭವಿಸಿದೆ ಎಂಬುದನ್ನು ಆಗಲೆ ತಿಳಿಸಿದ್ದಾಗಿದೆ. ಈ ಪ್ರಕ್ರಿಯೆಯು ಸಮಸ್ಯೆಗಳನ್ನು ಪರಿಹರಿಸುವುದಕ್ಕಿಂತ ಮಿಗಿಲಾಗಿ ಸೃಷ್ಟಿಸುತ್ತವೆ. ಪರಿಶಿಷ್ಟಕ್ಕೆ ಸೇರಿಸುವ ಕೆಲಸವನ್ನು ಇನ್ನು ಮುಂದೆ ರಾಜಕಾರಣಿಗಳು ಮಾಡುವುದಕ್ಕೆ ಬದಲು, ಅದನ್ನು ವೈಜ್ಞಾನಿಕ ಆಧಾರದ ಮೇಲೆ ಮಾಡಬೇಕು. ಏಕೆಂದರೆ ರಾಜಕಾರಣಿಗಳು ಈ ವಿಚಾರವನ್ನು ವಸ್ತುನಿಷ್ಠವಾಗಿ ನೋಡಲು ಅಸಮರ್ಥವಾಗಿದ್ದಾರೆ.

ಸರಕಾರವು ಬುಡಕಟ್ಟಿಗರ ಆರ್ಥಿಕ ಮತ್ತು ಇತರ ಸಂಬಂಧಿತ ಚಟುವಟಿಕೆಗಳಲ್ಲಿ ಅನಾವಶ್ಯಕವಾಗಿ ತಲೆ ಹಾಕುತ್ತಿದೆ ಎಂದು ಬುಡಕಟ್ಟಿಗರು ಭಾವಿಸುತ್ತಾರೆಯೇ ಎಂಬ ಇನ್ನೊಂದು ಪ್ರಶ್ನೆಗೆ ದೊರೆತ ಪ್ರತಿಕ್ರಿಯೆಗಳು ಹೀಗಿವೆ : ಹೆ.ದೇ.ಕೋಟೆ ಪ್ರದೇಶದ 140 ಮಾಹಿತಿದಾರರು ಅದನ್ನು ಒಪ್ಪುವುದಿಲ್ಲ. 160 ಜನರು ಒಪ್ಪುತ್ತಾರೆ. ಆರ್ಥಿಕ ಚಟುವಟಿಕೆಗಳು, ಅದರಿಂದಾಗಿ ಬುಡಕಟ್ಟು ಜೀವನ ಶೈಲಿ ಅಪಾಯಕ್ಕೊಳಪಟ್ಟಿದೆ ಎಂದು ಅವರು ಹೇಳುತ್ತಾರೆ. ಆದರೆ ಹುಣಸೂರು ಪ್ರದೇಶದಲ್ಲಿ ಗಣನೀಯ ಬಹು ಸಂಖ್ಯಾತರು, 237 ಜನ ಮಾಹಿತಿದಾರರು ಒಪ್ಪುತ್ತಾರೆ. ಇದು ಒಟ್ಟಿನಲ್ಲಿ ನಮ್ಮ ಮಾದರಿಯ ಶೇ. 50%ಕ್ಕಿಂತ ಹೆಚ್ಚು. ಒಟ್ಟು 397 ಜನ ಮಾಹಿತಿದಾರರು ಬುಡಕಟ್ಟಿಗರ ಬಗೆಗೆ ಸರಕಾರದ ನೀತಿಗಳು ಅವರಿಗೆ ಹಾನಿಯನ್ನುಂಟು ಮಾಡುತ್ತಿವೆಯೇ ಹೊರತು ಅವರ ಅಭಿವೃದ್ಧಿಗೆ ಸೌಲಭ್ಯಗಳನ್ನು ಒದಗಿಸುತ್ತಿಲ್ಲ ಎಂದು ಭಾವಿಸುತ್ತಾರೆ. ಗಣನೀಯ ಸಂಖ್ಯೆಯ ಬುಡಕಟ್ಟಿಗರು ಮತ್ತೆ ಅರಣ್ಯದೊಳಕ್ಕೆ ಹೊರಟು ಹೋಗಲು ಬಯಸುವುದು ಒಂದು ರಿಯಾಯಿತಿಯಾಗಿ ಅಲ್ಲ, ಬುಡಕಟ್ಟು ಆರ್ಥಿಕ ಚಟುವಟಿಕೆಗಳನ್ನು ಕಾಪಾಡಿಕೊಂಡು ತಾವು ಉಳಿದುಕೊಳ್ಳುವ ಸಲುವಾಗಿ. ತನ್ನ ರೂಢಿ - ಸಂಪ್ರದಾಯಗಳನ್ನು ಸಂಸ್ಕೃತಿಯನ್ನು ಉಳಿಸಿಕೊಂಡು "ವಿವಿಧತೆಯಲ್ಲಿ ಏಕತೆ"ಯ ಹೆಮ್ಮೆಪಡುವ ಒಂದು ದೇಶವು ಬುಡಕಟ್ಟು ಪದ್ಧತಿಗಳನ್ನು ಸಂಪ್ರದಾಯ ರೂಢಿಗಳನ್ನು ಸಂಸ್ಕೃತಿಯನ್ನು ಅವು ವೈವಿಧ್ಯಕ್ಕೆ ಇಂಬುಗೊಡುತ್ತಿರುವವರೆಗೆ ಪುರಸ್ಕರಿಸಿ, ಉಳಿಸಿ, ಕಾಪಾಡಬೇಕಾದ ಹೊಣೆಗಾರಿಕೆಯನ್ನು

ಹೊತ್ತಿದೆ. ಬುಡಕಟ್ಟಿಗರನ್ನು ಅನಾವಶ್ಯಕವಾಗಿ ಮುಖ್ಯವಾಹಿನಿಯ ಭಾಗವನ್ನಾಗಿ ಮಾಡಿಬಿಡಬಾರದು.

ಬಹುಸಂಖ್ಯಾತ ಬುಡಕಟ್ಟಿಗರು (Tribals) ಬುಡಕಟ್ಟು ಅಭಿವೃದ್ಧಿ ಯೋಜನೆಗಳ ಉಪಯುಕ್ತತೆಯ ಬಗೆಗೆ ಇತ್ಯಾತ್ಮಕವಾಗಿದ್ದಾರೆ, ಅವುಗಳನ್ನು ಸರಿಯಾಗಿ ಕಾರ್ಯಗತಗೊಳಿಸಿದ ಪಕ್ಷದಲ್ಲಿ ಅದು ಬುಡಕಟ್ಟಿಗರಿಗೆ ತುಂಬಾ ಪ್ರಯೋಜನಕಾರಿಯಾಗುತ್ತದೆ ಎಂದು ಭಾವಿಸುತ್ತಾರೆ. 500 ಜನ ಮಾಹಿತಿದಾರರು, ಹೆ.ದೇ. ಕೋಟೆಯಿಂದ 288 ಜನ ಮತ್ತು ಹುಣಸೂರು ಪ್ರದೇಶದಿಂದ 222 ಜನ ಈ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಬುಡಕಟ್ಟು ಜನರು ಶೋಷಣೆಗೆ ಒಳಪಟ್ಟಿದ್ದಾರೆಯೆ ಎಂಬ ಪ್ರಶ್ನೆಗೆ 307 ಜನರು ಹೌದು ಎಂದು ಉತ್ತರಿಸಿದ್ದಾರೆ. ಇವರಲ್ಲಿ 96 ಜನರು ಹುಣಸೂರಿನಿಂದಲೂ 211 ಜನರು ಹೆ.ದೇ.ಕೋಟೆಯಿಂದಲೂ ಬಂದವರು. ಹುಣಸೂರಿನ 104 ಜನರೂ ಹೆ.ದೇ.ಕೋಟೆಯ 89 ಜನರೂ, ಒಟ್ಟಿನಲ್ಲಿ 193 ಜನರು ತಾವು ಶೋಷಣೆಗೊಳಗಾಗಿಲ್ಲ ಎಂದು ಹೇಳುತ್ತಾರೆ. 124 ಜನ ಬೆಟ್ಟ ಕುರುಬರ ಪೈಕಿ 96 ಜನರು ತಾವು ಶೋಷಣೆಗೆ ಒಳಗಾಗಿರುವುದಾಗಿ ಹೇಳಿದರೆ ಉಳಿದ 28 ಜನರು ಇಲ್ಲವೆನ್ನುತ್ತಾರೆ. 476 ಜನ ಜೇನು ಕುರುಬ ಉಪ-ಪಂಗಡದಲ್ಲಿ 311 ಜನ ಮಾಹಿತಿದಾರರು ಶೋಷಿತರಾಗಿರುವುದಾಗಿ ಹೇಳಿದರೆ, ಇಲ್ಲವೆನ್ನುವವರು 165 ಜನ ಮಾತ್ರ. ಈ 311 ಜನರ ಪೈಕಿ ಹುಣಸೂರು ಪ್ರದೇಶಕ್ಕೆ ಸೇರಿದವರು 190 ಜನ, ಮಿಕ್ಕ 121 ಜನರು ಹೆ.ದೇ.ಕೋಟೆ ಪ್ರದೇಶಕ್ಕೆ ಸೇರಿದವರು. ಹಾಗೆಯೇ 165 ಜನರ ಪೈಕಿ 104 ಜನ ಹುಣಸೂರಿಗೂ 61 ಜನರು ಹೆ.ದೇ.ಕೋಟೆಗೂ ಸೇರಿದವರು.

ಕೊನೆಯದಾಗಿ, ಬುಡಕಟ್ಟು ಜನರಿಗಿರುವ ಅಡೆ ತಡೆಗಳನ್ನು ಪಟ್ಟಿ ಮಾಡಿ ಎಂದು ಕೇಳಿರುವುದಕ್ಕೆ 601 ಜನರಲ್ಲಿ 525 ಜನರು ಅರಣ್ಯ ಅಧಿಕಾರಿವರ್ಗವೇ ಅತ್ಯಂತ ದೊಡ್ಡ ತಡೆ ಎಂದು ಸೂಚಿಸಿದ್ದಾರೆ. ಇವರಲ್ಲಿ 257 ಜನರು ಹೆ.ದೇ.ಕೋಟೆಗೂ 268 ಜನರು ಹುಣಸೂರಿಗೂ ಸೇರಿದವರು. 525 ಜನರಲ್ಲಿ 116 ಜನ ಬೆಟ್ಟ ಕುರುಬರು, 110 ಜನ ಹೆ. ದೇ. ಕೋಟೆಯವರು, 6 ಜನ ಹುಣಸೂರಿನವರು. ಉಳಿದ 409 ಜನರು ಜೇನು ಕುರುಬ ಉಪಪಂಗಡಕ್ಕೆ ಸೇರಿದವರು; ಇವರಲ್ಲಿ 262 ಜನರು ಹುಣಸೂರಿಗೂ 147 ಜನರು ಹೆ. ದೇ. ಕೋಟೆಗೂ ಸೇರಿದವರು.

ಭಾರೀ ಬಹುಮತದ ಬುಡಕಟ್ಟಿಗರು ಏಕೆ ಅರಣ್ಯಾಧಿಕಾರಿಗಳನ್ನೇ ತಮಗೆ ತಡೆಯೆಂದು ಹೇಳಿದ್ದಾರೆ ಎನ್ನುವುದು ಒಂದು ಒಗಟಾಗಿಲ್ಲ. ಅಧಿಕಾರಿಗಳು ಈ ಬುಡಕಟ್ಟಿಗರನ್ನು ನಡೆಸಿಕೊಳ್ಳುವ ರೀತಿಯು ಮೇಲು ನೋಟಕ್ಕೇ ಕಲ್ಪನೆಯಲ್ಲ, ಸತ್ಯಸಂಗತಿ ಎನ್ನುವುದು ಕಂಡು ಬರುತ್ತದೆ. ಬಹು ಅಮೂಲ್ಯವಾದ ಶ್ರೀಗಂಧ ಮತ್ತು ತೇಗ ಮೊದಲಾದ ಮರಗಳನ್ನು ಕಡಿದು ಕಳ್ಳತನದಿಂದ ಸಾಗಿಸುವುದು ವ್ಯವಸ್ಥಿತವಾಗಿ ನಡೆಯುತ್ತಿದೆ. ಆಗೊಮ್ಮೆ ಈಗೊಮ್ಮೆ

ಅರಣ್ಯ ಇಲಾಖೆಯ ಸಿಬ್ಬಂದಿಯು ಅಪರಾಧಿಗಳನ್ನು ಹಿಡಿದು, ಸರಕುಗಳನ್ನು ವಶ ಪಡಿಸಿಕೊಳ್ಳುವುದರಲ್ಲಿ ಯಶಸ್ವಿಯಾಗುತ್ತಾರೆ. ಹಾಗೆಯೇ ಬಂದೂಕು ಹಿಡಿದ ಕಳ್ಳ ಸಾಗಾಣಿಕೆದಾರರು ಕಾಡಿನಲ್ಲಿ ಬೇಟೆಯಾಡುತ್ತಾರೆ, ದಂತಗಳಿಗಾಗಿ ಆನೆಗಳನ್ನು ಕೊಲ್ಲುತ್ತಾರೆ, ಉಗುರು ಮತ್ತು ಚರ್ಮಗಳಿಗಾಗಿ ಹುಲಿಗಳನ್ನು ಕೊಲ್ಲುತ್ತಾರೆ. ಬುಡಕಟ್ಟಿಗರ ಬಳಿ ಬಂದೂಕೂ ಇಲ್ಲ, ಹಿಡಿಯಲು ಅವರಿಗೆ ಬರುವುದೂ ಇಲ್ಲ. ಅವರು ಅಮೂಲ್ಯವಾದ ಮರವನ್ನು ಕದ್ದು ಮಾರಲೂ ಶಕ್ತರೂ ಅಲ್ಲ. ಇದಕ್ಕೆ ಕಾರಣ ಸರಳವಾಗಿದೆ. ಈ ಕಳ್ಳ ಚಟುವಟಿಕೆಗಳಿಗೆ ಅನೇಕ ಜನರು ಸೇರಿರುವ ಒಂದು ಜಾಲವೇ ಅಗತ್ಯ. ಅಲ್ಲದೆ, ಕದ್ದ ಮರಕ್ಕೂ ದಂತಕ್ಕೂ ಒಂದು ಮಾರುಕಟ್ಟೆ ಅಗತ್ಯ.

ಬುಡಕಟ್ಟಿಗರಿಗೆ ಅಂಥದೊಂದು ಜಾಲವು ಹೇಗೆ ಕೆಲಸ ಮಾಡುತ್ತದೆನ್ನುವುದೂ ತಿಳಿದಿಲ್ಲ, ಎಷ್ಟು ಪ್ರಮಾಣದ ಹಣ ಇದರಲ್ಲಿ ತೊಡಗಿಕೊಂಡಿದೆ, ಭೂಗತ ಕಳ್ಳ ಸಾಗಾಣಿಕೆದಾರರ ಮೂಲಕ ಬಹುಶಃ ಅಂತರ ರಾಷ್ಟ್ರೀಯ ಮಾರುಕಟ್ಟೆಯನ್ನು ತಲುಪುತ್ತವೆ ಎನ್ನುವುದು ಅವರಿಗೆ ಹೇಗೆ ತಿಳಿಯಬೇಕು?

ಬುಡಕಟ್ಟು ಜನರು ಅರಣ್ಯ ಸಂಪತ್ತನ್ನು ಲೂಟಿ ಮಾಡಿ, ಹಾಳುಗೆಡವುತ್ತಿದ್ದಾರೆ ಎಂದು ಹೇಳುವುದಕ್ಕೆ ಎಳ್ಳಷ್ಟೂ ಆಧಾರವಿಲ್ಲ. ಅದಕ್ಕೆ ಬದಲಾಗಿ ಈ ವಿಧ್ವಂಸಕ ಕೃತ್ಯದಲ್ಲಿ ತೊಡಗಿರುವವರು ಸುವ್ಯವಸ್ಥಿತ, ಪ್ರಬಲ, ಪಟ್ಟಭದ್ರಹಿತಾಸಕ್ತಿಗಳು, ರಾಜಕಾರಣಿಗಳು, ಕಳ್ಳ ಸಾಗಾಣಿಕೆದಾರರು, ಪೋಲೀಸ್ ಮತ್ತು ಅರಣ್ಯಾಧಿಕಾರಿಗಳು - ಇವರ ಒಂದು ವ್ಯವಸ್ಥಿತ ಕೂಟವು ದುಷ್ಕಾರ್ಯ ನಿರತವಾಗಿದೆ ಎಂದು ಸಾಮಾನ್ಯವಾಗಿ ಎಲ್ಲರಿಗೂ ತಿಳಿದಿದೆ. ಈ ಕ್ರಿಯೆಯಲ್ಲಿ ಪಾಪ ಬಡಪಾಯಿಗಳಾದ ಬುಡಕಟ್ಟಿಗರನ್ನು ಹಿಡಿದು ಅವರ ಮೇಲೆ ಮೊಕದ್ದಮೆ ಹೂಡಲಾಗುತ್ತಿದೆ. ಕಳ್ಳರನ್ನು ಹಿಡಿದು ಶಿಕ್ಷೆಗೊಳಪಡಿಸಿದಾಗ ಎಷ್ಟು ಜನ ಬುಡಕಟ್ಟಿಗರ ಮೇಲೆ ದೋಷಾರೋಪಣೆ ಮಾಡಲಾಗಿದೆ ಎನ್ನುವುದು ಅಂಕಿ ಅಂಶಗಳನ್ನು ಬಯಲು ಪಡಿಸಿದರೆ ತಿಳಿದುಬಂದೀತು, ಆಗ ಮಿಥ್ಯೆಯು ಕುಸಿದು ಬೀಳುತ್ತದೆ.

ಬುಡಕಟ್ಟು ಜನರು ಅರಣ್ಯದಿಂದ ಪಡೆದುಕೊಳ್ಳುವುದು ತಮ್ಮ ತತ್ಕಾಲಿಕ ಉಳಿವಿಗೆ ಏನು ಬೇಕೋ ಅದನ್ನು ಮಾತ್ರ. ಆಹಾರ ಬೇಯಿಸಲೋ ಬೇರೆ ಯಾವುದಾದರೂ ಕೆಲಸಕ್ಕೋ ಒಣಗಿದ ಮರವನ್ನು ಅವರು ತಲೆಯ ಮೇಲೆ ಹೊತ್ತು ತರುತ್ತಾರೆ, ಲಾರಿಗಳಲ್ಲಿ ಟ್ರಕ್ಕುಗಳಲ್ಲಿ, ಕಾರುಗಳಲ್ಲಿ ಸಾಗಿಸುವುದಿಲ್ಲ. ಆಗಾಗ ಕಳ್ಳ ಸಾಗಣೆದಾರರು ಬುಡಕಟ್ಟು ಜನರನ್ನು ಕೂಲಿಯಾಳುಗಳಾಗಿ ತೊಡಗಿಸಿಕೊಳ್ಳುವುದುಂಟು. ಅವರನ್ನು ಕಳ್ಳಸಾಗಣೆದಾರರೊಂದಿಗೆ ಸಮಾನಗೊಳಿಸಲು ಸಾಧ್ಯವೇ ಇಲ್ಲ. ಬುಡಕಟ್ಟಿಗರು ಕಾಡುಗಳಿಂದ ಸಂಗ್ರಹಿಸುವ ಇತರ 'ವಸ್ತುಗಳೆಂದರೆ, ಬೇರುಗಳು, ಹಣ್ಣುಗಳು, ಗೆಡ್ಡೆ ಗೆಣಸುಗಳು, ಸೊಪ್ಪುಗಳು, ಕಾಯಿಗಳು, ಮೇಣ, ಜೇನು ತುಪ್ಪ - ಹೀಗೆ ಸಣ್ಣಪುಟ್ಟ ಅರಣ್ಯ ಉತ್ಪಾದನೆಗಳು, ಕೆಲವೊಮ್ಮೆ ಸಣ್ಣ ಬೇಟೆಯ ಹಕ್ಕಿಗಳು ಮತ್ತು ಪ್ರಾಣಿಗಳು.

ಬುಡಕಟ್ಟಿಗರನ್ನು ಕಾಡುಗಳಿಂದ ಹೊರಹಾಕಿದರೆ, ಕಾಡಿಗೆ ಪ್ರವೇಶವನ್ನು ಅವರಿಗೆ ನಿರಾಕರಿಸಿದರೆ, ಅವರ ಮುಖ್ಯವಾದ ಚಟುವಟಿಕೆಗಳು ಸ್ಥಗಿತವಾಗಿ ಬಿಡುತ್ತವೆ. ಆವರ್ತ

ಬೇಸಾಯವನ್ನು ನಿಷೇಧಿಸುವಾಗ ಸರಕಾರವು ಅವರಿಗೆ ಸಾಕಷ್ಟು ಭೂಮಿಯನ್ನಾಗಲಿ ಬೇರೆ ಜೀವನೋಪಾಯವನ್ನಾಗಲಿ ಒದಗಿಸುವುದಿಲ್ಲ. ವಾಸ್ತವವಾಗಿ ಕನಿಷ್ಠ ಸೌಲಭ್ಯಗಳಿರುವ ವಸತಿಯನ್ನು ಅವರಿಗೆ ಸರಕಾರ ಒದಗಿಸುವುದಿಲ್ಲ. ತಮ್ಮ ಮೂಲ ನೆಲೆಯಿಂದ ಹೊರ ಬಂದರೆಂದರೆ, ಬುಡಕಟ್ಟಿಗರು ಭಾರಿ ಪ್ರಮಾಣದ ವಂಚನೆಗೆ, ಮೋಸಕ್ಕೆ ಬಲಿಯಾಗುತ್ತಾರೆ ಎನ್ನುವುದಕ್ಕೆ ದೇಶಾದ್ಯಂತ ಸಾಕಷ್ಟು ನಿದರ್ಶನಗಳಿವೆ. ಪುನರ್ವಸತಿಯ ಆದರ್ಶಗಳೆಲ್ಲವೂ ಕಾರ್ಯಗತವಾಗುವುದಿಲ್ಲ; ಅದಕ್ಕೆ ಕಾರಣ ಅಧಿಕಾರಿಗಳ ಅಲಕ್ಷ್ಯ ಮತ್ತು ಬುಡಕಟ್ಟು ಜನರನ್ನು ಅವರು ಬಹಳ ಲಘುವಾಗಿ ಕಾಣುವುದೇ ಆಗಿದೆ.

ಸರಕಾರ ಮತ್ತು ಅಧಿಕಾರ ಶಾಹಿಯ ಮನೋಧರ್ಮದಲ್ಲಿ ಪರಿವರ್ತನೆಯನ್ನು ಮಾಡಿಕೊಳ್ಳುವುದು ಮೊದಲನೆಯ ಹೆಜ್ಜೆ. ಬುಡಕಟ್ಟಿಗರನ್ನು ಕೀಳು ಪ್ರಾಣಿಗಳಂತೆ ನೋಡದೆ ಮಾನವ ಜೀವಿಗಳಂತೆ ನೋಡಬೇಕಾದ ಅಗತ್ಯವಿದೆ. ಇದರಿಂದ ಸರಕಾರ, ಬುಡಕಟ್ಟಿಗರು ಇಬ್ಬರಿಗೂ ಅನುಕೂಲ. ಈಗ ಕಾಡು ಕುರುಬರೂ ಇತರ ಬುಡಕಟ್ಟಿಗರೂ ಸಂಘಟಿತರಾಗಿ ಅರಣ್ಯ ಸಿಬ್ಬಂದಿಯು ತಮಗೆ ಕೊಡುತ್ತಿರುವ ಕಿರುಕುಳವನ್ನು ಪ್ರತಿಭಟಿಸಿ ಧರಣಿ ಹೂಡುತ್ತಿದ್ದಾರೆ, ಜಾಥಾ ಹೋಗುತ್ತಿದ್ದಾರೆ. ಏಕೆಂದರೆ, ಈಗ ಕೆಲವು ವಾರಗಳ ಹಿಂದೆ, 1996 ಜುಲೈ - ಆಗಸ್ಟ್ ತಿಂಗಳಲ್ಲಿ, ಇನ್ನು ಕೆಲವು ವಾರಗಳಲ್ಲಿ ಕೊಯಿಲು ಮಾಡುವ ಸ್ಥಿತಿಯಲ್ಲಿ ಬೆಳೆದು ನಿಂತಿದ್ದ ಫಸಲನ್ನು ನಾಶಪಡಿಸಲಾಗಿದೆ. ಅದಕ್ಕೆ ಬೆಂಕಿಯಿಡಲಾಗಿದೆ. ಬುಡಕಟ್ಟುಜನರನ್ನು ಅರಣ್ಯಾಧಿಕಾರಿಗಳು ಥಳಿಸಿದ್ದಾರೆ. ಅವರಿಗೆ ಪೋಲಿಸರ ರಕ್ಷಣೆಯಿದೆ. ಈ ಬಗೆಯ ದೌರ್ಜನ್ಯದಿಂದಾಗಿ ಬುಡಕಟ್ಟಿಗರ ಅಶಾಂತಿಗೆ, ದಂಗೆಗೆ ತಕ್ಕ ರಂಗ ಸಿದ್ಧವಾಗಿದೆ. ದೇಶದ ಈ ಭಾಗದಲ್ಲಿ ಇದುವರೆಗೆ ಅಂಥದೇನೂ ನಡೆದಿರಲಿಲ್ಲ. 'ಭೂರಿಯಾ ಸಮಿತಿ' ಯ ಶಿಫಾರಸುಗಳನ್ನು ಕಾರ್ಯಗತಗೊಳಿಸಿ ಬುಡಕಟ್ಟಿಗರಿಗೆ ಸ್ವಯಮಾಡಳಿತವನ್ನು ನೀಡಲಾಗುತ್ತದೆಯೆ ಎನ್ನುವುದನ್ನು ಭವಿಷ್ಯತ್ತು ಮಾತ್ರವೇ ಹೇಳಬಲ್ಲುದು. ಏನಾದರೂ ದೋಷಗಳೋ ಕೊರತೆಗಳೋ ಇದ್ದರೆ, ಮೊದಲು ಶಿಫಾರಸುಗಳನ್ನು ಜಾರಿಗೊಳಿಸಿ ಆಮೇಲೆ ಅವುಗಳನ್ನು ಸರಿಪಡಿಸಬಹುದು.

ಬುಡಕಟ್ಟು ಜನರನ್ನು ಕುರಿತು ಸಂಶೋಧನೆ ಮಾಡಿರುವ ವಾಲ್ಟರ್ ಫರ್ನಾಂಡಿಸ್, ಗೀತಾ ಮೆನನ್ ಮುಂತಾದವರಾಗಲಿ, ಬುಡಕಟ್ಟಿಗರ ಅಸಹಾಯಕ ಸ್ಥಿತಿಯನ್ನೂ, ಸಮಸ್ಯೆಗಳನ್ನೂ ಕಂಡು ಮನಕರಗಿದ ಬಿ. ಡಿ. ಶರ್ಮ ಅಂತಹ ಅಪರೂಪದ ಅಧಿಕಾರಿಗಳಾಗಲಿ, ಕಾಡು ಕುರುಬರ ಮತ್ತಿತರ ಬುಡಕಟ್ಟುಗಳ ನಡುವೆ ಕೆಲಸ ಮಾಡುತ್ತಿರುವ ಎನ್.ಜಿ.ಓ ಗಳಾಗಲಿ ಸಾಮಾನ್ಯವಾಗಿ ಅಭಿಪ್ರಾಯ ಪಡುವುದು ಅರಣ್ಯ ಕಾನೂನುಗಳು ಬುಡಕಟ್ಟಿಗರ ಬಗೆಗೆ ತುಂಬಾ ಕ್ರೂರವಾಗಿವೆ ಎಂಬುದಾಗಿ. ಕ್ರೈಸ್ತ ಮಿಶನರಿಗಳಂತಲ್ಲದೆ ಇವರು ನಮ್ಮ ಜನರು, ಬುಡಕಟ್ಟು ಜನರ ಸಮಸ್ಯೆಗಳನ್ನು ಒತ್ತಿ ಹೇಳುತ್ತಿದ್ದಾರೆ. ಸರಕಾರವು ಅವರನ್ನು ನಂಬಬೇಕು, ಅವರಲ್ಲಿ ವಿಶ್ವಾಸವಿಡಬೇಕು. ಸರಕಾರಿ ಯಂತ್ರವು ಜನತೆಯ ಆಶೋತ್ತರಗಳಿಗೆ ಅನುಗುಣವಾಗಿ ನಡೆಯಲು ವಿಫಲವಾಗಿರುವಾಗ ಅದು ಅತ್ಯಗತ್ಯವಾಗುತ್ತದೆ.

ಬುಡಕಟ್ಟು ಜನರ ಸಮಸ್ಯೆಗಳನ್ನು ಕಡೆಗಣಿಸುವುದು ಅಥವಾ ತಳ್ಳಿಹಾಕುವುದು ಸಾಧ್ಯವಿಲ್ಲ. ಸರಿಯಾಗಿ ಅರಿತುಕೊಂಡು ಅವುಗಳಿಗೆ ಗಮನ ಕೊಡಬೇಕು. ಎಸ್.ಟಿ ಪಟ್ಟಿಗೆ ಹೆಚ್ಚು ಹೆಚ್ಚು ಪಂಗಡಗಳನ್ನು ಸೇರಿಸುತ್ತಾ ಅಸಲಿ ಬುಡಕಟ್ಟು ಜನರ ಹಿತವನ್ನೂ ಅಸ್ತಿತ್ವವನ್ನೂ ಸರಕಾರವು ಗಂಡಾಂತರಕ್ಕೊಳಪಡಿಸುವುದು ಸ್ವಲ್ಪವೂ ಉಚಿತವಲ್ಲ. ತಾವು ಎಸ್.ಟಿ ಗಳೆಂದು ಸೋಗುಹಾಕಿ ನಿಭಾಯಿಸಿಕೊಂಡಿರುವವರು ಸಂವಿಧಾನಿಕವಾದ ಎಲ್ಲ ಪ್ರಯೋಜನಗಳನ್ನೂ ಬಾಚಿಕೊಳ್ಳುತ್ತಾರೆ. ಇದುವರೆಗೆ ಅವರನ್ನು ಯಾರೂ ಹಿಡಿದಿಲ್ಲ, ಅಥವಾ ವ್ಯವಸ್ಥಿತ ಪ್ರಯತ್ನದಿಂದ ಅವರು ತಮ್ಮನ್ನು ಎಸ್.ಟಿ. ಪಟ್ಟಿಗೆ ಸೇರಿಸಿಕೊಂಡಿದ್ದಾರೆ. ಇದರಿಂದ ಗೊತ್ತಾಗುವುದು, ಯಾರು ಬಲಶಾಲಿಗಳಾಗಿದ್ದಾರೋ, ಶ್ರೀಮಂತರಾಗಿದ್ದಾರೋ ಅವರಿಗೆ, ಬಡ ಅಸಹಾಯಕ ಜನರಿಗಿಂತ ಹೆಚ್ಚು ಅನುಕೂಲಗಳಿವೆ, ಸಾಮಾಜಿಕ ನ್ಯಾಯ ಎನ್ನುವುದು ಇಲ್ಲವೇ ಇಲ್ಲ ಎಂಬುದು. ಇದು ಬಡವರ ನಿರ್ಮೂಲನವೇ ಹೊರತು ಬಡತನದ ನಿರ್ಮೂಲನವಲ್ಲ. ಅದು ಮಾನವ ಹಕ್ಕುಗಳ ಗುರುತರ ಉಲ್ಲಂಘನೆ; ಬುಡಕಟ್ಟು ಜನರನ್ನು ಕಾಡಿನಿಂದ ಹೊರಹಾಕಿ, ಅಗತ್ಯವಾದ ಪುನರ್ವಸತಿ ಸೌಲಭ್ಯಗಳನ್ನು ಒದಗಿಸದಿರುವುದು ಬದುಕಲು ಅವರಿಗಿರುವ ಹಕ್ಕುಗಳ ನಿರಾಕರಣೆಯಾಗಿದೆ.

ಕಾಡುಗಳಲ್ಲಿ ಲಂಗುಲಗಾಮಿಲ್ಲದೆ ಮರಗಳನ್ನು ಕಡಿದು, ಬೋಳು ಮಾಡಿ ಪರಿಸರ ಹಾನಿಯನ್ನು ಉಂಟು ಮಾಡುತ್ತಿರುವವರು ಬುಡಕಟ್ಟು ಜನರಲ್ಲ, ರಾಜಕೀಯ ಅಧಿಕಾರದ ಬೆಂಬಲ ಪಡೆದ ಪಟ್ಟಭದ್ರ ಹಿತಾಸಕ್ತಿಗಳು. ಕೈಗಾರಿಕೀಕರಣ, ಪ್ರವಾಸೋದ್ಯಮದ ಪ್ರೋತ್ಸಾಹ, ಅಥವಾ ಬೇರೆ ಯಾವುದೋ ಹೆಸರಿನಲ್ಲಿ ಸರಕಾರದ ಪ್ರಾಯೋಜಕತ್ವದ ಭಯೋತ್ಪಾದಕ ಚಟುವಟಿಕೆಗಳೆದುರಿಗೆ ಅಸಹಾಯಕರಾಗಿ ನಿಂತ ಬಡಪಾಯಿಗಳನ್ನು ಬಲಿಗೊಟ್ಟು ವ್ಯವಸ್ಥಿತವಾಗಿ ಇದನ್ನು ನಡೆಸಲಾಗುತ್ತಿದೆ. ವಾಸ್ತವವಾಗಿ ಸ್ವಾತಂತ್ರ್ಯೋತ್ತರ ಭಾರತದಲ್ಲಿ, ಬುಡಕಟ್ಟು ವಲಯದಲ್ಲಿ ಕಂಡು ಬಂದಿರುವ ಅನೇಕ ಸಮಸ್ಯೆಗಳಿಗೆ, ದೋಷಯುಕ್ತ ನೀತಿಗಳು, ಅಲಕ್ಷ್ಯ, ಬುಡಕಟ್ಟು ಜನರನ್ನು ಕೆಟ್ಟದಾಗಿ ನಡೆಸಿಕೊಂಡು ಅವರನ್ನು ಶೋಷಿಸುವುದು ಇವುಗಳನ್ನು ಕಾರಣವಾಗಿ ಹೇಳಬಹುದು. ಬುಡಕಟ್ಟಿಗರ ನಡುವೆ ಕೆಲಸ ಮಾಡುತ್ತಿರುವ ಎನ್.ಜಿ.ಓಗಳು ಅರಣ್ಯ ಸಂಪತ್ತನ್ನು ಬುಡಕಟ್ಟು ಜನರು ಹೇಗೆ ಪ್ರೀತಿಸುತ್ತಾರೆ ಎಂಬ ವಿಷಯದಲ್ಲಿ ಸರ್ವಾನುಮತವುಳ್ಳವರಾಗಿದ್ದಾರೆ. ಭಾರತದ ಕೆಲವು ಭಾಗಗಳಲ್ಲಿ ಕಂಡು ಬಂದ ದಂಗೆ - ದೊಂಬಿಗಳಿಗೆ ಬುಡಕಟ್ಟಿಗರು ಅನುಭವಿಸುತ್ತಿರುವ ಅನಗತ್ಯವಾದ ಕಿರುಕುಳವೇ ಕಾರಣವಾಗಿರಬಹುದು.

ಕರ್ನಾಟಕದಲ್ಲಿ ಈ ಬಗೆಯ ಸಮಸ್ಯೆಗಳಿರಬೇಕಾಗಿಲ್ಲ. ಏಕೆಂದರೆ ಇಲ್ಲಿ ಬುಡಕಟ್ಟು ಜನ ಸಂಖ್ಯೆ ಕಡಿಮೆ ಮತ್ತು 4-5 ಜಿಲ್ಲೆಗಳಲ್ಲಿ ಕೇಂದ್ರೀಕೃತವಾಗಿದೆ. ವಿವೇಕಯುತವಾದ, ಮುಂದಾಲೋಚನೆಯುಳ್ಳ ನೀತಿ ಇಲ್ಲಿ ಅತ್ಯಗತ್ಯ. ಬುಡಕಟ್ಟಿಗರ ಬೇಡಿಕೆಗಳು ಅವರ ಅಸ್ತಿತ್ವದ, ಉಳಿವಿನ ಸುತ್ತ ಸುತ್ತಿಕೊಂಡಿವೆಯೇ ಹೊರತು ಕ್ಷಿಪ್ರವಾಗಿ ಶ್ರೀಮಂತಿಕೆಗಳಿಸುವ ಅಥವಾ ಒಂದೇ ಸಾರಿಗೆ ಬಾಚಿಕೊಂಡು ಬಿಡುವ ಯೋಜನೆಗಳಾಗಿಲ್ಲ.

ಅರಣ್ಯಾಧಿಕಾರಿಗಳ ಪಾತ್ರವನ್ನು ಕುರಿತು ಇಷ್ಟು ಮಟ್ಟಿಗೆ ಅಸಮಾಧಾನವಿರುವಾಗ ಅದೇ ಬುಡಕಟ್ಟಿಗರು, ಹಣ ಸಾಲ ಕೊಡುವ ಸಾಹುಕಾರರು, ವ್ಯವಹಾರಸ್ಥವರ್ಗ, ಗುತ್ತಿಗೆದಾರರು, ನೆರೆಯ ಗ್ರಾಮಸ್ಥರು ಇವರೆಲ್ಲರೂ ಶೋಷಣೆ ಮಾಡುತ್ತಿಲ್ಲವೆ ಎಂದು ಕೇಳಲಾದ ಪ್ರಶ್ನೆಗೆ ಬಹಳ ಕಡಮೆ ಸಂಖ್ಯೆಯವರು ಮಾತ್ರ 'ಹೌದು' ಎಂದು ಉತ್ತರ ಕೊಟ್ಟಿದ್ದಾರೆ. ಹುಣಸೂರಿನ 23, ಹೆ. ದೇ. ಕೋಟೆಯ 36 ಹೀಗೆ 59 ಮಾಹಿತಿದಾರರು ಸೂಚನೆಯನ್ನು ಅನುಮೋದಿಸುತ್ತಾರೆ. ಇದಕ್ಕೆದುರಾಗಿ 601 ಜನರಲ್ಲಿ 525 ಜನರು, ತಮ್ಮ ಅಸ್ತಿತ್ವಕ್ಕೂ ಉಳಿವಿಗೂ ಅರಣ್ಯಾಧಿಕಾರಿಗಳು ಪ್ರಧಾನವಾದ ತಡೆಯಾಗಿದ್ದಾರೆ ಎಂದು ಸೂಚಿಸಿರುವುದು ಜಾಗರೂಕತೆಯಿಂದ ಪರಿಶೀಲಿಸಬೇಕಾದ ಅಂಶವಾಗಿದೆ. ಮೊದಲು ದೋಷಯುಕ್ತ ಯೋಜನೆಗಳು ಮತ್ತು ಅತಿಯಾದ ದೌರ್ಜನ್ಯಗಳ ಮೂಲಕ ಉದ್ದೇಶಪೂರ್ವಕವಾಗಿ ಅಂತಹ ಪರಿಸ್ಥಿತಿಯನ್ನು ತಾವೇ ಸೃಷ್ಟಿಸಿ, ಕಾನೂನು ಮತ್ತು ಸುವ್ಯವಸ್ಥೆಯ ಪಾಲನೆ ಎಂದು ಕೂಗಾಡುವುದಕ್ಕಿಂತ ಈ ವಿಚಾರವಾಗಿ ಆಲೋಚನೆ ಮಾಡುವುದು ಉತ್ತಮ.

ಕುರುಬರಲ್ಲಿ ಕಂಡುಬರುವಂತಹ ರಾಜಕೀಯ ಸಂಘಟನೆ ಕಾಡು ಕುರುಬರಲ್ಲಿ ಇಲ್ಲ. ಈ ಪ್ರಜಾ ಪ್ರಭುತ್ವ ವ್ಯವಸ್ಥೆಯಲ್ಲಿಯೂ ಕಾಡು ಕುರುಬರು ಸಾಧಿಸಿರುವುದು ಸಾರ್ವತ್ರಿಕ ಚುನಾವಣೆಗಳಲ್ಲಿ ತಮ್ಮ ಮತನೀಡಿಕೆಯ ಹಕ್ಕುಗಳನ್ನು ಚಲಾಯಿಸುವುದಕ್ಕೆ ಮಾತ್ರ ಸಂಬಂಧಿಸಿದೆ.

ಅನೇಕ ವೇಳೆ ಬುಡಕಟ್ಟು ಮತದಾರರನ್ನು ಯಾವುದೇ ಒಂದು ರಾಜಕೀಯ ಪಕ್ಷದ ಪ್ರತಿನಿಧಿಯು, ಚುನಾವಣೆ ಮುಗಿದ ಮೇಲೆ ನೀಡಲಾಗುತ್ತದೆ ಎಂಬ ಪೊಳ್ಳು ಭರವಸೆಗಳನ್ನು ಕೊಟ್ಟು, ಇಡೀ ಹಾಡಿಯ ಜನರೆಲ್ಲರೂ ನಿರ್ದಿಷ್ಟವಾದ ಉಮೇದುದಾರನಿಗೆ ಓಟು ಕೊಡುವಂತೆ ಮಾಡುವುದು ಕಂಡು ಬರುತ್ತದೆ.

ಇತರ ಭಾರತೀಯರಿಗೆ ಇಷ್ಟವಾಗುವ ಅನೇಕ ವಿಷಯಗಳು ಬುಡಕಟ್ಟಿಗರಿಗೆ ಆಸಕ್ತಿಯ ವಿಷಯಗಳಾಗಿರುವುದಿಲ್ಲ, ಯಾವುದೇ ರಾಜಕೀಯ ಸಂಘಟನೆಯಿಲ್ಲದೆ ರಾಜಕೀಯ ಪ್ರಜ್ಞೆಯ ಕೊರತೆ, ಇವುಗಳಿಂದಾಗಿ ಅವರನ್ನು ಶೋಷಿಸುವುದು ತುಂಬಾ ಸುಲಭ. ಈಚೆಗೆ ಪಂಚಾಯಿತಿ ರಾಜ್ ಸಂಸ್ಥೆಗಳನ್ನು ಜಾರಿಗೊಳಿಸಿರುವುದರಿಂದ, ಕಾಡು ಕುರುಬರಿಗೂ ಹಳ್ಳಿ, ತಾಲ್ಲೂಕು ಮತ್ತು ಜಿಲ್ಲಾಮಟ್ಟಗಳಲ್ಲಿ ರಾಜಕೀಯ ಪ್ರಕ್ರಿಯೆಗಳ ಪರಿಚಯವಾಗಿದೆ. ಎಸ್.ಟಿ ಗಳಿಗೆ ಮೀಸಲಾತಿಯಿರುವ ಆಧಾರದಿಂದ ರಾಜಕೀಯ ಪ್ರಾತಿನಿಧ್ಯದ ಪ್ರಕ್ರಿಯೆಗಳಿಂದಾಗಿ ಅವರಲ್ಲಿ ಕೆಲವರು ಗ್ರಾಮ ಪಂಚಾಯಿತಿಗಳಲ್ಲೂ ಜಿಲ್ಲಾ ಪರಿಷತ್ತುಗಳಲ್ಲೂ ಸದಸ್ಯರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಕುರುಬರು ಇದುವರೆಗೂ ಈ ವಲಯಕ್ಕೆ ಬಂದಿರುವ ಸಾಧ್ಯತೆಯಿಲ್ಲ.

ಈ ಪ್ರಕ್ರಿಯೆಯೂ ಭಾಗಶಃ ಅಲ್ಲಿ ಕೆಲಸ ಮಾಡುತ್ತಿರುವ ಸರಕಾರಿಯೇತರ ಸಂಘ ಸಂಸ್ಥೆಗಳ ಸಾಧನೆ. ಅವರು ಸಾಮಾನ್ಯ ಪ್ರಜ್ಞೆಯನ್ನೂ ಜಾಗೃತಿಯನ್ನೂ

ಉಂಟುಮಾಡುತ್ತಿದ್ದಾರೆ. ಈಗ ಕೆಲವು ಬುಡಕಟ್ಟು ಸಂಘಗಳೂ ಇದ್ದು ಅವರ ಅಗತ್ಯಗಳಿಗೂ ಸಮಸ್ಯೆಗಳಿಗೂ ದನಿಗೊಡುತ್ತಿವೆ. ಈ ಅರ್ಥದಲ್ಲಿ ಕೆಲವು ಮುಖಂಡರೂ ಕಾಣಿಸಿಕೊಂಡಿದ್ದಾರೆ. ಬುಡಕಟ್ಟು ಕೃಷಿಕರ ಸಂಘ, ವನವಾಸಿ ಮಹಿಳಾ ಸಂಘ ಮೊದಲಾದವು ಇಂಥವು. ನಾಗರಹೊಳೆ ರಾಷ್ಟ್ರೀಯ ಉದ್ಯಾನ ಪ್ರದೇಶದಿಂದ ಬಲಾತ್ಕಾರವಾಗಿ ಬುಡಕಟ್ಟು ಜನರನ್ನು ಹೊರಹಾಕಿ, ಅಲ್ಲಿ ಒಂದು ವಿಶ್ರಾಂತಿಧಾಮವನ್ನು ನಿರ್ಮಿಸಲು ತಾಜ್ ಸಮೂಹಕ್ಕೆ ಅನುಮತಿ ಕೊಟ್ಟು, ಬುಡಕಟ್ಟು ಜೀವನದ ಮತ್ತು ಪರಿಸರದ ನಾಶಕ್ಕೆ ಕಾರಣವಾಗಿರುವುದರಿಂದ ಈ ಸಂಘಗಳು ಕಾಣಿಸಿಕೊಂಡಿವೆ. ಈಗ ನಾಗರಹೊಳೆ ಬುಡಕಟ್ಟು ಹಕ್ಕುಗಳ ಸ್ಥಾಪನೆಯ ಸಂಘ (Nagarahole Budakattu Rights Establishment Organisation) ಹುಟ್ಟಿಕೊಂಡಿದೆ. ಮೈಸೂರು ಮತ್ತು ಕೊಡಗು ಜಿಲ್ಲೆಗಳ ಎಲ್ಲಾ ಬುಡಕಟ್ಟುಗಳೂ ಸರಕಾರದ ಈ ಯೋಜನೆಯನ್ನು ವಿರೋಧಿಸಿ ಪ್ರತಿಭಟಿಸುತ್ತಿದ್ದಾರೆ.

ಈಗ ನಾವು ಮುಂದಿನ ಅಧ್ಯಾಯದಲ್ಲಿ "ಸಂರಕ್ಷಕ ತಾರತಮ್ಯ" ನೀತಿಯಿಂದ ಉದ್ಭವಿಸಿರುವ ಸಮಸ್ಯೆಗಳನ್ನು ಪರಿಶೀಲಿಸೋಣ. ಮೀಸಲಾತಿಯ ಜೊತೆಗೇ ಜಾತೀಯತೆ ಮತ್ತು ಮತೀಯತೆಗಳು ಅಧಿಕವಾಗುತ್ತಿರುವಂತೆ ತೋರುತ್ತದೆ.. ಸ್ವಾತಂತ್ರ್ಯೋತ್ತರ ಭಾರತದ ಎಲ್ಲಾ ಸಮಸ್ಯೆಗಳೂ ಈ ಪರಿಸ್ಥಿತಿಯ ಸುತ್ತ ತಿರುಗುತ್ತಿವೆ. ಈ ವಿಚ್ಛಿದ್ರಕಾರಕ ಪ್ರವೃತ್ತಿಗಳನ್ನೂ ಈ ಸಂಧಿಕಾಲದಲ್ಲಿ ದೇಶವು ಹೇಗೆ ಎದುರಿಸಿ ನಿರ್ವಹಿಸುತ್ತದೆ ಎನ್ನುವುದನ್ನೂ ಊಹಿಸಬೇಕು ಅಷ್ಟೆ.

---

1. ಪಾವನ ಸ್ಮರಣ ಸಂಪುಟದಲ್ಲಿ ಪರಮೇಶ, ಪು. 10-14.

* * *

ಅಧ್ಯಾಯ : ಎಂಟು

# ಒಂದು ಗೂಡಿಸುವ - ಒಡೆಯುವ ದೊಡ್ಡ ಶಕ್ತಿ ಮೀಸಲಾತಿ ಎತ್ತ ಸಾಗಿದೆ

ಶೀರ್ಷಿಕೆಯು ಕಿವಿಗೆ ಒಂದು ಒಗಟಿನಂತೆ ಕೇಳಿಸಬಹುದು. ಆದರೆ ಮುಂದುವರಿದಂತೆ ಅದು ತನ್ನ ಉದ್ದೇಶವನ್ನು ಪೂರೈಸುವುದಕ್ಕೆ ಬದಲಾಗಿ ವಿರುದ್ಧ ಉದ್ದೇಶಗಳನ್ನು ಈಡೇರಿಸುವ ಪ್ರಕ್ರಿಯೆಯಾಗಿದೆ ಎನ್ನುವುದು ಸ್ಪಷ್ಟವಾಗುತ್ತದೆ. ದೇಶದ ಅತಿ ಹೆಚ್ಚು ಸಂಖ್ಯೆಯ ಜನರ, ಭಾರತೀಯ ಸಮಾಜದ ವಂಚಿತ ಭಾಗಗಳಿಗೆ ಸೇರಿದ ಜನರ ಅತ್ಯಧಿಕ ಒಳಿತು ಎನ್ನುವುದು ಅದರ ನಿಜವಾದ ಉದ್ದೇಶವಾಗಿತ್ತು.

ಮೀಸಲಾತಿಯನ್ನು "ಸಂರಕ್ಷಕ ತಾರತಮ್ಯ" ಎಂದು ವಿವರಿಸಲಾಗಿದೆ. 1950 ರಲ್ಲಿ ಭಾರತೀಯ ಸಂವಿಧಾನವನ್ನು ಅಂಗೀಕರಿಸಿದಾಗ ಅದು ರಾಷ್ಟ್ರೀಯ ಆಯಾಮವನ್ನು ಪಡೆದು ಕೊಂಡಿತಾದರೂ ಅದು ಸ್ವಾತಂತ್ರ್ಯೋತ್ತರ ಭಾರತದಲ್ಲಿ ರೂಪುಗೊಂಡ ನೂತನ ಕಾರ್ಯನೀತಿಯೇನಲ್ಲ. ಅದು ನಿರ್ದಿಷ್ಟವಾಗಿ ಹಿಂದೆ ಅಸ್ಪೃಶ್ಯ ಜಾತಿಗಳೆನಿಸಿಕೊಂಡಿದ್ದ ಪರಿಶಿಷ್ಟ ಜಾತಿಗಳಿಗೂ ಪರಿಶಿಷ್ಟ ಬುಡಕಟ್ಟುಗಳಿಗೂ ಸಂಬಂಧಿಸಿತ್ತು. ಆದರೆ 1950 ಕ್ಕೆ ಮುಂಚೆ ದಕ್ಷಿಣ ಭಾರತದಲ್ಲಿ, ಮದರಾಸು ಪ್ರೆಸಿಡೆನ್ಸಿ, ಹಿಂದಿನ ಮೈಸೂರು ಸಂಸ್ಥಾನ ಮತ್ತು ಇತರ ಕೆಲವು ಕಡೆಗಳಲ್ಲಿ ಒಂದಿಲ್ಲೊಂದು ಬಗೆಯ ಮೀಸಲಾತಿಯಂತೂ ಇದ್ದಿತು. 20 ನೆಯ ಶತಮಾನದ ತಿರುವಿನಲ್ಲಿ ಮದರಾಸು ಪ್ರೆಸಿಡೆನ್ಸಿಯಲ್ಲಿ ಹುಟ್ಟಿಕೊಂಡ ಹಿಂದುಳಿದ ವರ್ಗಗಳ ಚಟುವಟಿಕೆಯ ಭಾಗವಾಗಿದೆ. ಮೊದಲು ಅದು ಪ್ರಾರಂಭವಾದದ್ದು ಬ್ರಾಹ್ಮಣೇತರ ಚಟುವಟಿಕೆಯಾಗಿ. ಆಮೇಲೆ ಬೇರೆ ಬೇರೆ ಮುಖಂಡರ ನೇತೃತ್ವದಲ್ಲಿ ಹೊಸ ಆಯಾಮಗಳನ್ನು ಪಡೆದುಕೊಂಡಿತು. ಶ್ರೀಮಂತರಾಗಿದ್ದ ಬ್ರಾಹ್ಮಣೇತರರು ನಾಯಕತ್ವ ವಹಿಸಿದರು. ಹಾಸ್ಟೆಲ್ ಸೌಲಭ್ಯಗಳನ್ನು ಒದಗಿಸಿದರು, ಬ್ರಾಹ್ಮಣೇತರ ವರ್ಗಗಳಿಂದ ಬಂದ ವಿದ್ಯಾರ್ಥಿಗಳಿಗೆ ಶಿಕ್ಷಣ ಪಡೆಯಲು ಪ್ರೋತ್ಸಾಹ ನೀಡಿದರು. ಆ ವರ್ಗಗಳು ಸ್ಥೂಲವಾಗಿ ಶೂದ್ರ ವರ್ಣಕ್ಕೆ ಸಂವಾದಿಯಾದವು, ಕಾಲ ಕ್ರಮದಲ್ಲಿ ಸರಕಾರಿ ಉದ್ದೇಶಗಳನ್ನು ಪಡೆದು ಬ್ರಾಹ್ಮಣರೊಂದಿಗೆ ಹೋಲಿಸಿಕೊಳ್ಳುವ ನೆಲೆಗೆ ಬಂದರು.

ಮುಂದುವರಿದ ಬ್ರಾಹ್ಮಣ ಜಾತಿ ಪಂಗಡ ಹಾಗೂ ಹಿಂದುಳಿದಿದ್ದ ಬ್ರಾಹ್ಮಣೇತರ ಪಂಗಡಗಳ ನಡುವಣ ವ್ಯತ್ಯಾಸವನ್ನು ಎತ್ತಿ ತೋರಿಸಲು ಶಿಕ್ಷಣ ಮತ್ತು ಸರಕಾರಿ ಉದ್ಯೋಗ ಈ ಎರಡು ಕ್ಷೇತ್ರಗಳನ್ನು ಆಧಾರವಾಗಿ ಇಟ್ಟುಕೊಳ್ಳಲಾಯಿತು. ಬ್ರಿಟಿಷರು ಬಂದು ಇಂಗ್ಲೀಷ್ ಭಾಷೆಯ ಪರಿಚಯವಾದುದರಿಂದ, ಸಾಂಪ್ರದಾಯಿಕವಾಗಿ ವಿದ್ಯಾವಂತ ವರ್ಗವಾಗಿದ್ದ ಬ್ರಾಹ್ಮಣರು ಪರಿಸ್ಥಿತಿಯ ಉಪಯೋಗ ಮಾಡಿಕೊಂಡರು. ಅರ್ಹತೆ ಪಡೆದ ಬ್ರಾಹ್ಮಣರು ಸಹಜವಾಗಿಯೇ ಸರಕಾರದಲ್ಲಿ ನೌಕರಿಗಳನ್ನು ಗಿಟ್ಟಿಸಿಕೊಂಡರು. ಸಾಂಪ್ರದಾಯಿಕವಾಗಿ ಹಿಂದಿನಿಂದಲೂ ಶೂದ್ರ ವರ್ಣವನ್ನು ಶಿಕ್ಷಣದ ವ್ಯಾಪ್ತಿಯಿಂದ ಹೊರಗಿರಿಸಲಾಗಿತ್ತು. ಅಲ್ಲದೆ ಬ್ರಿಟಿಷರು ಬಂದ ಮೇಲೆ ಇಂಗ್ಲೀಷ್ ಕಲಿತು ವಿಹಿತವಾದ ಶಿಕ್ಷಣ ಪಡೆಯಲು ಅವರು ಮುಂದಾಗಲೂ ಇಲ್ಲ. ಆದರೆ ಕೆಲಕಾಲನಂತರ ಅವರು ಎಚ್ಚೆತ್ತು ವಾಸ್ತವ ಪರಿಸ್ಥಿತಿಯನ್ನು ಕಂಡುಕೊಂಡರು, ತಡವಾದರೂ ಸಂಘಟಿತರಾಗಲು ತೊಡಗಿದರು. ನಿಧಾನವಾಗಿ, ಸ್ವಲ್ಪ ಸ್ವಲ್ಪವೇ, ಅನೇಕ ತಿರುವುಗಳನ್ನು ಏಳು ಬೀಳುಗಳನ್ನು ಎದುರಿಸಿ, ತಮಗೆ ಶಿಕ್ಷಣದಲ್ಲಿ, ಸರಕಾರಿ ನೌಕರಿಯಲ್ಲಿ ಮತ್ತು ರಾಜಕೀಯ ಪ್ರಾತಿನಿಧ್ಯದಲ್ಲಿ ಒಂದು ಪಾಲು ಬೇಕೆಂದು ಒತ್ತಾಯ ಪಡಿಸಿದರು. ಹಾಸ್ಟೆಲುಗಳ ಸ್ಥಾಪನೆ, ವಿದ್ಯಾರ್ಥಿ ವೇತನಗಳು ಮತ್ತು ಶುಲ್ಕ ರಿಯಾಯಿತಿಗಳು ಅವರಿಗೆ ಶಿಕ್ಷಣ ಪಡೆಯಲು ಪ್ರೋತ್ಸಾಹಕವಾದುವು, ಅದರಿಂದ ನೌಕರಿಗಳನ್ನು ಪಡೆಯುವುದಕ್ಕೆ ದಾರಿಯಾಯಿತು. ಪ್ರಸಿದ್ಧರಾದ ಮುಖಂಡರನ್ನು ರಾಜ್ಯಪಾಲರು ರಾಜಕೀಯ ಅಂಗ ಸಂಸ್ಥೆಗಳಿಗೆ ನಾಮಕರಣ ಮಾಡಿದುದು, ಅಧಿಕಾರ ಹಂಚಿಕೆಯ ಅವಕಾಶವನ್ನು ಅವರಿಗೆ ತೆರೆದಿಟ್ಟಿತು.

ಮದರಾಸು ಆಧಿಪತ್ಯದಲ್ಲಿ ನಡೆದ ಬ್ರಾಹ್ಮಣೇತರ ಚಳುವಳಿಯು ಮುಂಬಯಿ ಪ್ರಾಂತದಲ್ಲೂ ಮೈಸೂರು ಸಂಸ್ಥಾನದಲ್ಲೂ ಅಂಥವೇ ಪ್ರಯತ್ನಗಳಿಗೆ ಪ್ರೇರಣೆ ನೀಡಿತು. ಮುಂಬೈ ಪ್ರೆಸಿಡೆನ್ಸಿಯಲ್ಲಿ ಜ್ಯೋತಿಬಾ ಫುಲೇ ಅವರ ನೇತೃತ್ವದಲ್ಲಿ ಶಿಕ್ಷಣವು ಪ್ರೋತ್ಸಾಹವನ್ನು ಪಡೆಯಿತು. ಫುಲೇ ಮತ್ತು ಅವರ ಸಹವರ್ತಿಗಳು ಶಾಲೆಗಳನ್ನೂ ಹಾಸ್ಟೆಲುಗಳನ್ನೂ ಪ್ರಾರಂಭಿಸಿ ನಡೆಸಿದರು. ಮೈಸೂರು ಸಂಸ್ಥಾನದಲ್ಲಾದರೆ ದೇಶೀಯ ಅರಸರು ಉದಾರಮನಸ್ಕರಾಗಿದ್ದರು. ಶಿಕ್ಷಣಕ್ಕೆ ಪ್ರೋತ್ಸಾಹ ದೊರಕಿತು. ಶಾಲೆ ಕಾಲೇಜುಗಳಲ್ಲಿ ಸೌಲಭ್ಯಗಳು ಲಭ್ಯವಾದುವು. ಕ್ರಮೇಣ ಅರ್ಹತೆ ಪಡೆದ ಬ್ರಾಹ್ಮಣೇತರರಿಗೆ ಅಥವಾ ಹಿಂದುಳಿದ ವರ್ಗಗಳಿಗೆ ಸರಕಾರಿ ಕಚೇರಿಗಳಲ್ಲಿ ಅವಕಾಶ ದೊರಕಿತು. ನಾಮಕರಣದ ಮೂಲಕ ರಾಜಕೀಯ ಪ್ರಾತಿನಿಧ್ಯವೂ ಜಾರಿಗೆ ಬಂದಿತು. ಅದಕ್ಕೆ ಆಧಾರ ವ್ಯಕ್ತಿಗಿದ್ದ ಭೂಮಿಯ ಒಡೆತನ ಮತ್ತು ಅವನು ಕೊಡುತ್ತಿದ್ದ ಕಂದಾಯ. ಆದ್ದರಿಂದ ಹಿಂದುಳಿದ ವರ್ಗಗಳಲ್ಲಿ ಶ್ರೀಮಂತರಾದವರು ಮಾತ್ರವೇ ಪ್ರತಿನಿಧಿಸಭೆಯ ಸ್ಥಾನಗಳನ್ನು ತುಂಬಲು ಆಶಿಸಬಹುದಾಯಿತು. ಹಿಂದುಳಿದ ವರ್ಗಗಳನ್ನು ಪ್ರೋತ್ಸಾಹಿಸಲು ಮೈಸೂರು ಸಂಸ್ಥಾನದ ಅರಸರು ಕೈಗೊಂಡ ಕ್ರಮಗಳಿಂದ ಇಲ್ಲಿ ಚಳುವಳಿಯು ರೂಪುಗೊಳ್ಳಲಿಲ್ಲ. ಸ್ವಾತಂತ್ರ್ಯಾನಂತರ ಹಿಂದುಳಿದ ವರ್ಗಗಳ ಆಯೋಗಗಳನ್ನು ನೇಮಿಸಲು ಹೊಸ ಪ್ರಯತ್ನಗಳನ್ನು ಕೈಗೊಳ್ಳುವವರೆಗೂ ಅದು ಸುಪ್ತವಾಗಿಯೇ ಉಳಿದಿತ್ತು.

ಮುಂಬಯಿ ಮತ್ತು ಮದರಾಸು ಪ್ರೆಸಿಡೆನ್ಸಿಗಳೆರಡರಲ್ಲೂ, ಬ್ರಾಹ್ಮಣೇತರ ಚಳುವಳಿಯು ಚೆನ್ನಾಗಿ ವ್ಯವಸ್ಥೆಗೊಂಡಿತು. ಹಲವು ಮುಖಂಡರು ಉದಿಸಿದರು, ರಾಜಕೀಯ ಪ್ರಭಾವವು ಲಭ್ಯವಾಯಿತು. ಆಮೇಲಿನ ವರ್ಷಗಳಲ್ಲಿ ಅನೇಕ ಸಣ್ಣಪುಟ್ಟ ಗುಂಪುಗಳು ಪ್ರಾದೇಶಿಕ ರಾಜಕೀಯ ಪಕ್ಷಗಳಾಗಿ ರೂಪುಗೊಂಡುವು. ಇದು ಇಂದಿನ ಮಹಾರಾಷ್ಟ್ರವಾದ ಮುಂಬಯಿ ಪ್ರೆಸಿಡೆನ್ಸಿಗಿಂತಲೂ ಹಿಂದಿನ ಮದರಾಸು ಪ್ರೆಸಿಡೆನ್ಸಿಯಾದ ತಮಿಳುನಾಡಿಗೆ ಸಂಬಂಧಿಸಿದಂತೆ ಹೆಚ್ಚು ಅನ್ವಯಿಸಿದ ವಿಚಾರ. ಮಹಾರಾಷ್ಟ್ರದಲ್ಲಿ ಫುಲೇ ಅವರ ಅನುಚರರು ಒಂದು ರಾಜಕೀಯ ಸಂಸ್ಥೆಯನ್ನು ಸ್ಥಾಪಿಸಿ ಕೆಲವು ಕಾಲ ಕೆಲಸ ಮಾಡಿದರು. ಈ ಎಲ್ಲಾ ಪಯತ್ನಗಳಲ್ಲಿಯೂ ಮುನ್ನುಗ್ಗುತ್ತಿದ್ದವರು ಬಹುವಾಗಿ ಶೂದ್ರರು. ಬ್ರಾಹ್ಮಣೇತರ ಚಳುವಳಿಯಲ್ಲಿ ಅಸ್ಪೃಶ್ಯ ಪಂಗಡಗಳು ಮತ್ತು ಬುಡಕಟ್ಟುಗಳು ಭಾಗವಹಿಸಿದ್ದರೆಂಬುದಕ್ಕಾಗಲಿ, ಅವರ ಸಮಸ್ಯೆಗಳನ್ನು ಮುಂದಕ್ಕೆ ತರಲಾಯಿತೆಂಬುದಕ್ಕಾಗಲಿ ಸಾಕ್ಷ್ಯಾಧಾರವಿಲ್ಲ, ಇದ್ದರೂ ಅತ್ಯಲ್ಪ.

ಬಹು ಸಂಖ್ಯೆಯ ಜಾತಿ - ಉಪಜಾತಿಗಳೊಂದಿಗೆ, ಧಾರ್ಮಿಕ ಮತ್ತು ಸಾಮಾಜಿಕ ಅನುಕ್ರಮಿಕ ಶ್ರೇಣಿಯನ್ನು ರಚಿಸಿಕೊಂಡು, ಜನ ಸಂಖ್ಯೆಯ 60-65% ಆಗಿದ್ದು, ಶೂದ್ರರು ವಂಚನೆಗೊಳಗಾದ ವರ್ಗವಾಗಿದ್ದುದು ನಿಜ. ಆದರೆ ಅಸ್ಪೃಶ್ಯರಂತಲ್ಲದೆ ಅವರಿಗೆ ಭೂಮಿಯ ಸ್ಥಿರಾಸ್ತಿಯಿದ್ದಿತು, ವ್ಯವಹಾರ ಮತ್ತು ವಾಣಿಜ್ಯ ಚಟುವಟಿಕೆಗಳನ್ನು ಅವರು ನಡೆಸುತ್ತಿದ್ದರು. ಅವರಿಗೆ ಅಸ್ಪೃಶ್ಯತೆಯ ಸಂಕಟವು ತಟ್ಟಿರಲಿಲ್ಲ. ಶಿಕ್ಷಣ ಮತ್ತು ಅದಕ್ಕೆ ಸಂಬಂಧಿಸಿದ ಕ್ಷೇತ್ರಗಳಲ್ಲಿ ಮಾತ್ರ ಅವರು ವಂಚನೆಗೊಳಗಾಗಿದ್ದರು. ಹಾಗಾಗಿ, ಅಸ್ಪೃಶ್ಯರಿಗೂ ಬುಡಕಟ್ಟುಜನರಿಗೂ ಸಾಂವಿಧಾನಿಕವಾದ ರಕ್ಷಣೆಯನ್ನು ಕೊಡಲು ಅವರ ವಕ್ತಾರರಾಗಿ ಅಂಬೇಡ್ಕರ್ ಅವರು ಬರುವವರೆಗೆ, ಅಂದರೆ 1950 ರವರೆಗೆ ಕಾಯಬೇಕಾಯಿತು. ಅಂಬೇಡ್ಕರರು ಸಂವಿಧಾನ ಕರಡು ರಚನಾ ಸಮಿತಿಯ ಅಧ್ಯಕ್ಷರೂ ಆಗಿದ್ದರು. ಆದ್ದರಿಂದ ಮುಖ್ಯವಾಗಿ ಈ ಎರಡು ವರ್ಗಗಳಿಗೆ ಮೀಸಲಾತಿಯನ್ನು ಪಡೆಯುವ ಪ್ರಯತ್ನವು ಅವರಿಗೆ ಸ್ವಲ್ಪ ಸುಲಭವಾಯಿತು. ಏಕೆಂದರೆ ಸ್ವತಃ ಅಂಬೇಡ್ಕರರೇ ಮಹಾರಾಷ್ಟ್ರದ ಮಹರ್ ಎಂಬ ಅಸ್ಪೃಶ್ಯ ಸಮುದಾಯದಲ್ಲಿ ಜನಿಸಿದವರು. ಜಾತಿ ಪದ್ಧತಿ, ಹಿಂದೂ ಧರ್ಮ, ಬೌದ್ಧ ಧರ್ಮ, ಅವರ್ಣ ಅಥವಾ ಅಂತ್ಯಜರ ಐದನೆಯ ಪಂಗಡವಾದ ಚಾತುವರ್ಣಗಳ ವ್ಯವಸ್ಥೆಯ ಹೊರಗೆ ಉಳಿದ ಪಂಚಮರ ಸ್ಥಾನಮಾನ ಇವುಗಳ ವಿಚಾರವಾಗಿ ವ್ಯಾಪಕವಾದ ಜ್ಞಾನವನ್ನು ಅವರು ಗಳಿಸಿಕೊಂಡರು.

ಮಾನವಶಾಸ್ತ್ರ, ಸಮಾಜ ಶಾಸ್ತ್ರ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ ಮತ್ತು ಕಾನೂನುಗಳಲ್ಲಿ ಪಡೆದ ಅರ್ಹತೆಗಳು ಅಂಬೇಡ್ಕರರಿಗೆ ಗಟ್ಟಿಯಾದ ಹಿನ್ನೆಲೆಯನ್ನು ಒದಗಿಸಿದವು. ಅವರು ತಮ್ಮ ಸಮಕಾಲೀನರಲ್ಲಿ ಮಾತ್ರವಲ್ಲ 20 ನೆಯ ಶತಮಾನದ ಭಾರತದಲ್ಲಿಯೇ ಅತ್ಯಂತ ಶ್ರೇಷ್ಠ ಸಮಾಜ ಚಿಂತಕರಲ್ಲಿ ಒಬ್ಬರೆನಿಸಿದರು. ಅವರು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಲಿಲ್ಲವಾದುದರಿಂದ ಅವರನ್ನು ದೇಶಭಕ್ತರಲ್ಲವೆಂದು ಕೆಲವು ವೇಳೆ

ಆಪಾದಿಸುವುದುಂಟು. ಅವರು ರಾಜಕೀಯ ಪಕ್ಷದ ಮುಖ್ಯವಾಹಿನಿಗೂ ಸೇರಿಕೊಳ್ಳಲಿಲ್ಲ. ರಾಜಕೀಯ ವ್ಯವಹಾರಗಳಲ್ಲಿ ಭಾಗವಹಿಸಬೇಕೆಂದು ಅವರು ನಿರ್ಧರಿಸಿದಾಗ ಭಾರತೀಯ ಅಸ್ಪೃಶ್ಯ ಜಾತಿಗಳ ನಾಯಕರಾಗಿ ಪಾಲುಗೊಂಡರು. ಶತಮಾನಗಳ ಕಾಲದಿಂದ ದನಿ ಸೊರಗಿ, ಹೆಚ್ಚು ಕಡಮೆ ಮೂಕವಾಗಿಯೇ ಉಳಿದಿದ್ದ ಪಂಗಡಗಳು ಅಂಬೇಡ್ಕರರಲ್ಲಿ ತಮ್ಮ ಧೀಮಂತ ನಾಯಕನನ್ನು, ನಿರ್ಭೀತ ವಕ್ತಾರನನ್ನು, ಭಾರತೀಯ ಹಿಂದೂ ಸಮಾಜದ, ಮುಖ್ಯವಾಗಿ ಜಾತಿ ಪದ್ಧತಿ ಮತ್ತು ಹಿಂದೂ ಧರ್ಮಗಳ ಕಟು ವಿಮರ್ಶಕನನ್ನು ಕಂಡರು.

1930 ರಲ್ಲಿ ಲಂಡನಿನಲ್ಲಿ ನಡೆದ ದುಂಡು ಮೇಜಿನ ಪರಿಷತ್ತಿನಲ್ಲಿ, ಅಂಬೇಡ್ಕರರು ಎಷ್ಟು ಮಾತ್ರಕ್ಕೂ ರಾಜಿ ಮಾಡಿಕೊಳ್ಳದ, ಅಸ್ಪೃಶ್ಯರ ನಾಯಕನಾಗಿ ಬೆಳಕಿಗೆ ಬಂದರು. ಅಲ್ಲಿ ಅಸ್ಪೃಶ್ಯರಿಗಾಗಿ ಅವರು ಬ್ರಿಟಿಷರಿಂದ 'ಕಮ್ಯೂನಲ್ ಅವಾರ್ಡ್' (Communal Award) ವನ್ನು ಪಡೆದುಕೊಂಡರು. ಅಸ್ಪೃಶ್ಯರು ಹಿಂದುಗಳಲ್ಲ ಎಂದು ಅಂಬೇಡ್ಕರರು ವಾದಿಸಿದರು, ಗಾಂಧೀಯವರಾದರೋ ಅಸ್ಪೃಶ್ಯರ ಹಿಂದೂ ಸ್ಥಾನಮಾನವನ್ನು ಒತ್ತಾಯಪೂರ್ವಕವಾಗಿ ಹೇಳುತ್ತಿದ್ದರು. ಹಾಗಾಗಿ 'ಕಮ್ಯೂನಲ್ ಅವಾರ್ಡ್'ನ್ನು ಅವರು, ಜನರನ್ನು ಒಡೆಯುವ ಬ್ರಿಟಿಷರ ತಂತ್ರ ಎಂಬುದಾಗಿ ವಿರೋಧಿಸಿದರು. ಆ ಕಮ್ಯೂನಲ್ ಅವಾರ್ಡ್‌ನ್ನುಹಿಂತೆಗೆದುಕೊಳ್ಳುವವರೆಗೆ ನಿಲ್ಲಿಸುವವರೆಗೆ ಆಮರಣಾಂತ ಉಪವಾಸ ಕೈಗೊಂಡ ಮಹಾತ್ಮ ಗಾಂಧಿಯವರ ಜೀವವನ್ನು ಉಳಿಸುವ ಸಲುವಾಗಿ 1932 ರ 'ಪೂನಾ ಕರಾರಿಗೆ' ಬಲಾತ್ಕಾರಪಡಿಸಿ ಅಂಬೇಡ್ಕರರ ಸಹಿ ಮಾಡಿಸಲಾಯಿತು. ಆದರೆ ಇದರಿಂದಾಗಿ ಗಾಂಧಿ ಮತ್ತು ಇತರ ನಾಯಕರಿಗೆ, ಅಸ್ಪೃಶ್ಯರಿಗೆ ರಾಜಕೀಯ ಮೀಸಲಾತಿ ಹಾಗೂ ಪ್ರಾತಿನಿಧ್ಯ ಕೊಡುವ ಕೆಲವು ಮಾರ್ಗಗಳನ್ನು ಒದಗಿಸಲು ನೈತಿಕ ಹೊಣೆ ಬಿದ್ದಿತು. ಮತೀಯ ಆದೇಶವು ನೀಡಿದ್ದ ಹಕ್ಕುಗಳನ್ನು ಪೂನಾ ಕರಾರು ಕಿತ್ತುಕೊಂಡರೂ, ಗಾಂಧಿಯವರು ಸೂಚಿಸಿ ಕಾಂಗ್ರೆಸ್ ಪಕ್ಷವು ಎತ್ತಿ ಹಿಡಿದ ಬದಲಿ ಮಾರ್ಗಗಳು ಸಮಸ್ಯೆಗೆ ಕಿಂಚಿತ್ ಪರಿಹಾರವನ್ನು ಒದಗಿಸಿದವು.

ಸಂವಿಧಾನದ ಕರಡು ತಯಾರಿಸುವಾಗ ಅಂಬೇಡ್ಕರರಲ್ಲದೆ ಬೇರೆ ಯಾರಾದರೂ ಇದ್ದಿದ್ದರೆ, ಎಸ್.ಸಿ / ಎಸ್.ಟಿ ಗಳಿಗಾಗಿ 'ಮೀಸಲಾತಿ'ಯ ಸಲಹೆಗಳನ್ನು ಮುಂದಿಡುತ್ತಿದ್ದರೆ ಎನ್ನುವುದು ಸಂದೇಹ. ಅಂಬೇಡ್ಕರರನ್ನೇ ಸಮಿತಿಯ ಅಧ್ಯಕ್ಷರನ್ನಾಗಿ ಆರಿಸಿದುದಕ್ಕೆ ವಂದನೆಗಳು ಸಲ್ಲಬೇಕು. ಸಂವಿಧಾನ ಸಭೆಯ ಚರ್ಚೆಗಳಲ್ಲಿ ಪಾಲುಗೊಂಡ ಎಲ್ಲರೂ ಅವರಿಗೆ ರಾಜಕೀಯ ಮೀಸಲಾತಿಯನ್ನೂ, ಆರ್ಥಿಕ ನೆರವನ್ನೂ, ಶಿಕ್ಷಣ ಮತ್ತು ಸಹಕಾರೀ ಉದ್ಯೋಗಗಳನ್ನೂ ಕೊಡಲು ಸಮ್ಮತಿಸಿದರು. ಈ ಎರಡು ವರ್ಗದವರಿಗಾಗಿ ಕೆಲವು ಸ್ಥಾನಗಳನ್ನು ಮೇಲ್ಕಂಡ ಎಲ್ಲಾ ಕ್ಷೇತ್ರಗಳಲ್ಲೂ ಕಾದಿರಿಸಲು ಒಪ್ಪಿದರು. ಮೊದಲಲ್ಲಿ ಮೀಸಲಾತಿಯು ಹತ್ತು ವರ್ಷಗಳ ಅವಧಿಗಾಗಿ ಎಂದು ನಿಗದಿಯಾಗಿತ್ತು. ನೀತಿಯ ಯಶಸ್ಸು ಅಥವಾ ವೈಫಲ್ಯವನ್ನು ಮೌಲ್ಯಮಾಪನ ಮಾಡಬೇಕಾಗಿತ್ತು. ಸಿಖ್ ಧರ್ಮಕ್ಕೆ ಪರಿವರ್ತನೆಗೊಂಡ ಅಸ್ಪೃಶ್ಯರನ್ನು ಎಸ್.ಸಿ. ಪಟ್ಟಿಗೆ ಸೇರಿಸಲಾಯಿತು. ಇದೆಲ್ಲ ಪ್ರಾರಂಭದಲ್ಲಿ ನಡೆದದ್ದು, ಇತಿಹಾಸದ ಭಾಗವಾಗಿದೆ.

1960 ರಲ್ಲಿ ಆಗ ಕಾಂಗ್ರೆಸ್ ಪಕ್ಷದ ಸಂಸತ್ ಸದಸ್ಯರಾಗಿದ್ದ ಎಳಯ ಪೆರುಮಾಳ್ ಅವರ ನೇತೃತ್ವದ ಮೊದಲನೆಯ ಸಮಿತಿಯು ದೇಶಾದ್ಯಾಂತ ಸಂಚರಿಸಿ, ಮೀಸಲಾತಿ ನೀತಿಯ ಪರಿಣಾಮವನ್ನು ದಾಖಲು ಮಾಡಿತು. ಪರಿಸ್ಥಿತಿಯು ಮೀಸಲಾತಿಯ ಅವಧಿಯನ್ನು ವಿಸ್ತರಿಸಬೇಕಾದ ಅಗತ್ಯವನ್ನು ಮನಗಾಣಿಸಿತು. ಸಹಸ್ರಾರು ವರ್ಷಗಳಿಂದ ಭಾರತೀಯ ಸಮಾಜದ ಲಕ್ಷಣವಾಗಿದ್ದ ಪರಿಸ್ಥಿತಿಗಳನ್ನು ಅಷ್ಟು ಬೇಗ ಬದಲಾಯಿಸುವುದು ಸಾಧ್ಯವಿರಲಿಲ್ಲ. ಅಸ್ಪೃಶ್ಯರು ಮೇಲು ಜಾತಿಯವರನ್ನು, ವಿಶೇಷವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಭೂಮಾಲೀಕರಾದ ಪಂಗಡಗಳನ್ನು ಅವಲಂಬಿಸಬೇಕಾದ ಸಾಮಾಜಿಕ ಆರ್ಥಿಕ ಅಂಶಗಳು ಇನ್ನೂ ಬದಲಾಗದೆಯೇ ಉಳಿದಿವೆ, ಅಥವಾ ಮೇಲೆ ಮೇಲೆ ಸಣ್ಣಪುಟ್ಟ ಬದಲಾವಣೆಗಳಾಗಿವೆ. ಸಮಾನತೆ, ಸಾಮಾಜಿಕ ನ್ಯಾಯ ಇವುಗಳ ಅಭಾವದಿಂದ ಕೂಡಿದ ಜಾತಿ ಮತ್ತು ಧಾರ್ಮಿಕ ತಾರತಮ್ಯ ಮುಂದುವರಿದೇ ಇದೆ. ಹಾಗಾಗಿ ಮೀಸಲಾತಿ ನೀತಿಯನ್ನು ಮುಂದುವರಿಸಿ, ರಾಜಕೀಯ ಪ್ರಾತಿನಿಧ್ಯಕ್ಕೆ ನೂತನ ಜೀವದಾನ ಮಾಡಲಾಗುತ್ತಿದೆ. ಒಂದು ವಿಧಿಯೆಂಬಂತೆ ಪಾರ್ಲಿಮೆಂಟರಿ ಸಮಿತಿಯೊಂದು ದೇಶದಲ್ಲಿ ಸಂಚಾರ ಮಾಡಿ, ಮೀಸಲಾತಿಯ ಮುಂದುವರಿಕೆಯನ್ನೂ ಶಿಫಾರಸು ಮಾಡುತ್ತದೆ.

ಶಿಕ್ಷಣ, ಸರಕಾರಿ ನೌಕರಿ ಮತ್ತು ರಾಜಕೀಯ ಪ್ರಾತಿನಿಧ್ಯಗಳಲ್ಲಿ ಸ್ವಲ್ಪ ಮಟ್ಟಿಗೆ ದಾಪುಗಾಲಿಡಲಾಗಿದೆ. ಇವು ಕಣ್ಣಿಗೆ ಕಾಣಿಸುತ್ತಿವೆ. ಸಾಮಾಜಿಕ ಬದಲಾವಣೆಯೆನ್ನುವುದು ಒಂದು ನಿಧಾನವಾದ ಪ್ರಕ್ರಿಯೆ. ಭಾರತದ ಸಂದರ್ಭದಲ್ಲಂತೂ ಅದು ಇನ್ನೂ ಹೆಚ್ಚು ಸಮಯ ತೆಗೆದುಕೊಳ್ಳುತ್ತದೆ. ಏಕೆಂದರೆ ಇಲ್ಲಿ ಸಾಮಾಜಿಕ ಸ್ಥಾನಮಾನವು ಸಂಪಾದಿಸಿದುದು ಅಥವಾ ಗಳಿಸಿದುದು ಎನ್ನುವುದಕ್ಕಿಂತ ಆರೋಪಿತವಾದುದು ಎನ್ನುವುದು ಹೆಚ್ಚು ಸರಿ. ಒಬ್ಬನು ಮೇಲು ಮೂಲದ ಅಥವಾ ಕೆಳಮಟ್ಟದ ಸ್ಥಾನವನ್ನು ಅನುಭೋಗಿಸುವುದು ಹುಟ್ಟಿನಿಂದ. ಸಾಮಾಜಿಕ ಸಮಾನತೆಯನ್ನು ಕಾನೂನಿನಿಂದ ಮಾತ್ರವೇ ತರಲು ಸಾಧ್ಯವಿಲ್ಲ. ಆದ್ದರಿಂದ ಮೀಸಲಾತಿ ನೀತಿಯು, ವಿಶೇಷವಾಗಿ ಎಸ್.ಸಿ / ಎಸ್.ಟಿ ಗಳಿಗೆ ಮೀಸಲಾತಿಯು ಅನೇಕ ಸಮಸ್ಯೆಗಳನ್ನು ಸೃಷ್ಟಿಸಿದೆ. ಇಂದು ಪರಿಶಿಷ್ಟ ಜಾತಿಗಳು ತುಲನಾತ್ಮಕವಾಗಿ ಪರಿಶಿಷ್ಟ ಬುಡಕಟ್ಟುಗಳಿಗಿಂತ ಉತ್ತಮವಾದ ಸ್ಥಿತಿಯಲ್ಲಿದ್ದಾರೆ. ಜನ ಸಂಖ್ಯೆಯ ಬಲ, ಜನ ಸಾಮಾನ್ಯರ ನಡುವೆ ಹುಟ್ಟಿಕೊಂಡಿರುವ ಸಂಘ ಸಂಸ್ಥೆಗಳು, ಜನರ ಗಮನವನ್ನು ಸೆಳೆಯುವಂತೆ ಮಾಡಿರುವ ರಾಜಕೀಯ ಪ್ರಭಾವ - ಇವು ಕೆಲವು ಅನುಕೂಲಗಳಾಗಿವೆ. ಬುಡಕಟ್ಟು ನೆಲೆಗಳಿರುವ ಸ್ಥಳ, ಅನಕ್ಷರತೆ, ಅಜ್ಞಾನ, ಬಡತನ, ಕ್ರೂರವಾದ ಅರಣ್ಯ ಕಾನೂನುಗಳು, ಇವೆಲ್ಲವೂ ಕೂಡಿ ಬುಡಕಟ್ಟು ಸಮಸ್ಯೆಗಳನ್ನು ಕಣ್ಣಿಗೆ ಕಾಣಿಸದಂತೆ ಇರಿಸಿವೆ. ಅವರ ಸಾಮಾಜಿಕ ಸ್ಥಾನಮಾನಕ್ಕೆ ಸಾಂಪ್ರದಾಯಿಕವಾಗಿಯೂ ಅಸ್ಪೃಶ್ಯತೆಯ ಕಳಂಕ ಅಂಟಿಕೊಂಡಿರಲಿಲ್ಲ. ಬುಡಕಟ್ಟಿಗರನ್ನು ಹಿಂದುಳಿದವರೆಂದು ಪರಿಗಣಿಸಲಾಗಿದೆ, ಕೇವಲ ಉಳಿವಿಗಾಗಿ ಹೋರಾಡುತ್ತಾ ಅವರು ಹಿಂದುಳಿದವರಾಗಿಯೇ ಮುಂದುವರಿದಿದ್ದಾರೆ.

ಸಾಂಪ್ರದಾಯಿಕ ಅಸ್ಪೃಶ್ಯ ಜಾತಿಗಳು ಎಷ್ಟು ಮಾತ್ರಕ್ಕೂ ಒಂದು ಜಾತಿಯಲ್ಲ. ಅದು ಹಲವು ಜಾತಿಗಳು ಉಪಜಾತಿಗಳ ಕಲಬೆರಕೆಯಾಗಿದೆ. ಅವರನ್ನು ಒಂದು ಅಖಂಡ

ಘಟಕವಾಗಿ ಮಾಡಲು ಹೊರಡುವ ಯಾವುದೇ ಪ್ರಯತ್ನವನ್ನು ಪ್ರಾದೇಶಿಕ, ಭಾಷಾ, ಸಾಂಸ್ಕೃತಿಕ ವ್ಯತ್ಯಾಸಗಳು ಪರಿಣಾಮಕಾರಿಯಾಗಿ ತಡೆಯುತ್ತದೆ. ಸ್ಥೂಲವಾಗಿ ನೋಡಿದಾಗ ಅವು ಒಂದೇ ಬಗೆಯ ಸಮಸ್ಯೆಗಳನ್ನು ಎದುರಿಸುತ್ತಿದ್ದರೂ, ತಮ್ಮ ತಮ್ಮೊಳಗೇ ಬೇರೆಬೇರೆಯಾಗಿವೆ. ಅತಿಹೆಚ್ಚು ಸಂಖ್ಯಾಬಲವಿರುವ ಚಮಾರ್ ಜಾತಿಯು ಇಡೀ ಉತ್ತರ ಭಾರತವನ್ನು ವ್ಯಾಪಿಸಿದೆ. ಆದರೂ ಅವರು ಒಗಟ್ಟಾಗಿಲ್ಲ. ಚಮಾರ್ ಜಾತಿಯಲ್ಲಿಯೂ 8-10 ಉಪಜಾತಿಗಳಿವೆ. ಕೆಲವರು ಸಾಕಷ್ಟು ಪ್ರಗತಿ ಹೊಂದಿದ್ದಾರೆ, (ಮುಂದುವರಿದಿದ್ದಾರೆ), ಮಿಕ್ಕವರು ಹಿಂದೆ ಉಳಿದಿದ್ದಾರೆ. ಇದುವರೆಗೆ ಮೀಸಲಾತಿ ಸೌಲಭ್ಯಗಳನ್ನು ಎಸ್ ಸಿ ಗಳಲ್ಲಿನ ಬಹುತೇಕ ಮುಂದುವರಿದ ವರ್ಗಗಳೇ ಪಡೆದುಕೊಂಡಿದ್ದಾರೆ. ಅಖಿಲ ಭಾರತ ಮಟ್ಟದಲ್ಲಿ ಕಂಡು ಬರುವ ಚಿತ್ರವೂ ಇದೇ ಆಗಿದೆ.

ಹಿಂದುಳಿದಿರುವವರು ಸರಕಾರೀ ಏಜೆನ್ಸಿಗಳ ಗಮನವನ್ನು ಸೂಕ್ತವಾಗಿ ಸೆಳೆದಿಲ್ಲ ಎಂದು ಹೇಳಬಹುದು. ಆದ್ದರಿಂದ ವರ್ಗ ಮತ್ತು ಜನ ಸಾಮಾನ್ಯರ ವ್ಯತ್ಯಾಸಗಳು ಮೀಸಲಾತಿ ನೀತಿಯ ಕಾರ್ಯಾಚರಣೆಯ ಮೇಲೆ ಪರಿಣಾಮ ಪಡೆದಿವೆ. ನೀತಿಯನ್ನು ಅತ್ಯಂತ ಅರ್ಹರಾದವರ ಕಡೆಗೆ ತಿರುಗಿಸದೆ ಹೋದರೆ, ಈ ಜನರ ಪರಿಸ್ಥಿತಿಯು ಎಂದಾದರೂ ಬದಲಾಗುತ್ತದೆ, ಅಥವಾ ಉತ್ತಮಗೊಳ್ಳುತ್ತದೆ ಎಂಬ ಆಸೆಯೇ ಉಳಿಯದಾಗುತ್ತದೆ.

ಬೆಂಕಿಗೆ ತುಪ್ಪ ಸುರಿದ ಹಾಗೆ, ಮೇಲ್ಕಂಡ ವಿಕೃತಿಗಳು ಸಾಲದೆಂಬಂತೆ, ಅನೇಕ ಎಸ್.ಸಿ ಅಲ್ಲದವರು ತಾವೂ ಎಸ್.ಸಿ ಗಳೆಂದು ಹೇಳಿಕೊಂಡು ತೂರಿಕೊಂಡಿದ್ದಾರೆ. ಎಸ್.ಸಿ ಪಟ್ಟಿಕೆಯನ್ನು ಪಡೆದು ಪರಿಶಿಷ್ಟಕ್ಕೆ ಸೇರ್ಪಡೆಗೊಂಡಿದ್ದಾರೆ. ಜನ ಸಂಖ್ಯೆ ಅಧಿಕಗೊಂಡಿದೆ, ಸೌಲಭ್ಯಗಳು ತೆಳ್ಳಗೆ ಹಂಚಿಕೆಯಾಗುತ್ತಿವೆ. ಮೋಸದಿಂದ ಎಸ್.ಸಿ ಗಳೆನಿಸಿ ಕೊಳ್ಳುವಿಕೆ ಪದೇ ಪದೇ ಸಂಭವಿಸುತ್ತಿದೆ, ವಿಶೇಷವಾಗಿ ಉದ್ಯೋಗಗಳನ್ನು ಪಡೆಯಲು ಹಾಗೂ ವೈದ್ಯಕೀಯ, ಎಂಜಿನಿಯರಿಂಗ್ ಮೊದಲಾದ ವೃತ್ತಿಪರ ಕಾಲೇಜುಗಳಿಗೆ ಪ್ರವೇಶ ಪಡೆಯಲು ಈ ತಂತ್ರ ಮುಂದುವರಿಯುತ್ತಲಿದೆ.

ಉದ್ದೇಶವಿಲ್ಲದೆಯೂ ಸರಕಾರವೂ ಇದರಲ್ಲಿ ಭಾಗಿಯಾಗಿದೆ. ಪ್ರವೃತ್ತಿ ಹೀಗಿರುವಾಗ ಪರಿಶಿಷ್ಟ ಜಾತಿಯ ಸಮಸ್ಯೆಗಳು ಹಾಗೆಯೇ ಮುಂದುವರಿಯುತ್ತವೆ. ಮುಖಂಡರು ಈಗ ಹೊಸ ಘೋಷಣೆಯನ್ನು ಮಾಡುತ್ತಿದ್ದಾರೆ - "ಎಲ್ಲಿಯವರೆಗೆ ಜಾತಿ ಉಳಿದಿರುತ್ತದೆಯೋ ಅಲ್ಲಿಯವರೆಗೆ ಮೀಸಲಾತಿಯು ಮುಂದುವರಿಯಬೇಕು" ಇದಕ್ಕೆ ನಾವು ಇನ್ನೊಂದು ಮಾತು ಸೇರಿಸಬಹುದು - "ಎಲ್ಲಿಯವರೆಗೆ ಮೀಸಲಾತಿ ಇರುತ್ತದೆಯೋ ಅಲ್ಲಿಯವರೆಗೆ ಜಾತಿಗಳು ಸಂಖ್ಯೆಯಲ್ಲಿ ಹೆಚ್ಚಾಗುತ್ತವೆ ಮತ್ತು ಭಾರತದ ನೆಲದಲ್ಲಿ ಬಲವಾಗಿ ಬೇರು ಬಿಡುತ್ತವೆ."

ಎಸ್.ಟಿ ಗಳ ಸಮಸ್ಯೆ, ಇನ್ನೂ ಗುರುತರವಾದದ್ದು. ಅವರು ಪ್ರತ್ಯೇಕವಾದ ಸ್ಥಳಗಳಲ್ಲಿ, ಬೆಟ್ಟಗಾಡು ಪ್ರದೇಶಗಳಲ್ಲಿ, ಕಾಡಿನ ಅಂಚುಗಳಲ್ಲಿ ವಾಸ ಮಾಡುತ್ತಾ ಸಾಂವಿಧಾನಿಕ ಸೌಲಭ್ಯಗಳನ್ನು ಕುರಿತು ಏನನ್ನು ತಿಳಿದುಕೊಂಡಿಲ್ಲ. ಇದ್ದರೂ ಬಹು ಸ್ವಲ್ಪ. "ನಾಗರಿಕ ಸಮಾಜವು" ಅವರನ್ನು ಎಲ್ಲಾ ಬಗೆಯ ಶೋಷಣೆಗಳಿಗೂ ಒಳಪಡಿಸಿದೆ.

ಸಾಮಾನ್ಯವಾಗಿ ಅವರನ್ನು ಸಮಾಜದ ಮಿಕ್ಕವರು ತುಂಬಾ ಅಜ್ಞಾನಿಗಳೆಂದೂ ಹಿಂದುಳಿದವರೆಂದೂ ಪರಿಗಣಿಸುತ್ತಾರೆ. ಬುಡಕಟ್ಟಿಗರಲ್ಲಿಯೇ ಕೆಲವರು ಸಾಕಷ್ಟು ಮುಂದುವರಿದು, ಇತರರು ಹಿಂದುಳಿದಿದ್ದಾರೆ. ಕ್ರಿಶ್ಚಿಯನ್ ಮಿಶನರಿಗಳು ಕೆಲಸ ಮಾಡಿದಲ್ಲೆಲ್ಲಾ, ಉದಾಹರಣೆಗೆ ಛೋಟಾನಗಪುರ ಪ್ರದೇಶ ಮತ್ತು ಈಶಾನ್ಯ ಭಾರತಗಳಲ್ಲಿ ಬುಡಕಟ್ಟು ಜನರು ಸಂಘಟಿತರಾಗಿದ್ದಾರೆ, ತಮ್ಮ ಬೇಡಿಕೆಗಳನ್ನು ಹೇಳಬಲ್ಲವರಾಗಿದ್ದಾರೆ. ಆದರೆ ಅಂತರ ಬುಡಕಟ್ಟು ವ್ಯತ್ಯಾಸಗಳು ಮತ್ತು ವೈರಗಳು, ಬುಡಕಟ್ಟಿನೊಳಗೆಯೇ ಸಣ್ಣಪುಟ್ಟ ದ್ವೇಷ ಸಂಬಂಧಗಳು ಕಂಡು ಬರುತ್ತವೆ. ಈ ಪ್ರದೇಶದ ಪೌರ ಅಧಿಕಾರಿಗಳು ಮತ್ತು ಆಡಳಿತಗಾರರು ಪರಿಸ್ಥಿತಿಯನ್ನು ಕಾನೂನು - ಸುವ್ಯವಸ್ಥೆಯ ಸಮಸ್ಯೆಯನ್ನಾಗಿ ಪರಿವರ್ತಿಸಿದ್ದಾರೆ.

ಪ್ರಸ್ತುತ ಅಧ್ಯಯನವು ಕೆಲವು ನಿರ್ದಿಷ್ಟ ಅಂಶಗಳಿಂದಾಗಿ ಕಾಡು ಕುರುಬರ ಮೇಲೆ ಕೇಂದ್ರೀಕೃತವಾಗಿದೆ. ಇಲ್ಲವಾದರೆ, ಮೈಸೂರು ಜಿಲ್ಲೆಯಲ್ಲೇ ಸೋಲಿಗರು, ಯರವರು, ಹಕ್ಕಿ ಪಿಕ್ಕಿಗಳು ಮೊದಲಾದ ಹಲವು ಬುಡಕಟ್ಟುಗಳಿವೆ. ಕಾಡು ಕುರುಬರಲ್ಲೇ, ಬೆಟ್ಟ ಕುರುಬ, ಜೇನು ಕುರುಬ, ಮುಳ್ಳು ಕುರುಬ ಭೇದಗಳಿವೆ. ಅವರ ಸಮಸ್ಯೆಗಳು ಬೇರೆ ಬೇರೆ. ಆದ್ದರಿಂದ ಸಾಂವಿಧಾನಿಕ ಪ್ರಯೋಜನಗಳನ್ನು ಪಡೆಯಲು ಅವರು ಕೈಗೊಳ್ಳುವ ಕಾರ್ಯವಿಧಾನವು, ಪರಿಸ್ಥಿತಿಯ ಗ್ರಹಿಕೆ ಮತ್ತು ಅಗತ್ಯಗಳನ್ನು ಅವಲಂಬಿಸಿ ಬೇರೆ ಬೇರೆಯಾಗುತ್ತದೆ.

ಬುಡಕಟ್ಟಿಗರ ನಡುವೆ ಕೆಲಸ ಮಾಡುತ್ತಿರುವ ಸರಕಾರಿಯೇತರ ಸಂಘಗಳಿಗೆ ವಂದನೆಗಳು ಸಲ್ಲಬೇಕು, ಅವರು ಸಾಮಾನ್ಯ ತಿಳುವಳಿಕೆಯನ್ನು ಅವರಲ್ಲಿ ಮೂಡಿಸಿ ಸಾಂವಿಧಾನಿಕ ಅವಕಾಶಗಳ ಬಗೆಗೆ ಅವರಿಗೆ ತಿಳಿಸಿಕೊಟ್ಟಿದ್ದಾರೆ. ಎನ್.ಜಿ.ಓ ಗಳು ಎರಡು ಮುಖ್ಯವಾದ ಕ್ಷೇತ್ರಗಳಲ್ಲಿ ಮುಂದಡಿಯಿಟ್ಟಿದ್ದಾರೆ. ಅವು ಆರೋಗ್ಯ / ವೈದ್ಯಕೀಯ ಕಾಳಜಿ ಮತ್ತು ಶೈಕ್ಷಣಿಕ ಸೌಲಭ್ಯಗಳು. ಕಳೆದ ಕೆಲವು ದಶಕಗಳಿಂದಲೂ ಈ ಕೆಲಸವು ನಡೆದು ಬರುತ್ತಿದೆ. ಇದಕ್ಕೆ ಮುಂಚೆ ಬ್ರಿಟಿಷ್ ಆಡಳಿತವು ಸರ್ಕಾರಕ್ಕೆ ವರಮಾನವು ಧಾರಾಳವಾಗಿ ಹರಿದು ಬರುವಂತೆ ಕೆಲವು ಕಾನೂನುಗಳನ್ನು ಜಾರಿಗೊಳಿಸಿದ್ದಿತು. ಭಾರತವು ಸ್ವತಂತ್ರವಾದ ಮೇಲೆ, ಬ್ರಿಟಿಷರು ಹೇರಿದ್ದ ಕಾನೂನು ಕಟ್ಟಲೆಗಳು ಹಾಗೆಯೇ ಮುಂದುವರಿದುದು ಮಾತ್ರವಲ್ಲದೆ, ಹಿಂದಿಗಿಂತಲೂ ಕ್ರೂರವಾದ ಇನ್ನಷ್ಟು ಹೊಸ ಕಾನೂನುಗಳನ್ನು ಹೇರಲಾಯಿತು. ಈ ವೇಳೆಗೆ ಬಯಲು ನಾಡಿನಿಂದ ಜನರು ಬುಡಕಟ್ಟು ವಲಯಗಳಿಗೆ ವಗೈರೆ ಸಾಲ ಕೊಡುವವರಾಗಿ, ವ್ಯವಹಾರ ವ್ಯಾಪಾರ ಮಾಡುವ ಸಲುವಾಗಿ, ಅರಣ್ಯಾಧಿಕಾರಿಗಳ ಜೊತೆಗೆ ಗುತ್ತಿಗೆದಾರರಾಗಿ ನುಗ್ಗಿದರು. ಬುಡಕಟ್ಟಿಗರನ್ನು ಅನೇಕ ವಿಧವಾಗಿ ಶೋಷಿಸಿದರು / ಈಗಲೂ ಶೋಷಿಸುತ್ತಿದ್ದಾರೆ.

ಕರ್ನಾಟಕದಲ್ಲಿ ಅವರನ್ನು ಕಾಡುತ್ತಾ ಭೀತಿಗೊಳಪಡಿಸಿರುವವರು ಬಹುಮಟ್ಟಿಗೆ ಅರಣ್ಯಾಧಿಕಾರಿಗಳು ಎಂಬುದಾಗಿ ಮಾಹಿತಿದಾರರು ಸೂಚಿಸಿದ್ದಾರೆ. ಆದರೆ ಎನ್.ಜಿ.ಓ

ಗಳು ಕೆಲಸ ಮಾಡಲು ತೊಡಗಿದ ಮೇಲೆ ಬೇರೆ ರೂಪದ ಶೋಷಣೆಗಳು ಪೂರ್ತಿ ನಿರ್ಮೂಲವಾಗದಿದ್ದರೂ, ಕನಿಷ್ಠ ಪ್ರಮಾಣಕ್ಕಿಳಿದಿವೆ.

ಅಷ್ಟೇ ಕಳವಳಕಾರಿಯಾದ ಇನ್ನೊಂದು ಪ್ರಕ್ರಿಯೆ ಕಾಣಿಸಿಕೊಂಡಿದೆ. ತಾವು ಬುಡಕಟ್ಟಿನವರೆಂದು ಹೇಳಿಕೊಂಡು ಇತರರು, ಎಸ್.ಟಿ ಗಳಿಗೆ ಸಲ್ಲಬೇಕಾಗಿದ್ದ ಪ್ರಯೋಜನಗಳನ್ನು ಹಾರಿಸಿಕೊಂಡು ಹೋಗುವುದು. ಮೈಸೂರು ಜಿಲ್ಲೆಯಲ್ಲಿ ಹೇಗೆ ಪರಿವಾರ ಜಾತಿಯು ಬುಡಕಟ್ಟು ಬೆಳವಣಿಗೆಗೆ, ನಿರ್ದಿಷ್ಟವಾಗಿ ಶಿಕ್ಷಣ ಕ್ಷೇತ್ರದಲ್ಲಿ, ತಡೆಯಾಗಿದ್ದಾರೆ ಎಂಬುದನ್ನು ಮೊದಲೇ ತೋರಿಸಲಾಗಿದೆ. ಪರಿವಾರ ಜಾತಿಯ ಅಭ್ಯರ್ಥಿಗಳು ವ್ಯವಸ್ಥಿತರಾಗಿ, ತಮಗೆ ಬುಡಕಟ್ಟು ಪಟ್ಟಿಬೇಕು ಎಂದು ಒತ್ತಾಯ ಪಡಿಸುವುದಕ್ಕಿಂತಲೂ ಮೊದಲೇ, ವೈದ್ಯಕೀಯ ಮತ್ತು ಎಂಜಿನಿಯರಿಂಗ್ ಕಾಲೇಜುಗಳಲ್ಲಿನ ಸ್ಥಾನಗಳನ್ನು ಕಬಳಿಸಿಕೊಂಡಿದ್ದರು. ಕೆಲವು ವ್ಯವಸ್ಥಿತ ಪ್ರಯತ್ನಗಳಿಂದ ಬುಡಕಟ್ಟು ಎಂದು ಕರೆಸಿಕೊಳ್ಳಲು ಅವರು ಪ್ರಯತ್ನಿಸುತ್ತಿದ್ದಾರೆ. ಈಗಾಗಲೇ ಅವರ ಬೇಡಿಕೆ ಮಂಜೂರಾಗಿರದಿದ್ದರೆ, ಸದ್ಯದಲ್ಲೇ ಪ್ರಯತ್ನದಲ್ಲಿ ಅವರು ಯಶಸ್ಸುಗಳಿಸುತ್ತಾರೆ. ರಾಜ - ಪರಿವಾರ ಉಪವಿಭಾಗವು ತಾವು ಹಿಂದೆ ಅರಸರಾಗಿದ್ದುದಾಗಿ ಹೇಳಿಕೊಳ್ಳುತ್ತದೆ. ಆದರೆ ಈಗ ಅವರು ಸ್ಪರ್ಧೆಯಲ್ಲಿದ್ದಾರೆ. ಪರಿಸ್ಥಿತಿಯು ಹೀಗಿರುವಾಗ ಒಬ್ಬ ಅಸಲಿ ಬುಡಕಟ್ಟಿಗ ವೈದ್ಯನೋ ಎಂಜಿನಿಯರೋ ಅಥವಾ ಸ್ನಾತಕೋತ್ತರ ಪದವೀಧರನೋ ರೂಪುಗೊಂಡು ಬಂದನೆಂದರೆ ಅದೊಂದು ಪವಾಡವೇ ಆಗುತ್ತದೆ, ಅಥವಾ ಜಗತ್ತಿನ 'ಎಂಟನೆಯ ಅದ್ಭುತ' ವಾಗುತ್ತದೆ. ಪದವಿ, ಸ್ನಾತಕೋತ್ತರ ಪದವಿ, ವಿಶ್ವವಿದ್ಯಾನಿಲಯಕ್ಕೆ, ರಾಜ್ಯ ಸರಕಾರಿ ಇಲಾಖೆಗೆ, ಕೇಂದ್ರ ಸರಕಾರಿ ಇಲಾಖೆಗೆ ಸೇರ್ಪಡೆ - ಇಲ್ಲೆಲ್ಲಾ ಎಸ್‌ಟಿ ವರ್ಗವನ್ನು ಪರಿವಾರ ಜಾತಿಯ ಜನರೇ ಪ್ರತಿನಿಧಿಸಿದ್ದಾರೆ.

ಪರಿವಾರರ ಜೊತೆ ಈಗ ಕುರುಬರೂ ಕಣಕ್ಕಿಳಿದಿದ್ದಾರೆ, ಕಾಡು ಕುರುಬ ಸ್ಥಾನಮಾನವನ್ನೇ, ಅಂದರೆ ಸ್ಥಾನವನ್ನೇ ತಮಗೆ ಕೊಡಬೇಕೆಂದು ಒತ್ತಾಯ ಪಡಿಸುತ್ತಿದ್ದಾರೆ. ಅಧಿಕಾರ ಕೇಂದ್ರಗಳು ಬೇರೆ ಬೇರೆ ಹಂತಗಳಲ್ಲಿ ಕುರುಬರ ಪರವಾಗಿರುವುದರಿಂದ ಅದೂ ಕಾರ್ಯಗತಗೊಳ್ಳಬಹುದು. ಇದೂ ಅಷ್ಟೆ, ಕಾಡು ಕುರುಬರ ಗತಿಯನ್ನು ಮುಚ್ಚಿ ಮೊಹರು ಹಾಕಿಬಿಡುತ್ತದೆ. ಒಬ್ಬ ಕಾಡು ಕುರುಬ ವೈದ್ಯನನ್ನೋ ಎಂಜನಿಯರನನ್ನೋ, ಸರಕಾರಿ ಇಲಾಖೆಯ ಒಬ್ಬ ಅಧಿಕಾರಿಯನ್ನೋ ಯೋಚಿಸಿಕೊಳ್ಳುವುದೂ ಕಷ್ಟವಾಗುತ್ತದೆ. ದಲಿತ ಕ್ರಿಶ್ಚಿಯನರೂ ಎಸ್ ಟಿ ಪಟ್ಟಿಕೆಗಾಗಿ ಹೋರಾಡುತ್ತಿದ್ದಾರೆ. ಕ್ರೈಸ್ತಧರ್ಮಕ್ಕೆ ಪರಿವರ್ತಿತರಾದ ಅಸ್ಪೃಶ್ಯ ಮತಾಂತರಿಗಳು ಈಗ ಎಸ್ ಸಿ ಗಳಿಗೆ ಸಮಾನವಾದ ಮೀಸಲಾತಿ ಸೌಲಭ್ಯಗಳನ್ನು ಬಯಸುತ್ತಿದ್ದಾರೆ. ಈಗಾಗಲೇ ಮಹಾರಾಷ್ಟ್ರದ ನವಬೌದ್ಧರು ಸಾಂವಿಧಾನಿಕ ಪ್ರಯೋಜನಗಳನ್ನು ಪಡೆದಿರುವ ಉದಾಹರಣೆಯಿರುವುದರಿಂದ, ಇವರ ಬೇಡಿಕೆಯೂ ಈಡೇರಬಹುದು.

"ಸಂರಕ್ಷಕ ತಾರತಮ್ಯ" ನೀತಿಯ ನಿಷ್ಫಳ ಫಲಿತಾಂಶ, ಎಸ್.ಸಿ, ಎಸ್.ಟಿ ಗಳ ಉದ್ಧಾರ ಕಳೆದ ನಾಲ್ಕು ದಶಕಗಳಿಂದ ಅನೇಕ ಕವಲುಗಳನ್ನು ಕಂಡಿದೆ. ದೇಶದ ಬೇರೆ

ಬೇರೆ ಜಾತಿ ಪಂಗಡಗಳು ತಮ್ಮನ್ನು ಎಸ್.ಸಿ / ಎಸ್.ಟಿ ವರ್ಗಕ್ಕೆ ಸೇರಿಸಬೇಕೆಂದು ಸರಕಾರವನ್ನು ಒತ್ತಾಯ ಪಡಿಸುವಂತೆ ಪ್ರೋತ್ಸಾಹಿಸುತ್ತಿದೆ. ಈಗಾಗಲೆ ಕರ್ನಾಟಕದಲ್ಲಿ ಬೇರೆ ಕಡೆಗಳಲ್ಲೂ ಕೆಲವು ಪೂರ್ವ ನಿದರ್ಶನಗಳಿರುವುದರಿಂದ ಹಾಗೂ ಈ ಪ್ರಕ್ರಿಯೆಯನ್ನು ತಡೆಯುವುದು ತುಂಬಾ ಕಷ್ಟ. ರಾಜಕೀಯ ಮುಖಂಡರು ಸಾಮಾನ್ಯವಾಗಿ ಮತದಾರರ ಅಸಮಾಧಾನವನ್ನು ಕಟ್ಟಿಕೊಳ್ಳಲು ಸಿದ್ಧರಾಗಿರುವುದಿಲ್ಲ. ಒತ್ತಡವನ್ನು ಹಾಗೆಯೇ ಉಳಿಸಿಕೊಂಡ ಪಕ್ಷದಲ್ಲಿ ಹೋರಾಟದಲ್ಲಿ ತೊಡಗಿರುವ ಗುಂಪುಗಳು ತಮ್ಮ ಆಸೆಯನ್ನು ಈಡೇರಿಸಿಕೊಳ್ಳುತ್ತಾರೆ.

ಮಂಡಲ್ ಆಯೋಗದ ಕಾಲದಿಂದಲೂ ಅಖಿಲ ಭಾರತ ಮಟ್ಟದಲ್ಲಿ ಬಹು ಬೇಡಿಕೆಯಲ್ಲಿರುವುದು ಹಿಂದುಳಿದ ವರ್ಗ ಎಂಬ ಹಣೆಪಟ್ಟಿ. ದಕ್ಷಿಣ ಭಾರತೀಯ ಹಿಂದುಳಿದ ವರ್ಗಗಳ ಅಥವಾ ಬ್ರಾಹ್ಮಣೇತರ ಚಳುವಳಿಯು (South Indian Backward Classes or Non - Brahmin Movement) ಆರು ದಶಕಗಳಿಗಿಂತ ಹಿಂದಿನಿಂದಲೂ ನಡೆಯುತ್ತಿದೆ. ಇಂದಿನ ತಮಿಳುನಾಡಾದ ಹಿಂದಿನ ಮದರಾಸು ಪ್ರೆಸಿಡೆನ್ಸಿಯಲ್ಲಿ ಶೂದ್ರವರ್ಣದ ಪರವಾಗಿ ತೋರಿಸಿದ ಈ ತಾರತಮ್ಯದಿಂದಾಗಿ, ದಕ್ಷಿಣ ಭಾರತೀಯ ಬ್ರಾಹ್ಮಣರು ಉತ್ತರ ಭಾರತದ ಕಡೆಗೆ ದೇಶಾಂತರ ಹೊರಟು ಹೋಗಲು ದಾರಿಯಾಯಿತು. ಕೇಂದ್ರ ಸರಕಾರಿ ಕಚೇರಿಗಳಲ್ಲಿ, ವಿಶ್ವವಿದ್ಯಾನಿಲಯಗಳಲ್ಲಿ, ಉತ್ತರದ ರಾಜ್ಯಗಳ ವಿಶೇಷವಾಗಿ ದೆಹಲಿಯ ಅನೇಕ ಅಧಿಕಾರಿಗಳಲ್ಲಿ ಬ್ರಾಹ್ಮಣ ಅಭ್ಯರ್ಥಿಗಳು, ಇತ್ತೀಚಿನವರೆಗೂ ತುಂಬಿಕೊಂಡಿರುತ್ತಿದ್ದರು. ಆದರೆ ಮಂಡಲ್ ಆಯೋಗದ ಶಿಫಾರಸುಗಳಿಂದಾಗಿ ಅವುಗಳನ್ನು ಕಾರ್ಯಗತಗೊಳಿಸಿದುದರಿಂದಾಗಿ ಎಷ್ಟೋ ಬದಲಾವಣೆಗಳು ಗೋಚರಿಸುತ್ತಿವೆ.

ಕೇಂದ್ರ ವಿಶ್ವವಿದ್ಯಾನಿಲಯಗಳು ಮತ್ತು ಸಂಸ್ಥೆಗಳು ಬೋಧಕ ಹುದ್ದೆಗಳಿಗೆ ನೇಮಿಸಿಕೊಳ್ಳುವಾಗ ಎಸ್.ಸಿ / ಎಸ್.ಟಿ ಮೀಸಲಾತಿ ನೀತಿಯನ್ನು ಅನುಸರಿಸಿಲ್ಲ ವಾದುದರಿಂದ, ಈಗ ಅತ್ಯಂತ ಪ್ರಬಲಪಂಗಡವಾಗಿರುವ ಹಿಂದುಳಿದವರ್ಗಗಳ ಒತ್ತಡದ ಹೊಡೆತವನ್ನು ಅಲಕ್ಷಿಸುವುದು ಸಾಧ್ಯವಿಲ್ಲವಾಗಿದೆ. ಷರತ್ತು ವಿಧಿಸುವ ಸ್ಥಾನವನ್ನು ಪಡೆಯಲೋಸುಗ ದೊಡ್ಡ ಪಂಗಡಗಳೊಂದಿಗೆ ಸೇರಿ, ತಮ್ಮನ್ನು "ಅಖಿಲಭಾರತ ಸಂಸ್ಥೆ" ಎಂದು ಕರೆದುಕೊಂಡು ಒತ್ತಾಯಪಡಿಸುತ್ತಿದ್ದಾರೆ. ಮೂಲತಃ ಅಂತಹ ಒಂದು ನಿರ್ದಿಷ್ಟ ಜಾತಿ ಪಂಗಡವು ಒಂದು ಸಣ್ಣ ಪ್ರದೇಶಕ್ಕೆ, ರಾಜ್ಯಕ್ಕೇ ಸೀಮಿತಗೊಂಡಿರುತ್ತದೆ.

ನಿದರ್ಶನ ಕೊಡುವುದಾದರೆ ಅಖಿಲ ಭಾರತ ವೀರಶೈವ ಮಹಾಸಭಾ ಒಂದು ರಾಜ್ಯ ಮಟ್ಟದ, ಅದೇ ಹೆಸರಿನ ಸಂಸ್ಥೆ. ಉತ್ತರ ಭಾರತದಲ್ಲಿ ವೀರಶೈವರು ಕಂಡುಬರುವುದಿಲ್ಲ. ಆದರೂ ಸಂಸ್ಥೆಯನ್ನು ರಾಷ್ಟ್ರಮಟ್ಟದ ಸಂಸ್ಥೆಯೆಂದು ಹೆಸರಿಸಲಾಗಿದೆ. ಹಾಗೆಂದು ಉಪ - ಜಾತಿ ವ್ಯತ್ಯಾಸಗಳೆಲ್ಲವೂ ಮಾಯವಾಗಿಲ್ಲ, ಅದಕ್ಕೆ ಬದಲು ಕೆಲವು ಇತರ ಸಂದರ್ಭಗಳಲ್ಲಿ ವ್ಯತ್ಯಾಸಗಳನ್ನು ಒತ್ತಿ ಹೇಳಲಾಗುತ್ತದೆ. ಹಾಗಾಗಿ ಮೇಲು ಹಂತದಲ್ಲಿರುವ ತೋರಿಕೆಯ ಏಕತೆಯು ಇತರ ಹಂತಗಳಲ್ಲಿ ಬಹುವಾಗಿ ವಿಚ್ಛಿದ್ರಕ ಶಕ್ತಿಯಾಗಿದೆ.

ದೇಶದ ಜನತೆಯು ಬೇರೆ ಬೇರೆ ಕಾರಣಗಳಿಂದಾಗಿ ಹಲವು ಹಂತಗಳಲ್ಲಿ ಒಡೆದು ಬೇರೆ ಬೇರೆಯಾಗಿರುವುದನ್ನು ನಾವು ನೋಡಬಹುದು. ಭಾಷಾವಾರು ವಿಭಾಗಗಳಿವೆ, ಜಾತಿ, ಉಪಜಾತಿ, ಧಾರ್ಮಿಕ ಪಂಗಡಗಳು - ಹೀಗೆ ಹಲವಾರು ಮೀಸಲಾತಿ ನೀತಿಯಿಂದಾಗಿ ಮೇಲೆದ್ದಿರುವ ಜಾತಿ - ಉಪಜಾತಿಗಳ ಸಂಖ್ಯೆ ನಂಬಲಾಗದಷ್ಟು ಅಧಿಕವಾಗಿದೆ. ಭಿನ್ನತೆಗಳನ್ನು ಒತ್ತಿ ಹೇಳುತ್ತಾ ಪಂಗಡಗಳು ಮತ್ತೆ ಮತ್ತೆ ಒಡೆಯುತ್ತಿವೆ. ಅದರ ಬೆನ್ನಿಗೇ ಹಲವು ವಿಧಾನಗಳಿಂದ ಹಿಂದುಳಿವಿಕೆಯ ಲಕ್ಷಣಗಳನ್ನು ಪ್ರದರ್ಶಿಸಲಾಗುತ್ತದೆ. ಬಹುಶಃ ಸಮಕಾಲೀನ ಭಾರತದಲ್ಲಿ ಮೀಸಲಾತಿ ನೀತಿಯನ್ನು ದೇವರು ಕೊಟ್ಟ ವರ ಪ್ರಸಾದವೆಂದು ಭಾವಿಸಲಾಗಿದೆ. ಜಾತ್ಯಾತೀತ ಪ್ರಜಾಪ್ರಭುತ್ವ ಗಣರಾಜ್ಯಕ್ಕೆ ಬದಲಾಗಿ ಜಾತಿ ಮತ್ತು ಮತೀಯ ಭಾವನೆಗಳನ್ನೂ ಪ್ರೋತ್ಸಾಹಿಸಲಾಗುತ್ತಿದೆ.

ಈ ಅರ್ಥದಲ್ಲಿ "ಸಂರಕ್ಷಕ ತಾರತಮ್ಯ" ವು ಸಮಕಾಲೀನ ಭಾರತದಲ್ಲಿ ಕಂಡು ಬಂದಿರುವ ಅತ್ಯಂತ ದೊಡ್ಡ ವಿಭಜಕ ಶಕ್ತಿಯಾಗಿದೆ. ಜಾತೀಯತೆಯು ಅಳತೆ ಮೀರಿ ಬೆಳೆದಿದೆ. ಭಾರತದ ಅನೇಕ ಭಾಗಗಳಲ್ಲಿ ಸಾಂಪ್ರದಾಯಿಕವಾಗಿ ಉಪನಾಮಗಳು ಜಾತಿ ಅಥವಾ ಉಪಜಾತಿಯನ್ನು ಸೂಚಿಸುತ್ತಿತ್ತು. ಈಗ ಈ ಪ್ರವೃತ್ತಿ ಅಧಿಕವಾಗುತ್ತಿದೆ. ಜನರ ಜಾತಿಯ ಆಧಾರದಿಂದ ಉಪನಾಮಗಳನ್ನು ಸೇರಿಸಿಕೊಳ್ಳಲಾಗುತ್ತಿದೆ. ಜಾತಿ ಸಂಘಗಳು ದೇಶಾದ್ಯಂತ ಹುಟ್ಟಿಕೊಂಡಿವೆ. ಬ್ರಾಹ್ಮಣರಿಂದ ಮೊದಲುಗೊಂಡು ಪರಿಶಿಷ್ಟ ಜಾತಿಗಳವರೆಗೆ, ಖಚಿತವಾದ ಉದ್ದೇಶವುಳ್ಳ ಸುವ್ಯವಸ್ಥಿತ ಸಂಘಗಳು ಕಂಡುಬರುತ್ತವೆ.

ದೇಶದ ಇತಿಹಾಸದಲ್ಲಿ ಹಿಂದೆಂದೂ ಇಂಥ ಘಟನೆಗಳು ಸಂಭವಿಸಿರಲಿಲ್ಲ. ಸರ್ವೋನ್ನತ ನ್ಯಾಯಾಲಯವು ಮಧ್ಯಪ್ರವೇಶ ಮಾಡಿ ಮೀಸಲಾತಿಯನ್ನು ಶೇ. 50% ಕ್ಕೆ ಮಿತಿಗೊಳಿಸಬೇಕೆಂದು, ಆದೇಶ ನೀಡದೆ ಹೋಗಿದ್ದಿದ್ದರೆ, ವಿವಿಧ ರಾಜಕೀಯ ಮುಖಂಡರು ಮೀಸಲಾತಿಯ ಪಾಲನ್ನು ಖಂಡಿತವಾಗಿಯೂ ಇನ್ನೂ ಹೆಚ್ಚಿಸುತ್ತಿದ್ದರು. ಅವರಲ್ಲಿ ಕೆಲವರು ಆರ್ಥಿಕ ಉದಾರೀಕರಣ, ಖಾಸಗೀಕರಣ ಮತ್ತು ಬಹು ರಾಷ್ಟ್ರೀಯ ಕಂಪೆನಿಗಳ ಆಗಮನ ಇವು ಹೇಗೆ ಮೀಸಲಾತಿ ನೀತಿಯನ್ನು ಅಸ್ತವ್ಯಸ್ತಗೊಳಿಸುತ್ತವೆ ಎಂಬುದನ್ನು ಗ್ರಹಿಸಿದ್ದಾರೆ. ಆದ್ದರಿಂದ, ಬಹುರಾಷ್ಟ್ರೀಯ ಕಂಪೆನಿಗಳು ಮತ್ತು ಖಾಸಗಿ ಉದ್ಯಮಗಳು ಕೂಡ ಮೀಸಲಾತಿ ನೀತಿಗೆ ಒಳಪಡಬೇಕು ಎಂದು ಕೂಗೆಬ್ಬಿಸಿದ್ದಾರೆ.

ಜಾತಿ ಪದ್ಧತಿಯಂತೆಯೇ, ಜಾತಿಯನ್ನು ಆಧರಿಸಿದ ಮೀಸಲಾತಿಗಳೂ ದೇಶಕ್ಕೆ ವಿಷದಂತೆ ಅನರ್ಥಕಾರಿಯಾಗಿ ಪರಿಣಮಿಸುತ್ತಿವೆ. ನಿರಂತರವಾಗಿ ವಿಸ್ತಾರವಾಗುತ್ತ, ಒಡೆದು ಚೂರುಚೂರಾಗುತ್ತಿರುವ ಜಾತಿ ಪಂಗಡಗಳಿಗೆ ಮೀಸಲಾತಿಯು ಅನ್ಯಾಯವಾಗುವಂತೆ ಹೇಗೆ ತಾನೆ ಮಾಡಬಹುದು? ನೆನ್ನೆ ಮೊನ್ನೆಯ ವರ್ಷಗಳಲ್ಲಿ ಜಾತಿಗಳು ಸುಮಾರು 3000 ಇವೆ ಎಂದು ಅಂದಾಜು ಮಾಡಲಾಗಿತ್ತು. ಈಗ ಆ ಸಂಖ್ಯೆ ದ್ವಿಗುಣಿಸಿರಬಹುದು, ಪ್ರತಿದಿನವೂ ಹೊಸ ಹೊಸದಾಗಿ ಜಾತಿ ಅಥವಾ ಉಪಜಾತಿ ಕಾಣಿಸಿಕೊಳ್ಳುತ್ತಿದೆ.

ಇದುವರೆಗೂ ಮೀಸಲಾತಿ ನೀತಿಯ ಪರ ಮತ್ತು ವಿರುದ್ಧ ಪರಿಣಾಮಗಳ ಮೌಲ್ಯ ಮಾಪನವು ನಡೆದಿಲ್ಲ. ಈ ಕ್ರಮಗಳಿಂದ ಪ್ರಯೋಜನವನ್ನು ಪಡೆಯುತ್ತಿರುವವರು

ಯಾರು? ಎಸ್.ಸಿ / ಎಸ್.ಟಿ ಗಳಿಗೆ ಸಂಬಂಧಿಸಿದಂತೆ ಈ ವಿಷಯದಲ್ಲಿ ಖಚಿತವಾದ ಅಂಕಿ ಅಂಶಗಳು ದೊರಕುವುದಿಲ್ಲ; ಬಿ.ಸಿ / ಓ.ಬಿ.ಸಿ / ಎಸ್.ಇ.ಬಿ.ಸಿ ಗಳಿಗೆ ಸಂಬಂಧಿಸಿದಂತೆಯೂ ಸಿಕ್ಕುವುದೇ ಇಲ್ಲ. ಭ್ರಷ್ಟಾಚಾರ ಮತ್ತು ಸ್ವಜನ ಪಕ್ಷಪಾತಗಳು ಸಂಚುಗಳಾಗಿ ಬಲಿತು ದೇಶದಲ್ಲಿ ಜೀವನದ ಎಲ್ಲ ಕ್ಷೇತ್ರಗಳಿಗೂ ಕಳ್ಳಿಯಂತೆ ಹಬ್ಬಿಕೊಂಡಿರುವುದರಲ್ಲಿ ಏನು ಆಶ್ಚರ್ಯವಿದೆ? ಬಿ. ಸಿ. ಗಳ ಪೈಕಿ ಮೀಸಲಾತಿ ಸೌಲಭ್ಯಗಳಿಗೆ ಕಡಮೆ ಅರ್ಹತೆಯುಳ್ಳವರಿಂದ ಹೆಚ್ಚು ಅರ್ಹತೆಯುಳ್ಳವರನ್ನು ಬೇರ್ಪಡಿಸಬೇಕೆಂದು ಸರ್ವೋನ್ನತ ನ್ಯಾಯಾಲಯವು ನೀಡಿರುವ ಆದೇಶವು ಕಾರ್ಯಸಾಧ್ಯವಾಗಿಲ್ಲ ಅಷ್ಟೆ.

ಯಾರೊಬ್ಬರೂ, ಸರಕಾರ ಕೂಡ, ನಿರಂತರವಾಗಿ ಬೆಳೆಯುತ್ತಿರುವ ಬೇಡಿಕೆಯನ್ನು ನಿಯಂತ್ರಿಸುವ ಸಲುವಾಗಿ ಪರಿಶಿಷ್ಟದಿಂದ ಪಂಗಡಗಳನ್ನು ತೆಗೆಯುವ ಒಂದು ವಿಧಾನವನ್ನು ಎಂದೂ ಯೋಚಿಸಿಲ್ಲ. ಅಥವಾ ಮೀಸಲಾತಿ ನೀತಿಯ ಪರಿಣಾಮವನ್ನು ಮೌಲ್ಯಮಾಪನ ಮಾಡುವ ಗೋಜಿಗೆ ಹೋಗಿಲ್ಲ. ಅದಕ್ಕೆ ಬದಲಾಗಿ, ಮೀಸಲಾತಿಗಾಗಿ ಬೇಡಿಕೆ, ಎಲ್ಲಾ ಕ್ಷೇತ್ರಗಳಲ್ಲೂ ಇನ್ನೂ ಇನ್ನೂ ಅಧಿಕವಾಗುತ್ತಿದೆ. ಬೇಡಿಕೆ ಎಲ್ಲಾ ರಂಗುಗಳ ರಾಜಕಾರಣಿಗಳಿಗೆ ದೀರ್ಘಾಯುಷ್ಯವನ್ನು ಕೊಡುತ್ತಿವೆ. ಸೌಲಭ್ಯಗಳಿಗಾಗಿ ಹಾತೊರೆಯುವ ಪಂಗಡಗಳಿಗೆ ಮಾತಿನ ಮೂಲಕ ಬೆಂಬಲವನ್ನು ವ್ಯಕ್ತಪಡಿಸುತ್ತಾ ರಾಜಕಾರಣಿಗಳು ಜನಪ್ರಿಯರಾಗುತ್ತಾ ತಮ್ಮ ರಾಜಕೀಯ ಅದೃಷ್ಟವನ್ನು ಬೆಳಸಿಕೊಂಡಿದ್ದಾರೆ. ತಮ್ಮ ಹಿಂದೆ ಒಂದು ಅನುಯಾಯಿಗಳ ತಂಡವನ್ನು ನಿರ್ಮಿಸಿಕೊಂಡು ಸರಕಾರದೊಂದಿಗೆ ಚೌಕಾಶಿ ಮಾಡುವ ಘಟ್ಟವನ್ನು ಅವರು ತಲುಪಿದ್ದಾರೆ. ನಿರ್ದಿಷ್ಟ ಪಂಗಡಗಳು ಯಾವುದೇ ನಷ್ಟವನ್ನು ಅನುಭವಿಸಿದ್ದರೂ, ಮುಖಂಡರಾದ ಈ ರಾಜಕಾರಣಿಗಳಿಗೆ ಮಾತ್ರ ಯಾವುದೇ ತೊಂದರೆಯಾಗುವುದಿಲ್ಲ ಅಷ್ಟೆ.

ಹಿಂದೆ, ದಕ್ಷಿಣ ಭಾರತದಲ್ಲಿ ಬ್ರಾಹ್ಮಣ - ವಿರೋಧೀ ಚಳುವಳಿಯು ಬಲಿಯುತ್ತಿದ್ದಾಗ, ಬಿ. ಸಿ. ವರ್ಗಕ್ಕೆ ಸೇರಿದ ಕೆಲವು ಶ್ರೀಮಂತ ಶಿಕ್ಷಣ ಪ್ರೇಮಿಗಳು ಪಟ್ಟಣಗಳಲ್ಲಿ ಮತ್ತು ನಗರಗಳಲ್ಲಿ ಬಿ. ಸಿ. ವಿದ್ಯಾರ್ಥಿಗಳ ಉಪಯೋಗಕ್ಕಾಗಿ ಜಾತಿಯ ಹಾಸ್ಟೆಲುಗಳನ್ನು ಪ್ರಾರಂಭಿಸಿದರು. ಈ ಹಾಸ್ಟೆಲುಗಳಿಗೆ ಕಾಲಕ್ರಮದಲ್ಲಿ ಸರಕಾರದಿಂದ ಹಣಕಾಸು ನೆರವು ದೊರಕತೊಡಗಿತು. ಹಾಗಾಗಿ ಅವು ನೆರವು ಪಡೆದ ಸಂಸ್ಥೆಗಳಾದವು. ಅಂದರೆ, ಆ ಹಾಸ್ಟೆಲುಗಳನ್ನು ನಡೆಸಲು ಆಗುತ್ತಿದ್ದ ವೆಚ್ಚವನ್ನು ಸರಕಾರವೇ ನೀಡುತ್ತಿತ್ತು. ಕರ್ನಾಟಕ ಒಂದೇ ಏಕೆ, ದಕ್ಷಿಣ ಭಾರತದ ಎಲ್ಲಾ ನಗರಗಳು ಮತ್ತು ಪಟ್ಟಣಗಳಲ್ಲಿ ಸರಕಾರಿ ಹಣದಿಂದ ನಡೆಯುವ ಜಾತಿ ವಿದ್ಯಾರ್ಥಿ ನಿಲಯಗಳು ತುಂಬಿಹೋದುವು. ಬಿ.ಸಿ, ಎಸ್.ಸಿ, ಎಸ್.ಟಿ ವಿದ್ಯಾರ್ಥಿಗಳಿಗಾಗಿ ಸರಕಾರವೇ ಜಾತಿ ಹಾಸ್ಟೆಲುಗಳನ್ನು ತೆರೆಯುತ್ತಿರುವುದು ಈಚಿನ ವಿದ್ಯಮಾನ.

ಹಾಸ್ಟೆಲುಗಳಂತೆಯೇ ಈಗ ನಿರ್ದಿಷ್ಟ ಜಾತಿ ಮುಖಂಡರು ಉನ್ನತ ಶಿಕ್ಷಣ ಸಂಸ್ಥೆಗಳನ್ನೂ, ಬಾಲೋದ್ಯಾನಗಳನ್ನೂ ಪ್ರಾರಂಭಿಸುತ್ತಿದ್ದಾರೆ. ಈ ಸಂಸ್ಥೆಗಳು ಆ ನಿರ್ದಿಷ್ಟ

ಜಾತಿಯ ಅಗತ್ಯಗಳನ್ನು ಪೂರೈಸಿಯೇ ತೀರುತ್ತವೆ ಎಂದೇನಿಲ್ಲ. ಬದಲಾಗಿ ಅವು ವ್ಯಾಪಾರ ವಹಿವಾಟು ಕೇಂದ್ರಗಳಾಗಿವೆ. ಧಡೂತಿಯಾದ ಕಾಣಿಕೆಗಳು, ಕ್ಯಾಪಿಟೇಷನ್ ಶುಲ್ಕಗಳು, ಬೋಧನ ಶುಲ್ಕಗಳು ಇವುಗಳನ್ನು ವಿದ್ಯಾರ್ಥಿಗಳಿಂದ ನಿರ್ದಾಕ್ಷಿಣ್ಯವಾಗಿ ವಸೂಲು ಮಾಡಲಾಗುತ್ತದೆ. ಕಾಲಕ್ರಮದಲ್ಲಿ ಈ ಸಂಸ್ಥೆಗಳಿಗೂ ಸರಕಾರದ ಧನ ಸಹಾಯವು ದೊರಕುತ್ತದೆ. ಈ ಸಂಸ್ಥೆಗಳು ಲಕ್ಷಣಥಲ್ಲೇ ಶ್ರೀಮಂತರ ಪರವಾದವು, ಬಡವರ್ಗಗಳಿಗೆ ಸೇರಿದ ವಿದ್ಯಾರ್ಥಿಗಳು ಅಲ್ಲಿ ಸೇರಿಕೊಳ್ಳುವ ಆಸೆಯನ್ನೇ ಇಟ್ಟುಕೊಳ್ಳುವಂತಿಲ್ಲ. ಏನೇ ಇರಲಿ, ಕಳೆದ 4-5 ವರ್ಷಗಳ ಅವಧಿಯಲ್ಲಿ ನ್ಯಾಯಾಲಯಗಳು ಇಲ್ಲೂ ಮಧ್ಯಪ್ರವೇಶ ಮಾಡಿ, ಈ ಸಂಸ್ಥೆಗಳಿಗೆ ಪ್ರವೇಶ ನೀಡುವಿಕೆ, ವಿವಿಧ ವರ್ಗಗಳ ಪಾಲು, ಶುಲ್ಕ ವಿನ್ಯಾಸ ಇತ್ಯಾದಿ ವಿಚಾರಗಳಲ್ಲಿ ಮ್ಯಾನೇಜ್‌ಮೆಂಟುಗಳಿಗೆ ಆದೇಶ ನೀಡಬೇಕಾದ ಪರಿಸ್ಥಿತಿ ಬಂದಿದೆ. ಕರ್ನಾಟಕದಲ್ಲಿ 1940 ರ ಸುಮಾರಿನಲ್ಲಿ ಬ್ರಾಹ್ಮಣರು ಮೊದಲು ಈ ಪ್ರವೃತ್ತಿಯನ್ನು ಪ್ರಾರಂಭಿಸಿದರು. ಇಂದು ಜೈನರು, ಲಿಂಗಾಯಿತರು, ಒಕ್ಕಲಿಗರು, ಕುರುಬರು, ಕ್ರಿಶ್ಚಿಯನ್ನರು, ಮುಸ್ಲಿಮರು, ಕೊನೆಗೆ ಪರಿಶಿಷ್ಟ ಜಾತಿಗಳೂ ಕೂಡ ಶಿಕ್ಷಣ ಸಂಸ್ಥೆಗಳನ್ನು ವಿಶೇಷವಾಗಿ ಮೆಡಿಕಲ್ ಮತ್ತು ಎಂಜಿನಿಯರಿಂಗ್ ಕಾಲೇಜುಗಳನ್ನು ಪ್ರಾರಂಭಮಾಡಿವೆ. ಇದು ಹಣವನ್ನು ಸಂಗ್ರಹಿಸುವ ದಾರಿಯಾಗಿದೆ. ಈ ಸಂಸ್ಥೆಗಳಿಗೆ ಮನ್ನಣೆ ನೀಡಿಯಾಗಿರುವುದರಿಂದ ಸರಕಾರವು ಹಿಂದೆ ಹೋಗುವ ಹಾಗಿಲ್ಲ. "ಸಂರಕ್ಷಕ ತಾರತಮ್ಯ"ಕ್ಕಾಗಿ ಹಂಬಲಿಸುವುದು ಒಂದು ತರ್ಕಬದ್ಧ ಕ್ರಮವಾಗಿದೆ.

ವಾಸ್ತವವಾಗಿ ಜಾತಿ ಪದ್ಧತಿಯು ಹಲವು ಶತಮಾನಗಳಿಂದ ಒಂದೇ ಸ್ಥಿತಿಯಲ್ಲಿ ಜಡವಾಗಿ ನಿಂತಿಲ್ಲ. 'ಶುದ್ಧ' ಜಾತಿ ಎನ್ನುವುದು ಇಲ್ಲವೇ ಇಲ್ಲ. ಚತುರ್ವರ್ಣವ್ಯವಸ್ಥೆಯ ಪ್ರತಿಯೊಂದು ವರ್ಣದಲ್ಲೂ ಜಾತಿ ಮತ್ತು ಉಪಜಾತಿಗಳ ಸಂಖ್ಯೆ ಹಾಗೂ ಪಂಚಮ ಪಂಗಡಗಳು ಬೇರೆ ಬೇರೆ ಭಾಗಗಳಲ್ಲಿ ನಡೆದ ವಿಭಜನೆಗಳನ್ನೂ ಬೆಸುಗೆಗಳನ್ನೂ ಸೂಚಿಸುತ್ತವೆ. ಈ ಬಿರುಕು ಮತ್ತು ಬೆಸುಗೆಗಳ ಪ್ರಕ್ರಿಯೆ ಅನೇಕ ಶತಮಾನಗಳಿಂದ ಕಾರ್ಯನಿರತವಾಗಿದೆ. ಸಂಸ್ಕೃತೀಕರಣ ಇತರ ಜಾತಿಗಳು ಬ್ರಾಹ್ಮಣರನ್ನು ಅನುಕರಿಸುವುದು ಮತ್ತು ಅವರೊಂದಿಗೆ ಪೈಪೋಟಿ ನಡೆಸುವುದು ಇಷ್ಟೇ ಆಗಿದ್ದಿದ್ದರೆ, ಬ್ರಾಹ್ಮಣರಲ್ಲೇ ಅಪಾರ ಸಂಖ್ಯೆಯ ಜಾತಿ, ಉಪಜಾತಿಗಳನ್ನು ವಿವರಿಸುವುದು ಕಷ್ಟವಾಗುತ್ತದೆ. ಅವರಲ್ಲೇ ಒಂದು ಅನುಕ್ರಮಿಕ ಶ್ರೇಣಿ ರೂಪುಗೊಂಡಿದೆ. ಅವರಲ್ಲೇ ಪರಸ್ಪರ ಭೇದಗಳಿವೆ, ಹೀಗಿರುತ್ತಾ ಆಚರಣೆಗಳ ಪರಿಶುದ್ಧಿ ಎನ್ನುವುದು ದೂರವೇ ಉಳಿಯಿತು. ಬ್ರಾಹ್ಮಣರು ಒಂದು ಬೃಹತ್ ಕಲ್ಲುಬಂಡೆಯಲ್ಲ. ಅವರ ಸುತ್ತಲೂ ಅಷ್ಟೊಂದು ನಿಗೂಢತೆ, ಗೋಪ್ಯತೆ ಸುತ್ತಿಕೊಂಡಿರುವಾಗ ಇತರರು ಅವರನ್ನು ಎಷ್ಟು ಮಟ್ಟಿಗೆ ಅನುಕರಿಸಬಲ್ಲರು, ಎಷ್ಟು ಮಟ್ಟಿಗೆ ಯಶಸ್ವಿಯಾಗಬಲ್ಲರು?

ಕಾಶ್ಮೀರದಿಂದ ಬಂಗಾಳದವರೆಗೆ, ಒರಿಸ್ಸಾ, ಕರ್ನಾಟಕ, ಇನ್ನೂ ಕೆಳಗೆ ದಕ್ಷಿಣದವರೆಗೆ ಮಾಂಸ - ಮೀನು ತಿನ್ನುವ ಬ್ರಾಹ್ಮಣರಿದ್ದಾರೆ. ಅಪರಕರ್ಮಗಳಲ್ಲಿ

ನಿಷ್ಣಾತರಾದ ಮಹಾ ಬ್ರಾಹ್ಮಣರಿದ್ದಾರೆ, ಕರ್ನಾಟಕದ ಮಾರ್ಕ ಬ್ರಾಹ್ಮಣರಿದ್ದಾರೆ. ಇವರಿಗೆ ಇರುವ ಸ್ಥಾನಮಾನ ಕೆಳಮಟ್ಟದ್ದು. ಬ್ರಾಹ್ಮಣ ಜಾತಿ ಪಂಗಡಕ್ಕೆ ಹೊಸ ಸೇರ್ಪಡೆ ಅಯ್ಯಂಗಾರರು, ರಾಮಾನುಜರ ಕಾಲದಿಂದ. ಕೊಡಗರು ಅಮ್ಮಾ ಕೊಡಗಿಗಳು 19 ನೆಯ ಶತಮಾನದ ಉತ್ತರಾರ್ಧದಿಂದ, ಬ್ರಾಹ್ಮಣರೆನಿಸಿಕೊಂಡವರು ಕೊಡಗರಾದರೋ ಮೂಲತಃ ಬುಡಕಟ್ಟು ಜನರು. ಯಾವ ಬ್ರಾಹ್ಮಣ ಜಾತಿ ಅಥವಾ ಉಪಜಾತಿ - ಪಂಗಡವು ಬ್ರಾಹ್ಮಣೇತರರಿಗೆ, ಪರಿಶಿಷ್ಟರಿಗೆ, ಅಸ್ಪೃಷ್ಯರಿಗೆ ಪೈಪೋಟಿಯ ಮಾದರಿಯನ್ನು ನೀಡಿದೆ ಎನ್ನುವುದು ಯಕ್ಷ ಪ್ರಶ್ನೆಯಾಗಿದೆ. ಅಂತಿಮವಾಗಿ ವಿಷಯ ಇಷ್ಟು; ಈ ಹಲವು ಶತಮಾನಗಳಲ್ಲಿ ಜಾತಿ ಪದ್ದತಿಯ ಇತಿಹಾಸದಲ್ಲಿ ಅನೇಕ ಜನರು ಒಂದು ಗಡಿಯಿಂದ ಇನ್ನೊಂದಕ್ಕೆ ದಾಟಿ ಬಂದಿದ್ದಾರೆ, ಬೇರೆ ಬೇರೆ ಪಂಗಡಗಳಾಗಿ ಹರಳು ಗಟ್ಟಿದ್ದಾರೆ.

ಈ ದೇಶದಲ್ಲಿ ಮತಾಂತರ ಎನ್ನುವ ಮಾತು ಅರ್ಥವಿಲ್ಲದು. ಅದರಲ್ಲಿ ಅಷ್ಟಾಗಿ ವಿಶ್ವಸನೀಯತೆ ಇಲ್ಲ. ಏಕೆಂದರೆ, ಮತಾಂತರ ಪೂರ್ವ ಜಾತಿ / ಧರ್ಮ ನಂಬಿಕೆಗಳು, ರೂಢಿಗಳು, ಸಂಪ್ರದಾಯಗಳು ಖಾಸಗಿ ಜೀವನದಲ್ಲಿ ಹಾಗೆಯೇ ಮುಂದುವರಿದಿವೆ. ಆದರೆ ಬಹಿರಂಗವಾಗಿ ಗುರುತಿಸುವುದಕ್ಕೆ ಮಾತ್ರ ಹೊಸ ಸಂಬಂಧವನ್ನು ಹೇಳಿಕೊಳ್ಳಬಹುದು. 12 ನೆಯ ಶತಮಾನದ ಕರ್ನಾಟಕದಲ್ಲಿ ನಡೆದ ಸುಧಾರಣಾ ಚಳುವಳಿಯಾದ ವೀರಶೈವ ಧರ್ಮದ ವಿಷಯದಲ್ಲಂತೂ ಇದು ನಿಜ. ಅಷ್ಟೇ ಮಟ್ಟಿಗೆ, ಭಾರತೀಯ ಕ್ರೈಸ್ತರು, ಮುಸ್ಲಿಮರು, ಸಿಖ್ಖರು, ಆರ್ಯ ಸಮಾಜಿಗರು, ಬೌದ್ಧ ಧರ್ಮಕ್ಕೆ ಪರಿವರ್ತಿತರಾದ ಎಸ್.ಸಿ ಮತಾಂತರಿಗಳು - ನವ ಬೌದ್ಧರು ಇವರ ವಿಷಯದಲ್ಲೂ ಈ ಮಾತು ಸಲ್ಲುತ್ತದೆ.

ಮೀಸಲಾತಿಯು ಗುಣ ಮಟ್ಟವು ಇಳಿದುಹೋಗಲು ಕಾರಣವಾಗಿದೆ ಎಂದೋ, ಬೋಧಕ ಹುದ್ದೆಗಳಲ್ಲಿ ಮೀಸಲಾತಿ ಇರಬಾರದು ಎಂದೋ ವಾದ ಮಾಡುವುದು ಸರಿಯಲ್ಲ. ಯೋಗ್ಯತೆಯನ್ನು ಹಾಗೂ ಯೋಗ್ಯತೆಯಿರುವ ವ್ಯಕ್ತಿಗಳನ್ನು ಇಂದು ಸಂದೇಹ ಪಡಲಾಗುತ್ತಿದೆ. ನಮ್ಮ ಪರೀಕ್ಷಾ ಪದ್ದತಿ, ಜಾತಿ, ಮತೀಯ ಪೂರ್ವಗ್ರಹಗಳು, ಭ್ರಷ್ಟಾಚಾರ, ಸ್ವಜನ ಪಕ್ಷಪಾತ, ಆಯ್ಕೆ ಸಮಿತಿಯಲ್ಲಿ ಕಂಡು ಬರುವ ಈ ದೋಷಗಳು ನಮ್ಮ ಕಣ್ಣು ತೆರೆಸಬೇಕು. ಪಿ.ಎಸ್.ಸಿ ಮತ್ತು ಯು. ಪಿ.ಎಸ್.ಸಿ ಕ್ಷೇತ್ರಗಳೂ ಇದಕ್ಕೆ ಹೊರತಾಗಿಲ್ಲ. ಕೊಳ್ಳುವ ಶಕ್ತಿಯಿರುವವರು ಪದವಿಗಳನ್ನು, ದರ್ಜೆಗಳನ್ನು, ಶ್ರೇಣಿಯನ್ನು ಹಾಗೆಯೇ ಉದ್ಯೋಗವನ್ನು ಕೊಳ್ಳಬಹುದು ಎನ್ನುವುದು ಸಮಕಾಲೀನ ಭಾರತದಲ್ಲಿ ಸ್ವತಃ ಸಿದ್ದವಾಗಿದೆ. ಹುಟ್ಟಾ ಬುದ್ದಿವಂತ, ಹುಟ್ಟಿನಿಂದಲೇ ಗುರು ಎನ್ನುವಂಥದಿಲ್ಲ. ಈ ಗುಣಗಳನ್ನು ಸಂಪಾದಿಸಿಕೊಳ್ಳುವುದಾದ್ದರಿಂದ, ಒಬ್ಬ ಒಳ್ಳೆಯ ಶಿಕ್ಷಕನನ್ನೋ, ಒಬ್ಬ ಪ್ರತಿಭಾವಂತ ವಿದ್ಯಾರ್ಥಿಯನ್ನೋ ರೂಪಿಸುವುದರಲ್ಲಿ ಅವಕಾಶಗಳು ಮತ್ತು ಪರಿಸರ ತುಂಬಾ ಮುಖ್ಯವಾಗಿರುತ್ತದೆ.

ಸಮಕಾಲೀನ ಉತ್ತರ ಪ್ರದೇಶ ಮತ್ತು ಬಿಹಾರಗಳಲ್ಲಿ ಹಿಂದುಳಿದ ವರ್ಗಗಳು ಹುಟ್ಟಿಕೊಂಡದ್ದು ಐತಿಹಾಸಿಕ ಆಕಸ್ಮಿಕಗಳ ಒಂದು ಪ್ರಕ್ರಿಯೆ ಎಂಬಂತೆ ನೋಡಬೇಕು.

ಅದು ಶಿಖರ ಸ್ಥಿತಿಯನ್ನು ಮುಟ್ಟಿದ್ದು ಮಂಡಲ್ ಆಯೋಗದಲ್ಲಿ . ಮೊದಲೇ ಹೇಳಿದಂತೆ ಶೂದ್ರವರ್ಣವು ಅನುಕ್ರಮಿಕ ಶ್ರೇಣಿಯನ್ನು ಹೊಂದಿರುವ ಹಲವು ಜಾತಿಗಳು ಮತ್ತು ಉಪಜಾತಿಗಳ ಒಂದು ಸಮೂಹ. ಹಿಂದೆ ಈ ವರ್ಗಕ್ಕೆ ಸೇರಿದ ಪ್ರಬಲ ಜಾತಿಗಳು ದೇಶೀಯ ರಾಜರನ್ನೂ ಪಾಳೆಯಗಾರರನ್ನೂ ಕೊಡುಗೆಯಾಗಿ ನೀಡಿವೆ. ಅವರು ಬ್ರಾಹ್ಮಣ ಪುರೋಹಿತರಿಗೆ ಮತ್ತು ಸಲಹೆಗಾರರರಿಗೆ ಬೇಕಾದಷ್ಟು ಅನುಕೂಲಗಳನ್ನು ಮಾಡಿಕೊಟ್ಟಿದ್ದಾರೆ. ಐತಿಹಾಸಿಕವಾಗಿ ನೋಡಿದರೆ ಭೂ ಆಸ್ತಿಯನ್ನು ಇತರ ರೀತಿಯ ಸಂಪತ್ತನ್ನು ಈ ಕೆಲವು ಜಾತಿಗಳು ಸಂಗ್ರಹಿಸಿಟ್ಟುಕೊಂಡುವು. ದಕ್ಷಿಣದ ಕೆಲವು ಉದಾಹರಣೆಗಳನ್ನು ಹೇಳಬೇಕೆಂದು ಮಹಾರಾಷ್ಟ್ರದಲ್ಲಿ ಮರಾಠರು, ಆಂಧರಪ್ರದೇಶದಲ್ಲಿ ರೆಡ್ಡಿಗಳು ಮತ್ತು ಕಮ್ಮಗಳು, ಕರ್ನಾಟಕದಲ್ಲಿ ಒಕ್ಕಲಿಗರು ಮತ್ತು ಲಿಂಗಾಯತರು. ಹಾಗೆಯೇ ಜಾಟರು, ಯಾದವರು, ಕುರ್ಮಿಗಳು ಮತ್ತು ಕೊಯಿರಿಗಳು. ಇವರು ಭೂಮಿಯ ಒಡೆತನ ಹೊಂದಿ, ಶೂದ್ರರಲ್ಲೇ ಮೇಲುಸ್ತರಕ್ಕೆ ಸೇರಿದವರಾದರು. ಪ್ರಭಾವವನ್ನು ಗಳಿಸಿ ಶೂದ್ರವರ್ಣದ ಕೆಳಸ್ತರದ ಜಾತಿಗಳ ವಿರುದ್ಧವಾಗಿ ಪಕ್ಷಪಾತ ತೋರಿಸಿದರು. ಇದು ಆಶ್ಚರ್ಯಕರವಾದ ವಿದ್ಯಮಾನವಲ್ಲ. ಹಣ ಮತ್ತು ಅಧಿಕಾರ ಕೂಡಿರುವ ವರ್ಗವು ಜಾತಿಯನ್ನು ನಿರ್ಮಿಸುತ್ತದೆ. ಅದೇ ಜಾತಿಯ ಬಡವರು ಮತ್ತು ಅಸಹಾಯಕರನ್ನು ಶ್ರೀಮಂತರೂ ಬಲಶಾಲಿಗಳೂ ಆದವರು ತಮಗೆ ಸರಿಸಮಾನದವರೆಂದು ಪರಿಗಣಿಸುವುದಿಲ್ಲ.

ಈ ಸಂದರ್ಭದಲ್ಲಿ ಮೀನಾಕ್ಷಿ ಜೈನ್ ಅವರ ಮಾತನ್ನು ಉದ್ಧರಿಸುವುದು ಸ್ವಾರಸ್ಯವಾಗಿದೆ. ಅವರು ಬರೆಯುತ್ತಾರೆ[1] : ಹಿಂದುಳಿದಜಾತಿಗಳು ಒಟ್ಟುಗೂಡಿ ಅಧಿಕಾರವನ್ನು ಸೆಳೆದುಕೊಳ್ಳಲು ಮಾಡಿದ ನಿರ್ಧಾರ ಮತ್ತು ಅವರ ಮೈತ್ರಿ ವ್ಯವಸ್ಥೆಯೊಳಗೇ ಇದ್ದ ಆಂತರಿಕ ವೈರುಧ್ಯಗಳು ಮತ್ತು ಹೋರಾಟಗಳು ಇಡೀ ಉತ್ತರ ಭಾರತದ ರಾಜಕಾರಣವನ್ನು ಸಂಕ್ಷೋಭೆಗಳ ಪಡಿಸಿವೆ. ಏಕೆಂದರೆ ಯಾದವರು ಜಾಟರ ವಿರುದ್ಧ ಬಂಡೇಳುತ್ತಾರೆ. ಕುರ್ಮಿಗಳು ಯಾದವರಿಗೆ ಸವಾಲು ಹಾಕುತ್ತಾರೆ. ಕೆಳ ಸ್ತರದ ಶೂದ್ರರು ಮೇಲು ಸ್ತರದ ಶೂದ್ರರ ವಿರುದ್ಧ ಸಿಡಿದು ಬೀಳುತ್ತಾರೆ. ಒಟ್ಟಾರೆ ಹಿಂದುಳಿದ ಜಾತಿಗಳು ತಮಗೆ ಸಂಪೂರ್ಣ ಪರಮಾಧಿಕಾರವನ್ನು ಕೊಡದ ಯಾವುದೇ ವ್ಯವಸ್ಥೆಯೊಂದಿಗೆ ಸೇರಿಕೊಳ್ಳಲು ನಿರಾಕರಿಸುತ್ತಾರೆ. ತಮಗೆ ತಾವೇ ಅಧಿಕಾರವನ್ನು ಸಳೆದುಕೊಳ್ಳಲು ಸಾಕಷ್ಟು ವಿವೇಚನೆಯಿಲ್ಲದವರಾದರೂ, ಇತರರು ತಮಗೆ ಎದುರಾಗಿ ಸ್ಥಿರವಾದ ಒಂದು ವ್ಯವಸ್ಥೆಯನ್ನು ರೂಪಿಸದಂತೆ ಅವರನ್ನು ತಡೆಯಲು ಸಾಕಷ್ಟು ಶಕ್ತರಾಗಿದ್ದಾರೆ." ಮುಂದುವರಿದು ಹೇಳುತ್ತಾರೆ. : "ಈ ಜಾತಿಗಳಲ್ಲಿ ಪರಸ್ಪರ ಪೂರಕವಾದ ಹಿತಾಸಕ್ತಿಗಳಿವೆಯಾದರೂ ರೈತರಿಗೂ ಮತ್ತು ದ್ವಿಜಸಮುದಾಯಕ್ಕೂ ಅನುಕ್ರಮ ಶ್ರೇಣಿಯ ಪರಿಗಣನೆಗಳು ಮುಖ್ಯವಾಗಿಯೇ ಉಳಿದಿವೆ. ಉದಾಹರಣೆಗೆ ಒಬ್ಬ ಜಾಟನಿಗೆ ಒಬ್ಬ ಆಹಿರನನ್ನೋ ಒಬ್ಬ ಗುಜರನನ್ನೋ ತನ್ನ ನಾಯಕನೆಂದು ಒಪ್ಪಿಕೊಳ್ಳುವುದು ಕಷ್ಟ. ಅವನು

(ಜಾಟ್) ಆಹಿರ್ ಅಥವಾ ಗುಜರನಿಗಿಂತ ತುಸು ಮೇಲಿನ ಸ್ತರದವನು. ಹೀಗಿರುವಾಗ ಈ ಮಧ್ಯಮ ವರ್ಗವು ಮುಂದೆಂದೂ ತನ್ನದೇ ಆದ ಒಂದು ರಾಜಕೀಯ ಸಂಸ್ಥೆಯನ್ನು ಸೃಷ್ಟಿಸಲಾರದು. ಅದು ಚೂರುಚೂರಾಗಿಯೇ ಉಳಿಯುತ್ತದೆ, ಅಧಿಕಾರದ ಮೇಲೆ ತನ್ನ ಹಿಡಿತವನ್ನು ಎಂದಿಗೂ ಕ್ರೋಡೀಕರಿಸಿಕೊಳ್ಳಲಾರದು[2]."

ಅದೃಷ್ಟವಶಾತ್, ಭಾರತವು ಉತ್ತರ ಪ್ರದೇಶ ಮತ್ತು ಬಿಹಾರಗಳಿಗಿಂತ ತುಂಬಾ ದೊಡ್ಡದಾಗಿದೆ. ಇವು ಪ್ರಾರಂಭಿಕ ಐತಿಹಾಸಿಕ ಪ್ರಕ್ರಿಯೆ ಗಳೆಂದು ನಾವು ಇಟ್ಟುಕೊಳ್ಳಬಹುದು. ಸಂಭವಿಸಬುಹುದಾದ, ಅಥವಾ ಸಂಭವಿಸಲಾರದ ವ್ಯತ್ಯಾಸಗಳನ್ನು ಖಚಿತವಾಗಿ ಹೇಳುವುದಕ್ಕಾಗಲಿ ಮುಂಗಾಣುವುದಕ್ಕಾಗಲಿ, ಎರಡು ಅಥವಾ ಮೂರು ದಶಕಗಳ ಅವಧಿ ಐತಿಹಾಸಿಕವಾಗಿ ತುಂಬಾ ಚಿಕ್ಕದು. ಈ ಸಂಧಿಕಾಲದಲ್ಲಿ ನಾವು ಬಹಳ ಜಾಗರೂಕತೆಯಿಂದಿರಬೇಕು ಮತ್ತು ಅನಗತ್ಯವಾದ ನಿರಾಶಭಾವನೆಯನ್ನು ಬೆಳೆಸಿಕೊಳ್ಳಬಾರದು. ನಮ್ಮ ವಿಶಾಲವಾದ ದೇಶವು ಸೂಕ್ತವಾದ ಸಮಯದಲ್ಲಿ ಶೂದ್ರ ಶ್ರೇಣಿಯಿಂದಲೇ ಮೇಧಾವಿಯಾದ ನಾಯಕತ್ವವನ್ನು ನೀಡಬಹುದು. ಆದರೆ ಮಧ್ಯಂತರ ಸಮಯವಾದರೋ ಬಲು ಯಾತನಮಯವಾದ ಕಾಲ. ಕೇಂದ್ರದಲ್ಲಿ ಸಂಯುಕ್ತರಂಗ ಸರಕಾರ (United Front Government) ದ 'ರಾಜ ಗುರು' ವಾಗಿ ದೂರನಿಯಂತ್ರಣವನ್ನು ಚಲಾಯಿಸುತ್ತಿರುವ ವಿ. ಪಿ. ಸಿಂಗ್ ಜಾತ್ಯಾಧಾರಿತ ಮೀಸಲಾತಿಯನ್ನು ಜಾರಿಗೊಳಿಸಲು ಹಸಿರು ಸಂಕೇತ ನೀಡಿದರು. ಅದರಿಂದ 'ಜಾತ್ಯಾತೀತ ಕ್ರಾಂತಿ' ಯನ್ನು ಮಾಡುವುದಾಗಿ ಭಾವಿಸಿದರು. ಮುನ್ನುಡಿಯಲ್ಲಿ ಎಂ ಎನ್ ಶ್ರೀನಿವಾಸ್ ಅವರು ಹೇಳುವಂತೆ, "ಹಿಂದಿನ ಮಂಡ ರಾಜನು ಮಂಡಲ್ ಸಂತನಾದನು. ಅನೇಕರು ಅವರನ್ನು ಸ್ವತಂತ್ರಭಾರತದಲ್ಲಿ ಅತ್ಯಧಿಕವಾಗಿ ಒಡಕನ್ನು ಉಂಟು ಮಾಡುವ ಶಕ್ತಿ ಎಂದು ನೋಡಿದ್ದರೆ, ಅದು ನಾಣ್ಯದ ಇನ್ನೊಂದು ಮುಖ ಅಷ್ಟೆ."[3]

ಇತಿಹಾಸವು ಮರುಕಳಿಸುತ್ತದೆ ಎಂದು ಅನೇಕ ಸಾರಿ ಹೇಳಲಾಗುತ್ತದೆ. ಆದರೆ ಸಮಾಜ ವಿಜ್ಞಾನಿಗೆ ಅದು ಎಂದಿಗೂ ಒಂದೇ ಆಗಿರುವುದಿಲ್ಲ. ಬೇರೆ ಬೇರೆ ಕಾಲಘಟ್ಟಗಳಲ್ಲಿ ಹಾಗೆ ಸಂಭವಿಸುವ ಮರುಕಳಿಕೆ ಬೇರೆ ಬೇರೆ ಘಟನಾವಳಿಗಳಿಂದ ಕೂಡಿರುತ್ತದೆ. ಹಾಗಾಗಿ ಅಪೇಕ್ಷಣೀಯವೂ ಆರೋಗ್ಯಕರವೂ ಆದ ತಿರುವುಗಳನ್ನು ನಿರೀಕ್ಷಿಸಬಹುದು. ನಿಜವಾಗಿ ಹಿಂದುಳಿದಿರುವ ವಿಷಮ ಪರಿಸ್ಥಿತಿ ಎದುರಿಸುತ್ತಿರುವ ಮತ್ತು ಮೀಸಲಾತಿ ಸೌಲಭ್ಯಕ್ಕೆ ಅರ್ಹರಾಗಿರುವ ಹಾಗೂ ಎಸ್.ಸಿ / ಎಸ್.ಟಿ ಗಳು, ಹೆಂಗಸರು, ಮಕ್ಕಳು, ಎಲ್ಲಕ್ಕಿಂತ ಮಿಗಿಲಾಗಿ ರಾಷ್ಟ್ರದ ಭವಿಷ್ಯ, ಅದರ ಅಖಂಡತೆ ಇವುಗಳನ್ನು ಗಮನಿಸಿ, ಕೇಂದ್ರವಾಗಿಟ್ಟುಕೊಂಡು ಮುಂದುವರಿಯಬೇಕು.

ಮುಂದಿನ ಮತ್ತು ಪರಿಸಮಾಪ್ತಿಯ ಅಧ್ಯಾಯದಲ್ಲಿ ಮೀಸಲಾತಿಯ ಜೊತೆಗೆ ಬಂದ ಹಲವು ಕೆಡುಕುಗಳನ್ನು, ಕೆಲವು ಒಳ್ಳೆಯ ಫಲಗಳನ್ನು ವಿಸ್ತರಿಸಲು ಹೆಚ್ಚಿನ ಗಮನ ಕೊಡಲಾಗುತ್ತದೆ. ಅದನ್ನು ಸರಿಯಾದ ಹಳಿಗೆ ಕೂಡಿಸಲು ಸೂಕ್ತ ಕ್ರಮಗಳನ್ನು

ಕೈಗೊಳ್ಳುವುದು ಅತ್ಯಂತ ಮುಖ್ಯವಾಗಿರುವಂತೆ ತೋರುತ್ತದೆ. ಏಕೆಂದರೆ ತನಗೆ ತಾನೆ ಮೀಸಲಾತಿ ಸೌಲಭ್ಯ ಖಂಡಿತವಾಗಿಯೂ ಕೆಟ್ಟದಲ್ಲ. ಆದರೆ ಇಂದು ದೇಶವು ಎದುರಿಸುತ್ತಿರುವ ಮುಖ್ಯ ಕೆಡುಕುಗಳಿಗೆ ಅದು ಪ್ರವರ್ತಿಸುತ್ತಿರುವ ರೀತಿಯೂ ಕಾರಣವಾಗಿದೆ.

---

1. ಎಂ. ಎನ್. ಶ್ರೀನಿವಾಸ್ (ಸಂ) 1996, Caste, Its Twentieth Century Avatar, Pengiun Books India Pvt. Ltd. New Delhi, M. Jain - "Backward Classes and Social Change in U.P & Bihar", PP. 135-151.
2. *ಅದೇ 1996, ಪು. 147
3. *ಅದೇ, 1996, ಪು. XXVIII, ಮುನ್ನುಡಿ.

* * *

*ಅಧ್ಯಾಯ : ಒಂಬತ್ತು*

# ಉಪಸಂಹಾರ ಮತ್ತು ಸಲಹೆಗಳು

ಈ ಕೆಳಗೆ ನಿರ್ಣಯಗಳು ಮತ್ತು ಸಲಹೆಗಳ ರೂಪದಲ್ಲಿರುವುದು, ಮಾಹಿತಿಗಳಿಂದ ಹೊರಪಡುವ ಸಾರಾಂಶ ಮತ್ತು ಅವುಗಳ ಆಧಾರದಿಂದ ಕೈಗೊಂಡ ತೀರ್ಮಾನಗಳು. "ಸಂರಕ್ಷಕ ತಾರತಮ್ಯ"ದಂತಹ ಸಾಂವಿಧಾನಿಕ ಕ್ರಮಗಳು ಹೇಗೆ ವಿರುದ್ಧ ಉದ್ದೇಶಗಳಿಗಾಗಿ ಕೆಲಸ ಮಾಡುತ್ತಿವೆ ಎಂಬುದರ ಮೇಲೆ ಪ್ರಸ್ತುತ ಅಧ್ಯಯನವು ಬೆಳಕು ಚೆಲ್ಲಲು ಬಯಸುತ್ತದೆ. ಹಾಗಾಗಿ ಬಡವರು ಮತ್ತು ದಲಿತ ವರ್ಗಗಳನ್ನು ಮೇಲೆತ್ತುವುದೆಂಬ ಉದ್ದೇಶವು ಈಡೇರದೆ ಹಾಗೆಯೇ ಉಳಿದು ಹೋಗಿದೆ. ಮೀಸಲಾತಿ ನೀತಿಯು ದೇಶವನ್ನು ಒಂದು ಗೋಜಲಿನ ಸ್ಥಿತಿಗೆ ತಂದಿಟ್ಟಿದೆ. ಭಾರತೀಯರಲ್ಲಿ ಬಹುಸಂಖ್ಯಾತ ಜನರು ಮೀಸಲಾತಿಯನ್ನು ಪಡೆಯುವುದಕ್ಕಾಗಿ ಹಾತೊರೆಯುತ್ತಿದ್ದಾರೆ. ನೀತಿಯನ್ನು ಜಾತಿ ಪದ್ದತಿಯ ಆಧಾರದ ಮೇಲೆ ರೂಪಿಸಲಾಗಿದೆ.

ಭಾರತೀಯ ಎಲ್ಲಾ ವರ್ಗಗಳಲ್ಲಿ, ಕೆಲವೇ ಅಪವಾದಗಳನ್ನು ಹೊರತುಪಡಿಸಿ, ಜಾತಿ ಪ್ರಜ್ಞೆಯಲ್ಲಿ ಅಗಾಧವಾದ ಹೆಚ್ಚಳವುಂಟಾಗಿದೆ. ಇದು ಜನರ ಸಾರ್ವಜನಿಕ ಹಾಗೂ ಖಾಸಗೀ ಜೀವನಗಳ ಮೇಲೆ ಹಾನಿಯನ್ನುಂಟುಮಾಡಿದೆ. ಇದಕ್ಕಾಗಿ ಯಾವುದೇ ಪರಕೀಯ ಶಕ್ತಿಯ ಮೇಲೆ ನಾವು ನಿಂದೆಯನ್ನು ಹೊರಿಸಲು ಸಾಧ್ಯವಿಲ್ಲ. ಈ ಪರಿಸ್ಥಿತಿಗೆ ನಮ್ಮ ದೇಶವೇ ಹೊಣೆ. ರಾಜಕಾರಣಿಗಳು, ವಿದ್ಯಾವಂತವರ್ಗ, ಅಧಿಕಾರಿಗಳು ಮತ್ತು ಬುದ್ಧಿ ಜೀವಿಗಳು - ಇವರೆಲ್ಲರೂ ನಿಂದೆಯನ್ನು ಹಂಚಿಕೊಳ್ಳಬೇಕಾಗುತ್ತದೆ. ಅವರಿಂದಾಗಿ ಜನಸಾಮಾನ್ಯರನ್ನು ತಪ್ಪು ದಾರಿಗೆಳೆದಂತಾಗುತ್ತಿದೆ. ಭಾರತವು ಸ್ವಾತಂತ್ರ್ಯವನ್ನು ಪಡೆಯುವುದಕ್ಕೆ ಮೊದಲು ಜಾತಿಯು ಖಾಸಗಿ ಜೀವನದಲ್ಲಿ ವಾಸ್ತವಿಕ ಉದ್ದೇಶಗಳಿಗಾಗಿ ಒಂದು ನಿರ್ದಿಷ್ಟ ಪಾತ್ರವನ್ನು ವಹಿಸಿದ್ದಿತು. ಆದರೆ ಇಂದು, ಬಹುವಾಗಿ ಬೇಡಿಕೆಯಲ್ಲಿರುವ ಸಾಂಸ್ಥಿಕತೆಯಾಗಿದೆ ಅದು. ರಾಜ್ಯಮೂಲದ ಹಾಗೂ ರಾಷ್ಟ್ರಮಟ್ಟದ ಸಂಘಗಳು ರಚಿತವಾಗಲು ದಾರಿ ಮಾಡಿದೆ. ನಮ್ಮ ಅನೇಕ ರಾಜಕೀಯ ಮುಖಂಡರು ಜಾತಿ ಸಮಾವೇಶಗಳಲ್ಲಿ ಭಾಗವಹಿಸಿ, ಮೀಸಲಾತಿ ಸೌಲಭ್ಯಗಳನ್ನು ದೊರಕಿಸಿಕೊಡುವುದಾಗಿ ಆಶ್ವಾಸನೆ ಕೊಡುತ್ತಾರೆ.

ಈ ಪ್ರವೃತ್ತಿಯು ಈಗ ಸುಮಾರಾಗಿ ಇಡೀ ದೇಶವನ್ನು ಆವರಿಸಿಕೊಂಡಿದೆ. ಬುಡಕಟ್ಟಿಗರು ನೇರವಾಗಿ ಇದಕ್ಕೆ ಸಂಬಂಧಪಡದಿದ್ದರೂ, ಅನೇಕ ಜಾತಿ ಪಂಗಡಗಳು ಅವರನ್ನೂ ಎಳೆದು ತಂದಿವೆ. ಭ್ರಷ್ಟಾಚಾರ, ಸ್ವಜನಪಕ್ಷಪಾತ, ಜಾತೀಯತೆ, ಮತೀಯತೆ, ಪಕ್ಷಪಾತ, ಹೊಟ್ಟೆಕಿಚ್ಚು, ದ್ವೇಷ, ಹಿಂಸಾಚಾರ ಇವು ಜನರನ್ನು ಎಲ್ಲಾ ಹಂತಗಳಲ್ಲೂ, ಹಳ್ಳಿ - ಪಟ್ಟಣ - ನಗರ ಎಲ್ಲಾ ಕಡೆಯೂ ಕಾಡುತ್ತಿವೆ.

ಈಗಲೂ ತಪ್ಪನ್ನು ತಿದ್ದುವ ಕ್ರಮಗಳನ್ನು ಕೈಗೊಳ್ಳಬಹುದು. ದುಷ್ಪರಿಣಾಮಗಳನ್ನು ತಡೆದು ಜನರನ್ನೂ ದೇಶವನ್ನೂ ಸರಿಯಾದ ದಿಕ್ಕಿನಲ್ಲಿ ನಡೆಸಬಹುದು. ಮೀಸಲಾತಿ ನೀತಿಯ ಪುನರ್ ವ್ಯವಸ್ಥೆ; ಅದನ್ನು ಕಾಲಬದ್ಧಗೊಳಿಸುವುದು ; ಎಲ್ಲಾ ಜಾತಿಗಳಲ್ಲೂ ಧಾರ್ಮಿಕ ಪಂಗಡಗಳಲ್ಲೂ ಅರ್ಹ, ಅರ್ಹತರ, ಅರ್ಹತಮ ವರ್ಗಗಳನ್ನೂ ಸ್ವಲ್ಪವೂ ಅರ್ಹವಲ್ಲದವನ್ನೂ ಗುರುತಿಸುವುದು; ಪರಿಶಿಷ್ಟರಿಂದ ತೆಗೆದುಹಾಕುವ, ಕಟ್ಟುನಿಟ್ಟಾಗಿ ಅದನ್ನು ಕಾರ್ಯಗತಗೊಳಿಸುವ, ಸಾಮಾಜಿಕ ನ್ಯಾಯ ಮತ್ತು ಪಾರದರ್ಶಕತೆಗಳ ಮೇಲೆ ಒತ್ತುಕೊಟ್ಟು ಅದನ್ನು ನಿರ್ವಹಿಸುವುದು - ಈ ಕ್ರಮಗಳು ಈಗಿರುವ ವಿಪತ್ತನ್ನು ಕ್ರಮೇಣ ತಗ್ಗಿಸುತ್ತವೆ. ಮೀಸಲಾತಿ ಪ್ರಯೋಜನಗಳನ್ನು ಪಡೆಯಲು ನೂಕು ನುಗ್ಗಲು, ಇತರರು ಎಸ್.ಸಿ / ಎಸ್.ಟಿ ಗಳೆಂದು ಮೋಸ ಮಾಡಿ ತೂರಿಕೊಳ್ಳುವುದು ಇವುಗಳನ್ನು ತಡೆಗಟ್ಟಬಹುದು. ಇದಕ್ಕಾಗಿ ದೇಶದ ಸಮಾಜ ವ್ಯವಸ್ಥೆಯನ್ನು ಪುನರ್ ವ್ಯವಸ್ಥೆಗೊಳಿಸಿ ಹೊಸ ಭಾವನೆಗಳನ್ನು ತುಂಬಬೇಕು. ರಾಜಕೀಯ ಮುಖಂಡರು ಇದರಲ್ಲಿ ಮುಖ್ಯ ಪಾತ್ರವಹಿಸಿ ಇತರರಿಗೆ ಮಾದರಿಯನ್ನು ಹಾಕಿಕೊಡಬೇಕು.

ಇದು ಕರ್ನಾಟಕದಲ್ಲಿ 1994-95 ರಲ್ಲಿ ನಡೆಸಿದ ಒಂದು ಪ್ರಯೋಗಾತ್ಮಕ ಅಧ್ಯಯನ. ಇದು ಶೂದ್ರ ವರ್ಣಕ್ಕೆ ಸೇರಿದ ಅಸಂಖ್ಯಾತ ಜಾತಿಗಳಲ್ಲೊಂದಾದ ಕುರುಬ ಪಂಗಡವನ್ನು ಕುರಿತದ್ದು. ಕುರುಬ ಜಾತಿಗೆ ತದ್ವಿರುದ್ಧವಾಗಿ ಕಾಡು ಕುರುಬ ಬುಡಕಟ್ಟು ಜನರಿದ್ದಾರೆ. ಕುರುಬರು (ಕುರಿಗಾಹಿಗಳಾಗಿ) ರಾಜ್ಯದಾದ್ಯಂತ ಎಲ್ಲ ಕಡೆಯೂ ಹಳ್ಳಿ, ನಗರ, ಪಟ್ಟಣಗಳಲ್ಲಿ ನೆಲೆಸಿರುವುದು ಕಂಡು ಬಂದರೆ, ಕಾಡು ಕುರುಬರು ಮೈಸೂರು ಮತ್ತು ಕೊಡಗು ಜಿಲ್ಲೆಗಳಲ್ಲಿ ಮಾತ್ರ ಕಣ್ಣಿಗೆ ಬೀಳುತ್ತಾರೆ.

ಸಮಾನವಾದ ಹೆಸರು, ಎಸ್. ಟಿ. ಗಳಾಗಿ ಕಾಡುಕುರುಬರಿಗೆ ದೊರಕಿರುವ ಮೀಸಲಾತಿ ಪ್ರಯೋಜನಗಳು ಇರುವುದರಿಂದ ಕುರುಬ ಜಾತಿ ಪಂಗಡವು ಮೀಸಲಾತಿ ಸೌಲಭ್ಯಗಳನ್ನು ದೊರಕಿಸಿಕೊಳ್ಳುವ ಉದ್ದೇಶದಿಂದ ಎರಡನ್ನು ವಿಲೀನಗೊಳಿಸಲು ಅಸಾಧಾರಣ ಆಸಕ್ತಿಯನ್ನು ತೋರಿಸುತ್ತಿದ್ದಾರೆ. ಒಂದೇ ಹೆಸರಿರುವುದನ್ನು ಬಿಟ್ಟರೆ ಎರಡೂ ಪಂಗಡಗಳ ನಡುವೆ ಸಮಾನವಾದದ್ದು ಬೇರೆ ಏನೂ ಇಲ್ಲ. ಅಲ್ಪ ಸಂಖ್ಯಾತ ಕಾಡು ಕುರುಬರು ಕಾಡುಗಳಲ್ಲಿ ಅಥವಾ ಕಾಡಿನ ಸೆರಗುಗಳಲ್ಲಿ ವಾಸ ಮಾಡುವುದರಿಂದ, ಎರಡೂ ಪಂಗಡಗಳನ್ನು ವಿಲೀನಗೊಳಿಸುವ ಕುರುಬರ ಪ್ರಯತ್ನ ಅವರಿಗೆ ತಿಳಿದೇ ಇರಲಿಲ್ಲ. ತಿಳಿದ ಮೇಲೆಯೂ ಈ ಕ್ರಮವನ್ನು ಅವರು ಒಪ್ಪಿಲ್ಲ.

ಜಾತಿ - ಬುಡಕಟ್ಟು ಲಕ್ಷಣವು ಕೆಲವು ಸ್ವಾರಸ್ಯವಾದ ಅಂಶಗಳನ್ನುಹೊರಗೆಡವಿದೆ. ಈಶಾನ್ಯ ಪ್ರಾಂತ್ಯ, ಬಿಹಾರ, ಒರಿಸ್ಸಾ, ಮಧ್ಯಪ್ರದೇಶ, ಆಂಧ್ರ ಪ್ರದೇಶ, ಕೇರಳ ಮೊದಲಾದ ರಾಜ್ಯಗಳಂತಲ್ಲದೆ ಕರ್ನಾಟಕದಲ್ಲಿ ಬಹು ಕಡಿಮೆ ಸಂಖ್ಯೆಯ ಬುಡಕಟ್ಟು ಜನರಿದ್ದಾರೆ. ಹಾಗೆಂದು ಸಂಖ್ಯೆಯಲ್ಲಿ ಕಡಿಮೆಯಾಗಿರುವುದರಿಂದ ಅವರ ಬದುಕು ಸುಖಮಯವಾಗಿಯೇನೂ ಇಲ್ಲ. ಇದಕ್ಕೆ ಹಲವಾರು ಕಾರಣಗಳಿವೆ. ಮೊದಲನೆಯದಾಗಿ ಅತಿ ಕ್ರೂರವಾದ ಅರಣ್ಯ ಕಾನೂನುಗಳು ಅವರ ಉಳಿವಿಗೆ ಗಂಡಾಂತರದ ಭೀತಿಯನ್ನುಂಟು ಮಾಡಿವೆ. ಆಡಳಿತದಲ್ಲಿ ತೊಡಗಿಕೊಂಡಿರುವ ಅರಣ್ಯಾಧಿಕಾರಿಗಳು ಮತ್ತು ಇತರರು ಬುಡಕಟ್ಟಿಗರ ವಿಷಯದಲ್ಲಿ ಸಹಾನುಭೂತಿಯಿಂದಿಲ್ಲ. ಅದಕ್ಕೆ ಬದಲಾಗಿ, ಬುಡಕಟ್ಟು - ಜಾತಿ ಎರಡೂ ಒಂದೇ ಎಂದು ಪರಿಗಣಿಸಬೇಕೆಂದು ಜಾತಿ ಪಂಗಡಗಳು ಹೂಡುವ ಹೂಟ ಹುನ್ನಾರುಗಳ ವಿರುದ್ಧವಾಗಿ ಅವರು ತಮ್ಮನ್ನು ರಕ್ಷಿಸಿಕೊಳ್ಳಬೇಕಾಗಿದೆ.

ಬಹಳ ಹಿಂದೆಯೂ ಸಮೀಪ ಭೂತಕಾಲದಲ್ಲೂ, ಬುಡಕಟ್ಟುಗಳು ಜಾತಿಯಂತಹ ಪಂಗಡಗಳಾಗಿರುವ ನಿದರ್ಶನಗಳಿವೆ. ಕೊಡಗರು ಇದಕ್ಕೆ ಒಂದು ಉದಾಹರಣೆ. ಆದರೆ ಚೆನ್ನಾಗಿ ವ್ಯವಸ್ಥಿತವಾದ ಜಾತಿ ಪಂಗಡಗಳು ತಮಗೆ ಬುಡಕಟ್ಟು ಸ್ಥಾನಮಾನ ಬೇಕೆಂದು ಕೇಳುವುದು ಮಾತ್ರ ಹೊಸ ಮತ್ತು ಈಚಿನ ವಿದ್ಯಮಾನವಾಗಿದೆ. ಈ ಪ್ರವೃತ್ತಿಯು ಕಾಣಿಸಿಕೊಳ್ಳತೊಡಗಿದ್ದು ಪರಿಶಿಷ್ಟ ಜಾತಿ (ಎಸ್.ಸಿ) ಮತ್ತು ಪರಿಶಿಷ್ಟ ಬುಡಕಟ್ಟು(ಎಸ್.ಟಿ) ಗಳು "ಸಂರಕ್ಷಕ ತಾರತಮ್ಯ" ನೀತಿಯನ್ವಯ ಪ್ರಯೋಜನಗಳನ್ನು ಪಡೆಯುವ ಅವಕಾಶ ಬಂದುದರಿಂದ.'ಈ ಮೋಸದ ನಿಭಾವಣೆಯ ರಾಜಕೀಯವು', 'ಬುಡಕಟ್ಟು ಅಭಿವೃದ್ಧಿ ಆರ್ಥಿಕತೆ' ಯಲ್ಲಿ ಖೋತಾ ಉಂಟು ಮಾಡುತ್ತದೆ. ಸರಕಾರವು ದೃಢ ನಿರ್ಧಾರ ಮಾಡಿ. ಈ ಪ್ರವೃತ್ತಿಯನ್ನು ಕೊನೆಗೊಳಿಸಬೇಕು. ಸರಕಾರವು ಎಲ್ಲಿಯವರೆಗೆ ಒತ್ತಡಕ್ಕೆ ಮಣಿಯುತ್ತಿರುತ್ತದೆಯೋ ಅಲ್ಲಿಯವರೆಗೆ ಇನ್ನೂ ಹೆಚ್ಚು ಹೆಚ್ಚು ಪಂಗಡಗಳು ಪರಿಶಿಷ್ಟಕ್ಕೆ ಸೇರಲು ಪ್ರಯತ್ನಿಸುತ್ತಲೇ ಇರುತ್ತವೆ. ಪ್ರಯೋಜನಗಳು ದೊರಕುವಂತಹ ವರ್ಗಕ್ಕೆ ತಮ್ಮನ್ನು ಅಳವಡಿಸಲು ತಕ್ಕ ಕ್ರಮಗಳನ್ನು ಕೈಗೊಳ್ಳಬೇಕೆಂದು ಸರಕಾರವನ್ನು ಬಲಾತ್ಕಾರ ಪಡಿಸುತ್ತಲೇ ಇರುತ್ತದೆ. ಎಸ್.ಸಿ / ಎಸ್.ಟಿ, ಬಿ.ಸಿ, ಓ.ಬಿ.ಸಿ, ಎಸ್.ಇ.ಬಿ.ಸಿ, ವರ್ಗಗಳ ಜೊತೆಗೆ, ಈಗ ಸರಕಾರವು ಬಹುಶಃ ಮೇಲು ಸ್ತರದಿಂದ ಆರಿಸಿದ ಆರ್ಥಿಕವಾಗಿ ದುರ್ಬಲ ವರ್ಗಗಳಿಗೆ ಶೇ 10 ಮೀಸಲಾತಿಯನ್ನು ಜಾರಿಗೆ ತರಬೇಕೆಂದು ಯೋಚಿಸುತ್ತಿದೆ. ಇದನ್ನು, ಮಂಡಲ್ ಆಯೋಗದ ವಿಚಾರವಾಗಿ ವಿಚಾರ ಮಾಡುವಾಗಲೇ ಸರ್ವೋನ್ನತ ನ್ಯಾಯಾಲಯ ನಿರಾಕರಿಸಿದೆ. ಬಿ. ಸಿ. ಗಳಲ್ಲಿ 'ಅತ್ಯುತ್ತಮ ಪದರ' ವನ್ನು ಗುರುತಿಸಿ ಅವರಿಗೆ ಮೀಸಲಾತಿ ಪ್ರಯೋಜನಗಳು ಇನ್ನು ಮುಂದೆ ಸಲ್ಲದಂತೆ ಮಾಡಬೇಕೆಂದು ನ್ಯಾಯಾಲಯವು ನೀಡಿರುವ ಆದೇಶವು ಕಾರ್ಯಸಾಧ್ಯವಲ್ಲದ ವಿಚಾರವೆಂಬಂತೆ ತೋರುತ್ತದೆ. ಸುಪ್ರೀಂ ಕೋರ್ಟಿನ ಈ ಆದೇಶಕ್ಕೆ ಕೇರಳ ಸರಕಾರವು ತೋರಿಸಿರುವ ಪ್ರತಿಕ್ರಿಯೆ, ಕೇರಳಿಗರಲ್ಲಿ 'ಅತ್ಯುತ್ತಮ ಪದರ' ವೆನಿಸಿಕೊಳ್ಳುವಂಥತದು ಇಲ್ಲವೇ ಇಲ್ಲ. ಇದು ಸಾರಾಸಗಟಾದ ಉತ್ತರ. ಕೇರಳ ಸರಕಾರವು

ಕೈಗೊಂಡಿರುವ ಈ ನಿಲುವು ದೇಶದ ಇತರ ಭಾಗಗಳಿಗೂ ತಪ್ಪು ಸಂಕೇತಗಳನ್ನು ಕಳುಹಿಸುವುದರಲ್ಲಿ ಸಂದೇಹವಿಲ್ಲ. ಎಲ್ಲಾ ಹಂತಗಳಲ್ಲೂ ಆತ್ಮ ವಂಚನೆ ತಾನೇ ತಾನಾಗಿದೆ. ಜನರು ನ್ಯಾಯಾಲಯದ ಆದೇಶಗಳನ್ನೂ ತಾವಾಗಿ ಪಾಲಿಸುವುದಿಲ್ಲ. ಸಮಾಜದ 'ಅತಿಗಣ್ಯವರ್ಗ' ವನ್ನು ಗುರುತಿಸುವ ಅಪಾಯವನ್ನು ಎದುರಿಸುವುದಕ್ಕಿಂತ ಚುನಾವಣೆಗಳಲ್ಲಿ ಮತದಾರರ ಹಿತಾಸಕ್ತಿಗಳನ್ನು ಕಾಪಾಡುವುದರಲ್ಲಿ ಸರಕಾರವು ಒಲವು ತೋರಿಸುವಂತೆ ನಡೆದುಕೊಳ್ಳುತ್ತಿದೆ. ಹಿಂದುಳಿದವರಲ್ಲಿ "ಅತಿಗಣ್ಯ ವರ್ಗ" ಗುರುತಿಸುವ ಸೂತ್ರ ರಾಜಕಾರಿಣಿಗಳು ಸರ್ಕಾರದಿಂದ ಆಗುವ ಕೆಲಸವಲ್ಲ.

ಪ್ರಸ್ತುತ ಅಧ್ಯಯನವು ಬಳ್ಳಾರಿ, ಚಿತ್ರದುರ್ಗ, ಧಾರವಾಡ ಮತ್ತು ಮೈಸೂರು ಜಿಲ್ಲೆಗಳ 601 ಕುರಬ ಕುಟುಂಬಗಳ ಮಾದರಿಯನ್ನು ಒಳಗೊಂಡಿದೆ. ಈ ಜಿಲ್ಲೆಗಳಲ್ಲಿ ಕುರುಬರು ನಿಬಿಡವಾಗಿ ಕೇಂದ್ರಿಕೃತರಾಗಿದ್ದಾರೆ. ಅಲ್ಲದೆ ಪ್ರಾದೇಶಿಕ ಭಿನ್ನತೆಗಳೇನಾದರೂ ಇದ್ದರೆ ಅವುಗಳನ್ನು ನೋಡಿಕೊಳ್ಳಲಾಗಿದೆ. ಬಳ್ಳಾರಿ ಮತ್ತು ಧಾರವಾಡ ಜಿಲ್ಲೆಗಳು ಹಿಂದಿನ ಮದರಾಸು ಮತ್ತು ಮುಂಬಯಿ ಪ್ರೆಸಿಡೆನ್ಸಿಗಳ ತುತ್ತ ತುದಿಯಲ್ಲಿದ್ದ ಪ್ರದೇಶಗಳು. ಹಾಗಾಗಿ ಅವು ಬೇರೆ ಬೇರೆ ಆಡಳಿತ ವ್ಯವಸ್ಥೆಗಳನ್ನೂ, ಬೇರೆ ಬೇರೆ ರಾಜಕೀಯ ಎಲ್ಲೆಗಳೊಂದಿಗೆ, ಇತರ ವ್ಯತ್ಯಾಸಗಳೊಂದಿಗೆ ಪ್ರತಿನಿಧಿಸುತ್ತಿದ್ದವು. ಚಿತ್ರದುರ್ಗ ಮತ್ತು ಮೈಸೂರು ಜಿಲ್ಲೆಗಳು, ದೇಶೀಯ ಅರಸರ ಆಳ್ವಿಕೆಯಲ್ಲಿದ್ದ 'ಹಳೆಯ ಮೈಸೂರು ಸಂಸ್ಥಾನ'ದ ಭಾಗಗಳಾಗಿದ್ದವು. ಹಾಗೂ ನಗರಯೋಜನೆ, ನೀರಾವರಿ, ಕೈಗಾರಿಕೆಗಳ ಸ್ಥಾಪನೆ ಇಂತಹ ಪ್ರಗತಿಶೀಲ ವಿಚಾರಗಳು ಮತ್ತು ಸುಧಾರಣೆಗಳನ್ನು ಹೊಂದಿದ್ದ ಒಂದು ಆಡಳಿತ ಯಂತ್ರಕ್ಕೆ ಒಳಪಟ್ಟಿದ್ದವು.

1956ರಲ್ಲಿ ರಾಜ್ಯಗಳ ಪುನರ್ವಿಂಗಡನೆಯಾಗಿ, ಮದರಾಸು ಮತ್ತು ಮುಂಬಯಿ ಪ್ರೆಸಿಡೆನ್ಸಿಗಳಲ್ಲಿದ್ದ ಕನ್ನಡ ಮಾತನಾಡುವ ಪ್ರದೇಶಗಳು ವಿಲೀನಗೊಂಡು 'ನವ ಮೈಸೂರು ರಾಜ್ಯ' ರೂಪುಗೊಂಡಿತು, ಆಮೇಲೆ ರಾಜ್ಯವು ಕರ್ನಾಟಕ ಎಂದು ಹೆಸರು ಪಡೆಯಿತು. ಶ್ರೀನಿವಾಸ್ ಅವರ ನುಡಿಗಟ್ಟನ್ನು ಬಳಸುವುದಾದರೆ, ಅನೇಕ ಜಾತಿ ಪಂಗಡಗಳ ನಡುವೆ ಕ್ಷೇತ್ರೀಯ ಒಗ್ಗಟ್ಟು ಸಾಧ್ಯವಾಯಿತು. ಈಗ ರಾಜಕೀಯವಾಗಿ, ಧಾರ್ಮಿಕವಾಗಿ ಮತ್ತು ಬಹುಶಃ ಸಾಂಸ್ಕೃತಿಕವಾಗಿ ಸಂಘಟಿತವಾಗಿರುವ ಕುರುಬರು, ರಾಜ್ಯದ ಒಟ್ಟು ಜನ ಸಂಖ್ಯೆಯ ಸುಮಾರು 7-8 % ಆಗಿದ್ದು ಗಣನೀಯವಾದ ಪಂಗಡವಾಗಿದ್ದಾರೆ. ಜಾತಿಯ ಸಾಂಪ್ರದಾಯಿಕ ಕಸುಬುಗಳಾದ ಕುರಿಸಾಕಣೆ ಮತ್ತು ಕಂಬಳಿ ನೇಯುವಿಕೆಗಳು ಕಣ್ಮರೆಯಾಗುತ್ತಿವೆ. ಅವರು ಸಾರ್ವತ್ರಿಕ ಶಿಕ್ಷಣಕ್ಕೆ ಹೆಚ್ಚು ಹೆಚ್ಚಾಗಿ ಸೇರುತ್ತಿದ್ದಾರೆ. ನಮಗೆ ವೈದ್ಯರು, ವಕೀಲರು, ಬೇರೆ ಬೇರೆ ಹಂತಗಳಲ್ಲಿ ಉಪಾಧ್ಯಾಯರು ದೊರಕುತ್ತಾರೆ. ಹಾಗೆಯೇ ಜಾತಿ ಮುಖಂಡರು ರಾಜ್ಯದ ಬೇರೆ ಬೇರೆ ಸ್ಥಳಗಳಲ್ಲಿ ಅನೇಕ ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿದ್ದಾರೆ.

ಆರ್ಥಿಕ ಚಟುವಟಿಕೆಗಳಲ್ಲಿ ಬೇಕಾದಷ್ಟು ವೈವಿಧ್ಯ ಕಂಡುಬಂದಿದೆ. ಅವರಲ್ಲಿ ಅನೇಕರಿಗೆ ತೋಟಗಳ ಜೊತೆಗೆ ಗದ್ದೆಗಳೂ ಹೊಲಗಳೂ ಇವೆ. ಆರ್ಥಿಕವಾಗಿ ಅವರು ತುಂಬಾ ಹೀನಾಯ ಸ್ಥಿತಿಯಲ್ಲೇನೂ ಇಲ್ಲ. ಆದರೆ ತಮ್ಮನ್ನು ಪರಿಶಿಷ್ಟಕ್ಕೆ ಸೇರಿಸುವಂತೆ

ಅಥವಾ ಅದನ್ನು ತಮಗೆ ವಿಸ್ತರಿಸುವಂತೆ ಸರಕಾರದ ಮೇಲೆ ಒತ್ತಡ ಹೇರಲು ಸಂಘಟಿತರಾಗುವ ಮೂಲಕ ತಮ್ಮ ಆರ್ಥಿಕ ಸ್ಥಿತಿಗತಿಯನ್ನು ಇನ್ನೂ ಉತ್ತಮ ಪಡಿಸಿಕೊಳ್ಳಲು ಅವರು ಶ್ರಮಿಸುತ್ತಿದ್ದಾರೆ. ತಮ್ಮನ್ನು ಹಿಂದುಳಿದ ವರ್ಗದ ಗುಂಪಿಗೆ ಸೇರಿಸುವುದು ಅವರಿಗೆ ಬೇಕಾಗಿಲ್ಲ; ಆದರೆ ಎಸ್.ಟಿ (ಪರಿಶಿಷ್ಟ ಬುಡಕಟ್ಟು) ಎಂಬ ಪಟ್ಟವನ್ನು ಪಡೆದು 'ಮೀಸಲಾತಿ ಪ್ರಯೋಜನ' ಗಳನ್ನೂ ಬಾಚಿಕೊಳ್ಳುವುದು ಅವರಿಗೆ ಬೇಕಾಗಿದೆ. ಈ ಲಕ್ಷ್ಯದ ಈಡೇರಿಕೆಗಾಗಿ ಅವರು, ಕುರುಬ ಸಮುದಾಯವೆಂದರೆ ಕುರುಬ ಜಾತಿ ಮಾತ್ರವಲ್ಲ ಕಾಡು ಕುರುಬ, ಬೆಟ್ಟ ಕುರುಬ, ಜೇನು ಕುರುಬ, ಮುಳ್ಳು ಕುರುಬ ಇವರೆಲ್ಲರೂ ಸೇರುತ್ತಾರೆ ಎಂದು ದೃಢವಾಗಿ ಹೇಳತೊಡಗಿದ್ದಾರೆ. ಇವರೆಲ್ಲರೂ ಬುಡಕಟ್ಟುಗಳಾಗಿದ್ದು ಎಸ್.ಟಿ ವರ್ಗದ ಸಾಂವಿಧಾನಕ ಪ್ರಯೋಜನಗಳನ್ನು ಪಡೆಯುತ್ತಿರುವವರು. ಈ ಬುಡಕಟ್ಟುಗಳಿಗೆ ಸರಕಾರದ ನೆರವು ಪಡೆದ ಎನ್.ಜಿ.ಓ ಗಳು ಅಭಿವೃದ್ಧಿ ಕಾರ್ಯಕ್ರಮಗಳನ್ನೂ ಕೈಗೊಂಡಿರುವುದು ಬಹುದೊಡ್ಡ ಸಹಾಯವಾಗಿದೆ.

ಕಾಡು ಕುರುಬರು - ಉಪವಿಭಾಗಗಳಾದ ಬೆಟ್ಟ ಕುರುಬರು ಮತ್ತು ಜೇನು ಕುರುಬರೂ ಸೇರಿದಂತೆ - ಮೈಸೂರು ಮತ್ತು ಕೊಡಗು ಜಿಲ್ಲೆಗಳಲ್ಲಿನ ಅರಣ್ಯಗಳಲ್ಲಿ ಅರಣ್ಯದ ಅಂಚುಗಳಲ್ಲಿ ವಾಸಮಾಡುತ್ತಿದ್ದಾರೆ. ಕುರುಬರ ಹಾಗೆ ಅವರು ರಾಜ್ಯದಲ್ಲಿ ಹರಡಿಕೊಂಡಿಲ್ಲ. ಆದರೂ ದೂರದ ಚಿತ್ರದುರ್ಗ ಮತ್ತು ಧಾರವಾಡ ಜಿಲ್ಲೆಗಳಲ್ಲಿ ಕೆಲವು ಕುರುಬರು, ನಮ್ಮ ಕ್ಷೇತ್ರ ಕಾರ್ಯ ಮಾಹಿತಿಯಲ್ಲಿ ತಾವು ಕಾಡು ಕುರುಬರೆಂದು ದಾಖಲುಮಾಡಿಸಿದ್ದಾರೆ.

ಕಾಡು ಕುರುಬರು ಈಗಲೂ ಭಾಗಶಃ ಆಹಾರವನ್ನು ಹೆಕ್ಕಿ ತರುವ, ಭಾಗಶಃ ಆಹಾರವನ್ನು ಉತ್ಪಾದಿಸುವ ಪಂಗಡ. ಅವರ ಬಳಿ ಇರುವ ಭೂಮಿ, ಸರಕಾರವು ಮಂಜೂರು ಮಾಡಿಕೊಟ್ಟಿರುವ ನೆಲ, ಹುಣಸೂರು ಮತ್ತು ಹೆ. ದೇ. ಕೋಟೆ ತಾಲೂಕುಗಳಲ್ಲಿ ಅಲ್ಪ ಸ್ವಲ್ಪ ಹೊಲ ಮತ್ತು ಗದ್ದೆಗಳನ್ನು ಅವರು ಕೃಷಿ ಮಾಡುತ್ತಾರೆ. ಕಾಡು ಪ್ರಾಣಿಗಳ ಕಾಟದಿಂದ ಉಳಿಸಿಕೊಳ್ಳುವುದು ಸಾಧ್ಯವಾದ ಪಕ್ಷದಲ್ಲಿ ಅವರಿಗೆ ಆ ಬೆಳೆಯು ಕೆಲವು ವಾರಗಳಿಂದ ಕೆಲ ತಿಂಗಳಗಳ ವರೆಗೆ ಸಾಕಾಗಬಹುದು. ಆವರ್ತ ಕೃಷಿಯನ್ನು ಸರಕಾರವು ನಿಷೇಧಿಸಿದುದರಿಂದಾಗಿ ಈಗ ಅವರು ಸ್ಥಿರ ಬೇಸಾಯ (Settled Cultivation) ದಲ್ಲಿ ತೊಡಗಿದ್ದಾರೆ. ಖಾಸಗಿ ಆಸ್ತಿಯ ಕಲ್ಪನೆಯೇ ಅವರಿಗಿಲ್ಲವಾದುದರಿಂದ, ಇರುವ ಆಹಾರವನ್ನು ಹಾಡಿಯಲ್ಲಿರುವ ಎಲ್ಲರೂ ಹಂಚಿಕೊಳ್ಳುತ್ತಿದ್ದರು. ಈಗಲೂ ಹಂಚಿಕೊಳ್ಳುತ್ತಿದ್ದಾರೆ. ಬೇರುಗಳು, ಗೆಡ್ಡೆಗಳು, ಕಾಡಿನಿಂದ ತಂದ ಸೊಪ್ಪುಗಳು ಅವರ ಆಹಾರಕ್ಕೆ ಪೂರಕವಾಗಿವೆ. ಜೊತೆಗೆ ಲೋಕೋಪಯೋಗಿ ಇಲಾಖೆಯು ಕೈಗೊಳ್ಳುವ ರಸ್ತೆ ನಿರ್ಮಾಣ ಕಾಮಗಾರಿಯಲ್ಲಿ, ಕೊಡಗಿನ ಕಾಫಿ ತೋಟಗಳಲ್ಲಿ ಕೂಲಿ ಕೆಲಸ ಮಾಡುತ್ತಾರೆ. ಇತರರ ಜಮೀನುಗಳಲ್ಲಿ ಬೇಸಾಯದ ಕೂಲಿಯಾಳುಗಳಾಗಿ ದುಡಿಯುವುದೂ ಉಂಟು. ಅವರ ಆರ್ಥಿಕ ಚುಟುವಟಿಕೆಗಳಲ್ಲಿ ವೈವಿಧ್ಯವೇನೂ ಇಲ್ಲ. ಬುಡಕಟ್ಟಿಗರು ಬೆಳೆಸಿಕೊಂಡಿರುವ ಸಮಾನತಾ ಮೌಲ್ಯಗಳು, ವರ್ಗ ಅಸಮಾನತೆಗಳನ್ನು ಇತರ ಸಂಬಂಧಿತ ವ್ಯಕ್ತಿ ಪೂಜೆಯನ್ನೂ ಹೋಗಲಾಡಿಸಲು ಪರಿಣಾಮಕಾರಿಯಾದ ಕ್ರಮವಾಗಿದೆ.

